ಸಂಪುಟ ೧೧
ಸಂಚಿಕೆ ೪

ಕರ್ನಾಟಕ ಭಾರತಿ

ಅಕ್ಷಯ ತೃತಿಯಾ ಸಂಚಿಕೆ

ಮೇ, ೧೯೭೯

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು 'ಕರ್ನಾಟಕ ಭಾರತಿ,' ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,** ಧಾರವಾಡ-೫೮೦೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ   ೩. ರಾಜ್ಯೋತ್ಸವ ಸಂಚಿಕೆ
೨. ಸಂಕ್ರಮಣ ಸಂಚಿಕೆ   ೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. ೩-೫೦
(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)
ರಜತಮಹೋತ್ಸವ ಸಂಚಿಕೆಯ ಬೆಲೆ: ರೂ.೫-೦೦(ಅಂಚೆವೆಚ್ಚ ಪ್ರತ್ಯೇಕ)
ಹಣವನ್ನು ಡಿಮಾಂಡ್‌ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ
ಫಾಯನಾನ್ಸ್ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೫೮೦೦೦೩ ಇವರಿಗೆ ಕಳುಹಿಸಿಕೊಡಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೧ ಸಂಚಿಕೆ : ೪

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಕೆ. ಜಿ. ಶಾಸ್ತ್ರಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೧ ಸಂಚಿಕೆ : ೪

ಮೇ, ೧೯೭೯

ಅಕ್ಷಯ ತೃತೀಯಾ ಸಂಚಿಕೆ

ಪ್ರಕಾಶಕರು :

ಸಿ. ಎಸ್. ಕಣವಿ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಜಿ. ಬಿ. ಮನ್ನಾಚಾರ,
ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

ಪರಿವಿಡಿ

ಭೀಮಕವಿಯ ಮೇಲೆ
ಪಾಲ್ಕುರಿಕೆ ಸೋಮನಾಥನ ಪ್ರಭಾವ

ವಿದ್ಯಾಶಂಕರ

ವೀರಶೈವ ಪುರಾಣ ರಚನಾ ಪರಂಪರೆಗೆ ಮಾರ್ಗಕಾರನೂ ಶರಣ ಬಸವಣ್ಣನ ಬದುಕನ್ನು ಪೌರಾಣಿಕ ನೆಲೆಯಲ್ಲಿ ವಿಜೃಂಭಿಸಿದವನೂ ಆದ ಆಂಧ್ರದ ಪಾಲ್ಕುರಿಕೆ ಸೋಮನಾಥನು ವೀರಶೈವ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ತನ್ನ 'ಬಸವಪುರಾಣಮು' ಕೃತಿಯ ಮೂಲಕ ಒದಗಿಸಿದನು. ಇವನ ಈ ಕೃತಿಯನ್ನು ಕನ್ನಡಿಸಿ ಹೇಳುವುದರ ಮೂಲಕ ಭೀಮಕವಿ ತನ್ನ ಮುಂದಣ ವೀರಶೈವ ಕವಿಗಳಿಗೆ ಪುರಾಣ ರಚನಾಪದ್ಧತಿಗೆ ಗಟ್ಟಿಯಾದ ಬುನಾದಿ ಹಾಕಿಕೊಟ್ಟನು. ೧೨ನೇ ಶತಮಾನದಲ್ಲಿದ್ದ ಬಸವ ಹಾಗೂ ಅವನ ಸಮಕಾಲೀನರ ಬದುಕು ಮುಂದಣ ಒಂದೂವರೆ ಶತಮಾನದಲ್ಲಿ ಸಾಮಾನ್ಯನ ನಿತ್ಯಜೀವನಕ್ಕೆ ಹೇಗೆ ಪ್ರೇರಣೆ ನೀಡಿರಬಹುದು ? ಬಸವಣ್ಣನಂತಹ ಮಹಾನುಭಾವನ ಸಾತ್ವಿಕ ಜೀವನದ ಬಗೆಗಿನ ಮನದಾಳದ ಗೌರವ ಕಾಲಕಾಲಕ್ಕೆ ಜನಸಾಮಾನ್ಯನ ಮನಸ್ಸನ್ನು ಹೇಗೆ ಸ್ಪಂದಿಸಿರಬಹುದು ? ಬಸವಣ್ಣನ ಭವ್ಯ ವ್ಯಕ್ತಿತ್ವ ಮಹಿಮಾಪ್ರಧಾನವಾಗಿ, ಆರಾಧನಾ ಭಾವದಲ್ಲಿ ದೇವಮಾನವ ನೆಲೆಯಲ್ಲಿ ಹೇಗೆ ವ್ಯಕ್ತಗೊಂಡಿರಬಹುದು ? – ಇವೇ ಮೊದಲಾದವುಗಳ ಅಭ್ಯಾಸ ಜನಪದ ಪುರಾಣದ (Folk Myth) ಹಿನ್ನೆಲೆಯಲ್ಲಿ ವ್ಯಾಪಕವಾಗಿ ನಡೆಯಬೇಕಾಗಿದೆ. ಅದಕ್ಕೊಂದು ಮೊಟುಗೋಲು ಪಾಲ್ಕುರಿಕೆ ಸೋಮನಾಥನ 'ಬಸವಪುರಾಣಮು'. ಒಂದು ನಿರ್ದಿಷ್ಟ ಜನಸಮುದಾಯದ ಮೇಲೆ ರೂಪಗೊಂಡ ವ್ಯಕ್ತಿ ಇಲ್ಲವೆ ಸಂಘಟಿತ ಶಕ್ತಿಯ ಪ್ರಭಾವವು, ಆ ಜನಸಮುದಾಯದ ನಂಬಿಕೆಗಳು, ಸಾಮಾಜಿಕ ಸ್ಥಿತಿ-ಗತಿಗಳು, ಆಶೋತ್ತರಗಳು–ಇವುಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡ ಮಹತ್ವದ ಕೃತಿಯೊಂದರಲ್ಲಿ ಪ್ರತಿಫಲನ

ಗೊಳ್ಳುವುದು ಸಹಜ. ಈ ದಿಶೆಯಲ್ಲಿ, 'ಬಸವಪುರಾಣ'ವು ವ್ಯಕ್ತಿಯೊಬ್ಬನ ಬದುಕನ್ನು ಮಾತ್ರ ಪರಿಚಯಿಸಹೋಗದೆ ಸಾಂಸ್ಕೃತಿಕವಾಗಿ ಒಂದು ನಿರ್ದಿಷ್ಟ ಕಾಲಮಾನದ ಇತಿಹಾಸವನ್ನು ದಾಖಲು ಮಾಡಿರುವ ವಿಶಿಷ್ಟ ಕೃತಿಯಾಗುತ್ತದೆ.

ಭೀಮಕವಿಯನ್ನು ವೇಮುಲವಾಡದ ಭೀಮಕವಿಯೆಂದು ಕರೆಯುವರೆಂದೂ, ಈತನು ವಿಜಯನಗರದ ವೀರಬುಕ್ಕರಾಯನ ಕಾಲದಲ್ಲಿ (೧೩೫೬–೧೩೭೭) ಇದ್ದನೆಂದೂ, ದ್ರಾಕ್ಷಾರಾಮದ ಭೀಮೇಶ್ವರನ ವರಪ್ರಸಾದದಿಂದ ಆರಾಧ್ಯ ಬ್ರಾಹ್ಮಣ ವಂಶದಲ್ಲಿ ಹುಟ್ಟಿ ಕನ್ನಡ ಮತ್ತು ತೆಲುಗು ದೇಶಗಳಲ್ಲಿ ಸಂಚರಿಸಿ ಅನಂತಪುರದ ಗಡೇಕಲ್ಲು ಗ್ರಾಮದಲ್ಲಿ ಸಮಾಧಿ ಹೊಂದಿದನೆಂದೂ ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು ಅಭಿಪ್ರಾಯ ಪಡುವರು.[೧] ಸಿದ್ಧನಂಜೇಶನ 'ರಾಘವಾಂಕ ಚಾರಿತ್ರ'ದ ಪ್ರಕಾರ ಭೀಮಕವಿಯು ಶ್ರೀಶೈಲದ ದಕ್ಷಿಣದ್ವಾರವೆನಿಸುವ ಸಿದ್ಧವಟಪುರದ ಆಂಧ್ರ ಭಾಷಾಸತ್ಕವಿತ್ವಕೋವಿದನಾದ ಶಿವದೇವನೆಂಬ ಬ್ರಾಹ್ಮಣ ಶ್ರೇಷ್ಠನು ಹಂಪೆಯ ಹರಿಹರನಲ್ಲಿ ಹರಕೆಹೊತ್ತು ಪಡೆದ ಮಗ. ರಾಘವಾಂಕನ ಶಿಷ್ಯ. ಹರಿಹರನು ಭೀಮ ಕವಿಯಿಂದ ರಚಿತವಾದ 'ಭೃಂಗಿದಂಡಕ'ವನ್ನು ಕೇಳಿ ಅವನ ಚಾತುರ್ಯಕ್ಕೆ ಮೆಚ್ಚಿ 'ನಿನ್ನ ಕವಿತೆ ಶಿವಭಕ್ತಕರ್ಣಾಮೃತ' ವಾಗುವುದೆಂದು ಹರಸಿ ಅವನನ್ನು ಮರಳಿ ಸಿದ್ಧವಟಪುರಕ್ಕೆ ಕಳುಹಿಸಿದನು. ಅಲ್ಲಿ ಭೀಮಕವಿ ಗುರುಲಿಂಗಜಂಗಮಾರಾಧನೆಯನ್ನು ಮಾಡುತ್ತ ಶಿವಶರಣರ ಚರಿತ್ರವನ್ನು ಹೇಳುತ್ತಲಿರಲು ಒಂದು ದಿನ ಪಾಲಕುರಿಕೆ ಸೋಮನಾಥನೂ, ತಂದೆ ಶಿವದೇವನೂ ಕನಸಿನಲ್ಲಿ ಬಂದು ಬಸವ ಪುರಾಣವನ್ನು ವಿರಚಿಸು ಎಂದು ಹೇಳಲು ಹಾಗೆಯೇ ಮಾಡಿ ಸುಖದಿಂದಿದ್ದನು (ಸಂಧಿ ೧೫) ಭೀಮಕವಿ ತನ್ನ ಕೃತಿಯಲ್ಲಿ ಸ್ವಕೀಯ ವಿವರಗಳನ್ನು ವಿಶೇಷವಾಗಿ ಹೇಳಿಕೊಂಡಿಲ್ಲ. ತಾನು 'ಶಿವಕವಿದೇವನಾತ್ಮಜ ಸುಮತಿ ಭೀಮನುಭಯಕವಿತ್ವ ಸಮರ್ಥ' ಎಂದು ಮಾತ್ರ ಹೇಳಿಕೊಂಡಿರುವನು (೧. ೧೭). ಇವನು ತನ್ನ ತಂದೆಯನ್ನು ಕವಿಯೆಂದು ವಿಶೇಷಿಸಿ ಹೇಳಿರುವುದರಿಂದ ಆತನು ಏನಾದರೂ ಗ್ರಂಥ ವನ್ನು ಬರೆದಿರಬೇಕೆಂದು ಕವಿಚರಿತಕಾರರು ಸಂಶಯ ತಾಳಿದ್ದು, ಕೊನೆಗೆ, ಅದು ಸರಿಯಲ್ಲವೆಂದು ತೀರ್ಮಾನಿಸಿ, ಭೀಮಕವಿಯ ತಂದೆಗೆ ದೇವ ಎಂಬುದೇ ನಿಜವಾದ ಹೆಸರಾಗಿ ಶಿವಕವಿಯೆಂಬುದು ಬರಿಯ ವಿಶೇಷಣವಾಗಿ ಇದ್ದಂತೆ ತಿಳಿಯಬರುವುದು

೧ ಬಸವತತ್ತ್ವರತ್ನಾಕರ : ಶ್ರೀ ಬಸವಣ್ಣನವರೂ ಆಂಧ್ರ ಕವಿಗಳ ಕಾಣಿಕೆಯೂ, ಪು. ೬೮೧

ಎಂದಿರುವರು[೨]. ಭೀಮಕವಿಯು ಬಸವ ಪುರಾಣವಲ್ಲದೆ ಭೀಮಕವೀಶ್ವರ ರಗಳೆ[೩] ಹಾಗೂ ಭೃಂಗಿದಂಡಕಗಳನ್ನೂ ಬರೆದಿರುವನು.

ಬಸವಣ್ಣನನ್ನು ಸರ್ವಸ್ವವೆಂದು ಬಗೆದು, ಆರಾಧನಾಭಾವದಿಂದ ತಮ್ಮ ಅಂತರಂಗದಲ್ಲಿ ಪೂರ್ಣವಾಗಿ ಬಸವಮೂರ್ತಿಯನ್ನು ತುಂಬಿಕೊಂಡು, ಅವನ ಘನಚರಿತೆಯನ್ನು ಮಹದಾನಂದದಿಂದ ಹೇಳಿದವರು ಪಾಲ್ಕುರಿಕೆ ಸೋಮನಾಥ ಹಾಗೂ ಭೀಮಕವಿ.[೪] ಈರ್ವರೂ ಸಮಾನ ಹೃದಯಿಗಳು. ಅವರ ದೃಷ್ಟಿಯಲ್ಲಿ ಬಸವಣ್ಣ ದೈವೀಪುರುಷ; ಧರ್ಮ ಹಾಗೂ ಭಕ್ತರ ಉದ್ಧಾರಕ್ಕಾಗಿ ಧರೆಗುದಿಸಿ ಬಂದವನು ಶಿವನ ಅಂಶವಾದ ಬಸವನ ಚರಿತೆಯ ಜೊತೆಗೆ ಶಿವನ ಶರಣರ ಚರಿತೆಯನ್ನೂ ಅವರು ಹೇಳಿರುವರು. ಪಾಲ್ಕುರಿಕೆ ಸೋಮನಾಥನು ದ್ವಿಪದದಲ್ಲಿ ಬರೆದರೆ ಭೀಮಕವಿ ಭಾಮಿನಿ ಷಟ್ಪದಿಯಲ್ಲಿ ಬರೆದಿರುವನು. ಈರ್ವರೂ ತಮ್ಮ ಅಭಿವ್ಯಕ್ತಿ ಮಾಧ್ಯಮಕ್ಕೆ ಬಳಸಿಕೊಂಡ ಛಂದಸ್ಸಿಗೆ ಜೀವ ತುಂಬಿದವರು; ಮೊದಲಿಗೆ ಅದನ್ನು ಬೃಹತ್‌ಕೃತಿಗೆ ಮಾಧ್ಯಮವಾಗಿ ಬಳಸಿದವರು. ದೇಸೀ ಛಂದಸ್ಸನ್ನು ಬಳಸುವುದರ ಮೂಲಕ ವ್ಯಾಪಕವಾದ ಓದುಗರನ್ನು ಪಡೆದವರು. ಭೀಮಕವಿಯಂತೂ ತನ್ನ ಕಾಲದಲ್ಲಿ ಪಂಡಿತ ಕವಿಗಳ ದೃಷ್ಟಿಯಲ್ಲಿ ಕೀಳಾಗಿದ್ದ ವರ್ಣಕವನ್ನು ಮೇಲಾಗಿಸಲು, ಅದಕ್ಕೆ ಸಲ್ಲಬೇಕಾಗಿದ್ದ ನ್ಯಾಯವಾದ ಸ್ಥಾನವನ್ನು ಗಳಿಸಿಕೊಡಲು ಶಕ್ತಿಮೀರಿ ಪ್ರಯತ್ನಿಸಿ 'ಸರಸ ಮೃದು ಮಧುರೋಕ್ತಿ'ಗಳಿಂದ ವರ್ಣಕಕ್ಕಿದ್ದ ಕಳಂಕವನ್ನು ತೊಡೆದು ಹಾಕಿದನು.

---

೨ ಕರ್ಣಾಟಕ ಕವಿಚರಿತೆ, ಭಾಗ ೧ (ಪರಿಷತ್ ಮುದ್ರಣ) ಪು ೪೬೭.

೩ ಭೀಮಕವೀಶ್ವರ ರಗಳೆ ಬೆಳಕು ಕಂಡಿದೆ. ಷಡಕ್ಷರ ಮಂತ್ರವೇ 'ಭೀಮಕವೀಶ್ವರರಗಳೆ' ಎಂಬ ಹೆಸರಿನಲ್ಲಿ ರಚಿತವಾಗಿದೆ. ಮೊದಲಿಗೆ ಕೊಂಡಗುಳಿ ಕೇಶಿರಾಜನು 'ಮಂತ್ರ ಮಹತ್ವದ ಕಂದ'ವನ್ನೂ ನಂತರ ಹರಿಹರನು 'ನಮಃ ಶಿವಾಯ ರಗಳೆ'ಯನ್ನೂ ಬರೆದರು. ಇವರ ನಂತರ ಷಡಕ್ಷರ ಮಂತ್ರ ಮಹಿಮೆಯನ್ನು ಕೃತಿರೂಪದಲ್ಲಿ ಹೇಳಿದವನು ಭೀಮಕವಿ. ಇದರ ಸಂಪಾದಕರಾದ ಶ್ರೀ ಗು. ಅ. ಶಿವಲಿಂಗಯ್ಯನವರು "ತೆಲುಗು ಕವಿಯಾದ ಚಕ್ರಪಾಣಿ ರಂಗನಾಥನೂ ಸಹ 'ಷಡಕ್ಷರಿ ರಗಳೆ' ಯನ್ನು ರಚಿಸಿರುತ್ತಾನೆ. ಭೀಮಕವಿಯು ತಾನು ರಚಿಸಿರುವ ಈ ರಗಳೆಯ ರೂಪದಲ್ಲಿ ಚಕ್ರಪಾಣಿ ರಂಗನಾಥನ ರಗಳೆಯನ್ನೇ ಅನುವಾದಿಸಿರುವಂತೆ ಕಂಡುಬರುತ್ತದೆ" ಎಂದಿರುವರು (ನೋಡಿ: ಭೀಮಕವೀಶ್ವರ ರಗಳೆ, ಪ್ರ: ಮಾತಾ ಮುದ್ರಣ ಮತ್ತು ಪ್ರಕಾಶನ ಮಂದಿರ ಮೈಸೂರು, ಸಂಪಾದಕರ 'ಎರಡು ಮಾತು' ಪು. ii).

೪ ಈರ್ವರೂ ಬಸವಣ್ಣ ಕಲಿಯುಗದ ಎರಡನೆಯ ಮುಕ್ಕಣ್ಣ ಎಂದು ನಂಬಿ ಅವನ ಚರಿತೆಯನ್ನು ಹೇಳಹೊರಟವರು. ಭಕ್ತಿಪರವಶರಾಗಿ ಎಷ್ಟು ಬಗೆಯಲ್ಲಿ ಬಸವನನ್ನು ನುತಿಸಿದರೂ ಅವರಿಗೆ ತೃಪ್ತಿಯಿಲ್ಲ. ಕೃತಿಯುದ್ದಕ್ಕೂ ಅಲ್ಲಲ್ಲಿ ಅವಕಾಶಮಾಡಿಕೊಂಡು, ಇಲ್ಲವೆ, ಸಂದರ್ಭ ಬಂದಾಗ ಬಸವನ ಗುಣಸಂಕೀರ್ತನೆಯನ್ನು ಮೈ ಮರೆತು ಮಾಡಿರುವರು. ತಮ್ಮ ಕಥಾನಾಯಕನ ಬಗೆಗೆ ಪರವಶ ಭಾವದಿಂದ ಕೃತಿರಚನೆ ಮಾಡಿರುವುದು ಗಮನೀಯ ಸಂಗತಿ.

ಭೀಮಕವಿಯ ಕೃತಿರಚನೆಗೆ ಪಾಲ್ಕುರಿಕೆ ಸೋಮನಾಥನ ಕೃತಿಯು ಸಾಕಷ್ಟು ಪ್ರೇರಣೆ ನೀಡಿದೆ. ಅತಿ ಜಡಬುದ್ಧಿಯ ತಾನು ಬಸವರಾಜನ ಕೃತಿಯನ್ನು ಹೇಗೆ ರಚಿಸುವುದೆಂದು ಯೋಚಿಸುತ್ತಾ ಭೀಮಕವಿಯು ಶಿವಯೋಗ ನಿದ್ರಾಮುದ್ರಿತನಾಗಿರಲು, ಮೆಲ್ಲನೆ ಪಾಲ್ಕುರಿಕೆ ಸೋಮನಾಥನೂ ಶಿವದೇವಾರ್ಯನೂ ಕನಸಿನಲ್ಲಿ ಬಂದು "ಆವುದಕ್ಕನುಮಾನಿಸದಿರೊಲಿದಾವ ಶಬ್ದಾರ್ಥಮುಮನಾದೊಡೆ ಭಾವಿಸಲು ನಿನಗಱಿಪಿ ನಿನ್ನಾತ್ಮದೊಳಗಲದಿರ್ದು ನಾವು ರಚಿಸುವೆವೆಸೆವ ಬಸವ ಕಥಾವಿಸರಮಂ ಬರೆದುಕೋ" (೧-೧೫) ಎಂದು ಪ್ರೀತಿಯಿಂದ ಹೇಳಲು ಆ ಆಜ್ಞೆಯನ್ನು ಶಿರದಲ್ಲಿ ಧರಿಸಿದನು. ಅಷ್ಟೇ ಅಲ್ಲ, ಸೋಮನಾಥನು ಭೀಮಕವಿಗೆ ಕನಸಿನಲ್ಲಿ 'ರಸವೊಸರೆ ಮುನ್ನುಸುರ್ದುದನೆ ಕನ್ನಡಿಸಿ ಪೇಳು' (೧-೧೬) ಎಂದು ಹೇಳಿದುದರಿಂದ ಹೆಚ್ಚಿನ ಆಯಾಸವಿಲ್ಲದೆ ಕೃತಿರಚನೆ ಮಾಡಿದನು. ಭೀಮಕವಿಯ ಬಸವಪುರಾಣವು ಸೋಮನಾಥನ ತೆಲುಗು 'ಬಸವಪುರಾಣಮು' ವಿನ ನೇರವಾದ ಅನುವಾದವೆಂಬ ತಪ್ಪು ಗ್ರಹಿಕೆಗೆ ಬಹಳ ಮಂದಿ ಕನ್ನಡ ಹಾಗೂ ತೆಲುಗು ಭಾಷೆಯ ವಿದ್ವಾಂಸರು ಒಳಗಾಗಿರುವರು. 'ಮುನ್ನುಸುರ್ದುದನೆ ಕನ್ನಡಿಸಿ ಪೇಳು' ಎಂದು ಪಾಲ್ಕುರಿಕೆ ಸೋಮನು ಭೀಮಕವಿಗೆ ಕನಸಿನಲ್ಲಿ ಹೇಳಿದನೆಂದೂ ಅದರಂತೆ 'ಪಿರಿದಾಯಸವಿನಿತಿಲ್ಲ'ದೆ ಭೀಮಕವಿ ಕೃತಿ ರಚಿಸಿದನೆಂದೂ ವಾಚ್ಯಾರ್ಥದಲ್ಲಿ ಕವಿಯ ಹೇಳಿಕೆಯನ್ನು ಸ್ವೀಕರಿಸಿ ಬಹಳ ಮಂದಿ ವಿದ್ವಾಂಸರು ಈ ನಿಲುವೆಗೆ ಬಂದಂತಿದೆ. ಭೀಮಕವಿಯು ಸೋಮನಾಥನ ಕೃತಿಯನ್ನು ಪದಶಃ ಅನುವಾದ ಮಾಡಿಲ್ಲ. ಸಹೃದಯಿಯಾದ ಭೀಮಕವಿ ಪಾಲ್ಕುರಿಕೆ ಸೋಮನಾಥನ 'ಬಸವಪುರಾಣಮು'ವನ್ನು ಹಲವಾರು ಬಾರಿ ಓದಿ ಅಲ್ಲಿನ ಪದ, ಪದಸಮುಚ್ಚಯ, ಭಾವ, ಅಲಂಕಾರ – ಇತ್ಯಾದಿಗಳೆಲ್ಲವನ್ನೂ ಹೃದ್ಗತ ಮಾಡಿಕೊಂಡಿರುವನು. ಮೇಲಾಗಿ ಆತ ಪ್ರತಿಭಾಶಾಲಿಯಾದ ಸಮರ್ಥಕವಿ. ಪ್ರಾಸಾದಿಕ ಕವಿಯಾದ ಅವನಲ್ಲಿ ಕವಿತೆ ನಿರರ್ಗಳವಾಗಿ ಮಂಜುಳವೂ, ಕಿವಿಗೆ ಹಿತವೂ ಲಾಲಿತ್ಯಪೂರ್ಣವೂ ಆದ ಪದಪುಂಜಗಳಲ್ಲಿ ಹರಿದಿದೆ. ಸ್ವತಂತ್ರ ಪ್ರತಿಭೆಯುಳ್ಳ ಅವನು ಮೂಲವನ್ನು ಅನುಸರಿಸಿಯೂ, ಸ್ವತಂತ್ರವಾಗಿ ಹಲವು ಸಾಲು, ಭಾಗಗಳನ್ನು ಸೇರಿಸಿಯೂ ತನ್ನ ವೈಶಿಷ್ಟ್ಯವನ್ನು ಮೆರೆದಿರುವನು. ಪಂಪನ ಆದಿಪುರಾಣವು ಹೇಗೆ ಜಿನಸೇನಾಚಾರ್ಯರ ಪೂರ್ವಪುರಾಣದ ತದ್ವತ್ ಅನುವಾದವಲ್ಲವೋ ಹಾಗೆ ಭೀಮಕವಿಯ ಬಸವಪುರಾಣವು ಪಾಲ್ಕುರಿಕೆ ಸೋಮನ 'ಬಸವಪುರಾಣಮು'ವಿನ ನೇರವಾದ ಅನುವಾದವಲ್ಲ.

ತೆಲುಗು 'ಬಸವ ಪುರಾಣಮು' ಏಳು ಆಶ್ವಾಸಗಳ ಕೃತಿಯಾದರೆ ಕನ್ನಡ ಬಸವ ಪುರಾಣವು ಎಂಟು ಕಾಂಡಗಳಿಂದ[೧] ಕೂಡಿದ ಕೃತಿಯಾಗಿದೆ. ತೆಲುಗು

೧ ಬಸವಪುರಾಣವು ೮ ಕಾಂಡ ೬೦ ಸಂಧಿ ೩೬೨೮ ಭಾಮಿನೀ ಷಟ್ಪದಿಗಳನ್ನು ಒಳಗೊಂಡ ಕೃತಿಯಾಗಿದೆಯೆಂದು ಕವಿಯಿಂದಲೇ ನಿರ್ದಿಷ್ಟಗೊಳಿಸಲಾಗಿದೆ (ನೋಡಿ: ಬಸಪು. ೬೦-೯೧) ಬಹುಶಃ ಇದಕ್ಕೆ ಕಾರಣ, ಭೀಮಕವಿಗೆ ಏಳರ ಸಂಖ್ಯೆ ಅಪ್ರಿಯವಾಗಿಯೂ, ಎಂಟರ ಸಂಖ್ಯೆಯು ಶುಭಕರವಾಗಿಯೂ ಕಂಡುಬಂದಿರಬಹುದು.

ಕೃತಿಯಲ್ಲಿ ಒಂದು ಆಶ್ವಾಸ ಎಲ್ಲಿಗೆ ಮುಗಿಯುತ್ತದೊ ಅಲ್ಲಿಗೆ ಕನ್ನಡ ಕೃತಿಯಲ್ಲೂ ಒಂದು ಕಾಂಡ ಮುಗಿಯುವ ಒಂದು ನಿಯಮವನ್ನು ನಾಲ್ಕು ಕಾಂಡಗಳ ವರೆವಿಗೆ ನೋಡುತ್ತೇವೆ. ಆದರೆ ತೆಲುಗು ಕೃತಿಯ ಮುಂದಿನ ಮೂರು ಆಶ್ವಾಸಗಳ ವಿಷಯ ಕನ್ನಡ ಕೃತಿಯಲ್ಲಿ ಒಂದೇ ರೀತಿಯಾಗಿಲ್ಲ. ಅಂದರೆ, ತೆಲುಗು 'ಬಸವಪುರಾಣಮು' ವಿನಲ್ಲಿ ಐದನೇ ಆಶ್ವಾಸವು ಕಿನ್ನರ ಬ್ರಹ್ಮಯ್ಯನ ಕಥೆಯಿಂದ ಪ್ರಾರಂಭವಾಗಿ ತೆಲುಗು ಬೊಮ್ಮಯ್ಯಗಳ ಕಥೆಗೆ ಮುಗಿಯುತ್ತದೆ. ಕನ್ನಡ ಬಸವಪುರಾಣದಲ್ಲಿ ೫ನೇ ಕಾಂಡವು ಕಿನ್ನರ ಬ್ರಹ್ಮಯ್ಯಗಳ ಕಥೆಯಿಂದ ಪ್ರಾರಂಭವಾಗುತ್ತದೆ. ತೆಲುಗು ಬೊಮ್ಮಯ್ಯಗಳ ಕಥೆಗೇ ಮುಗಿಯದೆ ಮುಂದುವರಿದು ಮೇದಾರ ಕೇತಿದೇವಯ್ಯಗಳ ಕಥೆಗೆ ಮುಗಿಯುತ್ತದೆ. ತೆಲುಗು 'ಬಸವಪುರಾಣಮು'ವಿನಲ್ಲಿ ಆರನೆಯ ಆಶ್ವಾಸವು ಏಕಾಂತರಾಮಯ್ಯನ ಕಥೆಯಿಂದ ಪ್ರಾರಂಭವಾಗುತ್ತದೆ. (ಆಶ್ಚರ್ಯವೆಂದರೆ, ಭೀಮಕವಿಯ ಬಸವಪುರಾಣದಲ್ಲಿ ಏಕಾಂತರಾಮಯ್ಯನ ಕಥೆ ಆರನೇ ಕಾಂಡದ ಸಂಧಿ ೪೮ರಲ್ಲಿ ಬರುತ್ತದೆ.) ಕನ್ನಡ ಬಸವಪುರಾಣದಲ್ಲಿ ತೆಲುಗು ಬೊಮ್ಮಯ್ಯಗಳ ಕಥೆಯಾದ ಮೇಲೆ ಶಿವಯೋಗ ನಿದ್ರಾಮುದ್ರೆಯ ಕಥೆ ಬರುತ್ತದೆ. ತೆಲುಗು 'ಬಸವಪುರಾಣಮು'ವಿನಲ್ಲಿ ಶಿವಯೋಗ ನಿದ್ರಾಮುದ್ರೆಯ ಕಥೆ, ಕಿನ್ನರಯ್ಯಗಳ ಪ್ರಾಣದಾನದ ಕಥೆ, ತಂಗಟೂರಿ ಮಾರಿದೇವನ ಕಥೆ, ಮುರಿಯ ಚಂದಯ್ಯನ ಕಥೆ, ಕೊಂಡಗುಳಿ ಕೇಶಿರಾಜನ ಕಥೆ, ಮೇದಾರ ಕೇತಿದೇವಯ್ಯಗಳ ಕಥೆ, ದಸರಯ್ಯಗಳ ಕಥೆ, ಗುರುಭಕ್ತಯ್ಯಗಳ ಕಥೆ, ಗುರುಭಕ್ತಾಂಡಾರಿಯ ಕಥೆ, ಶ್ವೇತನ ಕಥೆ, ಮಲುಹಣನ ಕಥೆ, ಓಹಿಲಯ್ಯಗಳ ಕಥೆ, ಉದ್ಭಟದೇವನ ಕಥೆ, ವೇಮನಾರಾಧ್ಯರ ಕಥೆ, ಚಿಕ್ಕಮಾದಣ್ಣನ ಕಥೆ, ಕಡಿರ ರೇಮಯ್ಯಗಳ ಕಥೆ – ಇವಿಷ್ಟು ಕಥೆಗಳು ಬಂದಿಲ್ಲ. ಆದರೆ ಕನ್ನಡ ಬಸವಪುರಾಣದಲ್ಲಿ ಇವಿಷ್ಟೂ ೫ನೇ ಕಾಂಡದ ೩೪ನೇ ಸಂಧಿಯಿಂದ ೬ ನೇ ಕಾಂಡದ ೪೭ನೆಯ ಸಂಧಿಯ ವರೆವಿಗೂ ಬಂದಿವೆ. ತೆಲುಗು 'ಬಸವಪುರಾಣಮು'ವಿನ ಸಪ್ತಮಾಶ್ವಾಸದಲ್ಲಿ ಶಿವನಾಗಮಯ್ಯನ ಕಥೆ, ಕಲ್ಲಿದೇವಯ್ಯನ ಕಥೆ, ಬಿಬ್ಬಿ ಬಾಚಯ್ಯನ ಕಥೆ, ಮಾದರ ಮೂಡಯ್ಯನ ಕಥೆ, ಬೋಸನ ಭೀಮಯ್ಯನ ಕಥೆ, ಶ್ವಪಚಯ್ಯನ ಕಥೆ, ಉದ್ಭಟನ ಕಥೆ, ಕಕ್ಕಯ್ಯನ ಕಥೆ, ಭೋಗಯ್ಯನ ಕಥೆ, ಗುಡ್ಡವ್ವೆಯ ಕಥೆ, ಕಲ್ಯಾಣಪುರದ ಭಕ್ತರು, ಬೇಡರೊಡನೆ ವಾದ-ವಿಷದ ಪವಾಡ ಕಥೆ, ಜಗದೇವ ದಂಡನಾಯಕನ ಕಥೆ, ಏಲೇಶ್ವರದ ಕೇತಯ್ಯನ ಕಥೆ, ಸವರದ ನಾಚಯ್ಯನ ಕಥೆ, ಅಲ್ಲಯ್ಯ–ಮಧುವಯ್ಯಗಳ ಕಥೆ – ಇದಿಷ್ಟು ಕಥೆಗಳು ಬರುತ್ತವೆ. ಕನ್ನಡ ಬಸವಪುರಾಣದಲ್ಲಿ ಏಳು ಮತ್ತು ಎಂಟನೆಯ ಕಾಂಡಗಳಲ್ಲಿ ಏಕಾಂತರಾಮಯ್ಯನ ಕಥೆ, ಸೊಡ್ಡಳ ಬಾಚರಸನ ಕಥೆ, ಅರಿಯಮನ ಕಥೆ, ವೀರ ಶಂಕರನ ಕಥೆ. ಶಿವಲಿಂಕಮಂಚಣ್ಣನ ಕಥೆ, ಶಂಕರದಾಸಿಮಯ್ಯನ ಕಥೆ, ಶಿವನಾಗಮಯ್ಯನ ಕಥೆ, ಹಾಪಿನಹಾಳ ಕಲ್ಲಯ್ಯನ ಕಥೆ, ಬಿಬ್ಬಿ ಬಾಚಯ್ಯನ ಕಥೆ, ಮಾದರ

ದೂಡಯ್ಯನ ಕಥೆ, ಭೀಮಯ್ಯನ ಕಥೆ, ಶ್ವಪಚಯ್ಯನ ಕಥೆ, ಉದ್ಭಟಯ್ಯನ ಕಥೆ. ಕಕ್ಕಯ್ಯನ ಕಥೆ, ಕೆಂಭಾವಿ ಭೋಗಣ್ಣನ ಕಥೆ, ಗುಡ್ಡವ್ವೆಯ ಕಥೆ, ಕಜ್ಜಾಯದ ಪವಾಡ ಕಥೆ, ಕಲ್ಯಾಣದ ನೂತನಭಕ್ತರು, ವಿಷದ ಪವಾಡದ ಕಥೆ, ಜಗದೇವಯ್ಯನ ಕಥೆ. ಏಲೇಶ್ವರದ ಕೇತಯ್ಯನ ಕಥೆ, ಸೌಂದರನಾಚಯ್ಯನ ಕಥೆ, ಹರಳಯ್ಯ ಮಧುವಯ್ಯಗಳ ಕಥೆ – ಇವಿಷ್ಟು ಕಥೆಗಳು ಬರುತ್ತವೆ.

ಭೀಮಕವಿಯು ಪಾಲ್ಕುರಿಕೆ ಸೋಮನಾಥನನ್ನು ಅನುಸರಿಸಿದ್ದರೂ ಹಲವೆಡೆಗಳಲ್ಲಿ ಮೂಲದಲ್ಲಿಲ್ಲದ ಹಲವು ಸಾಲುಗಳನ್ನು ಹೇಳಿರುವುದೂ ಉಂಟು. ಉದಾಹರಣೆಗೆ, ಪಾಲ್ಕುರಿಕೆ ಸೋಮನು ಬಸವಣ್ಣನ ತಂದೆಯಾದ ಮಂಡಗೆಯ ಮಾದಿರಾಜನನ್ನು ಮೂರು ದ್ವಿಪದಗಳಲ್ಲಿ* ಹೀಗೆ ಪರಿಚಯಿಸಿರುವನು ;

ಗುರುತರಂಬೈನ ಶ್ರೀಗಿರಿ ಪಶ್ಚಿಮಮುನ
ನರನುತಂ ಎಗುಚುಂ ಗರ್ಣಾಟದೇಶ ಮನಂ
ಗಡು ನೊಪ್ಪ ನಂದುಂ ಬ್ರಖ್ಯಾತ ಸದ್ಭಕ್ತಿ
ಸಡಿ ಸನ್ನ ಹಿಂಗುಳೇಶ್ವರ ಭಾಗವಾಟ
ಯನು ನಗ್ರಹಾರಂಬುನಂದು ವಿಖ್ಯಾತಿ
ಮನುಚುಂಡು ಮಂಡಂಗ ಮಾದಿರಾಜನಂಗ

(ಅ ೧. ಸಾಲು ೫೮೧–೫೮೬)

ಇದನ್ನೇ ಭೀಮಕವಿಯು ಸ್ವಲ್ಪ ವಿಸ್ತರಿಸಿ ಹೇಳಿ ಮಂಡಗೆಯ ಮಾದಿರಾಜನು ಇಂಗಳೇಶ್ವರ ಬಾಗೆವಾಡಿಯ ಬಹುಳಗ್ರಹಾರದ ಗ್ರಾಮಿಣೀಮಣಿಯೂ, ವಿತರಣದ ಕಣಿಯೂ, ಭೂಮಿದೇವಾಗ್ರಣಿಯೂ ಆಗಿದ್ದನೆಂದು ಹೇಳುವನು (೨. ೪೫–೪೬)

ಮೂಲಕ್ಕೆ ಭಂಗ ಬರದ ರೀತಿಯಲ್ಲಿ ಸಂದರ್ಭೋಚಿತವಾಗಿ ವಿಷಯವನ್ನು ಬೆಳೆಸಿ ಹೇಳುವ, ಮೂಲಕವಿ ಹೇಳದೆ ಬಿಟ್ಟ ವಿಷಯಗಳನ್ನು ಪ್ರಸ್ತಾಪಿಸುವ ಕಲೆ ಭೀಮಕವಿಗೆ ಕರಗತವಾಗಿದೆ. ಉದಾಹರಣೆಗೆ, ಸೋಮನಾಥನು ಬಸವಣ್ಣನಿಗೆ ಅವನ ಎಂಟನೆಯ ವಯಸ್ಸಿನಲ್ಲೇ ಸರ್ವಜ್ಞತ್ವ ಪ್ರಾಪ್ತವಾಯಿತು. ಸಕಲ ವಿದ್ಯೆಗಳೂ ಅವನ ಮುಖೋದ್ಗತನಾದುವು. ಇದಲ್ಲದೆ ಅವನ ತಂದೆ ಎಂಟನೆಯ ವಯಸ್ಸಿನಲ್ಲಿ ಮಗನಿಗೆ ಉಪನಯನ ಮಾಡಲು ನಿರ್ಧರಿಸುವನು (ಅ ೧. ಸಾಲು ೮೫೯–೮೫೪) ಎಂದು ಹೇಳುವನು. ಭೀಮಕವಿಯು ಇದನ್ನೇ ಇನ್ನಷ್ಟು ರಂಜಕವಾಗಿ ಹೇಳುವನು. ಬಸವನಿಗೆ ಎಂಟನೆಯ ವಯಸ್ಸಿಗೇ ಬರಹ, ವಾಚನ, ಗಣಿತ, ಶಬ್ದಾರ್ಥ, ರಸಭಾವೋಕ್ತಿ, ಪ್ರವೀಣತೆ, ಭರತನಾಟ್ಯ, ಛಂದಸ್ಸು, ವ್ಯಾಕರಣ,

* ದ್ವಿಪದಗಳನ್ನು ಉಲ್ಲೇಖಿಸುವಾಗ ಬಂದಿರುವ ತಪ್ಪುಗಳನ್ನು ಅವರಿಂದ ಪರಿಷ್ಕೃತವಾಗಿರುವ 'ಬಸವಪುರಾಣಮು'ವನ್ನು ಮೂಲ ಆಕರವಾಗಿ ಬಳಸಿಕೊಳ್ಳಲಾಗಿದೆ.

ಸಂಗೀತ, ಸಾಹಿತ್ಯ, ಶಿವರಹಸ್ಯಾಗಮ, ಪುರಾಣಗಳು, ಸಕಲ ವೇದಗಳು, ೬೪ ಕಲೆಗಳು ಸ್ಮರಿಸಲೊಡನೆ ಮುಖೋದ್ಗತವಾದುವು ಎಂದು ವರ್ಣಿಸುವನು (೨.೪೨–೪೨)

ಪಾಲ್ಕುರಿಕೆ ಸೋಮನಾಥನು ಬಸವನಿಗೂ ಅವನ ತಂದೆ ಮಂಡಗೆ ಮಾದಿರಾಜನಿಗೂ ಉಪನಯನ ವಿಚಾರದಲ್ಲಿ ನಡೆದ ಚರ್ಚೆಯನ್ನು ಸ್ವಲ್ಪ ವಿಸ್ತರಿಸಿಯೇ ಹೇಳಿರುವನು (ಆ. ೧. ಸಾಲು ೮೫೫–೧೦೧೨) ಭೀಮಕವಿಯಲ್ಲಿ ಈ ಭಾಗ ಹೆಚ್ಚಿನ ವ್ಯತ್ಯಾಸ ಹೊಂದಿಲ್ಲ. ಉಪನಯನವನ್ನು ಧಿಕ್ಕರಿಸಿ ಮನೆ ಬಿಟ್ಟು ಹೊರಡುವ ಪ್ರಸಂಗ ಭೀಮ ಕವಿಯಲ್ಲಿ ಮೂಲಾನುಸಾರಿಯಾಗಿದ್ದರೂ ಅಲ್ಪ ಸ್ವಲ್ಪ ವ್ಯತ್ಯಾಸಗಳಿವೆ. ಮೂಲದ ಸಂದರ್ಭವನ್ನು ಹಿಗ್ಗಲಿಸಿ ಅದನ್ನು ಇನ್ನಷ್ಟು ಚೆನ್ನಾಗಿ ಹೇಳುವ ಪ್ರಯತ್ನ ಭೀಮಕವಿ ನಡೆಸಿರುವನು (೩. ೭೯–೮೩). ತುಲನೆಗೆ ಈರ್ವರಲ್ಲೂ ಬಂದಿರುವ ಆ ಸಂದರ್ಭವನ್ನು ಪರಿಶೀಲಿಸಬಹುದು –

ಪಾಲ್ಕುರಿಕೆ ಸೋಮನಾಥ :

ಇಟ್ಟ ಬ್ರಾಹ್ಮಣಮಾರ್ಗ ಮಿದಿ ದಥ್ಯಮುಗನು
ಬಟ್ಟಯಾಡೆದ ವೇನಿ ಪನಿಯು ಲೇ ದಿಂಕಂ
ಗಾಕುಲು ವೆಂಚಿನ ಕೋಕಿಲಪಿಲ್ಲ
ಕಾಕುಲಂ ಬೋಲು ನೆ ಕಾವು ಕಾವನುಚು
ನೆಕ್ಕಡಿತಲ್ಲಿ ಮೀ ರೆಕ್ಕಡಿ ತಂಡ್ರಿ
ಎಕ್ಕಡಿ ತೋಡು ಧರ್ಮೇತರುಲಾರ !
ಚೆನ್ನಯ್ಯ ಮಾತಾತ ಚೇರಮ ತಂಡ್ರಿ
ಪಿನ್ನಯ್ಯ ಕಕ್ಕಯ್ಯ ಬಿಡ್ಡ ನೇನನುಚು
ವೇಡುಕ ಸದ್ಭಕ್ತಿ ವಿಧಿ ನುಂಡುವಾಂಡ
ನೇಡುಗಡಯು ಮಾಕು ಸಿದಿ ಸಿಕ್ಕುವಂಬು
ಮೀಯಂತ ನುಂಡುಂಡು ಮೀರುನು, ನೇನು
ನಾಯಂತ ನುಂಡೆದ ವೇಯುನು ನೇಲ ?

(ಆ ೧. ಸಾಲು ೧೦೧೩–೧೦೨೪)

ಭೀಮಕವಿ :

ಆಗಳುಂ ದ್ವಿಜಮಾರ್ಗವನೆ ದಿಟ
ವಾಗಿ ನೀ ಹಿಡಿದಾಡಿದಡೆಯೆಮ
ಗಾಗದೀ ಕರ್ಮಕ್ರಿಯಾಚಾರಪ್ರವರ್ತನವು
ಕಾಗೆ ಸಾಗಿಪ ಕೋಗಿಲೆಯ ಮರಿ

ಕೂಗುವುದೆ ಸುಸ್ವರದೊಳಲ್ಲದೆ
ಕಾಗೆಯಂದದಿ ಕಾವು ಕಾವೆಂದಱಚುವುದೆ ಹೇಳಾ ।
ಗುರುಪದಾರ್ಚನೆಗೊಲಿದು ಹಾರುವ
ಪರಮ ಶೈವೋನ್ನತಿಗೆ ಹಾರುವ
ಶರಣ ಸ್ವಾನುಭವಕ್ಕೆ ಹಾರುವ ತತ್ಪ್ರಸಾದಕ್ಕೆ
ಹರಿದು ಹಾರುವ ವೀರಭಕ್ತಿಗೆ
ಪಿರಿದು ಹಾರುವ ನಾನದೆಂದುಂ
ಬೆರಸಿ ಹಾರುವ ಕುಲಕೆ ಹಾರುವನಲ್ಲ ನುಡಿಸದಿರು ।
ತಂದೆ ಕೇಳೀರೇಳು ಲೋಕದ
ತಂದೆಯುಂ ಭಜಿಸದೆ ರತೀಶನ
ತಂದೆಯುಂ ಬಿದಿ ರವಿ ಶಿಖಿಗಳುಂ ಭಜಿಸಿ ಕರ್ಮಕ್ಕೆ
ತಂದೆ ನಿನ್ನೊಡಲಂ ಭವಾಳಿಗೆ
ತಂದೆಯುಕ್ಕಟ ನೀನದೆಲ್ಲಿಯು
ತಂದೆಯೆನಗಿನ್ನೀಶ ಭಕ್ತರೆ ತಂದೆ ತಾಯಿಗಳು ।
ಅಯ್ಯನಾರೆನಗವ್ವೆಯಾರ್ ಪಿರಿ
ಯಯ್ಯನಾರ್ ನೀನೆಲ್ಲಿಯುವ ನಿ
ನ್ನಯ್ಯತನವೇತಕ್ಕೆ ಸುಡು ಶಿವಭಕ್ತಿಹೀನರ
ಅಯ್ಯನಯ್ಯನು ಚೆನ್ನಯಂ ಚಿ–
ಕ್ಕಯ್ಯ ಕಕ್ಕಯ್ಯನು ತೆಲುಗ ಜೊ–
ಮ್ಮಯ್ಯನಯ್ಯನು ನಿಂಬಿ ತಾಯ್ ಚೇರಮನ ಮಗ ನಾನು ।
ಸಾರ ಭಕ್ತಿಸ್ಥಿತಿಯೊಲುಮೆಯೊಳ
ನಾರತಂ ಸುಖವೊಂದುತಿರ್ಪೆನು
ವೀರಮಾಹೇಶ್ವರರೆ ಗತಿಯೆನಗಿಮನೆ ನಿಚ್ಚಮುಪ್ಪ
ಸೇರದಿಂತಹದೆಮಗೆ ನಿಮ್ಮಾ
ಚಾರದಲಿ ನೀವಿಪ್ಪಿರೆಮ್ಮಾ
ಚಾರದಲಿ ನಾವಿಪ್ಪೆವಿನ್ನಾವಾರು ನೀವಾರು ।।

ಪಾಲ್ಕುರಿಕೆ ಸೋಮನು ಆಶ್ವಾಸ ಮೂಱರಲ್ಲಿ. ಗಂಗಾಂಬಿಕೆಯುಟ್ಟ ಸೀರೆ ಅಕ್ಷಯವಾದ ಪ್ರಸಂಗದ ನಂತರ ಸೂರ್ಯಾಸ್ತ ವರ್ಣನೆ ಮಾಡಿರುವನು. ಆ ವರ್ಣನೆ ಹೀಗಿದೆ :

ಬಸವನಿ ಭಕ್ತಿ ಪ್ರಭಾ ಪಟಲಂಬು
ದೇಸಲ ವಸುಂಧರ ದಿವಿ ವೀಟು ಕೋನಂಗ

ದಿನಕರುಂಡಾತ್ಮೀಯ ತೇಜಂಬು ದಱುಂಗು
ಡುನು ಮದಿ ಲಜ್ಜಿಂಚಿ ಚನಿಯಪರಾಬ್ಧಿಂ
ಬಡಿಯೆನೋ ಯನ್ನಟ್ಲು ಭಾನುಂಡು ಗ್ರುಂಕೆಂ
ಜೇಡಿ ಪುಕ್ಕುಂ ದರುಗ ರಾಜೀವಮುಲ್ ಮುಗಿಚೆ

(ಆ ೭. ಸಾಲು ೧೮೧-೧೮೬)

ಪಾಲ್ಕುರಿಕೆ ಸೋಮನ ಈ ವರ್ಣನೆಗೂ ಭೀಮಕವಿಯ ಸೂರ್ಯಾಸ್ತ ವರ್ಣನೆಗೂ ವ್ಯತ್ಯಾಸವಿದೆ. ವರ್ಣನಾಪ್ರಿಯನಾದ ಭೀಮಕವಿಯು ತನ್ನ ಹಿಂದಣ ಕವಿಗಳ ವರ್ಣನಾ ವಿಧಾನವನ್ನು ಅನುಸರಿಸಿ ಪಾಲ್ಕುರಿಕೆ ಸೋಮನು ಹೇಳಿದ್ದಕ್ಕಿಂತ ತುಸು ಭಿನ್ನ ರೀತಿಯಲ್ಲಿ, ದೀರ್ಘವಾಗಿ ವರ್ಣನೆ ಮಾಡಿರುವನು (ನೋಡಿ : ಬಸವ ೧೦. ೪೪-೪೭).

ತೆಲುಗು 'ಬಸವಪುರಾಣಮು'ವಿನಲ್ಲಿ ಬಸವಣ್ಣನು ಬಿಜ್ಜಳನ ದಂಡನಾಥನಾದ ಮೇಲೆ ತನ್ನ ತಂಡದ ಸೈನ್ಯಬಲಕ್ಕೆ ಜೀವಿತವನ್ನು ಕೊಡುವಲ್ಲಿ ಮಿಂಡ ಜಂಗಮರು ಅಲ್ಲಿಗೆ ಬಂದು ಘಟ್ಟಿಸಿ ಪೆಟ್ಟಿಗೆಯ ಹೊನ್ನೆಲ್ಲವನ್ನೂ ಕೊಡುವಂತೆ ಕೇಳಿದಾಗ ಬಸವಣ್ಣನು ಅವರಿಗೆ ಅದನ್ನು ಒಲಿದಿತ್ತನು. ಇದನ್ನು ಕಂಡ ಮಂತ್ರಿಗಳು ಬಿಜ್ಜಳನಲ್ಲಿಗೆ ದೂರೊಯ್ಯುವರು (ಆ. ೩. ಸಾಲು ೫-೧೨). ಈ ಪ್ರಸಂಗ ಭೀಮಕವಿಯಲ್ಲೂ ಬಂದಿದೆಯಾದರೂ, ಬಿಜ್ಜಳನಲ್ಲಿಗೆ ದೂರೊಯ್ಯುವವರ ಹೆಸರು ಮೂಲಕೃತಿಯಲ್ಲಿ ಬಂದಿಲ್ಲ; ಭೀಮಕವಿಯಲ್ಲಿ ಬಂದಿದೆ. ಕಾಳಿಮರಸ, ಕರಿಯಕೇಶವ, ಜೋಳಿಯಣ್ಣ, ಕುಂಡತನು ಭೂಪಾಳ, ವೆಮ್ಮಡಿ, ಉಗ್ರಚಂಡಿ, ಕಸವಮಂತ್ರಿ, ಮೇಳಿಗರಸ ಇವರೆಲ್ಲರೂ ಕೂಡಿ ಬಸವಣ್ಣ ದಂಡನಾಯಕನ ಬಗೆಗೆ ಬಿಜ್ಜಳನಲ್ಲಿ ದೂರಿತ್ತರೆಂದು ಭೀಮಕವಿ ಹೇಳುವನು (೧೦ ೪)

ಪಾಲ್ಕುರಿಕೆ ಸೋಮನು ಪುರಾತನ ನೂತನ ಮುಗ್ಧಭಕ್ತರ ಕಥೆಗಳನ್ನು ಹೇಳುವಲ್ಲಿ ಸಕ್ಕಸ್ತೈನಾರು ಕಥೆಯಾದ ಮೇಲೆ ಬಿಜ್ಜಮಹಾದೇವಿಯ ಕಥೆ ಅಥವಾ ಅಮ್ಮವ್ವೆಯ ಕಥೆಯನ್ನು ಹೇಳುತ್ತಾನೆ. ಇದಾದ ಮೇಲೆ ಗೊಡಗೂಚಿ ಕಥೆ ಅಥವಾ ಕೋಳೂರು ಕೊಡಗೂಸಿನ ಕಥೆ ಬರುತ್ತದೆ. ಆದರೆ, ಭೀಮಕವಿಯಲ್ಲಿ ಈ ಕಥೆಗಳು ಹಿಂದುಮುಂದಾಗಿ ಬಂದಿವೆ. ಸಕ್ಕಸ್ತೈನಾರನ ಕಥೆಯಾದ ಮೇಲೆ ಕೋಳೂರು ಕೊಡಗೂಸಿನ ಕಥೆ ಬರುತ್ತದೆ (ಸಂ. ೧೩). ಅನಂತರ ಬಿಜ್ಜಮಹಾದೇವಿ ಅಥವಾ ಅಮ್ಮವ್ವೆಯ ಕಥೆ ಬರುತ್ತದೆ (ಸಂ. ೧೪).

'ಕೇಳ ಮಾನಿಗಣ ಸೂತ್ರಮಾತ್ರದಿ ಆದಿಗಣ ಚರಿತಂಗಳೊಳು ಸಂವೇದಿಸಿ ಬಸವನ ಚರಿತೆ'ಯನ್ನು ಸೋಮನಾಥ ವರ್ಣಿಸಿದನು. ಬಸವಣ್ಣನ ಚರಿತೆಯ ಜೊತೆಗೆ ಪುರಾತನ, ನೂತನ ಭಕ್ತರ ಕಥೆಗಳನ್ನು ಸಂಘಟಿತವಾಗಿ ಹೇಳಿ

ಕೊಂಡು ಸಾಗುವುದರಲ್ಲಿ. ಈ ಪುರಾತನ, ನೂತನ ಭಕ್ತರ ಕಥೆಗಳು 'ಬಸವಭಾನು'ವಿನ ಭವ್ಯ ವ್ಯಕ್ತಿತ್ವಕ್ಕೆ ಕಳೆಗಟ್ಟುವಂತೆ ಒಂದಲ್ಲ ಒಂದು ರೀತಿಯಲ್ಲಿ ಪೋಷಕವಾಗುವಂತೆ ಮಾಡುವುದರಲ್ಲಿ ಸೋಮನಾಥನಿಗೆ ವಿಶೇಷ ಆಸಕ್ತಿ. (ಅವನಲ್ಲಿ ಹಲವು ಬಾರಿ ಮೂಲ ಮೂರ್ತಿಯನ್ನೇ ಮರೆಯುವ, ಉತ್ಸವಮೂರ್ತಿಯನ್ನೇ ಮೆರೆಸುವ ಚಾಪಲ್ಯ ಅವನಿಗೆ ಅರಿವಿಲ್ಲದೆಯೇ ಪ್ರಕಟವಾಗಿಬಿಡುತ್ತದೆ.) ಸೋಮನಾಥ ಒಳ್ಳೆಯ ಕಥೆಗಾರ. ಸಾಮಾನ್ಯರನ್ನು ತನ್ನ ಗಮನದಲ್ಲಿಟ್ಟುಕೊಂಡು ಅವನು ಬಸವಣ್ಣನನ್ನು ಕೇಂದ್ರಬಿಂದುವಾಗಿ ಮಾಡಿಕೊಂಡು ಭಕ್ತರ ಕಥೆಯನ್ನು ಹೇಳುತ್ತಾ ಹೋಗುವನು. ಒಂದಾದ ಮೇಲೆ ಮತ್ತೊಂದು ಕಥೆ ಬಿತ್ತರಗೊಳ್ಳುತ್ತಾ ಸಾಗುತ್ತದೆ. ಮೂಲಕಥೆಯ ಕೊಂಡಿ ಕಳಚಿಕೊಳ್ಳದಂತೆ ಅವನು ಕಥೆಯ ಹೆಣಿಕೆ ಹಾಕಬೇಕಾಗಿದೆ. ಅವನಲ್ಲಿರುವ ಕಥೆಯ ಸರಕು ದೊಡ್ಡದು. ಹೀಗಾಗಿ ಅವನು ಪೂರ್ವಕವಿಗಳಂತೆ ಹದಿನೆಂಟು ವರ್ಣನೆಗಳನ್ನು ಮಾಡುತ್ತ ಅಲ್ಲಲ್ಲಿ ನಿಂತು ವಿಶ್ರಮಿಸಲು ಸಾಧ್ಯವಿಲ್ಲ. ಅದಕ್ಕೆ ಅವನಿಗೆ ಸಮಯವಿಲ್ಲ. ವರ್ಣನೆಗೆ ಅವಕಾಶವಿದ್ದಾಗ್ಯೂ ಆ ಕಡೆ ಗಮನ ಹರಿಸದೆ ಅವನು ಮುಂದೆ ಸಾಗುವುದನ್ನು ಕಂಡಾಗ ಕಣ್ಣು ಕಟ್ಟಿದ ಕುದುರೆಯ ನೆನಪಾಗುತ್ತದೆ.

ಭೀಮಕವಿ ಸಹಜವಾಗಿ ವರ್ಣನಾಪ್ರಿಯ. ಸೋಮನಾಥನನ್ನು ಈತ ಅನುಸರಿಸಹೊರಟರೂ ವರ್ಣನಾಚಾಪಲ್ಯವನ್ನು ಮೀರಿ ಅವನಿಗೆ ನಡೆಯಲಾಗದು. ವರ್ಣನೆಗೆ ಅವಕಾಶವಿದ್ದರೂ ಸೋಮನಾಥ ಕಣ್ಮುಚ್ಚಿ ಎಲ್ಲೆಲ್ಲಿ ನಡೆದಿರುವನೋ ಅಲ್ಲೆಲ್ಲಾ ಭೀಮಕವಿ ತನ್ನ ಬಣ್ಣದ ಕುಂಚವನ್ನು ಪ್ರತಿಭೆಯ ರಂಗಿನಲ್ಲಿ ಅದ್ದಿ ಚಿತ್ರಗಳನ್ನು ಬಿಡಿಸಿರುವನು. ಅವನದು ತಿದ್ದಿದ ಕೈ. ಹೀಗಾಗಿ ಅವನ ಚಿತ್ರಗಳು ನಮಗೆ ತೀರಾ ನಿರಾಶೆಯನ್ನುಂಟುಮಾಡುವುದಿಲ್ಲ. ಬಸವನ ವಿವಾಹದ ಸಂದರ್ಭದಲ್ಲೂ ಚೆಲುವಿನ ಪುತ್ಥಳಿಯಾದ ಗಂಗಾಂಬಿಕೆಯ ವರ್ಣನೆಯನ್ನು ಸೋಮನಾಥನಂತೆ ಕೈಬಿಡಲು ಭೀಮಕವಿಗೆ ಮನಸ್ಸಿಲ್ಲ. ಅವನು ರಸಿಕ. ಚೆಲುವಿನ ಆರಾಧಕ. ತಾನೇ ನೇರವಾಗಿ ಗಂಗಾಂಬಿಕೆಯ ವರ್ಣನೆ ಮಾಡಹೊರಟರೆ ಅದು ವರ್ಣನಾಚಾಪಲ್ಯವಾಗುತ್ತದೆ. ಅದಕ್ಕೆ ಬದಲಾಗಿ, ಬಲದೇವ ಮಂತ್ರಿಯ ಮುಂದೆ ಪುಣ್ಯಕಾಂತೆಯರು ಗಂಗಾದೇವಿಯನ್ನು ಹೇಗೆ ವರ್ಣಿಸಿದರೆಂಬುದನ್ನು ಹದಿನೇಳು ಪದ್ಯಗಳಲ್ಲಿ (೪. ೧೫–೩೧) ಹೇಳಿರುವನು. ಇಷ್ಟಕ್ಕೂ ಅವನ ಬಣ್ಣನೆಯ ಕುಂಚಕ್ಕೆ ಆಯಾಸ ಕಾಣಲಿಲ್ಲ. ಆಭರಣಗಳಿಂದ ಸಿಂಗರಗೊಂಡ ಗಂಗಾಂಬಿಕೆಯ ದಿವ್ಯ ಸೌಂದರ್ಯವನ್ನು ಮತ್ತೆ ಎಂಟು ಪದಗಳಲ್ಲಿ ಮಾತಿನಲ್ಲಿ ಎರಕಗೊಳಿಸಲು ಪ್ರಯತ್ನಿಸಿರುವನು (೪. ೩೪–೪೧).

ಶ್ರೀಶೈಲದಲ್ಲಿ ಹಲವು ಕಾಲ ಪಾಲ್ಕುರಿಕೆ ಸೋಮನಾಥ ತಂಗಿದ್ದಾಗ ಅಲ್ಲಿಗೆ ಯಾತ್ರಾರ್ಥಿಗಳಾಗಿ ಕರ್ನಾಟಕ ಹಾಗೂ ತಮಿಳುನಾಡಿನಿಂದ ಬಂದ ಭಕ್ತರ ಮೂಲಕ ಬಸವಾದಿ ಶಿವಶರಣರ ಹಾಗೂ ಅರವತ್ತು ಮೂವರು ಪುರಾತನರ ದಿವ್ಯ

ಚಾರಿತ್ರವನ್ನೂ ಮತ್ತು ಮಹಿಮಾತಿಶಯಗಳನ್ನೂ ವಿಶದವಾಗಿ ತಿಳಿದುಕೊಂಡನು. ತೆಲುಗು 'ಬಸವಪುರಾಣಮು' ಸೃಷ್ಟಿಯಾದ ಸು. ೫೦ ವರ್ಷಗಳ ಅಂತರದಲ್ಲಿ ಕನ್ನಡ ಬಸವಪುರಾಣ ಜನ್ಮತಾಳಿತು. ಬಸವಾದಿ ಶಿವಶರಣರ ಕಥೆಯನ್ನು ತಿಳಿಯಲು ಪಾಲ್ಕುರಿಕೆ ಸೋಮನಿಗೆ ಆದರ ಮೌಖಿಕ ಪರಂಪರೆಯೇ ಆಧಾರ. ಕವಿಗೆ ಕೃತಿರಚನೆ ಮಾಡಲು ತನ್ನದೇ ಆದ ಮಿತಿಯಿದೆ. ಆ ಪರಿಮಿತಿಯಲ್ಲೇ ಸೋಮನಾಥ ಕೃತಿ ರಚಿಸಿರುವನು. ಪಾಲ್ಕುರಿಕೆ ಸೋಮನಿಗೆ ತಿಳಿಯದೇ ಇದ್ದ, ಬಸವನಿಗೆ ಸಂಬಂಧಿಸಿದ ಅನೇಕ ವಿಷಯಗಳು ಭೀಮಕವಿಗೆ ತಿಳಿದು ಬಂದಿತ್ತು. ಅವನ್ನೆಲ್ಲಾ ಭೀಮಕವಿ ತನ್ನ ಕೃತಿಯ ಒಡಲಲ್ಲಿ ಮೂಲಕಥೆ ಬಣ್ಣಗೆಡದಂತೆ ಸೇರಿಸಿರುವನು. ಅವನು ಹೊಸ ದಾಗಿ ಸೇರಿಸಿರುವ ಕಥೆಗಳಿವು :

೧ ಮಾಯಿದೇವಿಯ ಮುತ್ತಿನೋಲೆಯನ್ನು ಬೇಡಿದ ಜಂಗಮನಿಗೆ ನೀಡಿದ ಕಥೆ
೨ ಶಿವಯೋಗ ನಿದ್ರಾಮುದ್ರೆಯ ಕಥೆ
೩ ಕಿನ್ನರಯ್ಯಗಳ ಪ್ರಾಣವ ಪಡೆದ ಕಥೆ
೪ ತಂಗಟೂರಿ ಮಾರಿದೇವನ ಕಥೆ
೫ ನುಲಿಯ ಚಂದಯ್ಯನ ಕಥೆ
೬ ಕೊಂಡಗುಳಿ ಕೇಶಿರಾಜಯ್ಯನ ಕಥೆ
೭ ಮೇದರ ಕೇತಯ್ಯನ ಕಥೆ
೮ ದಸರಯ್ಯನ ಕಥೆ
೯ ಗುರುಭಕ್ತಯ್ಯನ ಕಥೆ
೧೦ ಗುರುಭಕ್ತಾಂಡಾರಿಯ ಕಥೆ
೧೧ ಶ್ವೇತನ ಕಥೆ
೧೨ ಮಲುಹಣನ ಕಥೆ
೧೩ ಓಹಿಲಯ್ಯನ ಕಥೆ
೧೪ ಉದ್ಭಟದೇವನ ಕಥೆ
೧೫ ವೇಮನಾರಾಧ್ಯರ ಕಥೆ
೧೬ ಚಿಕ್ಕ ಮಾದಣ್ಣನ ಕಥೆ
೧೭ ಕದಿರೆ ರೇಮಣ್ಣನ ಕಥೆ
೧೮ ಕಜ್ಜಾಯದ ಪವಾಡ ಕಥೆ

ಈ ಮೇಲಿನ ಕಥೆಗಳಲ್ಲಿ ಕೆಲವು ಪಾಲ್ಕುರಿಕೆ ಸೋಮನಾಥನಿಗೆ ತಿಳಿಯದೆ ಇರಬಹುದು. ಎರಡು ಮತ್ತು ಮೂರನೆಯ ಕಥೆಗಳು ಬಹುಶಃ ಸೋಮನಾಥನಿಗೆ ಅಪರಿಚಿತವಿರಬಹುದು. ಬಹುಶಃ ಹದಿನಾರನೆಯ ಕಥೆಯೂ ಇವನಿಗೆ ತಿಳಿದಿರಲಾರದು. ತಂಗಟೂರ ಮಾರಯ್ಯ, ಸುಲಿಯ ಚೆಂದಯ್ಯ, ಕೊಂಡಗುಳಿ ಕೇಶಿರಾಜಯ್ಯ ಇವರ ಕಥೆಗಳು ಭೀಮಕವಿಗೆ ತಿಳಿದಿರುವುದು ಸ್ವಲ್ಪವೇ. ಏಕೆಂದರೆ, ಅವನ ಕೃತಿಯಲ್ಲಿ ಈ ಕಥೆಗಳು ಎರಡು ಪದ್ಯಗಳಲ್ಲಿ ತೀರಾ ಸಂಕ್ಷಿಪ್ತವಾಗಿ ಬಂದಿವೆ (೩೫. ೫೮–೫೯). ಇದನ್ನು ತಿಳಿದೋ ತಿಳಿಯದೆಯೋ ಪಾಲ್ಕುರಿಕೆ ಸೋಮನು ಬಿಟ್ಟಿರಬಹುದು. ಮೇಲಿನ ಕಥೆಗಳೆಲ್ಲವೂ ಭೀಮಕವಿಯ ಸ್ವಂತ ಸೃಷ್ಟಿಯಲ್ಲ. ಅವುಗಳಲ್ಲಿ ದಸರಯ್ಯನ ಕಥೆ, ಗುರುಭಕ್ತನ ಕಥೆ, ಗುರುಭಕ್ತಾಂಡಾರಿಯ ಕಥೆ, ಶ್ವೇತನ ಕಥೆ, ಮಲುಹಣನ ಕಥೆ, ಓಹಿಲನ ಕಥೆ, ಉದ್ಭಟದೇವನ ಕಥೆ, ರೇವಣಸಾರಾಧ್ಯನ ಕಥೆ, ಕದಿರೆ ರೇಮಣ್ಣನ ಕಥೆ, ಹಾಗೂ ಅಂಡಾರಿಯ ಕಥೆ, ಸಕಳೇಶ ಮಾದರಸರ ಕಥೆಗಳನ್ನು ಸೋಮನಾಥನ ಮತ್ತೊಂದು ಕೃತಿಯಾದ 'ಪಂಡಿತಾರಾಧ್ಯ ಚರಿತ್ರೆ'ಯಿಂದ ಭೀಮಕವಿಯು ತೆಗೆದುಕೊಂಡಿರುವನು.

ಭೀಮಕವಿಯಲ್ಲಿ ಹಲವೆಡೆಗಳಲ್ಲಿ ರಂಜನೀಯವಾದ ವಿವರಣೆ ಹೆಚ್ಚು. ಸೋಮನಾಥ ಮೂರು ನಾಲ್ಕು ಮಾತುಗಳಲ್ಲಿ ಹೇಳಿದ್ದನ್ನು ಸಂದರ್ಭಾನುಸಾರವಾಗಿ ಭೀಮಕವಿ ಹಿಂಜಿ ಹತ್ತಾರು ಮಾತುಗಳಲ್ಲಿ ವಿವರಣೆ ನೀಡುತ್ತಾನೆ. ಉದಾಹರಣೆಗೆ ಬಿಬ್ಬಿ ಬಾಚಯ್ಯಗಳ ಕಥೆಯಲ್ಲಿ ಬಿಬ್ಬಿ ಬಾಚಯ್ಯ ಬ್ರಾಹ್ಮಣರ ಮೇಲೆ ಕೋಪದಿಂದ ಚೆಲ್ಲಿದ ಶರಣರ ಒಕ್ಕು ಮಿಕ್ಕ ಪ್ರಸಾದ ಕಾಲಾಗ್ನಿರೂಪದಲ್ಲಿ ಇಡೀ ಗೊಬ್ಬೂರನ್ನೇ ಆಕ್ರಮಿಸಿದುದನ್ನು ಸೋಮನಾಥನು ವರ್ಣಿಸಿರುವನು (ಆ. ೨ ಸಾಲು ೪೨೭-೪೬೯). ಬ್ರಾಹ್ಮಣ ಕೇರಿಯ ಜನರನ್ನು ಹಾಗೂ ಅವರ ಮನೆಯನ್ನು ಬೆಂಕಿ ಸುಡಲು ಹೊರಟಿತು ಎಂದು ಹೇಳುವಾಗ ಬ್ರಾಹ್ಮಣರ ಹೆಸರುಗಳನ್ನು ಸೋಮನಾಥನು ಉಲ್ಲೇಖಿಸಿರುವನು. ಭೀಮಕವಿಯು ಈ ಸಂದರ್ಭದಲ್ಲಿ ಸೋಮನಾಥನು ಹೇಳಿರುವ ಬ್ರಾಹ್ಮಣರ ಹೆಸರುಗಳೊಂದಿಗೆ ತನ್ನದೇ ಸೃಷ್ಟಿಯ ಹೆಸರುಗಳನ್ನೂ ಸೇರಿಸಿ ಸನ್ನಿವೇಶವನ್ನು ಪರಿಣಾಮಕಾರಿಯಾಗುವಂತೆ ಚಿತ್ರಿಸಿರುವನು. (೫೫·೨೭–೪೨).

ಸೋಮನಾಥನು ಏಳನೇ ಆಶ್ವಾಸದಲ್ಲಿ ಕಲ್ಯಾಣಪುರದ ೧೧೭ ಮಂದಿ ಭಕ್ತರ ಹೆಸರುಗಳ ದೊಡ್ಡ ಪಟ್ಟಿಯೊಂದನ್ನು ಕೊಟ್ಟಿರುವನು. ಭೀಮಕವಿಯೂ ಸಂಧಿ ೫೭ರಲ್ಲಿ ಕಲ್ಯಾಣದ ಭಕ್ತರ ಹೆಸರನ್ನು ಕೊಟ್ಟಿರುವನು. ಇಬ್ಬರೂ ಕೊಟ್ಟಿರುವ ಹೆಸರುಗಳಲ್ಲಿ ಏಕರೂಪತೆ ಕಾಣಬರದು. ವ್ಯತ್ಯಾಸಗಳಿರುವುದನ್ನು ಕೆಳಗೆ ಕೊಡಲಾಗಿರುವ ಹೆಸರುಗಳಿಂದ ಮನಗಾಣಬಹುದು.

ಪಾಲ್ಕುರಿಕೆ ಸೋಮನಾಥ	ಭೀಮಕವಿ
ಮಡಿವಾಳ ಮಾಚಯ್ಯ	ರಾಚಮಲ್ಲಯ್ಯ
ಮಾದಿರಾಜಯ್ಯ	ಮಡಿವಳ ಮಾಚಿದೇವಯ್ಯ
ಬಡವರ ಬ್ರಹ್ಮಯ್ಯ	ಸೊಡ್ಡಳ ಬಾಚಿದೇವಯ್ಯ
ಬಾಚಿರಾಜಯ್ಯ	ಸಕಳೇಶ್ವರ ಮಾದರಸ
ಕಿನ್ನರಬ್ರಹ್ಮಯ್ಯ	ಐಚಿದೇವಯ್ಯ
ಕೇಶಿರಾಜಯ್ಯ	ಲಿಂಗದ ಕಾಚಿದೇವ
ಕನ್ನಡ ಬ್ರಹ್ಮಯ್ಯ	ಗಂಡಗತ್ತರಿ ನಾಚಿದೇವ
ಕಲ್ಲಿದೇವಯ್ಯ	ಮಾಯಿಭಟ್ಟ
ಮೋಳಿಗೆ ಮಾರಯ್ಯ	ರುದ್ರದೇವಯ್ಯ
ಮುಸುಂಡಿ ಚೌಡಯ್ಯ	ಹೆಮ್ಮೆ ಸಂಗಯ್ಯ
ಶೂಲದ ಬ್ರಹ್ಮಯ್ಯ	ಕಿನ್ನರ ಬೊಮ್ಮಿದೇವಯ್ಯ
ಸುರಿಗೆಯ ಚೌಡಯ್ಯ	ಕನ್ನದ ಬೊಮ್ಮಿದೇವಯ್ಯ
ಕಲಿಕೇತ ಬ್ರಹ್ಮಯ್ಯ	ಉದಯಮರಸು
ಕಕ್ಕಯ್ಯ	ರಾಜನದ ಬೊಮ್ಮಿದೇವಯ್ಯ
ತೆಲುಗೇಶು ಮಸಣಯ್ಯ	ಶೂಲದ ಬೊಮ್ಮಿದೇವಯ್ಯ
ತೆಲುಗು ಜೊಮ್ಮಯ್ಯ	ನಿವಾಳಿಯ ಬೊಮ್ಮಿದೇವಯ್ಯ
ಶಾಂತದೇವ	ಕಲಕೇತ ಬೊಮ್ಮಯ್ಯ
ಜಮ್ಮಯ್ಯ	ಜಕ್ಕಿಯರ ಬೊಮ್ಮಯ್ಯ
ಬಾಸವಂತು ಕೇಸಯ್ಯ	ಆಯ್ದಕ್ಕಿ ಮಾರಯ್ಯ
ಏಕಾಂತ ರಾಮಯ್ಯ	ಡೋಹರ ಕಕ್ಕಿದೇವಯ್ಯ
ಉತ್ತಮಾಂಗದ ಕೇಶಿ	ಚಂಡೇಶ್ವರನ ಚಾಮಯ್ಯ
ಹೊನ್ನಯ್ಯ	ಲಕ್ಕಿದೇವಯ್ಯ
ಗಂಡಗತ್ತರಿ ನಾಚಯ್ಯ	ಚವರದ ಚಿಕ್ಕಿದೇವ
ಕಾಲಾಗ್ನಿರುದ್ರಿ	ಬಸವಿದೇವ
ಶೃಂಗಿ	ಮೊಕ್ಕಳದ ರಾಮಯ್ಯ
ಜೊಪ್ಪಯ್ಯ	ಶಿವರಾತ್ರಿ ಸಂಗಯ್ಯ
ಸಿಗುರು ಚಂದಯ್ಯ	ಕೇಶಿರಾಜ
	ಉತ್ತಮಾಂಗದ ಕೇಶಿ
ಡಿಂಗರಿ ಮಲ್ಲಯ್ಯ	ಧವಳೇಶ್ವರ
ಸಂಗಮೇಶ್ವರ	ಧೂರ್ಜಟಿ ಕೇಶಿ

ಕದಿರ ರೆಮ್ಮಯ	ಶಿವ ಮುದ್ದಯ್ಯ
ಮಹಾಕಾಳಯ್ಯ	ಬಡಿಹೋರಿ ಬೊಮ್ಮಯ್ಯ
ಪದುಮರಸ	ಭಾಷೆವಂತ ಅಲ್ಲಯ್ಯ
ಪುಲಾಣದ ಮಾಯಿಭಟ್ಟ	ಅನುಮಿಷ ಕೇಶಿ
ಉದರದ ರಾಮಯ್ಯ	ದೇವರದಾಸಿ
ಯೋಗಿ ದೇವಯ್ಯ	ಶಂಕರದಾಸಿಮಯ್ಯ
ಯುದಯ ಮರಸುಗಾರ ಹೊನ್ನಯ್ಯ	ವಿಮಳದೇವ
ಧವಳಯ್ಯ	ಕದಿರ ರೇಮಯ್ಯ
ಬೊಂತಾದೇವಿ	ಗೋಡೆ ಮಲ್ಲಯ್ಯ
ಸವರದ ಚಿಕ್ಕಯ್ಯ	ಮಾದರ ದೂಡಿದೇವಯ್ಯ
ಸಾರನಾಯ	ಮಳಖೇಡದ ಆರಯ್ಯ
ಶಿವಮುದ್ದುದೇವ	ಏಲೇಶ್ವರದ ಕೇತಯ್ಯ
ಚಿಕ್ಕದೇವ	ಬಾಡಗಿಯ ದಾಸಯ್ಯ
ಶಿವರಾತ್ರಿ ಸಂಗಯ್ಯ	ಮುಷ್ಟಿಯ ಚೌಡಿದೇವಯ್ಯ
ಅವಿಮುಗದಯ್ಯ	ಸುರಗಿಯ ಚೌಡರಾಯ
ಚಂಡೇಶು ಚಾಮಯ್ಯ	ಹಾಟಕೇಶ್ವರ ಬೊಮ್ಮಿದೇವಯ್ಯ
ಮುಂಡ ಬ್ರಹ್ಮಯ್ಯ	ಸಿಂಗಿ ಬೊಪ್ಪಯ್ಯ
ಬಂಡಿಯ ರೇವಣ್ಣ	ಶರಣದೇವ
ಇಂಡೆ ಸೋಮಣ್ಣ	ಶಿವರಾತ್ರಿ ಸಂಕಣ್ಣ
ಹಾಟಕೇಶ್ವರ ಬ್ರಹ್ಮಯ್ಯ	ತೆಲುಗೇಶ ಮಸಣಯ್ಯ
ಮಹಾಬಲ	ಮಹಾಬಲ
ಕೂಟೇಶು ಚಾಮಯ್ಯ	ಲಿಂಗದೇವ
ಗೊಗ್ಗಯ್ಯ	ತೆಲುಗ ಬೊಮ್ಮಯ್ಯ
ದುಮ್ಮದ ಬ್ರಹ್ಮಯ್ಯ	ಕಾಲಾಗ್ನಿ ರುದ್ರಯ್ಯ
ಧೂರ್ಜಟಿ ಕೇಶಿ	ಗೊಗ್ಗಯ್ಯ
ಎಮ್ಮೆ ಸಂಗಯ	ಏಕಾಂತ ರಾಮಯ್ಯ
ಕಪಿಲೇಶು ವಿಸ್ಸಯ್ಯ	ಮೋಳಿಗೆಯ ಮಾರಯ್ಯ
ನೊಣಿಮೇಶು ಚಿಕ್ಕಯ	ಕರಿವಾಳ ಬೊಮ್ಮಯ್ಯ
ನುಲಿಯ ಚಂದಯ್ಯ	ಮಹಾಕಾಳಿದೇವ
ಗಣದಾಸಿ ಮಾದನ್ನ	ನುಲಿಯ ಚಂದಯ್ಯ
ಗಂಟೆ ಮಲ್ಲಯ್ಯ	ಧವಳಿದೇವ
ಮುರಹಾಟ ಕೇತಯ್ಯ	ಶೀಲವಂತಗಯ್ಯ

ಹರವಿ ಹೊಲ್ಲಯ್ಯ
ಗಿರಿಗಿಂಟು ಸಿಂಗಯ್ಯ
ಗುರುಜ ಕಾಳವ್ವ
ಬಾನಸ ಭೀಮಯ್ಯ
ಭಾಸ್ಕರಯ್ಯ
ಗೋಣಿಯ ಮಲ್ಲಯ್ಯ
ಗೊಗ್ಗಯ್ಯ
ಅಲ್ಲಯ್ಯ ಮಧುಪಯ್ಯ
ಅನಿಮಿಶ ಕೇಶಿ
ಹೊಲ್ಲಯ್ಯ
ಗೋಡಲ ಮಲ್ಲಯ್ಯ
ಓಲೆ ಬ್ರಹ್ಮಯ
ಕರಪಾಳ ಮಲ್ಲಯ್ಯ
ಬಾಲ ಬ್ರಹ್ಮಯ
ಪಣಿಹಾರಿ ಬಾಚಿ
ಕಪಿಲೆ ಬ್ರಹ್ಮಯ
ಬಂದಿಕಾರ ಮಲ್ಲಯ್ಯ
ಯವಕರ ಕೇತಯ್ಯ
ಶಿವನಾಗಮಯ್ಯ
ನಿಜಲಿಂಗ ಚಿಕ್ಕಯ್ಯ
ನಿರ್ಲಜ್ಜ ಶಾಂತಿ
ನಿಜ ಭಾವು
ನಿತ್ಯನೇಮದ ಮೈಲಿ
ಯಂಕ ಬ್ರಹ್ಮಯ
ಗರಹಾಳ ಬ್ರಹ್ಮಯ್ಯ
ಏಲೇಶ ಬ್ರಹ್ಮಯ್ಯ
ಈಡೆ ಬ್ರಹ್ಮಯ್ಯ
ಮೈಲನ ಬ್ರಹ್ಮಯ್ಯ
ಮಾಯಿದೇವಯ್ಯ
ಚಕ್ಕೋಟ ಬ್ರಹ್ಮಯ್ಯ
ಶರಣಯ್ಯ
ಚಿಕ್ಕ ಬ್ರಹ್ಮಯ್ಯ

ಹಾವಿನಹಾಳ ಕಲ್ಲಯ್ಯ
ನಿಸಂಗಿ ನಿರಾಳದೇವ
ಸಿಗುರೆ ಚಂದಯ್ಯ
ಮುರುಘದೇವ
ಸಂಕಿದೇವಯ್ಯ
ಸುಂಕದ ಬಂಕಿದೇವ
ಬಂಕನಾಥ
ಬಂಕಿದೇವಯ್ಯ
ಮೊರಟದ ಬಂಕಿದೇವಯ್ಯ
ಲೆಂಕ ಬೊಮ್ಮಯ್ಯ
ಶಿವಕಿಂಕರಯ್ಯ
ಹೊನ್ನ ತಂದೆ
ಅಂಕ ದೇವಯ್ಯ
ಮೇದರ ಕೇತಿದೇವಯ್ಯ
ಕಲ್ಲಿನಾಥ
ಭೋಗಿದೇವ
ಮಲ್ಲಿನಾಥ
ಶ್ರೀಗಿರಯ್ಯ
ಬಲ್ಲ ಹರಿದೇವಯ್ಯ
ಕಂಥೆಯ ಕಲ್ಲಿನಾಥಯ್ಯ
ಅಲ್ಲಯ–ಮಧುವಯ್ಯ
ಗೋಣಿಯ ಮಲ್ಲದೇವ
ಯೋಗಿದೇವ
ಗೆಲ್ಲದುತ್ತಮ ದೇವ
ಗಣದಾಸಿ ಭೀಮಯ್ಯ
ಮಾಯಿದೇವ
ವೀರಗೆಲಸದ ಸೋಯಿದೇವ
ದೇವದಂಡಿಯ ಕಾಯಿದೇವ
ವೀರಿದೇವ
ವೀರ ಬೊಮ್ಮಯ್ಯ
ಸಾಯಿದೇವ
ಗಿಜುಗಟೆಯ ನವಲಾಯಿದೇವ

ಸಿರಿಗಿರಯ್ಯ
ವೀರಮಾರಯ್ಯ
ವೀರ ಬ್ರಹ್ಮಯ್ಯ
ವೀರ ಭಾವಯ್ಯ
ವೀರ ನಾಗಯ್ಯ
ವೀರ ಕಲ್ಲಯ್ಯ
ವೀರ ಭೋಗಯ್ಯ
ವಿಮಲದೇವಯ್ಯ
ಕಕ್ಕಯ್ಯ
ಕಲ್ಲಯ್ಯ
ಕಾಟಕೋಟಯ್ಯ
ಚಿಕ್ಕಯ್ಯ
ವೀರಯ್ಯ
ಶ್ರೀ ಸೂರಸಾನಿ
ಕೊಂಡಗುಡ್ಡೇತಯ್ಯ
ಗುಂಡಯ್ಯ
ಚಂಡೇಶು ಬ್ರಹ್ಮಯ್ಯ
ಶಂಕರಯ್ಯ
ಅಮೃತದೇವಯ್ಯ
ಅನಿಮಿಷಯ್ಯ
ವಿಮಲದೇವ
ವೀರಾದಿಗಾಂಗ

ಪೋತಿದೇವ
ಜಾಯಿದೇವ
ಶಾಂತದೇವ
ಮೊಜಿನ ಪೇಮಯ್ಯ
ದೇವರಸ
ಉದರದ ರಾಮಯ
ದೇವನವಿಮುಕ್ತಯ್ಯ
ಭಾಸ್ಕರದೇವ
ಇಂಡೆಯ ಬೊಮ್ಮಿದೇವ
ಮುಂಡ ಬೊಮ್ಮಯ್ಯ
ರೇವಿದೇವ
ಬಾಣಸದ ಶಿವದೇವ
ಕಪಿಲೇಶ
ವಿಶ್ವಯದೇವ
ನೊಣಬೇಶ
ಚಿಕ್ಕಯ್ಯ
ಧರಣಿದೇವ
ತುಪ್ಪದಯ್ಯಮದೇವ
ಒಜಿತೆಯ ಬೊಪ್ಪಿದೇವ
ಪೋಚಿದೇವ
ಸಪ್ಪೆಯಲ್ಲಮದೇವ
ನಾಗೂರ ಬೊಮ್ಮಯ್ಯ
ಹಿಪ್ಪಲಿಗೆ ಕಲ್ಲಯ್ಯ
ಪಲ್ಲೆಹದಪ್ಪಿದೇವ
ಬೆಲ್ಲಪತ್ರೆಯ ಕೊಪ್ಪಿದೇವ
ಮೌಳಿದೇವಯ್ಯ

ವಿವಾಹ ಸಮಾರಂಭ ಪ್ರಸಂಗದಲ್ಲಿ ಪಾಲ್ಕುರಿಕೆ ಸೋಮನು ಭಕ್ತ ಜನಮಂಡಲಿಯಲ್ಲಿ ಸೇರಿದ್ದ ಶರಣೆಯರ ಪಟ್ಟಿ ಕೊಟ್ಟಿರುವನು (ಆ ೭ ಸಾಲು ೧೩೧೫–೧೩೨೯) ಅವನು ಕೊಡುವ ಹೆಸರುಗಳಿಗೂ ಭೀಮಕವಿ ಕೊಡುವ ಹೆಸರುಗಳಿಗೂ (೫೮.೬-೮) ಬಹುಪಾಲು ಹೊಂದಿಕೆಯಾಗುವುದಿಲ್ಲ. ಭೀಮಕವಿ ಕೊಡುವ ಹೆಸರುಗಳ ಮುಂದೆ ಹಲವಕ್ಕೆ ವಿಶೇಷಣಗಳಿವೆ :

ಪಾಲ್ಕುರಿಕೆ ಸೋಮನಾಥ	**ಭೀಮಕವಿ**
ಗೊಗ್ಗವ್ವ	ಮಾಯಿದೇವಿ
ಮಹಾದೇವಿ	ನಿರಂಜನದ ಧವಳಾಯಿ
ಗುಡ್ಡಲದೇವಿ	ಹುಗ್ಗಿಯ ದುಗ್ಗಳವ್ವೆ
ದುಗ್ಗಳದೇವಿ	ಶಿವಾಯಿ
	ತುಪ್ಪದ ನಾಗಲಾಯಿ
	ಪುರಾತ ರೆಬ್ಬವ್ವೆ
ಸದ್ಯೋಜಾತದೇವಿ	ಸಾಯಿದೇವಿ
ಯಮ್ಮವ್ವ	ಚಿಕ್ಕಲಿಗೆ ಮಾದಾಯಿ
ಸಕಳವ್ವ	ಪರ್ಬದ ಪರ್ಬಿತಾಯ್
ಏಚಲದೇವಮ್ಮ	ಮಂಗಾಯಿ
ನಿಮ್ಮವ್ವ	ಗಣದಾಸವ್ವೆ
ಶಾಂತವ್ವ	ನೇಮದ ವೀರಸಂಗವ್ವೆ
ಬಮ್ಮಲದೇವಿ	ಸೋವರಸಿ
ಕಾಳವ್ವ	ದಂಡಿಗೆಯ ಗುಡ್ಡಾದೇವಿ
ಕೇತವ್ವ	ಪೋಚಲದೇವಿ
ಕಾಮಲದೇವಿ	ಮಾಚಲದೇವಿ
ಬಸವಮ್ಮ	ಕಾಚಲದೇವಿ
ಸೋಮಲದೇವಿ	ಏಚಲದೇವಿ
ಸಂಗವ್ವ	ಶಿವದೇವಿ
ಶಿವದೇವಿ	ದೇವಲಾಂಬಿಕೆ
ಸಾಕಲದೇವಿ	ಕೇಳಿಕೆಯ ಮಹದೇವಿ
ಲಿಂಗವ್ವ	ಗಂಗಾದೇವಿ
ರೆಬ್ಬವ್ವ	ಲಿಂಗಾದೇವಿ
ಮಂಗಳದೇವಿ	ಬಾಚಲದೇವಿ
ಪ್ರಮಥವ್ವ	ಬೊಂತಾದೇವಿ
ಬಾಚವ್ವ	ಕಲಿದೇವಿ
ಪದುಮಲದೇವಿ	ಸೇವಕದ ಗೌರವ್ವೆ
ವಿಮಲವ್ವ	ಕೇತಲದೇವಿ
ನೆಲ್ಲವ್ವ	ವೀರಲದೇವಿ
ವೀರಭದ್ರವ್ವ	ಕಾಮಲದೇವಿ

ಚಿಕ್ಕಲ ರಾಮವ್ವ
ಸಿದ್ಧಲದೇವಿ
ಯಕ್ಕವ್ವ
ಸೋಡವ್ವ
ಆನಂದದೇವಿ
ಮಲ್ಲವ್ವ
ಕಲ್ಲವ್ವ
ಹೊನ್ನಲದೇವಿ
ಹಲ್ಲವ್ವ
ಮಲ್ಲವ್ವ
ಅನಿಮಿಷದೇವಿ
ಕೇತಲದೇವಿ
ಪುರಾತವ್ವ

ಚೋಳಾದೇವಿ
ಚಾಕಲದೇವಿ
ಮಹದೇವಿ
ಹೂವಿನಲ್ಲಮದೇವಿ
ಚಿಕ್ಕಾದೇವಿ
ಕಮಳಾದೇವಿ
ವಿಮಳಾದೇವಿ
ರಾಮಾದೇವಿ
ಸಿದ್ಧಾದೇವಿ
ಉಮೆದೇವಿ

ಜಗದೇವಯ್ಯನ ಕಥೆಯಲ್ಲಿ ಬಸವಣ್ಣನನ್ನು ಆರೋಗಣೆಗೆ ಕರೆದು, ತನ್ನ ಮನೆತನದ ಪೂರ್ವಾಚಾರದಂತೆ ಬ್ರಾಹ್ಮಣರಿಗೆ ಜಗದೇವನು ಭೋಜನ ಮಾಡಿಸುವನು. ಇದನ್ನರಿತ ಬಸವನು ತನ್ನನ್ನು ಕರೆಯಲು ಬಂದ ಜಗದೇವನನ್ನು ಅಧೋಗತಿಗಿಳಿವ ಅಧಮನೆಂದು ನಿಂದಿಸುವನು. ಭವಿಸಂಗದ್ರೋಹ ಎಂತಹುದೆಂಬುದನ್ನು ನಿದರ್ಶನ ಪೂರ್ವಕವಾಗಿ ಅವನಿಗೆ ಬಸವಣ್ಣ ತಿಳಿಯ ಹೇಳುವನು. ಪಶ್ಚಾತ್ತಾಪದಿಂದ ದಗ್ಧಮನನಾದ ಜಗದೇವನು ಭಕ್ತವೃಂದಕ್ಕೂ ಬಸವಣ್ಣನಿಗೂ ನಮಸ್ಕರಿಸಿ ಕ್ಷಮಿಸಬೇಕೆಂದು ಬೇಡಿಕೊಳ್ಳುವನು. ಈ ಸಂದರ್ಭ ಸೋಮನಾಥ ಹಾಗೂ ಭೀಮಕವಿಯಲ್ಲಿ ಸಮಾನವಾಗಿ ಬಂದಿದೆಯಾದರೂ ಭೀಮಕವಿಯಲ್ಲಿ ಜಗದೇವನ ಪಶ್ಚಾತಾಪದ ನುಡಿಗಳು ಸೋಮನಾಥನಿಗಿಂತ ಸ್ವಲ್ಪ ಹೆಚ್ಚಿಗೆ ಬಂದಿವೆ (ನೋಡಿ: ಭೀಮಕವಿ ಬಸವ **೫೯. ೫೬–೫೮**).

ಬಿಜ್ಜಳನ ಕೋಲಿಗೆಂದು ಹೋಗಿದ್ದ ಬೊಮ್ಮಯ್ಯನು ಜಗದೇವನೆಡೆಗೆ ಬಂದು ಪ್ರಸಾದ ಸ್ವೀಕರಿಸಿ ದೇವವಸ್ತ್ರವನ್ನುಟ್ಟು ಭಸ್ಮಾಂಗವಿಭೂಷಣರಾಗಿ ವೀರಭದ್ರನೇ ಮೊದಲಾದ ಪ್ರಮಥ ಶ್ರೇಷ್ಠರನ್ನು ಭಾವದಲ್ಲಿ ನೆನೆದು ಉಗ್ರ ಕೈದುಗಳನ್ನು ಹಿಡಿದು ಜಗದೇವನ ತಾಯಿಗೆ ನಮಿಸಿ ಆಶೀರ್ವಾದ ಪಡೆದು ಮನೆಯಿಂದ ಹೊರಡುವರು. ಅವರ ಸಂಭ್ರಮದ ಆಗಮನವನ್ನು ಸೋಮನಾಥ ವರ್ಣಿಸುವ ಗೋಜಿಗೆ ಹೋಗಿಲ್ಲ. ಆದರೆ, ಈ ಸಂದರ್ಭಕ್ಕೆ ಕಳೆಕೊಡುತ್ತ [illegible] ಭೀಮಕವಿ ಒಂಬತ್ತು ಪದ್ಯಗಳಲ್ಲಿ (೬೭. ೨೨–೩೦) ವರ್ಣಿಸಿರುವನು.

ಬಿಜ್ಜಳನ ಮರಣದೊಂದಿಗೆ ಕಲ್ಯಾಣ ಪಟ್ಟಣ ಕೆಟ್ಟು ಹಾಳಾಯ್ತು. ಬಸವರಾಜನಿಟ್ಟ ಶಾಪ ನಿಜವಾಯ್ತು. ಬಸವರಾಜ ಕೂಡಲಿಗೆ ಬಂದು ಸಂಗಮನಾಥನನ್ನು ಕಂಡು ಪುಳಕಗೊಂಡು ಸಾಷ್ಟಾಂಗವೆರಗಿ ಸಂಗಮದಲ್ಲೇ ನೆಲೆ ನಿಂತನು. ಭಕ್ತರು ಸೇರಿ ಗೋಷ್ಠಿ ಪ್ರಸಂಗಗಳಾದವು. ಒಮ್ಮೆ ಬಸವನು ಗುರುಲಿಂಗ ಭಜನಾಸಕ್ತನಾಗಿ ಮಂಜುಳ ಸೂಕ್ತಿಯಿಂದ ರಸವೊಸರುವಂತೆ ಇಂಪು ಹೊಮ್ಮಲು ಸಂಗಮನಾಥನನ್ನು ಕೀರ್ತಿಸಿದನು. ಈ ಸ್ತೋತ್ರ ಭಾಗ ಪಾಲ್ಕುರಿಕೆ ಸೋಮನಲ್ಲಿಲ್ಲ. ಹದಿಮೂರು ಪದ್ಯಗಳಲ್ಲಿ (೬೦.೪೨ –೫೪) ಬಂದಿರುವ ಈ ಸ್ತೋತ್ರ ಭಾಗ ಭೀಮಕವಿಯ ಸ್ವಂತಸೃಷ್ಟಿ. ಅಸಮ ಬಸವಪುರಾಣವನ್ನು ಪ್ರೀತಿಪಟ್ಟು ಓದಿದರೆ, ಕೇಳಿದರೆ ಹಾಗೂ ಬರೆದರೆ ಸಿಗುವ ಫಲವನ್ನು ಪಾಲ್ಕುರಿಕೆ ಸೋಮನೂ ಹೇಳಿರುವನು. ಆದರೆ ಭೀಮಕವಿಯು ಫಲಪ್ರಾಪ್ತಿಯ ವಿವರ ನೀಡುವಲ್ಲಿ ಪಾಲ್ಕುರಿಕೆ ಸೋಮನನ್ನು ಮೀರಿಸುವ ಉತ್ಸಾಹದಲ್ಲಿ ಮುಂದುವರಿದಿರುವನು. ಇದರಿಂದಾಗಿ ಒಂಬತ್ತು ಪದ್ಯಗಳು (೬೦. ೮೨–೯೦) ಭೀಮಕವಿಯಲ್ಲಿ ಹೆಚ್ಚಿದುವು.

ಪಾಲ್ಕುರಿಕೆ ಸೋಮನಲ್ಲಿ ಬರುವ ಹೆಸರುಗಳಿಗೂ ಭೀಮಕವಿಯಲ್ಲಿ ಕಾಣಬರುವ ಹೆಸರುಗಳಿಗೂ ವ್ಯತ್ಯಾಸಗಳಿರುವುದು ಕಂಡುಬರುತ್ತದೆ ಉದಾಹರಣೆಗೆ :

ಪಾಲ್ಕುರಿಕೆ ಸೋಮನಾಥ	**ಭೀಮಕವಿ**
ನಕ್ಕಿಲು ಗುಮ್ಮುಜಿಲ್ಲೈನ ಕಥೆ	ಚೊಕ್ಕನಾಥನ ಕಥೆ
ಇರುವದಾಂಡಾರಿಯ ಕಥೆ	ಇರಿಭಕ್ತನ ಕಥೆ
ಮಿಂಡನ್ನೈನಾರು ಕಥೆ	ಮೆರೆಮಿಂಡದೇವ ಕಥೆ
ಅರಿವಾಳು ನಯನಾರಿಯ ಕಥೆ	ಅರಿವಾಳುತಾಂಡಿಯ ಕಥೆ
ಚೇದಿವಲ್ಲಭನ ಕಥೆ	ಸೇದಿರಾಜನ ಕಥೆ
ಕರಿಯೂರಿ ಚೋಡನ ಕಥೆ	ಕರಪೂರಿ ಚೋಳನ ಕಥೆ
ಸವರದ ನಾಚಯ	ಸೌಂದರ ನಾಚಯ
ಚೌಡರಾಯ	ಮುಸುಟಿ ಚೌಡಯ್ಯ
ಅಲ್ಲಯ್ಯ ಮಧುಪಯ್ಯ	ಹರಳಯ್ಯ ಮಧುವಯ್ಯ

ಇಲ್ಲಿಯವರೆಗಿನ ಸುದೀರ್ಘ ವಿವೇಚನೆಯಿಂದ ಭೀಮಕವಿಯ ಬಸವಪುರಾಣವು ಪಾಲ್ಕುರಿಕೆ ಸೋಮನಾಥನ 'ಬಸವಪುರಾಣಮು' ವಿನ ಪದಶಃ ಅನುವಾದವಲ್ಲವೆಂದೂ, ಕನ್ನಡಕ್ಕೆ ಭಾಷಾನುಸಾರಿಯಾಗಿ ಪರಿವರ್ತಿಸುವಲ್ಲಿ ಭೀಮಕವಿ ಸ್ವಾತಂತ್ರ್ಯ ವಹಿಸಿ ಕೆಲವು ಸಂದರ್ಭ ಸನ್ನಿವೇಶಗಳನ್ನು ಮೂಲ ಕೃತಿಗೆ ಸೇರಿಸಿರುವನೆಂದೂ, ಕೆಲವೆಡೆ ತನಗೆ ಉಚಿತ ಕಂಡಂತೆ ಬದಲಾವಣೆ ಮಾಡಿಕೊಂಡಿರುವನೆಂದೂ ಹೇಳಬಹುದು.

ಮೂಲದ ಭಾವವನ್ನು ಗ್ರಹಿಸಿ ಅದಕ್ಕೆ ವ್ಯತ್ಯಯವಾಗದಂತೆ ಆಕರ್ಷಕವಾಗಿ ಮಧುರವಾಗಿ ಹೇಳುವ ಜಾಣ್ಮೆ ಭೀಮಕವಿಗೆ ಕರಗತವಾಗಿದೆ. ಅನ್ಯ ಭಾಷೆಯ ಕೃತಿಯೊಂದನ್ನು ಅದರ ಜೀವ-ಭಾವಗಳಿಗೆ ಊನವಾಗದಂತೆ ರಸಸ್ಯಂದಿಯಾಗಿ ಹೇಗೆ ಪರಿವರ್ತಿಸಬೇಕೆಂಬುದಕ್ಕೆ ಭೀಮಕವಿಯ ಬಸವಪುರಾಣವು ಶ್ರೇಷ್ಠ ಉದಾಹರಣೆಯಾಗಿದೆ.

● ●

ಕನ್ನಡದಲ್ಲಿ ಸಮಾನ ವಾಕ್ಯ

ವಿಲ್ಯಂ ಮಾಡ್ತ

ಕನ್ನಡ ವಾಕ್ಯಗಳನ್ನು ಸಾಮಾನ್ಯವಾಗಿ ಏಕ-ವಾಕ್ಯ (Simple Sentence) ಮತ್ತು ಅನೇಕ ವಾಕ್ಯ (Complex sentence)ಗಳೆಂದು ಎರಡು ವರ್ಗಗಳನ್ನಾಗಿ ವಿಂಗಡಿಸಬಹುದು. 'ಏಕ ವಾಕ್ಯಾತ್ಮಕ ಘಟಕ' (Clause)[1] ದಿಂದ ಕೂಡಿದ ವಾಕ್ಯ ಏಕವಾಕ್ಯವಾದರೆ (ನೋಡಿ ವಾಕ್ಯ. ೧ ಅ / ಆ) ಅನೇಕ ವಾಕ್ಯಾತ್ಮಕ ಘಟಕಗಳಿಂದ ಕೂಡಿದ ವಾಕ್ಯ ಅನೇಕ ವಾಕ್ಯವೆನಿಸಿಕೊಳ್ಳುತ್ತದೆ. (ನೋಡಿ ವಾಕ್ಯ ೧). ಅನೇಕ ವಾಕ್ಯಗಳಲ್ಲಿ ಸಮಾನ (Co-ordinate) ಮತ್ತು ಅಧೀನ (Sub-ordinate) ವಾಕ್ಯಗಳೆಂದು ಎರಡು ವಿಧ.

---

೧. ಸ್ವತಂತ್ರವಾದ ಅಸಾಂದ್ರ ಭಾಷಿಕ ರಚನೆಯನ್ನು ವಾಕ್ಯಾತ್ಮಕ ಘಟಕವೆಂದು ಕರೆಯುತ್ತಾರೆ. ಯಾವ ಭಾಷಿಕ ರಚನೆ (Linguistic Structure) ಮೂಲತಹ ಇನ್ನೊಂದು ರಚನೆಯ ಅಂಗವಾಗಿ ಬರುವುದಿಲ್ಲವೋ ಅದೇ ಸ್ವತಂತ್ರವಾದ ಭಾಷಿಕ ರಚನೆ. ಅದನ್ನು ಆಂತರಿಕವಾಗಿ ಬೆಳೆಯಿಸುವುದು ಸಾಧ್ಯವಾದಲ್ಲಿ ಅದು ಅಸಾಂದ್ರ (Non-tight) ವೆನಿಸಿಕೊಳ್ಳುತ್ತದೆ. (ನೋಡಿ: ವಿಲ್ಯಂ ಮಾಡ್ತ, "ಕನ್ನಡದಲ್ಲಿ ಸಮಾಸ" ಕರ್ನಾಟಕ ಭಾರತಿ, ೪ : ೪ (೧೯೭೩), ಪು ೧೧೪). ಧ್ವನಿಮಾ ಮತ್ತು ಆಕೃತಿಮಾಗಳು ಬೇರೆ ಬೇರೆ ರೀತಿಯಲ್ಲಿ ಭಾಷೆಯ ಕನಿಷ್ಠತಮ ಘಟಕ (Minimal unit) ಗಳಾಗಿದ್ದರೆ ವಾಕ್ಯಾತ್ಮಕ ಘಟಕ ಅದರ ಬೃಹದ್ಘಟಕ (Maximal unit) ವಾಗಿರುತ್ತದೆ. (ನೋಡಿ: Robert Hall (Jr.) *Introductory Linguistics*, 1969, p. 213.) ಕನ್ನಡ ವಾಕ್ಯಾತ್ಮಕ ಘಟಕದ ರಚನೆ ಇಂತಿದೆ: (ನಾ (ಮ)ಪು (ಏಜ) + ಕ್ರಿ (ಯಾ) ಪು(ಏಜ) : '(ನಾನು) ಕಲಿಯುತ್ತೇನೆ.' ಕ್ರಿ. ಪು. ದಲ್ಲಿ ಸಂಭವ ರೂಪ ಪ್ರತ್ಯಯ (Indicative suffix :—'ಏನೆ')ದ ಮೂಲಕ ಲಿಂಗ (ತೃತೀಯೆಯಲ್ಲಿ)ವಚನ, ಪುರುಷ ಸೂಚಿತವಾಗುವುದರಿಂದ ನಾ. ಪು. ಅನಗತ್ಯ; ಆದುದರಿಂದ ಅದು ಐಚ್ಛಿಕ (Optional)

ಸಮಾನ ಮತ್ತು ಅಧೀನ ವಾಕ್ಯಗಳು :

ವಾಕ್ಯಾತ್ಮಕ ಘಟಕಗಳು ವ್ಯಾಕರಣಾತ್ಮಕವಾಗಿ ಸಮಾನಸ್ಥಾನೀಯ (Of equal rank) ಗಳಾಗಿದ್ದು ಅವು ಸಂಯೋಜಿತಗೊಂಡು ವಾಕ್ಯವಾದರೆ ಅದು ಸಮಾನ ವಾಕ್ಯ; ಅವು ಅಸಮಾನಸ್ಥಾನೀಯಗಳಾಗಿದ್ದು ಒಂದು ಪ್ರಧಾನ ಘಟಕಕ್ಕೆ ಉಳಿದವು ಅಧೀನಗಳಾಗಿದ್ದುಕೊಂಡು ವಾಕ್ಯವುಂಟಾದರೆ ಅದು ಅಧೀನವಾಕ್ಯ.

ಕೆಳಗಿನ ವಾಕ್ಯಗಳನ್ನು ಗಮನಿಸಿ :

೧) ನಮ್ಮ ನಾಯಿ ರಾತ್ರಿಯೆಲ್ಲ ಎಚ್ಚರವಿರುತ್ತದೆ ಹಾಗೂ ಬೊಗಳುತ್ತದೆ.

ಮೇಲಿನ ವಾಕ್ಯದಲ್ಲಿ ಈ ಕೆಳಗಿನ ಎರಡು ವಾಕ್ಯಾತ್ಮಕ ಘಟಕಗಳಿವೆ. :

೧. ಅ) ನಮ್ಮ ನಾಯಿ ರಾತ್ರಿಯೆಲ್ಲ ಎಚ್ಚರವಿರುತ್ತದೆ.

೧. ಆ) ನಮ್ಮ ನಾಯಿ ರಾತ್ರಿಯೆಲ್ಲ ಬೊಗಳುತ್ತದೆ.

ಮೇಲಿನ (ಅ ಮತ್ತು ಆ) ವಾಕ್ಯಾತ್ಮಕ ಘಟಕಗಳು ವ್ಯಾಕರಣಾತ್ಮಕವಾಗಿ ಸಮಾನ ಸ್ಥಾನೀಯಗಳು. ಇಂತಹ ಘಟಕಗಳನ್ನು ಸಮುಚ್ಚಿತ (Conjunct) ಗಳೆಂದೂ ಅವುಗಳನ್ನು ಸಂಯೋಜಿಸುವ (ಅವ್ಯಯ)ರೂಪಗಳನ್ನು (ಉದಾ: 'ಹಾಗೂ') ಸಮುಚ್ಚಯ (Conjunction) ಅಥವಾ ಸಂಯೋಜಕ (Co-ordinator) ಗಳೆಂದೂ ಕರೆಯುತ್ತಾರೆ.

ಸಮಾನ ವಾಕ್ಯಗಳ ವೈವಿಧ್ಯತೆ :

ಪ್ರಥಮ ದೃಷ್ಟಿಗೆ ಕನ್ನಡ ಸಮಾನ ವಾಕ್ಯಗಳಲ್ಲಿ ಮುಖ್ಯವಾಗಿ ನಾಲ್ಕು ವಿಧಗಳು[೨] ಕಂಡು ಬರುತ್ತವೆ:

ಅ) ಪ್ರಥಮ ವಾಕ್ಯಾತ್ಮಕ ಘಟಕವನ್ನು ಬಿಟ್ಟು ಉಳಿದವುಗಳ ಪೂರ್ವದಲ್ಲಿ ಒಂದೇ ಜಾತಿಯ ಸಂಯೋಜಕಗಳು ಇರುವಂಥವುಗಳು:

೨. ಕುದುರೆಗಳು ನಡೆಯುತ್ತವೆ ಮತ್ತು ಓಡುತ್ತವೆ.

೩. ಮನುಷ್ಯರು ಹುಟ್ಟಿದಾಗ ಮಲಗುವರು; ಆ ಮೇಲೆ ಕೂತುಕೊಳ್ಳುವರು; ಒಳಿಕ ಅಂಬೆಗಾಲಿಡುವರು; ಅಲ್ಲಿಂದ ಅಕ್ಷರಾಭ್ಯಾಸ ಮಾಡುವರು; ಆ ಮೇಲೆ ಒಂದು ಉದ್ಯೋಗ ನಡೆಸುವರು; ಕಡೆಗೆ ಸಾಯುವರು.[೩]

---

೨ ಅರ್ಥವನ್ನು ಗಮನದಲ್ಲಿಟ್ಟು ಮಾಡಿದ ಸಂಯೋಜಕಗಳ ವರ್ಗೀಕರಣಕ್ಕೆ ನೋಡಿ: ಘೋ. ನ. ಮುಳಬಾಗಲ (೧೯೭೪), ಪು. ೧೯೨ ಇತ್ಯಾದಿ.

೩ ಅದೇ. ಪು ೧೯೨.

೪. ನಾನು ತಿಂಗಳಿಗೊಮ್ಮೆ ಸಿನೇಮಾಕ್ಕೆ ಹೋಗುತ್ತೇನೆ. ಅಥವಾ ನಾಟಕ ನೋಡುತ್ತೇನೆ.

ಆ) ಕೊನೆಯ ವಾಕ್ಯಾತ್ಮಕ ಘಟಕದ ಪೂರ್ವದಲ್ಲಿ ಮಾತ್ರ ಸಂಯೋಜಕ ಇರುವಂಥವುಗಳು:

೫. ನಮ್ಮ ಮಗಳು ಪ್ರತಿದಿನ ಊಟಮಾಡುತ್ತಾಳೆ; ಆಡುತ್ತಾಳೆ; ಆಮೇಲೆ ಮಲಗುತ್ತಾಳೆ.

೬. ನಾನು ಪ್ರತಿಸಂಜೆ ಆಟ ಆಡುತ್ತೇನೆ: ಅಡ್ಡಾಡುತ್ತೇನೆ; ಅಥವಾ ಈಜುತ್ತೇನೆ.

ಇ) ಸಂಯೋಜಕ ಇಲ್ಲದಿರುವಂಥವುಗಳು :

೭. ನಮ್ಮ ಗೆಳೆಯ ಬಂದ: ಊಟ ಮಾಡಿದ; ಮಲಗಿದ; ಹೋದ.

೮. ಸೂರ್ಯ ಪ್ರಕಾಶಿಸುತ್ತಾನೆ; ಪ್ರಕಾಶದಿಂದ ಕಾವು ಉಂಟಾಗುತ್ತದೆ ಕಾವಿನಿಂದ ಫಲಗಳಲ್ಲಿ ಮಾಧುರ್ಯ ಹುಟ್ಟುತ್ತದೆ.

ಈ) ಸಜಾತಿಯ ಅಂತ್ಯ-ಪ್ರಾತ್ಯಯಿಕ (Suffixal) ಸಂಯೋಜಕಗಳಿಂದ ಕೂಡಿದಂಥವುಗಳು.

೯. ನಾವು ಪ್ರೀತಿಯಿಂದಲೂ ಭಕ್ತಿಯಿಂದಲೂ ದಲಿತರ ಸೇವೆ ಮಾಡಬೇಕು

೧೦. ಜಯ ಸಿಗಲಿ ಜಯ ಸಿಗದಿರಲಿ ಮಾಡುವ ಪ್ರಯತ್ನ ಬಿಡಬಾರದು.

ಕ್ಷೀಣಿಸುವಿಕೆ : (Reduction)

ಮೇಲಿನ ನಾಲ್ಕು ತರಹದ ಸಮಾನ ವಾಕ್ಯಗಳನ್ನು ಕ್ಷೀಣಿಸುವಿಕೆಯ ನಿಯಮ (Reduction rule)ಗಳಿಗೆ ಒಳಪಡಿಸಿ ಎರಡು ವರ್ಗಗಳನ್ನಾಗಿ ವಿಂಗಡಿಸಬಹುದು. ಒಂದು ವಾಕ್ಯದಲ್ಲಿಯ ಘಟಕಗಳನ್ನು ಕಡಿಮೆಗೊಳಿಸುವ ನಿಯಮಗಳೇ ಕ್ಷೀಣಿಸುವಿಕೆಯ ನಿಯಮಗಳು. ಅವು ಪೂರ್ವ, ಅಥವಾ/ಮತ್ತು ಪರಸ್ಥಾನೀಯ ಸಮುಚ್ಚಯ[೪]ಗಳಿಗಾಗಲಿ ಅಥವಾ ಸಮುಚ್ಚಕಗಳಿಗಾಗಲಿ ಅನ್ವಯಿಸಿಕೊಳ್ಳಬಹುದು.

ಸಮುಚ್ಚಯಗಳ ಕ್ಷೀಣಿಸುವಿಕೆ (Conjunction-reduction) :

ಪೂರ್ವಸ್ಥಾನೀಯ ಸಮುಚ್ಚಯಗಳು ಪುನರಾವರ್ತನೆಗೊಂಡಾಗ ಕೊನೆಯ ದನ್ನು ಬಿಟ್ಟುಳಿದವುಗಳು ಲೋಪಗೊಳ್ಳಬಹುದು. ಹೀಗೆ ೫ನೆಯ ಮತ್ತು ೬ನೆಯ

೪ 'ಮತ್ತು' 'ಅಥವಾ' ಇತ್ಯಾದಿಗಳು ಪೂರ್ವಸ್ಥಾನೀಯ ಸಮುಚ್ಚಯಗಳಾದರೆ, 'ಊ... ಊ', '-ಆಲಿ...-ಆಲಿ' ಮುಂತಾದುವುಗಳು ಪರಸ್ಥಾನೀಯಗಳು ಹಾಗೂ ಪ್ರಾತ್ಯಯಿಕ ಗಳಾಗಿವೆ.

ವಾಕ್ಯಗಳು ಕ್ರಮವಾಗಿ ೧೧ ಮತ್ತು ೧೨ನೆಯ ವಾಕ್ಯಗಳ ವ್ಯಾಕರಣಾತ್ಮಕ ಭಿನ್ನ ರೂಪಗಳು:

೧೧. ನನ್ನ ಮಗಳು ಪ್ರತಿದಿನ ಊಟ ಮಾಡುತ್ತಾಳೆ: ಆಮೇಲೆ ಆಡುತ್ತಾಳೆ: ಆಮೇಲೆ ಮಲಗುತ್ತಾಳೆ.

೧೨. ನಾನು ಪ್ರತಿಸಂಜೆ ಆಟ ಆಡುತ್ತೇನೆ ಅಥವಾ ಆಡ್ಡಾಡುತ್ತೇನೆ ಅಥವಾ ಈಜುತ್ತೇನೆ.

ಎಷ್ಟೋಸಲ ಪ್ರತ್ಯೇಕವಾಗಿ 'ಮತ್ತು' ಎಂಬರ್ಥವನ್ನು ಕೊಡುವಂತಹ ಸಂಯೋಜಕಗಳೆಲ್ಲವನ್ನು ಲೋಪಗೊಳಿಸುವುದೂ ಸಾಧ್ಯವಿದೆ. ಆಗ ಶೈಲಿಯಲ್ಲಿ ಬದಲಾವಣೆಯುಂಟಾಗಬಹುದು. ಉದಾಹರಣೆಗೋಸ್ಕರ ೬ನೆಯ ಮತ್ತು ೮ನೆಯ ವಾಕ್ಯಗಳನ್ನು ಗಮನಿಸಬಹುದು.

ಒಟ್ಟಿನಲ್ಲಿ (ಅ) ಮತ್ತು (ಈ) ವರ್ಗಗಳು ಮೂಲತಹ ವೈವಿಧ್ಯಮಯವಾಗಿದ್ದು ಕೊಂಡು (ಆ) ಮತ್ತು (ಇ) ವರ್ಗಗಳು (ಅ) ವರ್ಗದ ರೂಪಾಂತರಗಳಷ್ಟೆ ಎಂದು ತಿಳಿದುಕೊಳ್ಳಬಹುದು.

ಇಲ್ಲಿಯ ತನಕ ಸಮುಚ್ಚಯಗಳನ್ನು ಕಡಿಮೆ ಮಾಡುವುದನ್ನು ಕುರಿತು ಚರ್ಚಿಸಿದರೆ ಇನ್ನು ಸಮುಚ್ಚಕಗಳನ್ನು ಕಡಿಮೆಮಾಡುವುದರ ಬಗೆಗೆ ವಿವೇಚನೆ.

ಸಮುಚ್ಚಕಗಳ ಕ್ಷೀಣಿಸುವಿಕೆ (Conjunct-reduction) :

ವಾಕ್ಯದಲ್ಲಿಯ ಸಜಾತಿ ಘಟಕ (Identical constituent) ಗಳನ್ನು ಲೋಪ ಗೊಳಿಸಿ ವಿಜಾತಿ ಘಟಕಗಳನ್ನು ಸಂಯೋಜಿಸಿ ಹಲವಾರು ಸಮುಚ್ಚಕಗಳನ್ನು ಒಂದೇ ಒಂದು ವಾಕ್ಯಾತ್ಮಕ ಘಟಕವನ್ನಾಗಿ ರೂಪಾಂತರಿಸುವುದೇ ಸಮುಚ್ಚಕಗಳ ಕ್ಷೀಣಿಸುವಿಕೆಯೆನಿಸಿಕೊಳ್ಳುವುದು.

ಈ ಕೆಳಗಿನ ೧೩ನೆಯ ವಾಕ್ಯವನ್ನು ಗಮನಿಸಿರಿ :


೧೩. ರವಿಯೂ ಮೇರಿಯೂ ಹಾಡು ಹಾಡಿದರು.

ಮೇಲಿನ ವಾಕ್ಯದಲ್ಲಿ ಕೆಳಗಿನ ಎರಡು ವಾಕ್ಯಗಳು (೧೪ ಮತ್ತು ೧೫) ಅಡಕಗೊಂಡಿವೆ:


೧೪. ರವಿ ಹಾಡು ಹಾಡಿದ.

೧೫. ಮೇರಿ ಹಾಡು ಹಾಡಿದಳು.


ಮೇಲಿನ ೧೪ ಮತ್ತು ೧೫ನೆಯ ವಾಕ್ಯಗಳು ಅರ್ಥ ಮತ್ತು ರಚನಾದೃಷ್ಟಿಯಿಂದ ಸಮಾನವಾಗಿವೆ. ಆದುದರಿಂದ ಅವುಗಳ ಸಜಾತಿಯ ಘಟಕಗಳನ್ನು ಲೋಪ ಗೊಳಿಸಿ ವಿಜಾತಿಯವುಗಳನ್ನು ಸಂಯೋಜಿಸಿ ಏಕ ವಾಕ್ಯಾತ್ಮಕ ಘಟಕವನ್ನಾಗಿ ರೂಪಾಂತರಿಸುವುದು ಸಾಧ್ಯವಾಗಿದೆ. ಈ ರೂಪಾಂತರವನ್ನು ಕೆಳಗಿನಂತೆ ಚಿತ್ರಿಸಬಹುದು :



(ಸಂಯೋಜಕ ನಿಯಮ : ನಾಮಪುಂಜ → ನಾಮಪುಂಜ + ಊ)



(ಸಂಯೋಜಕ ಲೋಪ)



ಸಮುಚ್ಚಯ ಮತ್ತು ಸಮುಚ್ಚಾಯಕ (ಸಂಯೋಜಕ)ಗಳ ಲೋಪವನ್ನು ಕುರಿತು ಚರ್ಚಿಸಿದ ಬಳಿಕ ಕೆಲವು ಇಂಗ್ಲೀಷ್ ಸಮಾನ ವಾಕ್ಯಗಳು ಮತ್ತು ಅವುಗಳ ಕನ್ನಡ ರೂಪಗಳನ್ನು ಗಮನಿಸುವ:

16. Rama ate his meal and went to college.
17. John took milk and slept.
18. Chinnappa got angry and beat his wife.

ಮೇಲಿನ (೧೮–೨೦) ವಾಕ್ಯಗಳ ಅತಿ ಮೆಚ್ಚುವ ಕನ್ನಡ ರೂಪಾಂತರಗಳು ಈ ಕೆಳಗಿನಂತಿವೆ:

೧೬ ಅ ರಾಮು ಊಟ ಮಾಡಿ ಕೊಲೆಜಿಗೆ ಹೋದ.
೧೭ ಅ ಜೊನ್ ಹಾಲು ಕುಡಿದು ಮಲಗಿದ.
೧೮ ಅ ಚಿನ್ನಪ್ಪ ಸಿಟ್ಟುಮಾಡಿ ತನ್ನ ಹೆಂಡತಿಯನ್ನು ಹೊಡೆದ.

೧೬ ಅ--೧೮ಅ ವರೆಗಿನ ವಾಕ್ಯಗಳ(ವಾಕ್ಯಾತ್ಮಕ) ಘಟಕಗಳನ್ನು ಪರಿಶೀಲಿಸಿ:

೧೬ ಅ ೧ ರಾಮು ಊಟ ಮಾಡಿದ.
೧೬ ಅ ೨ ರಾಮು ಕೊಲೆಜಿಗೆ ಹೋದ.
೧೭ ಅ ೧ ಜೊನ್, ಹಾಲು ಕುಡಿದ
೧೭ ಅ ೨ ಜೊನ್, ಮಲಗಿದ
೧೮ ಅ ೧ ಚಿನ್ನಪ್ಪ ಸಿಟ್ಟು ಮಾಡಿದ.
೧೮ ಅ ೨ ಚಿನ್ನಪ್ಪ ತನ್ನ ಹೆಂಡತಿಯನ್ನು ಹೊಡೆದ.

ಮೇಲಿನ ವಾಕ್ಯಾತ್ಮಕ ಘಟಕಗಳು (೧೬ ಅ೧–೧೬ ಅ.೨) ವ್ಯಾಕರಣಾತ್ಮಕವಾಗಿ ಸಮಾನ ಸ್ಥಾನೀಯಗಳಾಗಿವೆ. ಆದರೆ ೧೬ ಅ–೧೮ ಅ ವರೆಗಿನ ವಾಕ್ಯಗಳನ್ನು ಓದುವಾಗ ಅವುಗಳ ಮೊದಲನೆಯ ಘಟಕ ಎರಡನೆಯ ಘಟಕಕ್ಕೆ ಅಧೀನವಿದ್ದಂತೆ ತೋರುತ್ತದೆ. ವಸ್ತುಸ್ಥಿತಿ ಹೀಗಿರುವಾಗ ಅವುಗಳ ನಿಜಸ್ಥಾನಮಾನವೇನು ಎಂಬ ಪ್ರಶ್ನೆ ಈಗಾಗಲೇ ಕೆಲವರು ಕೇಳಿದ್ದಾರೆ.[೫]

ಮೇಲಿನ ೧೬ ಅ–೧೮ ಅ ವರೆಗಿನ ವಾಕ್ಯಗಳನ್ನು ರಚನಾತ್ಮಕವಾಗಿ ಈ ಕೆಳಗಿನಂತೆ ವಿಶ್ಲೇಷಿಸಬಹುದು.

ಚೌಕಟ್ಟು (Frame)	
ಭಾಗ (Slot)–೧	ಭಾಗ–೨
೧೬ ಅ. ರಾಮು ಊಟ ಮಾಡಿ	ಕಾಲೇಜಿಗೆ ಹೋದ
೧೭ ಅ. ಜಾನ್ ಹಾಲು ಕುಡಿದು	ಮಲಗಿದ
೧೮ ಅ. ಚಿನ್ನಪ್ಪ ಸಿಟ್ಟು ಮಾಡಿ	ತನ್ನ ಹೆಂಡತಿಯನ್ನು ಹೊಡೆದ

ಮೇಲಿನ ಚೌಕಟ್ಟಿನಲ್ಲಿ ಭಾಗ – ೨ ರಲ್ಲಿಯ ವಾಕ್ಯಾತ್ಮಕ ಘಟಕಗಳು ಪ್ರಧಾನವಾಗಿದ್ದು ಭಾಗ – ೧ ರಲ್ಲಿಯವುಗಳು ಅಧೀನವಾಗಿ ಬಂದು ಅವುಗಳನ್ನು ವಿಶೇಷಿಸುತ್ತವೆಂದು ತಿಳಿದು ಬರುತ್ತದೆ. ಆದುದರಿಂದ ಇಂಗ್ಲೀಷಿನಲ್ಲಿ ಅವುಗಳಿಗೆ ಪ್ರತಿರೂಪದ ವಾಕ್ಯಾತ್ಮಕ ಘಟಕಗಳು ಸಮಾನಸ್ಥಾನೀಯಗಳಾದರೂ ಕನ್ನಡದಲ್ಲಿ ಅವು ಹೆಚ್ಚಾಗಿ ಅಧೀನವಾಗಿವೆಂಬುದನ್ನು ಗಮನಿಸಬೇಕು.

ಒಟ್ಟಿನಲ್ಲಿ ಸಂಯೋಜಿತಗೊಂಡ ವಾಕ್ಯಗಳೇ ಸಮಾನವಾಕ್ಯಗಳು. ಅವುಗಳಲ್ಲಿ ಪ್ರಮುಖವಾಗಿ ನಾಲ್ಕು ವಿಧಗಳನ್ನು ನಾವು ಗುರುತಿಸಬಹುದಾದರೂ ಸಮುಚ್ಚಯಗಳ ಲೋಪದಿಂದಾಗಿ ಅವನ್ನು ಎರಡೇ ಎರಡು ವರ್ಗಗಳನ್ನಾಗಿ ವಿಂಗಡಿಸಬಹುದು. ಸಮುಚ್ಚಯಗಳನ್ನು ಲೋಪಗೊಳಿಸಿ ಎರಡು ವಾಕ್ಯಾತ್ಮಕ ಘಟಕಗಳನ್ನು ಒಂದೇ ವಾಕ್ಯಾತ್ಮಕ ಘಟಕವನ್ನಾಗಿ ರೂಪಾಂತರಿಸಬಹುದು. ಕೊನೆಯದಾಗಿ and ಎಂಬ ಸಮುಚ್ಚಯವನ್ನೊಳಗೊಂಡ ಇಂಗ್ಲೀಷ್ ವಾಕ್ಯಗಳು ಕನ್ನಡದಲ್ಲಿ ಹೆಚ್ಚಾಗಿ ಅಧೀನವಾಕ್ಯವಾಗಿ ಭಾಷಾಂತರಿಸಬೇಕಾಗುತ್ತದೆಂಬುದನ್ನು ಗಮನಿಸಬೇಕು.

೫ C. Ramarao (1971), pp. 43–53.

ಆಧಾರ ಸಾಹಿತ್ಯ

1. Cleitman, Lila R 1965 — "Co-ordinating Conjunctions in English", *Language*, (41 : 2).

2. Hall, Robert A. (Jr.) 1969 — *Introductory of Linguistics*, Delhi/Patna/Varanasi : Motilal Banarsidas.

3. Langacker, R. W. 1972 — *Fundamentals of Linguistic Analysis*, New York/Chicago/San Francisco/Atlanta: Harcourt Brace Jovanovich' Inc.

4. Mallika Devi, S. 1976 — "A Note in Coordination in Tulu', in *Proceedings of Third All India Conferencc of Dravidian Linguistics.* Dharwar : Karnatak University.

5. Ramarao, C. 1971. — "Co-ordination or Subordination?" *Indian Linguistics* (32 : 1).

೬. ಮಾಡ್ತ, ವಿಲ್ಯಂ. ೧೯೭೨ — "ಕನ್ನಡದಲ್ಲಿ ಸಮಾಸ" **ಕರ್ನಾಟಕ ಭಾರತಿ** (೪ : ೪) ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ.

೭. ಮುಳಬಾಗಲ, ಧೋಂ. ನ. — **ನುಡಿಗಟ್ಟು**, ಧಾರವಾಡ : ನರಸಿಂಹ ಧೊಂಡೋ ಮುಳಬಾಗಲ.

ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ (ಕ್ರಿ. ಶ. ೧೦೭೫)

ಆರ್. ಎನ್. ಗುರವ

ಬೆಳವಡಿ ಗ್ರಾಮ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿ ಬೈಲಹೊಂಗಲದಿಂದ ಆಗ್ನೇಯಕ್ಕೆ ಸುಮಾರು ಎಂಟು ಮೈಲು ಅಂತರದಲ್ಲಿ ಇದೆ. ಪ್ರಸ್ತುತ ಶಾಸನವನ್ನು ಊರಲ್ಲಿ ಹಳೇ ಬಾವಿಯ (ಹೊಂಡದ) ನೀರಿನ ಕಾಲುವೆಯ ಮೇಲೆ ಮುಚ್ಚಿದ್ದು, ಈಗ ಅದನ್ನು ಪಂಚಾಯತಿಯ ಕಟ್ಟಡದ ಬಾಗಿಲ ಹತ್ತಿರ ಇಡಲಾಗಿದೆ. ಶಾಸನವು ಒಳ್ಳೇ ಸ್ಥಿತಿಯಲ್ಲಿದ್ದು ಸಂಪೂರ್ಣವಾಗಿದೆ. ಇದು ಇತ್ತೀಚೆ ನನ್ನ ಗಮನಕ್ಕೆ ಬಂದಿದ್ದು ಇದುವರೆಗೆ ಪ್ರಕಟವಾಗಿಲ್ಲ.

ಶಾಸನದ ಭಾಷೆ ಮತ್ತು ಲಿಪಿ ಕನ್ನಡ. ಆದರೆ, ಮೊದಲಿನ ಮಂಗಲ ಪದ್ಯ ಮತ್ತು ಕಲೆಯ ಫಲಶ್ರುತಿ ಪದ್ಯ ಇವು ಸಂಸ್ಕೃತದಲ್ಲಿವೆ. ಅಕ್ಷರಗಳು ಅಂದವಾಗಿದ್ದು ಲಿಪಿಕಾರನು ಅವುಗಳನ್ನು ಆಳವಾಗಿ ಕಂಡರಿಸಿದ್ದಾನೆ. ಸಾಲು ೨ರಿಂದ ೬ರ ವರೆಗೆ ಶಾಸನವು ಗದ್ಯದಲ್ಲಿ ಮತ್ತು ಉಳಿದ ಭಾಗ ಪದ್ಯದಲ್ಲಿ ಇದೆ. ಬಂಧವು ಲಲಿತವಾಗಿದೆ.

ಶಾಸನದ ಸಾರಾಂಶ: ಚಾಲುಕ್ಯ ಚಕ್ರವರ್ತಿ ಭುವನೈಕಮಲ್ಲದೇವನ ರಾಜ್ಯ ನಡೆಯುತ್ತಿರುವಾಗ ಆತನ ಪಾದ ಪದ್ಮೋಪಜೀವಿಯಾದ ಮಹಾಸಾಮಂತ ಗಂಧಮರಸ ಪ್ರೊಳಲ್ಗುಂದೆ ಮೂವತ್ತನ್ನು ಮನ್ನೆಯ ಸಾಮ್ಯದಿಂದ ಆಳುತ್ತಿದ್ದನು. (ಸಾ. ೨–೬). ಆ ಕಾಲದಲ್ಲಿ, ಬೆಳವಡಿಯಲ್ಲಿ ಡಾಯಿಮಸೆಟ್ಟಿ ಎಂಬ ಮಹಾಜಿನ ಭಕ್ತನೊಬ್ಬನಿದ್ದ. ಆತನ ಇಷ್ಟದೇವತೆ ಜಿನಾಧೀಶ್ವರ, ಗುರು ಮುನಿಚಂದ್ರ ಮತ್ತು ಮಕ್ಕಳು ರಾಜಿಸೆಟ್ಟಿ, ಎರೆಯಮ್ಮ ಹಾಗು ಮಾರಸಿಂಘ. ಈ ಡಾಯಿಮ ಸೆಟ್ಟಿಯು ಬೆಳವಡಿಯಲ್ಲಿಯ ಮನೋಹರವಾದ ಸಹಸ್ರಕೂಟ ಜಿನಾಲಯಕ್ಕೆ ಅದರಲ್ಲಿ ವಾಸಿಸುತ್ತಿರುವ ಋಷಿಯರ ಆಹಾರದಾನಕ್ಕಾಗಿ ಉಕ್ತವಾದ ತಿಥಿಯಲ್ಲಿ ಅಯ್ವತ್ತು ದೀನಾರಗಳನ್ನು ದಾನ ಮಾಡಿದನು. ಈ ಹಣದ ಬಡ್ಡಿಯಲ್ಲಿ ಆಹಾರದಾನದ ವೆಚ್ಚ ನಡೆಯುವದಾಗಿತ್ತು (ಸಾ. ೬–೧೮).

ಡಾಯಿಮ ಸೆಟ್ಟಿಗೆ ಮುದ್ದಿಸೆಟ್ಟಿಯೆಂಬ ಮತ್ತೊಬ್ಬ ಮಗನಿದ್ದನು. ಈತನ ಗುರು ಮಲಧಾರಿಸೂರಿ. ಈ ಮುದ್ದಿಸೆಟ್ಟಿಯು ಅದೇ ರಮಣೀಯವಾದ ಸಹಸ್ರಕೂಟ ಜಿನಾಲಯಕ್ಕೆ ಆಹಾರದಾನಕ್ಕಾಗಿ ಅಯ್ವತ್ತು ಸಿಷ್ಠಗಳನ್ನು ದಾನ ಮಾಡಿದನು. (ಸಾ. ೧೮–೨೩). ತೈಲಗಾವುಂಡ(ಗೌಡ) ಮತ್ತು ದಾಸಿಕಬ್ಬೆ ಇವರ ಮಗನಾದ ಮಾರಸಿಂಗಗಾವುಂಡನೆಂಬ ಮಹಾದಾನಿಯೊಬ್ಬನಿದ್ದನು. ಆತನ ಗುರು ಗುಣಕೀರ್ತಿಮುನೀಂದ್ರ. ಮುನಿಜನರ ಆಹಾರದಾನಕ್ಕಾಗಿ ಈ ಮಾರಸಿಂಗಗಾವುಂಡನು ಮೇಲೆ ಹೇಳಿದ ಕ್ರಮದಂತೆ ಅಯ್ವತ್ತು ಹೊನ್ನುಗಳನ್ನು ದಾನ ಮಾಡಿದನು. (ಸಾ. ೨೩–೨೮). ಅದೇ ಪ್ರಕಾರ, ನಾಗಚಂದ್ರಸಿದ್ಧಾಂತದೇವರ ಗುಡ್ಡ[1] ಚಂದನೆಂಬವನು ಆ ಬಸದಿಗೆ ಮೂನಿ ಸಮೂಹದ ಆಹಾರದಾನ ಬಡ್ಡಿಯಲ್ಲಿ ನಡೆಯುವಂತೆ ಇಪ್ಪತ್ತು ಬಂಗಾರದ ನಾಣ್ಯಗಳನ್ನು ಕೊಟ್ಟನು (ಸಾ. ೨೯–೩೩).

ಈ ಮಹಾಪುರುಷರು ಮಾಡಿದ ಧರ್ಮವನ್ನು ಬೆಳವಡಿಯ ಪಾವನ ಮೂರ್ತಿಗಳಾದ ಮೂವತ್ತು ಮಹಾಜನರು ಪ್ರತಿಪಾಳಿಸುವರು ಎಂದು ಹದಿನಾಲ್ಕನೆಯ ಪದ್ಯದಲ್ಲಿ ಹೇಳಲಾಗಿದೆ. ಶಾಸನದ ಕೊನೆಯಲ್ಲಿ ಎರಡು ಫಲಶ್ರುತಿಯ ಪದ್ಯಗಳು ಬರುತ್ತವೆ. (ಸಾ. ೩೭–೪೨).

ಎರಡನೆಯ ಸೋಮೇಶ್ವರನೆಂದು ಪ್ರಸಿದ್ಧನಾದ ಹಾಗೂ ಚಕ್ರವರ್ತಿ ತ್ರೈಲೋಕ್ಯಮಲ್ಲ ಆಹವಮಲ್ಲದೇವನ ಹಿರಿಯ ಮಗನಾದ ಚಕ್ರವರ್ತಿ ಭುವನೈಕಮಲ್ಲನು ಚಾಲುಕ್ಯ ಸಾಮ್ರಾಜ್ಯವನ್ನು ಕ್ರಿ. ಶ. ೧೦೬೮ ರಿಂದ ೧೦೭೬ ರ ವರೆಗೆ ಆಳುತ್ತಿದ್ದನು. ಮೂವತ್ತು ಹಳ್ಳಿಗಳ ಕಂಪಣವಾದ[2] ಪ್ರೊಳುಗುಂದೆಯನ್ನು ಆಳುತ್ತಿದ್ದ ಗಂಧಮರಸನ ಹೆಸರು ಹೊಸದಾಗಿ ಬೆಳಕಿಗೆ ಬರುತ್ತದೆ

ಡಾಯಿಮ ಎಂಬ ಹೆಸರು ಸೌಂದತ್ತಿಯ ರಟ್ಟರ ರಾಜಮನೆತನದಲ್ಲಿ ಬರುತ್ತದೆ. ಮೊದಲನೆಯ ಕಾರ್ತವೀರ್ಯನ (ಕ್ರಿ.ಶ. ೯೮೦) ಹಿರಿಯ ಮಗನ ಹೆಸರು ಡಾಯಿಮ ದೀನಾರ.ಗ್ರೀಸ ದೇಶದ ಒಂದು ನಾಣ್ಯ. ನಮ್ಮ ಶಾಸನಗಳಲ್ಲಿ ಹಲವು ಕಡೆ ದೀನಾರದ ಉಲ್ಲೇಖ ಬರುತ್ತದೆ ಪ್ರಸ್ತುತ ಸಂದರ್ಭದಲ್ಲಿ ಅದಕ್ಕೆ ಗ್ರೀಕ ನಾಣ್ಯವೆಂದು ಅರ್ಥ ಮಾಡುವುದಕ್ಕಿಂತ ನಮ್ಮ ನಾಡಿನಲ್ಲಿ ಪ್ರಚಲಿತವಿದ್ದ ಬಂಗಾರದ ನಾಣ್ಯ ಎಂದು ಅರ್ಥ ಮಾಡುವುದು ಹೆಚ್ಚು ಯೋಗ್ಯವೆನಿಸುತ್ತದೆ. ಶಾಸನದಲ್ಲಿ ಇನ್ನು ಮೂರು ಕಡೆ ಬಂಗಾರದ ದಾನಗಳ ಉಲ್ಲೇಖಗಳು ಬರುತ್ತವೆ. ಸಾಲು ೨೩ ರಲ್ಲಿ ‘ಸಿಷ್ಠ’ ಎಂದು, ಸಾಲು ೨೮ ರಲ್ಲಿ ‘ಪೊನ್ನ’ ಎಂದು ಮತ್ತು ಸಾಲು ೩೩ ರಲ್ಲಿ ‘ಕಾಂಚನ’ ಎಂದು ಆ ಉಲ್ಲೇಖಗಳಾಗಿರುತ್ತವೆ ಕಾಂಚನ ಎಂಬ ನಾಣ್ಯ ನಮ್ಮಲ್ಲಿ ಇದ್ದಿದ್ದಿಲ್ಲ.

೧. ಶ್ರಾವಕ ಶಿಷ್ಯ ; Lay disciple.
೨. ಆಡಳಿತದ ಒಂದು ವಿಭಾಗ. ಈಗಿನ ಹೋಬಳಿ ಅಥವಾ ಸರ್ಕಲ್.

ಅದು ಕೇವಲ ಬಂಗಾರ ಶಬ್ದದ ನಾಮಾಂತರ. ಸಂಸ್ಕೃತ ಕನ್ನಡ ಮಿಶ್ರ ಶಾಸನಗಳಲ್ಲಿ ಸಂಸ್ಕೃತವಲ್ಲಿ ನಿಷ್ಕವೆಂದೂ, ಕನ್ನಡದಲ್ಲಿ ಗದ್ಯಾಣವೆಂದೂ ಉಲ್ಲೇಖಗಳು ಬರುತ್ತವೆ. ಪೊನ್ನ್ ಶಬ್ದಕ್ಕೆ ಬಂಗಾರ ಹಾಗೂ ಬಂಗಾರದ ನಾಣ್ಯ (ಗದ್ಯಾಣ) ಹೀಗೆ ಎರಡೂ ಅರ್ಥಗಳು ಇರುತ್ತವೆ. ಈ ವಿವೇಚನೆಯಿಂದ ದೀನಾರ ಶಬ್ದಕ್ಕೆ 'ಒಂದು ಬಂಗಾರದ ನಾಣ್ಯ' ಇಷ್ಟೇ ಅರ್ಥ ಎಂಬುದು ತಿಳಿಯುವಂತಿದೆ. ಶಾಸನದಲ್ಲಿ ಬರುವ ನಾಲ್ಕೂ ಸ್ಥಳಗಳಲ್ಲಿ ಅಭಿಪ್ರೇತವಾದ ನಾಣ್ಯ ವಿಶೇಷ 'ಗದ್ಯಾಣ' ಆಗಿರಬಹುದು.

ಶಾಸನದ ತಿಥಿ: ಸಾಲು ೧೪–೧೫ ರಲ್ಲಿ ಶಾಸನದ ತಿಥಿಯನ್ನು 'ಯಮಿನನ್ದಾಂಕಮಿತಂ ಶಕಾಬ್ದ ಗಣಮಬ್ದಂ ರಾಕ್ಷಸಂ ಪುಷ್ಯಮಾಸಮಿನಪ್ರಾಪ್ತಿತೆ ಪೌರ್ಣ್ಣಮಾಸ್ಯೆಯುದಜಿತೊಳ್ಕೂಡಲ್ ವ್ಯತೀಪಾತಮೆಂಬ ಮಹಾಯೋಗಮುಮುತ್ತರಾಯಣ ಮಹಾ ಸಂಕ್ರಾನ್ತಿಯುಂ' ಎಂದು ಹೇಳಲಾಗಿದೆ. 'ಯಮಿನನ್ದಾಂಕಮಿತಂ' ಎಂದರೆ ೯೯೭. ಈ ೯೯೭ ನೆಯ ಶಕವರ್ಷಕ್ಕೆ ರಾಕ್ಷಸಸಂವತ್ಸರವು ಗತ (expired) ಸಂವತ್ಸರವಾಗಿರುತ್ತದೆ. ಈ ರಾಕ್ಷಸ ಸಂವತ್ಸರದ ಪುಷ್ಯ ಮಾಸದ ಹುಣ್ಣಿವೆ ಶುಕ್ರವಾರ ಬರುತ್ತಿದ್ದು ಅದಕ್ಕೆ ಸಮಾನವಾದ ಕ್ರಿಶ್ಚಿಯನ್ ತಾರೀಖು ೨೫ ಡಿಸೆಂಬರ ೧೦೭೫ ಆಗುತ್ತದೆ. ಉತ್ತರಾಯಣ ಸಂಕ್ರಮಣವು ಅದರ ಹಿಂದಿನ ದಿವಸ ಎಂದರೆ ಗುರುವಾರ ತಾರೀಖು ೨೪ ನೆಯ ದಿವಸ ಸರಾಸರಿ ಸೂರ್ಯೋದಯದ ನಂತರ ೧೮ ಗಂಟೆ ೧೫ ಮಿನಿಟಕ್ಕೆ ಇತ್ತು. ಆದುದರಿಂದ, ಸಂಕ್ರಮಣವನ್ನು ಶುಕ್ರವಾರ ತಾರೀಖು ೨೫ ಕ್ಕೆ ಜೋಡಿಸಿರುವುದು ಸಮಂಜಸವಾಗಿದೆ. ಕಾರಣ, ಶಾಸನದ ತಿಥಿಯನ್ನು **ಶುಕ್ರವಾರ ತಾರೀಖು ೨೫ ಡಿಸೆಂಬರ ೧೦೭೫ ಎಂದು ನಿಶ್ಚಯಿಸಬಹುದು.**

ಶಾಸನದಲ್ಲಿ ಉಕ್ತವಾದ ಸ್ಥಳಗಳು : (೧) ಪೊಳಲ್ಗುಂದೆ ಮೂವತ್ತು (ಸಾ. ೫); (೨) ಬೆಳ್ವಡಿ (ಸಾ. ೧೬), ಬೆಳ್ವಾಡಿ (ಸಾ. ೨೦–೨೧) (೩) ಗಂಗಾ, ಗಯಾ ವಾರಣಾಸಿ, ಕುರುಕ್ಷೇತ್ರ (ಸಾ. ೩೮).

(೧) **ಪೊಳಲ್ಗುಂದೆ ಮೂವತ್ತು** : ಮೂವತ್ತು ಹಳ್ಳಿಗಳನ್ನೊಳಗೊಂಡ ಆಡಳಿತದ ಒಂದು ವಿಭಾಗ. ಬೆಳವಡಿ ಗ್ರಾಮವು ಈ ವಿಭಾಗದಲ್ಲಿರುವುದರಿಂದ ಬೈಲಹೊಂಗಲ್ ತಾಲೂಕಿನ ಆಗ್ನೇಯ ಭಾಗದ ಮೂವತ್ತು ಹಳ್ಳಿಗಳು ಈ ವಿಭಾಗದಲ್ಲಿ ಸಮಾವೇಶವಾಗುತಿದ್ದುವೆಂದು ತಿಳಿಯುವಂತಿದೆ. ಈ ವಿಭಾಗದ ಸ್ಥಾನವನ್ನು ಗಮನಿಸಿದರೆ ಅದು ಕೂಂಡಿ ನಾಡಿನಲ್ಲಿ ಇತ್ತೆಂದು ಭಾವಿಸಬಹುದು. ಪೊಳಲ್ಗುಂದೆ ಮೂವತ್ತರ ಪಶ್ಚಿಮಕ್ಕೆ ಪಲಸಿಗೆ ನಾಡು ಮತ್ತು ಆಗ್ನೇಯಕ್ಕೆ ಬೆಳವಲ ನಾಡು ಇದ್ದವು. ಪಲಸಿಗೆ ನಾಡಿನ ಕಾದರನಳ್ಳಿ ಮೂವತ್ತು, ಕಿತ್ತೂರ ಮೂವತ್ತು ಮತ್ತು

ಬೆಳವಲ ನಾಡಿನ ನವಿಲುಗುಂದ ನಾಲ್ವತ್ತು ಅನುಕ್ರಮವಾಗಿ ಪೊಳಲ್ಗುಂದೆ ಮೂವತ್ತರ ಪಶ್ಚಿಮ, ನೈಋತ್ಯ ಹಾಗು ಆಗ್ನೇಯಕ್ಕೆ ಇದ್ದವು. ಈ ವಿಭಾಗದ ವಾಯುವ್ಯ, ಉತ್ತರ, ಈಶಾನ್ಯ ಮತ್ತು ಪೂರ್ವ ದಿಕ್ಕುಗಳಲ್ಲಿ ನೇಸರಗಿ ಪನ್ನೆರಡು, ಸೋಲ (ಸೊಗಲ) ಮೂವತ್ತು, ಸುಗಂಧವರ್ತಿ (ಸೌದತ್ತಿ) ಪನ್ನೆರಡು ಮತ್ತು ಹೊರಘಟ್ಟ ಸಪ್ತತಿ ಇದ್ದವು ತೋರಗಲ್ಲಿನ ಶಾಸನವೊಂದರಲ್ಲಿ (ಕ್ರಿ. ಶ. ೧೧೮೭) ಲೋಕಾಪುರ ಹನ್ನೆರಡು, ನವಿಲುಗುಂದ ನಾಲ್ವತ್ತು ಮತ್ತು ಕೊಳನೂರ ಮೂವತ್ತು ಈ ವಿಭಾಗಗಳ ಜೊತೆಯಲ್ಲಿ ಪೊಳಲಗುಂದ ಮೂವತ್ತರ ಉಲ್ಲೇಖ ಬರುತ್ತದೆ. ಧಾರವಾಡ ತಾಲೂಕಿನ ನರೇಂದ್ರ ಗ್ರಾಮದ ಶಾಸನವೊಂದರಲ್ಲಿ (ಕ್ರಿ. ಶ. ೧೧೨೫) ಗೋವೆಯ ಕದಂಬ ಮಹಾಮಂಡಳೇಶ್ವರ ಎರಡನೆಯ ಜಯಕೇಸಿ ಆಳುವ ನಾಡುಗಳಲ್ಲಿ, ಉತ್ಸು ಗ್ರಾಮ ಮೂವತ್ತು, ಕಾದರವಳ್ಳಿ ಮೂವತ್ತು ಇವುಗಳ ಜೊತೆಯಲ್ಲಿ ಪೊಳಲಗುಂದೆ ಮೂವತ್ತರ ಉಲ್ಲೇಖ ಬರುತ್ತದೆ ಪ್ರಸ್ತುತ ಶಾಸನ ದೊರೆಯುವ ವರೆಗೆ ಪೊಳಲಗುಂದ ಮೂವತ್ತು ಖಚಿತವಾಗಿ ಎಲ್ಲಿ ಇತ್ತೆಂಬುದು ಗೊತ್ತಿರಲಿಲ್ಲ. ಈ ಬೆಳವಡಿ ಶಾಸನದಿಂದ ಅದರ ಸ್ಥಾನ ನಿಶ್ಚಿತವಾಗಿದೆ.

(೨) **ಬೆಳ್ವಡಿ, ಬೆಳ್ವಾಡಿ :** ಮೇಲೆ ವಿವರಿಸಲಾಗಿದೆ. (೩) ಗಂಗಾ, ಗಯಾ, ವಾರಣಾಸಿ, ಕುರುಕ್ಷೇತ್ರ ಇವು ಪ್ರಸಿದ್ಧ ತೀರ್ಥಕ್ಷೇತ್ರಗಳಾಗಿವೆ.

ಶಾಸನಪಾಠ

[ವೃತ್ತಗಳು : ಪದ್ಯ ೧, ೧೬ ಅನುಷ್ಟುಭ್: ೨, ೭, ೧೦, ೧೧, ೧೩ ಕಂದ: ೩ ಚಂಪಕ ಮಾಲೆ; ೪, ೫, ೬, ೮, ೧೫ ಮತ್ತೇಭವಿಕ್ರೀಡಿತ: ೯, ೧೨, ೧೪ ಉತ್ಪಲಮಾಲೆ]

೧ ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಚ್ಛನಂ [*] ಜೀಯಾತ್ತ್ರೈಲೋಕ್ಯನಾ–

೨ ಥನ್ಯ ಶಾಸನಂ ಜಿನಶಾಸನಂ ॥ [೧*] ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ

೩ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಶ್ರೀಮದ್ಭುವನೈಕ ಮಲ್ಲದೇವರ ವಿಜಯ–

೪ ರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾ ಚಂದ್ರಾರ್ಕ್ಕತಾರಂ ಸಲುತ್ತ ಮಿರೆ ॥ ತತ್ಪಾದ ಪದ್ಮೋಪ–

೫ ಜೀವಿ ಶ್ರೀಮನ್ಮಹಾ ಸಾಮನ್ತಂ ಗಂಧವಾರಣಂ ಪೊಳಲ್ಗುಂದೆ ಮೂವತ್ತಕ್ಕಂ ಮನ್ನೆಯ ಸಾಮ್ಯ ದಿನದಸುಗೆ–

೬ ಯುತ್ತ ವಿರೆ॥ ಗುಣಿ ನಿಜಕುಳ ಗಗನನಭೋಮಣಿ ಮುನಿಜನ ಹೆಪ್ಪುಜನ ಸುಹೃಜ್ಜನ ಚಿನ್ತಾಮಣಿ ಸರಣಾಗ-

೭ ತರಕ್ಷಾಮಣಿಯನೆ ಡಾಯಿಮಸೆಟ್ಟಿ ನೆಗರ್ದ್ದಂ ಜಗದೊಳ್ ॥ [೨*] ವೃ ॥ ಜನ ಹೃತವೃತ್ತಿ ಕಯ್ಮರೆಯಿಸಿತ್ತು

೮ ಮಹಾಗುಣಮಾಳೆ ತಾನೆ ಮೇಲೆಸಿಸಿತು ಸೂನೃತಂ ಕಳಸಮಿಳ್ದುದು ಬಣ್ಣಿನೆ ತಿಣ್ಣನಾರ್ಪ್ಪಿಸೂಳ್ಪ-

೯ ಸುಪಸು ಪೂಯ್ತು ನಿಮ್ಮಳಿನ ಕೀರ್ತ್ತಿಶಿಶಾ ಪದಮಯ್ದಿತೇನನೆಂಬೆನೊ ಮನ ಮಾರೆ ಬಣ್ಣಿ ಪಡೆ (ಪೊಡೆ)

೧೦ ಡಾಯಿಮ ಸೆಟ್ಟಿಯುನಿ ಧರಿತ್ರಿಯೊಳ್ ॥ [೩*] ಪರಮಾಪ್ತಂ ಸಕಳಾಧಿನಾಥ ನಧಿದೆಯ್ವಂ ಶ್ರೀಜಿ-

೧೧ ನಾಧೀಶ್ವರಂ ಗುರುಗಳ್ ಶ್ರೀ ಮೂನಿಚಂದ್ರ ದೇವರ್ಗನ ಘೌತ್ರ್ರ್ಯ ವಿದ್ಯದೇವ- ತ್ರ್ರನೂಜರ ನಿದ್ಯೈವರ್ಪ್ಪ-

೧೨ ಭು ರಾಜಿಸೆಟ್ಟಿ ಯಜಿತಿಯುಮ್ಮಂ ಮಾರಸಿಂಘಯ್ಯ ನೆಂಬರೆನಲ್ಪ ಡಾಯಿಮ ಸೆಟ್ಟಿಯುನ್ನತಿಯು-

೧೩ ನ್ನಿನ್ನೇವಣ್ಣಿಪಂ ಬಣ್ಣಿಪಂ ॥ [೪*] ಯುಮುನನ್ದಾಂಕಮಿತಂ ಶಕಾಬ್ದ ಗಣ- ಮುಬ್ದಂ ರಾಕ್ಷಸಂ ಪುಸ್ಯಮಾಸಮಿನಂ-

೧೪ ದ್ರಾನ್ವಿತ ಪೌರ್ಣ್ಣಮಾಸ್ಯೆ ಯುದಜಿತೊಳ್ಕೊಳ್ಡಲ್ ವ್ಯತೀಪಾತಮೆಂಬ ಮಹಾಯೋಗಮುಮುತ್ತರಾಯಣ ಮು-

೧೫ ಹಾಸಂಕ್ರಾನ್ತಿಯುಂ ಮಾಸವೋತ್ತಮನಾ ಡಾಯಿಮಸೆಟ್ಟಿ ನಿರ್ಮ್ಮಳ ಚರಿತ್ರಂ ಧರ್ಮ್ಮಧರ್ಮ್ಮಾತ್ಮಕಂ ॥ [೫*]

೧೬ ನಯನಾನಂದನಮಪ್ಪ ಬೆಳ್ವಡಿಯೊಳತ್ಯಾಶ್ಚರ್ಯ್ಯ ಸೌಂದರ್ಯಲಕ್ಷ್ಮಿಯ ನಾನ್ತಿರ್ದ್ದ ಸಹ-

೧೭ ಪ್ರಕೂಟಜನಗೇಹಕ್ಕೊಲ್ದು ಡಾಯಿಮ್ಮಸೆಟ್ಟಿಯರಿತ್ತ ಜಗಮುಳ್ಳಿನಂ ರಿಷಿ ಸಮೂಹಾ-

೧೮ ಹಾರದಾನಕ್ಕೆ ಬಡ್ಡಿಯೊಳುಣ್ಬನ್ತು ಸಮಸ್ತ ಧಾತ್ರಿ ಪೊಗಳಲಯ್ವತ್ತು ದೀ ನಾರಮಂ ॥ [೬*]

೧೯ ಆ ವಿಭುವಿನ ಮಗನಮಳನಭಾವಂ ಮಳಧಾರಿಸೂರಿಗಳ ಗುಡ್ಡಂಧಾತ್ರೀವಳಯ ದೊಳೆಸೆದಂ

೨೦ [ಸದ್ಭಾವನು]ಯುಂ ಮುದ್ದಿಸೆಟ್ಟಿ ದಾನನಿಧಾನಂ ॥ [೭*] ವೃ ॥ ಸಕಳೋರ್ವ್ವಿ(ರ್ವೀ)ಜನವಂದ್ಯಮಾನವೆನಿಪಾ ಬೆಳ್ವಾ-

೨೧ ಡಿಯೊಳ್ ರಾಮಣೀಯಕಮಾಗಿರ್ದ್ದ ಸಹಸ್ರಕೂಟಜಿನಗೇಹಕ್ಕಾ ಮಹಾತ್ಮಂ ಗುಣಾಧಿಕ [—]

೨೨ [–೦೦] ಮುದ್ದಿಸೆಟ್ಟಿ ರಿಷಿಯಗ್ರ್ಗಾಹಾರದಾನಕ್ಕೆ ಕೌತುಕದಿಂದಿತ್ತನುದಾತ್ತನಾ ದೆವಸದೊಳ್ಪ-

೨೩ ನ್ನಾಸ ನಿಷ್ಪಂಗಳಂ ॥ [೮*] ಚಣ್ಡತಪಸ್ಥರಪ್ಪ ಗುಣಕೀರ್ತ್ತಿ ಮುನೀನ್ದ್ರರ ನಿರ್ಮ್ಮಳೋದ [– – ೦೦]

೨೪ ಗುಡ್ಡನುತ್ತಮವೆನಿಪ್ಪ ನೆಗರ್ತ್ತಿಯನಾನ್ತ ತೈಲಗಾವುಣ್ಡನ ದಾಸಿಕಬ್ಬೆಯ ತನೂಜ [ನುಮಾ]

೨೫ ವಿಭು ಮಾರಸಿಂಗಗಾವುಣ್ಡನಘೌಘಶೌಣ್ಡನೆಸೆದಂ ಜಗದನ್ತರದೊಳ್ನಿರನ್ತರಂ ॥ [೯*] ಜನನ-

೨೬ ಧಿದೈವಂ ತನಗಂಗನೆ ಲೋಕಲೆನಾರಿ ಬುಗುಡನಾತ್ಮಜನೆನಲಾವನೊ ಮಾರಸಿಂಗಗಾವುಣ್ಡನ

೨೭ ಗೆಯ್ದ ವಿಶಿಷ್ಟಪುಣ್ಯಮಂ ಗೆಯ್ದಾತಂ ॥ [೧೦*] ಮುನಿಜನದಾಹಾರಕ್ಕಾಜಿನಭವನಕ್ಕಾವಕಾ-

೨೮ ಲಮುಂ ನಡೆದಪುದಿನ್ತೆನೆ ಮಾರಸಿಂಗ ಗಾವುಣ್ಡನುಮಿತ್ತಂ ಪೊನ್ನನಾ ಕ್ರಮದಿನಯ್ವತ್ತಂ ॥ [೧೧*]

೨೯ ವೃ ॥ ಭ್ರಾನ್ತಿನೊಳೇನೊ ದಿವ್ಯಮುನಿಗಳ್ಪರಿಭಾವಿಸೆ ನಾಗಚಂದ್ರಸಿದ್ಧಾನ್ತಿಗರಾಮುನೀ-

೩೦ ಶ್ವರರ ಗುಡ್ಡನೆನಲ್ವಿಭು ಚಂದನಂ ದಯಾಕಾನ್ತನನುತ್ತಮೋತ್ತಮ ಚರಿತ್ರನನೂರ್ಜ್ಜಿತನಂ

೩೧ ಸಮಸ್ತದಿಕ್ಪ್ರಾನ್ತ ವಿವರ್ತ್ತಿಕೀರ್ತ್ತಿಯನಶೇಷಧರಿತ್ರಿಯೊಳಾರೊ ಬಣ್ಣಿಪರ್ ॥ [೧೨*]

೩೨ ಚಂದನುಮಾ ಬಸದಿಗೆ ಮುನಿಬೃಂದಕ್ಕಾಹಾರದಾನಕ್ಕಾ ಮಾರ್ಗದಿನಿತ್ತಂ ದಯೆಯಿಂ-

೩೩ ದಾ ದೆ[ವಸದಿಂ]ದುಂ ನಡೆವಂತು ಕಾಂಚನಮನಿಪ್ಪತ್ತಂ ॥ [೧೩*] ವೃ ॥ ಕೇವಳಮೊಂದೆನೊ ಪ್ರ-

೩೪ ಕರದೊಳ್ ಬೆಳ್ವಾಡಿಯ ಮೂವದಿಂಬರಾ ಪಾವನಮೂರ್ತ್ತಿಗಳ್ಪಿರಿದುಮಾದರ-

೩೫ ದಿಂದಮೆ ತಮ್ಮ ಧರ್ಮ್ಮಮಂ ಕಾವವೊಲೀ ಮಹಾಪುರುಷನಿರ್ಮ್ಮಿತಧರ್ಮ್ಮಮ

೩೬ ನಾವ ಕಾಲಮುಂ ಕಾವರೆನಲ್ ಜಗತ್ರಯದೊಳನ್ತದನಿಂ ಪೊಗಳಲ್ಸಮರ್ತ್ಥ

೩೭ ರಾರ್ ॥ [೧೪*] ಸಕಳೋರ್ವ್ವೀಸ್ತುತಮಪ್ಪ ಧರ್ಮ್ಮಮನಿದಂ ಕಾದಂ ಚಿರೈಶ್ವರ್ಯ್ಯಭುಂಭು–

೩೮ ಕನಕ್ಕುಂ ವಿಪರೀತದೊಳ್ನಡೆದವಂ ಗಂಗಾಗಯಾವಾರಣಾಸಿಕುರುಕ್ಷೇತ್ರ–

೩೯ ದೊಳೆಯ್ದೆ ಗೋದ್ವಿಜಮುನಿವ್ರಾತಂಗಳಂ ಕೊಂದ ಪಾತಕನಕ್ಕುಂ ಬಿಡ ದಿಕ್ಕು–

೪೦ ಮಾ ಪುರುಷನೆಂದುಂ ರೌರವಸ್ಥಾನಮಂ ॥ [೧೫*] ಕ[೧] ॥ ಸ್ವದತ್ತಂ (ತ್ತಾಂ) ಪರದತ್ತಂ (ತ್ತಾಂ) ವಾ

೪೧ ಯೋ ಹರೇತಿ ವಸುನ್ಧರಾ [೦*] [।*] ಶಷ್ಟಿರ್ವ್ವರ್ಷ (ಷಷ್ಟಿಂ ವರ್ಷ) ಸಹಸ್ರಾಣಿ ವಿಷ್ಠಾಯಾಂ

೪೨ ಜಾಯತೇ ಕ್ರಿಮಿಃ ॥ @ * [೧೬ *]

---

೧ ಶ್ಲೋಕ.

ಗೀತೆಯಲ್ಲಿ ಕಾಣುವ ಮಾತೃಪದ ಪದ್ಧತಿ

ಎಚ್. ಜಿ. ಬೆಂಗೇರಿ

ಹಿಂದುಸ್ಥಾನದಲ್ಲಿ ಪ್ರಾಚೀನ ಕಾಲದಿಂದಲೂ ಪಿತೃಪದ ಪದ್ಧತಿ (Patriarchal System) ಮತ್ತು ಮಾತೃಪದ ಪದ್ಧತಿ(Matriarehal System) ಎಂಬ ಕುಟುಂಬದ ಎರಡು ಸಾಮಾಜಿಕ ಪದ್ಧತಿಗಳು ಪ್ರಚಾರದಲ್ಲಿವೆ.

ಕುಟುಂಬದ ಸೊತ್ತಿನ ಅಧಿಕಾರವು ಗಂಡುಮಕ್ಕಳಿಗೆ ಹಸ್ತಾಂತರವಾಗುವದು ಪಿತೃಪದ ಪದ್ಧತಿಯ ಮುಖ್ಯ ಲಕ್ಷಣ. ಅಂದರೆ ಸೊತ್ತು ತಂದೆಯಿಂದ ಮಗನಿಗೆ ಬರುವುದು. ತಾಯಿಯಿಂದ ಮಗಳಿಗೆ ಮನೆತನದ ಸೊತ್ತಿನ ಅಧಿಕಾರ ದೊರಕುವ ಪದ್ಧತಿ ಮಾತೃಪದ ಪದ್ಧತಿ. ಈ ಪದ್ಧತಿಯಲ್ಲಿ ಗಂಡುಮಕ್ಕಳು ಹೆಂಡಂದಿರ ಮನೆಗೆ ಒಡೆಯರಾಗುತ್ತಾರೆ. ಹೆಣ್ಣುಮಕ್ಕಳನ್ನು ಮದುವೆಯಾದ ಅಳಿಯನಿಗೆ ಈ ಅಧಿಕಾರವಿರುವುದರಿಂದ ಇದಕ್ಕೆ ಅಳಿಯಕಟ್ಟು, ಅಳಿಯ ಸಂತಾನ ಮರುಮಕ್ಕತ್ತಾಯಂ ಎಂಬ ಹೆಸರುಗಳಿವೆ. ಇದಕ್ಕೆ Avancular System(ಅಂದರೆ ಸೋದರ ಮಾವನಿಂದ ಸೋದರಳಿಯನಿಗೆ ಸೊತ್ತಿನ ಹಸ್ತಾಂತರ) ಎಂಬ ಮತ್ತೊಂದು ಹೆಸರು ಕಾಣುತ್ತಿದೆ. ಕೇರಳದ ತಿರುವಾಂಕೂರು, ಕೊಚ್ಚಿ ಮುಂ. ಹಳೆಗಾಲದ ಸಂಸ್ಥಾನಗಳ ಅರಸು ಮನೆತನದ ಸೋದರಳಿಯಂದಿರು ಪಟ್ಟಕ್ಕೆ ಬರುತ್ತಿದ್ದುದು ಈ ಪದ್ಧತಿಯ ಒಂದು ಉದಾಹರಣೆ. ಈಗ ಈ ಪದ್ಧತಿ ಅಳಿಸತೊಡಗಿದೆಯೆಂದು ದಿ॥ ಪಣಿಕ್ಕರರು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿದ್ದಾರೆ. ಮಂಗಳೂರಿನಿಂದ ಕನ್ಯಾಕುಮಾರಿಯವರೆಗೆ ಒಂದು ಕಾಲದಲ್ಲಿ [illegible] ಈ ಪದ್ಧತಿ ಈಗ ಮಾಯವಾಗತೊಡಗಿದೆ. ಈ ಸಾಮಾಜಿಕ ಪದ್ಧತಿ ತಿಳಿ[illegible]ಮ್ಮನವರು ಈ ರಾಜ್ಯವನ್ನು ಸ್ತ್ರೀಮಲೆಯಾಳ ರಾಜ್ಯವೆಂದು ಕರೆಯುತ್ತಿದ್ದರು.

ಈ ಮಾತೃಪದ ಪದ್ಧತಿ ಉತ್ತರ ಕರ್ನಾಟಕದ ಬ್ರಾಹ್ಮಣರಲ್ಲಿ ಹೆಸರಿಗಷ್ಟೇ ಉಳಿದುಕೊಂಡಿದೆ. ಉಳಿದ ವರ್ಗಗಳಲ್ಲಿ ಹಾಗು ಹಳ್ಳಿಗಳಲ್ಲಿ ಇದರ ಪ್ರಮಾಣ

ಹೆಚ್ಚಿದೆ. ಮಹಾರಾಷ್ಟ್ರದಲ್ಲಿ ಕೊಂಕಣಸ್ಥರನ್ನು ಬಿಟ್ಟು ಉಳಿದವರಲ್ಲಿ ಈ ಪ್ರಮಾಣ ಕಡಿಮೆಯಾಗುತ್ತಿದೆ ಮಹಾರಾಷ್ಟ್ರವೂ ಒಮ್ಮೆ ದ್ರವಿಡ ಜನಾಂಗದ ವಾಸಸ್ಥಾನವಾಗಿದ್ದರಿಂದ ಈ ಪದ್ಧತಿ ಇಲ್ಲವೇ ಇಲ್ಲವೆಂಬುದು ಇತಿಹಾಸದ ಅಜ್ಞಾನದ ಒಂದು ಉತ್ತಮ ಮಾದರಿಯೆನ್ನಬಹುದು. ಕೊಂಕಣಸ್ಥರು ರತ್ನಾಗಿರಿಯಿಂದ ಇಂದಿನ ಮಹಾರಾಷ್ಟ್ರಕ್ಕೆ ವಲಸೆ ಬಂದವರು. ಮೇಲಾಗಿ ಮರಾಠೀ ಭಾಷೆ ಕ್ರಿ. ಶ. ೧೦೦೦ಕ್ಕೆ ಹಿಂದೆ ಇದ್ದಿಲ್ಲವೆಂಬುದಕ್ಕೆ ಈ ಭಾಷೆಯ ಇತಿಹಾಸವೇ ಇದಕ್ಕೆ ಸಾಕ್ಷಿಯಾಗಿದೆ. (೧೩೦೦ಕ್ಕೆ ಮುಂಚೆ ಕೇರಳದ ಉತ್ತರ ಭಾಗಕ್ಕೆ ಮಲೆಯಾಳವೆಂಬ ಹೆಸರಿತ್ತೆಂದು ಮಿ॥ ಪಣಿಕ್ಕರರು ತಮ್ಮ ಚರಿತ್ರೆಯಲ್ಲಿ ಬರೆದಿದ್ದಾರೆ.)

ಮಹಾಭಾರತ ರಾಮಾಯಣಗಳು ಇತಿಹಾಸ ಕಾವ್ಯಗಳೆಂದು ಹೆಸರಾಗಿವೆ. ಭಾಗವತವು (ರಾಧೆಯ ಹೆಸರಿಲ್ಲ) ಇತಿಹಾಸ ಕಾವ್ಯವಲ್ಲ. ಭಕ್ತಿಪಂಥದ ಸರಸ ಕಾವ್ಯ. ಪುರಾಣ ಕೇಳುತ್ತಿದ್ದ ಬ್ರಾಹ್ಮಣರ ದಿನ ಹೋದ ಹೆಣ್ಣುಮಕ್ಕಳು ಈ ಮೂರು ಕಾವ್ಯಗಳ ಮುಖ್ಯವಿಷಯವನ್ನು ಬಡಿದಾಟ ಭಾರತ, ಅಳದಕ್ಕಿ ರಾಮಾಯಣ, ಘಟಿಂಗ ಭಾಗವತವೆಂದು ಒಳ್ಳೆ ಸಂಕ್ಷಿಪ್ತ ಹಾಗು ಸರಸವಾಗಿ ದೇಸಿ ನುಡಿಯಲ್ಲಿ ಬಣ್ಣಿಸುತ್ತಾರೆ.

ಮಹಾಭಾರತದಲ್ಲಿಯ ಮುಖ್ಯ ವಿಷಯ ಕೌರವ ಪಾಂಡವರೆಂಬ ಎರಡು ಬಣದವರ ನಡುವೆ ನಡೆದ ಬಡಿದಾಟ ಅಥವಾ ಕುರುಕ್ಷೇತ್ರಯುದ್ಧ. ಆಗ ಕೌರವರು ಹಸ್ತಿನಾವತಿಯಲ್ಲಿ ಸಾರ್ವಭೌಮರಾಗಿ ಇಂದಿನ ಉತ್ತರ ಹಿಂದುಸ್ತಾನವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದರು. ಇವರ ಬೆಂಬಲಿಗರಾಗಿ ಜರಾಸಂಧ ಆನಮಿತ್ತಿಲ್ಲಿ, ಶಿಶುಪಾಲನು ಮಗದ (ಬಿಹಾರ) ದಲ್ಲಿ, ಅಂಗದೇಶದಲ್ಲಿ(ಬಂಗಾಲ) ಕರ್ಣ, ಮದ್ರದಲ್ಲಿ (ಮಧ್ಯಪ್ರದೇಶ) ಮದ್ರರಾಜ ಇವರು ಆಳುತ್ತಿದ್ದರು. ಹೀಗಾಗಿ ಆ ನಾಡಿನಲ್ಲಿ ಯಾರೂ ತಲೆಯೆತ್ತುವಂತಿರಲಿಲ್ಲ.

ಯಾದವ ತಂಡದವರ ಕೃಷ್ಣ, ಕೃಷ್ಣನ ಸೋದರಮಾವ ಕಂಸ ಮಧುರೆಯಲ್ಲಿ ರಾಜ್ಯ ನಡೆಸಿದ್ದರು. ಜರಾಸಂಧನು ೧೭ ಸಾರೆ ಮಧುರೆಯ ಮೇಲೆ ದಂಡ ಬಂದು ಯಾದವರನ್ನು ನೆಲೆಗೆಡಿಸಿದ್ದನು. ಕೃಷ್ಣ ತನ್ನ ತಂಡದವರಗೂಡ ದ್ವಾರಕೆಗೆ (ಸೌರಾಷ್ಟ್ರ) ಹೋಗಿ ತಳವೂರಬೇಕಾಯಿತು.

ತನ್ನ ರಾಜ್ಯ ಕಳೆದುಕೊಂಡು ಮಿಡುಕುತ್ತಿದ್ದ ಕೃಷ್ಣನು ಹೊರಗಿನವರ ಸಹಾಯ ಪಡೆದು ಕೌರವರನ್ನು ಬಗ್ಗುಬಡಿದು ಅವರನ್ನು ಬೇರೂರಿಸಿ ಕಿತ್ತೊಗೆಯಬೇಕೆಂದು ಹೊಂಚು ಹಾಕುತ್ತಿದ್ದನು. ಇದೇ ಕಾಲದಲ್ಲಿ ದ್ರುಪದರಾಜನ (ಪಂಚಾಲದ) ಮಗಳಾದ ದ್ರೌಪದಿಯ ಸ್ವಯಂವರದ ಏರ್ಪಾಡು ನಡೆಯಿತು. ಪಾಂಡವರು ನೇಪಾಳದ ಕಡೆಯಿಂದ(ಕಿನ್ನಾರ, ಸ್ಪೀತಿ ಹಿಮಾಚಲ ಪ್ರದೇಶ ರಾಜ್ಯ)

ಸ್ವಯಂವರಕ್ಕೆ ಬಂದಿದ್ದರು. ಅವರಲ್ಲಿ ಅರ್ಜುನನು ಬಿಲ್ಲಿನ ಹೆದೆಯೇರಿಸಿ ಗುರಿ ಹೊಡೆದು ಮೀನನ್ನು ಕೆಡವಿ ದ್ರೌಪದಿಯನ್ನು ಗೆದ್ದುಕೊಂಡನು. ಇದೇ ಸಂಧಿ ಸಾಧಿಸುತ್ತಿದ್ದ ಕೃಷ್ಣನು ಅರ್ಜುನನಿಗೆ ತನ್ನ ತಂಗಿಯಾದ ಸುಭದ್ರೆಯನ್ನು ಕೊಟ್ಟು ಮದುವೆಮಾಡಿ ತನ್ನ ಬಣಕ್ಕೆ ಸೇರಿಸಿಕೊಂಡು ಮುಂದಿನ ಹೊಂಚಿಗೆ ನಾಂದಿ ಮಾಡಿನು. ಕೌರವರು ಮತ್ತು ಅವರ ಬಣದವರು ಪಿತೃಪದ ಪದ್ಧತಿಯವರು.

ಪಾಂಡವರೈವರೂ ಕೂಡಿ ದ್ರೌಪದಿಯೊಬ್ಬಳನ್ನು ಮದುವೆಯಾದದ್ದನ್ನು ಮಹಾಭಾರತವು ಸಾರಿ ಹೇಳುತ್ತಿದೆ. ಒಬ್ಬನಿಗಿಂತ ಹೆಚ್ಚು ಜನರು ಒಬ್ಬಳನ್ನು ಲಗ್ನವಾಗುವ ಪದ್ಧತಿಗೆ ಬಹು ಪತಿತ್ವ ಅಥವಾ Polyandry ಹೆಸರು. ಕೌರವರಲ್ಲಿ ಒಬ್ಬನು ಒಬ್ಬಳನ್ನು ಅಥವಾ ಹೆಚ್ಚು ಹೆಣ್ಣುಮಕ್ಕಳನ್ನು ಮದುವೆಯಾದ ಆಧಾರಗಳಿವೆಯಾದ್ದರಿಂದ ಇದು ಬಹುಪತ್ನಿತ್ವ ಅಥವಾ Polygamy ಎಂಬ ಸಮಾಜ ಪದ್ಧತಿ.

ಪಾಂಡವರ ಮಾದರಿಯಾದ ಮಿತಕುಟುಂಬ ಪದ್ಧತಿ ಕುಟುಂಬಯೋಜನೆಯ ಒಂದು ಮಾದರಿ. ಉಳಿದ ಪದ್ಧತಿಗಳು ಮಹಾಭಾರತದಲ್ಲಿ ಕಾಣುವದಿಲ್ಲ. ಇಂದಿನ ಹಿಮಾಚಲ ಪ್ರದೇಶದಲ್ಲಿ ಕಿತ್ನಾರ್, ಸ್ಪೀತಿ ಮುಂತಾದ ಹಳ್ಳಿಗಳಿವೆ. ಅಲ್ಲಿ ಒಂದು ದ್ರೌಪದಿಯ ಗುಡಿಯೂ ಇದೆ. ದಿ॥ಗೋಸಾವಿಯವರು ತಮ್ಮ "ನನ್ನ ಹಿಮಾಲಯಾತ್ರೆ"ಯಲ್ಲಿ ಈ ಸಮಾಜ ಪದ್ಧತಿಯನ್ನು ವಿವರಿಸಿದ್ದಾರೆ. ಇಲ್ಲಿಯ ಗುಡ್ಡಗಳ ಮೇಲೆ ಮತ್ತು ಇದ್ದುಬಿದ್ದ ತಪ್ಪಲಿನಲ್ಲಿ ಒಂದೊಂದು ಬೌದ್ಧ ಕುಟುಂಬವು ನೆಲಸಿರುತ್ತದೆ. ಇವರಲ್ಲಿ ಒಬ್ಬ ಮಗನನ್ನು ಬೌದ್ಧ ಮಠಕ್ಕೆ ಮರಿ ಬಿಟ್ಟು ಉಳಿದವರು ಒಬ್ಬಳನ್ನೇ ಇಂದಿಗೂ ಮದುವೆಯಾಗುತ್ತಾರೆ. ಇದಕ್ಕೆಲ್ಲ ಅಲ್ಲಿಯ ಆರ್ಥಿಕ ಅನಾನುಕೂಲ ಪರಿಸ್ಥಿತಿಯೇ ಕಾರಣವೆಂಬುದು ಸ್ಪಷ್ಟವಿದೆ.

ಮಹಾಭಾರತದಲ್ಲಿ ವ್ಯಾಸರ ಕೈವಾಡ : ಮಹಾಭಾರತದಲ್ಲಿ ಪ್ರಮುಖ ಕುಟುಂಬಗಳಾದ ಕೌರವರು ಮತ್ತು ಪಾಂಡವರು ಒಂದೇ ಮನೆತನದವರು. ಕಕ್ಕನ ಮಕ್ಕಳೆಂದು ವ್ಯಾಸರು ಎರಡೂ ಮನೆತನಗಳನ್ನು ಕೂಡಿಸಿ ಬೆಸುಗೆಹಾಕಿದ್ದನ್ನು ಬಲ್ಲವರು ಕಾಣಬಹುದು. ಇಂದಿನ ಯುಗದಲ್ಲಿ ಎಲ್ಲಿಯೋ ಒಂದು ಅಂತರ್ಜಾತೀಯ ಮದುವೆಯಾಗುವುದು ಸರಕಾರದ ಹಣದ ಬಲದಿಂದ. ಧರ್ಮದ ಕಟ್ಟಳೆ, ಬಿಗಿತ ಕಡೆಯಾಗುವ ಕಾಲದಲ್ಲಿ ಔಷಧಕ್ಕೊಂದು ಮದುವೆ. ಆದರೆ ಆಗಂತೂ ಕ್ಷತ್ರಿಯರೇ ಮೇಲುಗೈಯಾದ್ದರಿಂದ ಅಂತರ್ಜಾತೀಯತೆಯನ್ನು ಪುರಸ್ಕರಿಸುತ್ತಿರಲಿಲ್ಲ. ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಪಾಂಡವರು ಕೌರವರ ಸಂಬಂಧಿಗಳಾಗಿದ್ದರೆಂದು ವ್ಯಾಸರು ಅಭಿಮಾನದಿಂದ ಹೇಳಿದ್ದಾರೆ. ಪಾಂಡವರ ಕೌರವರ ಅಜ್ಜಂದಿರು ವ್ಯಾಸರು. ಬೇರೆ ಹೇಳಬೇಕೇನು ?

ಪಾಂಡವರ ಪ್ರತಿಷ್ಠೆ ಬೆಳೆಸಲು ವ್ಯಾಸರು ಪಾಂಡವರು ದೇವರ ವರದಿಂದ ಹುಟ್ಟಿದವರೆಂದೂ ಕೌರವರು ಮಾನವಕುಲದವರೆಂದು ಸಾಧಿಸಲು ಪಾಂಡು ಕುಂತಿ

ಯರನ್ನು ಕೂಡವಂತೆಮಾಡಿ(ಸಾಮಾಜಿಕ ಅನ್ಯಾಯ)ಪಾಂಡುವು ಕ್ಷಯದಿಂದ ಸಾಯು ವಂತೆ ಮಾಡುವ ಹವಣಿಕೆ ಆಚ್ಚರಿಯದಾಗಿದೆ ಋಷಿಯ ಶಾಪ ಬೇರೆ ಅದಕ್ಕೆ ಬೆಂಬಲ.

ಪಾಂಡವರು ತಮ್ಮ ಆಳಿಕೆ ಮುಗಿಯುವಾಗ ತಮ್ಮ ಮರಿಮಗನಾದ ಜನಮೇಜಯನಿಗೆ ಪಟ್ಟಗಟ್ಟಿ (ಕ್ರಿ. ಪೂ. ೩೧೦೦) ಸ್ವರ್ಗಾರೋಹಣ ಮಾಡಿ ಹಾದಿಯಲ್ಲಿ ಒಬ್ಬೊಬ್ಬರೆ ಸತ್ತರೆಂದು ಇದೊಂದು ಕಣ್ಣುಮುಚ್ಚಣಿಕೆಯಾಟ. ಆಗಿನ ಜನರು ಜೀವಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುವ ಪರಂಪರೆಯಿದ್ದಂತೆ ತೋರುತ್ತದೆ. ಇದೇ ಪರಂಪರೆಯನ್ನು ಯುವೆನ್‌ಚ್ವಾ ಎಂಬ ಚೀನದ ಯಾತ್ರಿ ತನ್ನ ಪ್ರವಾಸ ವರ್ಣನೆಯಲ್ಲಿ ಹೇಳುತ್ತಾನೆ ೬೨೦. ಇವನು ಗಂಗಾತೀರಕ್ಕೆ ಬಂದಾಗ ಒಂದು ಆಲದ ಗಿಡದ ಬುಡದಲ್ಲಿ ಎಲುವಿನ ದೊಡ್ಡ ರಾಸಿಯನ್ನು ಕಂಡು ಜನರನ್ನು ವಿಚಾರಿಸಿದನು. ಆಗ ಅವರು ಈ ಪರಂಪರೆಯೇ ಕಾರಣವೆಂದು ತಿಳಿಸುತ್ತಾರೆ.

ಇನ್ನು ಪಾಂಡವರು ಮಾತೃಪದ ಪದ್ಧತಿಯವರೆಂಬುದಕ್ಕೆ ಗೀತೆಯ ಆಧಾರ ಗಳನ್ನು ಈಕೆಳಗೆ ತೋರಿಸಿದ್ದೇನೆ.

ಕೌರವರು

೧	ಧೃತರಾಷ್ಟ್ರ ೧/೩		(೧)
೨	ಧಾರ್ತರಾಷ್ಟ್ರಾಃ ೨/೬	ಕೌರವರು	(೧)
೩	ಧಾರ್ತರಾಷ್ಟ್ರಾನ್ ೧/೨೦೨೩ ೩೬.೩೯		(೬)
೪	ಧಾರ್ತರಾಷ್ಟ್ರಾಣಾಮ್ ೧/೧೯		

ಪಾಂಡುವಿನಮನೆತನ

೧	ಪಾಂಡವಾನಾಮ್ ೧೦/೩೭		
೨	ಪಾಂಡವಾಃ ೧/೧	ಪಾಂಡವರು	(೪)
೩	ಪಾಂಡುಪುತ್ರಾಣಾಂ ೧/೩		
೪	ಪಾಡವಾನಿಕ್ರಮ್ ೧/೨		

ಅರ್ಜುನ

೧	ಪಾಂಡವ ೪/೩೫ ೬/೨ ೧೧/೫೫. ೧೪/೨೨ ೧೬/೫	(೫)
೨	ಪಾಂಡವಃ ೧/೧೪.೨೦. ೧೧/೧೩	(೨)
೩	ಅರ್ಜುನ ೨/೨೪೫ ೩/೭ ೪/೫೯.೩೭೬/೧೬.೩೨ ೪೬ ೭/೧೬. ೮/೧೬ ೨೭ ೯/೧೯ ೧೦/೩೭ ೩೯.೪೭ ೧೧/೪೭ ೫೪, ೧೪/೯. ೩೪ ೬೦	(೨೯)
೪	ಅರ್ಜುನಮ್ ೧೧/೫೦	
೫	ಅರ್ಜುನಃ ೧/೪೭	(೪)
೬	ಕೇಶವಾರ್ಜುನಯೋಃ ೧೮/೭೬	
೭	ಭೀಮಾರ್ಜುನ ಸಮಾಃ ೧/೪	(೪೦)

ತಾಯಿಯ ಹೆಸರಿನಿಂದ ಕೀರ್ತಿಪಡೆದ ಅರ್ಜುನನ ಹೆಸರು :

೧ ಪಾರ್ಥ (ಪೃಥಾಯಾಃ ಅಪತ್ಯ ಪುಮಾನ್ ಪಾರ್ಥಃ–ಕುಂತಿಯ ಹೆಸರು ಪೃಥಾ)
೧/೨೫. ೨/೩. ೩೨. ೩೯. ೪೨. ೫೫. ೭೨. ೩/೧೬. ೨೨ ೨೩. ೪/೧೧ ೩೩. ೬/೪೦ ೭/೧. ೧೦. ೮/೮. ೧೪. ೧೯. ೨೨. ೨೭. ೯/೧೩. ೩೨ ೧೦/೨೪. ೧೧/೫ ೧೨/೭ ೧೬/೪.೬ ೧೭/೨೬. ೨೮ ೧೮/೬ ೩೦. ೩೧ ೩೨. ೩೩. ೩೪. ೩೫. ೭೨. (೩೮)

೨ ಪಾರ್ಥಃ ೧/೨೬ ೧೮/೭೮ (೨)

೩ ಪಾರ್ಥಸ್ಯ ೧೮/೭೪ (೧)

೪ ಪಾರ್ಥಾಯ ೧೧/೯ (೧)

೨ ಕೌಂತೇಯ (ಕುಂತಿಯ ಮಗ. ಕುಂತ್ಯಾಃ ಅಪತ್ಯಂ ಪುಮಾನ್ ಕೌಂತೇಯಃ)
೨/೧೪. ೩೭. ೬೦. ೩/೯ ೩೯. ೫/೨೨ ೬/೩೫ ೭/೮ ೮/೬ ೧೬. ೧೭. ೯/೭ ೧೦ ೨೩ ೨೭ ೩೧. ೧೩/೧. ೩೧. ೧೪/೪. ೭. ೧೬/೨೦. ೨೨. ೧೮/೪೮. ೫೦. ೬೦. (೨೫)

೩ ಕೌಂತೇಯಃ ೧/೨೭ (೧)

(೬೮)

ನಕುಲಸಹದೇವರು ಇತ್ಯಾದಿ :

೧ (ನಕುಲಸಹದೇವರಿಗೆ ಮಾದ್ರೇಯರೆಂಬ ಹೆಸರಿದೆ. ಆಪ್ಟೇ ಸಂಸ್ಕೃತ ಕೋಶ ಪು. ೭೫೫—).

೨ ಪಂಚಪಾಂಡವರು—ದ್ರೌಪದೇಯರು (ದ್ರೌಪದಿಮಕ್ಕಳು)

೩ ಕರ್ಣ = ರಾಧೇಯ

೪ ಗರುಡ = ವೈನತೇಯ

ಗೀತೆಯ ನಾಯಕನು ಅರ್ಜುನ. ಆವನ ಮುಖಾಂತರ ಭಾರತದೇಶಕ್ಕೆ ತನ್ನ ಸಂದೇಶವನ್ನು ಕೃಷ್ಣನು ಸಾರಿದ್ದಾನೆ. ಅರ್ಜುನನು ನಾಯಕನಾದ್ದರಿಂದ ಆವನನ್ನು ಹೆಸರುಗೊಂಡು ಕರೆಯಲೇ ಬೇಕಾಗುತ್ತದೆ. ಈ ದೃಷ್ಟಿಯಿಂದ ಅಂಕೆಸಂಖ್ಯೆ ಪರೀಕ್ಷಿಸಿದಾಗ ಅರ್ಜುನನ ಮಾತೃಪದ ಪದ್ಧತಿಯ ಹೆಸರುಗಳು ಉಳಿದವುಗಳಿಗಿಂತ ಹೆಚ್ಚಾಗಿವೆ. ಇದೇ ಆಧಾರವಾಗಲಾರದೆಂದು ವಾದಿಸಿದರೆ ಅರ್ಜುನನಿಗೆ ಇನ್ನೂ ಎಂಟು ಹೆಸರುಗಳಿವೆ ಅವನ್ನೆಲ್ಲ ಬಿಟ್ಟು ಕೃಷ್ಣನಿಗೆ ಅರ್ಜುನನ ಮಾತೃಪದ್ಧ ಪದ್ಧತಿಯ ಹೆಸರೇಕೆ ಬೇಕಾದುವು? ಕೃಷ್ಣನು ಅರ್ಜುನನ ಸೋದರಮಾವನ ಮಗ (ವಸುದೇವ ಕುಂತಿಯ ಅಣ್ಣ) ಕೃಷ್ಣನು ಅರ್ಜುನನ ಸೋದರತ್ತೆಯ ಮಗ. (ವಸುದೇವನತಂಗಿ ಕುಂತಿ)

ಅಂತೆಯೇ ಈ ಹೆಸರುಗಳನ್ನು ಬಳಸಿದನೇ? ಇರಬಹುದು. ಇಡಿಯ ಮಹಾಭಾರತದಲ್ಲಿ (ದ್ರೌಪದಿಸ್ವಯಂವರದಿಂದ ಕೊನೆಯವರೆಗೆ) ಅರ್ಜುನನ ಶೌರ್ಯ ಧೈರ್ಯಗಳ ವರ್ಣನೆ ಉಳಿದವರೆಲ್ಲ ಪಾತ್ರಗಳ ಗುಣಗಳನ್ನು ಮುಸುಕಿಸಿದೆ. ವ್ಯಾಸರು ಕೃಷ್ಣಭಕ್ತರು. ಆದ್ದರಿಂದ ಈ ರೀತಿಯನ್ನು ಮಾಡಿದರೆಂಬುದು ಮೇಲೆಯೇ ಇದೆ. ಕೊನೆಗೆ ಸಮಾಜವನ್ನು ಹೀಗಳೆಯದೆ ಅರ್ಜುನನನ್ನು ಬಿಟ್ಟು ಯುಧಿಷ್ಠಿರನಿಗೆ ಪಟ್ಟ ಕಟ್ಟಬೇಕಾಯಿತು. ಈ ಅರ್ಜುನನ ಮಹಾತ್ಮ್ಯದ ಪರಂಪರೆಯೇ ನಮ್ಮ ಆದಿ ಕವಿ ಪಂಪನಿಗೆ ಸ್ಫೂರ್ತಿನೀಡಿ ಅರ್ಜುನನಿಗೆ ಪಟ್ಟಗಟ್ಟಿಸುವಂತೆ ಮಾಡಿತು. ಈ ಪರಂಪರೆಯನ್ನು ಮರೆತು ಪಂಪನಮೇಲೆ ಟೀಕೆ ಮಾಡಿದವರು ಈ ಪರಂಪರೆಯನ್ನು ಮರೆತಂತೆ ಕಾಣುತ್ತಿದೆ.

● ●

ಈಡಿನ ಹಬ್ಬ - ಒಂದು ಆಚರಣೆ

ಜಿ. ಆರ್. ತಿಪ್ಪೇಸ್ವಾಮಿ

ಸಾಹಿತ್ಯ ಒಬ್ಬ ವ್ಯಕ್ತಿಯ–ಒಂದು ಜನಾಂಗದ–ಒಂದು ರಾಷ್ಟ್ರದ ಆಸೆ ಆಕಾಂಕ್ಷೆ ಆದರ್ಶಗಳನ್ನು ಎಷ್ಟರ ಮಟ್ಟಿಗೆ ಪ್ರತಿಬಿಂಬಿಸುತ್ತದೋ ಜನಜೀವನದೊಂದಿಗೆ ಬೆಸೆದುಕೊಂಡು ಬಂದಿರುವ ತೇರು, ಜಾತ್ರೆ, ಹಬ್ಬ ಹುಣ್ಣಿಮೆ ಮುಂತಾದ ಧಾರ್ಮಿಕೋತ್ಸವಗಳು ಕೂಡ ಬಹು ಸುಲಭವಾಗಿ ಪ್ರತಿಬಿಂಬಿಸುತ್ತವೆ. ಜನಪದರು ಸಾಮಾಜಿಕ ಜೀವನದೊಡನೆ ಜೀವನದ ಬೇಸರವನ್ನು ಆದಷ್ಟು ಕಡಿಮೆಮಾಡಿಕೊಳ್ಳಲು ಪರಮಾತ್ಮನಲ್ಲಿ ಆಗುಹೋಗುಗಳನ್ನು ತೋಡಿಕೊಳ್ಳುತ್ತಾರೆ. ಪ್ರಕೃತಿಯ ಅಣುರೇಣುಗಳಲ್ಲಿಯೂ ದೈವಶಕ್ತಿಯ ಸ್ವರೂಪವನ್ನು ಕಾಣುವುದು ಅವರ ಪುರಾತನ ಸಂಸ್ಕೃತಿಯ ಲಕ್ಷಣವಾಗಿರುವುದರಿಂದ ಜನಪದರು ಮೂಲಭೂತವಾಗಿ ಪ್ರಕೃತಿಯ ಆರಾಧಕರು. ತಮ್ಮ ಸರಳ ಜೀವನ ಸುಗಮವಾಗಿ ಸಾಗಲು ದೇವರ ಅನುಗ್ರಹಕ್ಕೋಸ್ಕರ ಜೀವನದ ಸ್ಥಿತಿಗತಿ, ಮಕ್ಕಳುಮರಿ, ದನಕರುಗಳ ಸ್ವಾಭಾವಿಕ ಪರಿಸ್ಥಿತಿ ಸುಧಾರಿಸಲಿ ಎಂದು ಪ್ರಾರ್ಥಿಸುವುದುಂಟು. ತಾವು ಕೈಕೊಂಡ ಯಾವುದೇ ಪ್ರಾರ್ಥನೆಗಳು ತಮ್ಮ ಕಾಯಕದ ಬಿತ್ತನೆಯ ಕಾಲದಿಂದ ಕೊಯ್ಲು ಕಾಲದವರೆಗಿನ ಸಮಯಾನುಸಾರಕ್ಕೆ ಹೊಂದಿಕೊಂಡಿರುತ್ತವೆ. ಅಂತಹ ಸಾಮಾನ್ಯ ನೆಲೆಗಟ್ಟಿನ ಪ್ರಕೃತಿ ತುಂಬಿ ತುಳುಕಿದ ಕಟಾವಣೆಯ ಕಾಲದ ಒಂದು ಪ್ರದೇಶದ ರೈತವರ್ಗ ಆಚರಿಸುವ ಆಚರಣೆಯೊಂದರ ಕಡೆ ಗಮನ ಹರಿಸುವುದೇ ಪ್ರಸ್ತುತ ಲೇಖನದ ಗುರಿ.

ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ನಿಡುಗಲ್ ಹೋಬಳಿಯ ಕೆಲವು ಭಾಗಗಳಲ್ಲಿ ರೈತ ವರ್ಗದವರೇ ಬಹುಪಾಲು. ಪಾಲ್ಗೊಂಡು ಕಾರ್ತೀಕಮಾಸದಲ್ಲಿ ಆಚರಿಸುವ ವಿಜೃಂಭಣೆಯ ಹಬ್ಬವೇ ಎತ್ತಿನ ಹಬ್ಬ. ಇದನ್ನು ಈಡಿನಹಬ್ಬವೆಂದೂ ತೆಲುಗಿನಲ್ಲಿ ಈಡ ಪಂಡಗೆಂದೂ ಕರೆಯುವುದುಂಟು. ರೈತವರ್ಗ ಆಚರಿಸುವ ದೀಪಾವಳಿಗೂ ಜನಪದದ ಎತ್ತಿನ ಹಬ್ಬಕ್ಕೂ ಆಚರಣೆಗಳಲ್ಲಿ ವೈವಿಧ್ಯತೆ ಇದೆ.

ಊರಿನ ದೊಡ್ಡ ಕುಳಗಳೆಲ್ಲ ಪಂಚಾಯಿತಿ ಕಟ್ಟೆಯ ಮೇಲೆ ಸೇರಿ (ಕಾರ್ತಿಕ ಮಾಸದಲ್ಲಿ) ಕಾರ್ತಿಕಮಾಸದ ಹುಣ್ಣಿಮೆಯಾದ ಎಷ್ಟನೇ ದಿವಸದಲ್ಲಿ ಹಬ್ಬ ಮಾಡಬೇಕು, ಹಬ್ಬದ ದಿನ ಗ್ರಾಮದೇವತೆಯ ಉತ್ಸವಮೂರ್ತಿಯನ್ನು ಹೊರಡಿಸಬೇಕೆ? ಅಥವಾ ಬೇಡವೆ? ಎಂಬಿತ್ಯಾದಿ ವಿಷಯಗಳನ್ನು ಚರ್ಚಿಸುವುದುಂಟು. ಪಂಚಾಯಿತಿ ಕಟ್ಟೆಯ ಮೇಲೆ ನಡೆದ ಖಚಿತವಾದ ಹಬ್ಬದ ವಿಷಯವನ್ನು ಊರವರಿಗೆಲ್ಲಾ ತಿಳಿಯುವಂತೆ ಮಾಡುವ ರೀತಿಯೂ ಒಂದು. ಯಾವುದೇ ಜನಾಂಗದ (ಹರಿಜನರನ್ನು ಬಿಟ್ಟು) ಒಬ್ಬ ವ್ಯಕ್ತಿಯಿಂದ ಸೂರ್ಯೋದಯವಾಗುವ ಮುಂಚೆಯೇ ತಂಗಟೆ ಹೂಗಳನ್ನು ತರುವಂತೆ ಹೇಳಿ ಅವುಗಳನ್ನು ತಂದಮೇಲೆ ಒಂದೆರಡು ಹೂವುಗಳನ್ನು ಪ್ರತಿ ಮನೆಯ ಛಾವಣಿ (ಹೆಂಚಿನ) ಮೇಲೂ ಎಸೆದು ಹಬ್ಬದ ದಿನವನ್ನು ತಿಳಿಸುವಂತೆ ಏರ್ಪಾಟು ಮಾಡುತ್ತಾರೆ. ಈ ಕ್ರಿಯೆಯನ್ನು 'ಹೂ ಚೆಲ್ಲುವುದು' ಎನ್ನುತ್ತಾರೆ. ಹೂ ಚೆಲ್ಲುವ ಕಾರ್ಯ ಮೂರು ದಿನ ಅಥವಾ ಐದುದಿನ ನಡೆಯುತ್ತದೆ. ಇದೇ ಹಬ್ಬದ ಪೂರ್ವಭಾವಿ ಪ್ರಥಮ ಹಂತ. ಈ ಕಾರ್ಯ ಮುಗಿದ ಮೇಲೆ ಹರಿಹರಬ್ರಹ್ಮ ಬಂದರೂ–ಸೂತಕಾದಿ ವಿಘ್ನಗಳು ಸಂಭವಿಸಿದರೂ ಹಬ್ಬವನ್ನು ಮುಂದೂಡುವ ಅಥವಾ ನಿಲ್ಲಿಸುವ ಹಕ್ಕು ಯಾರಿಗೂ ಇಲ್ಲ ಎನ್ನುವ ವಾಡಿಕೆ.

ಹೂ ಚೆಲ್ಲಿದ ಮೇಲೆ ಊರಿನ ಹುಡುಗರು ಅಂಟಿಪಿಂಟಿ ಹಾಡುವುದೂ, ಹುಡುಗಿಯರು ಬಸವಣ್ಣನನ್ನು ಆರಾಧಿಸುವುದೂ, ದನಗಾಹಿಗಳು ಕೂಡಾಕುವುದೂ ಮೊದಲಾದ ಕಾರ್ಯಕ್ರಮಗಳು ಹಬ್ಬ ನಾಳೆ ಎನ್ನುವ ತನಕ ನಡೆದು ಹಬ್ಬದದಿನ ಮುಕ್ತಾಯವಾಗುತ್ತವೆ.

ಅಂಟಿಪಿಂಟಿ ಎಂಬ ಹೆಸರಿನಲ್ಲಿ ನಡೆಯುವ ಇಲ್ಲಿನ ದೀಪದಾನ ಸಂಪ್ರದಾಯ ಹೂ ಚೆಲ್ಲಿದ ದಿನದಿಂದ ಹಬ್ಬ ನಾಳೆ ಎನ್ನುವ ತನಕ ರಾತ್ರಿಯವೇಳೆ ನಡೆಯುತ್ತದೆ. ಒಂದು ಬಗೆಯ ತೃಣ ವಿಶೇಷವನ್ನು ವೃತ್ತಾಕಾರವಾಗಿ ಸುತ್ತಿ ಆ ಸಿಂಬೆಯ ಮೇಲೆ ಹಸುವಿನ ಸಗಣಿಯಿಟ್ಟು, ಮೂರು ದಿಸೆಗಳ ಎಣ್ಣೆ ಹಾಕಿರುವ ಅರಿಸಿನ ಕುಂಕುಮಗಳಿಂದ ಅಲಂಕೃತವಾಗಿರುವ ಮಣ್ಣಿನ ದೀಪವನ್ನು ಸಗಣಿಯ ಮೇಲೆ ಇಟ್ಟು. ಈ ರೀತಿ ವ್ಯವಸ್ಥೆ ಮಾಡಿದ ದೀಪಸ್ತಂಭವನ್ನು ಒಬ್ಬ ಹಿಡಿದು (ದೀಪ ಕೆಳಗೆ ಬಿದ್ದರೆ ಅಪಶಕುನ ಎಂಬ ನಂಬಿಕೆಯಿಂದ ಎರಡೂ ಕೈಗಳಲ್ಲಿ ಭಯಭಕ್ತಿಯಿಂದ ಹಿಡಿದಿರುತ್ತಾನೆ) ದೊಡ್ಡ ಗುಂಪೊಂದನ್ನು ಹಿಂದಿಟ್ಟುಕೊಂಡು ಅತ ಮುಂದೆ ಮನೆ ಮನೆಗೂ ಹೋಗಿ ಒಬ್ಬ ಹೇಳಿದ್ದನ್ನು ಉಳಿದವರೆಲ್ಲ ಒಟ್ಟಿಗೆ ಹಾಡುತ್ತಾರೆ. ಆ ಹಾಡು ಈ ರೀತಿ ಇದೆ.

ಅಪ್ಪೂ ಅಲ್ಲಾಟೆ ಗ್ಯಾಡ್ರಿ ಬಲ್ಲಾಟೆ
ಆ ಮಾಸ್ಗಿನ್ನ ಈ ಮಾಸಾಸ್ತು

ನೆರ್ಮಣನಜ್ಜ ಅಲ್ಲುಜ್ಜು
ಅಲ್ಲುಗ್ಹೋಸು ಪಲ್ಲುಗ್ಳು
ಕೆನ್ನೆ ಸಂದೇಲ್ಲು ಬುರ್ಲು
ತುರುಬುಸಾಲ್ದು ಗುರ್ಟಾತ್ಳಿ ॥
ಲಕ್ಳಿಸೊಪ್ಪು ಲಕ್ಕವ್ವಗ್
ಅಂಗಾದ್ಬರ್ಟ್ಟು ಗಂಗವ್ವಗ್ ॥
ಬೆಟ್ಟದಾಮ್ರಗಳ್ಬೆಳ್ಳು
ಹತ್ತರ್ಕಬುರ್ಬಳ್ಳು
ಹಿಂದಿಂಡೆ ಪಡ್ಕಂಡು
ದಂಡ್ದಂಡೆ ಪಡ್ಕಂಡು
ಮದ್ಯಾನ್ಕೆ ಮುಕ್ರಂಬಿ
ಮಸೂರೋರ್ಕ್ಬಲ್ಕಂಬ
ಕಲ್ಕಂಬ್ದಾಗಳ್ತೀರು
ತೇರ್ಗೋದ ಸಿಕ್ಕ
ತ್ವಾಟ್ದಾಕ್ಬಂದ ಲಕ್ಕ ॥
ಖಂಡ್ಗದ್ಸರಿಯಂಬದ್ಲು
ಕೈತುಂಬ ಇಳೀವ್ತಂದ್ಲು
ಕೊಟ್ಟೇನವ್ತು ಒಂದ್ಮನ್ಸು
ಕೊಡ್ಲಾರೆವ್ತು ಒಂದ್ಮನ್ಸು ।
ಹಳದಗಳಾಪು ಕಾಟನಿಂಗನ್ನಾಕು
ಆಲ್ಕಯೋರ್ದ್ಯಾವೂರ್ಗಯ್ಯ
ಕಾಟನಿಂಗನಾಸಿವುಡ್ಗೆಯ್ಯ ॥

ಕಾರ್ತಿಕದ ಆರಂಭದಲ್ಲಿಯೇ ಊರ ಹೆಣ್ಣುಮಕ್ಕಳು ಮಣ್ಣನ್ನು ತಂದು ಶಾಸ್ತ್ರೋಕ್ತವಾಗಿ ಸುಮಾರು ಒಂದುವಾರದ ಮಟ್ಟಿಗೆ ಪೂಜಿಸಿ 'ಬಸವಣ್ಣನ ವಿಗ್ರಹ ಮಾಡಿ ಅಗಲವಾದ ಹಲಗೆಯ ಮೇಲೆ ಇಟ್ಟು ಮೇಲಕ್ಕೆ (ಜಂತೆಗೆ) ಕಟ್ಟುತ್ತಾರೆ ಅಥವಾ ಎತ್ತರವಾದ ಜಾಗಗಳಲ್ಲಿ ಇಟ್ಟು ತಾವು ಬೆಳೆದಿರುವ ಎಲ್ಲ ತರಕಾರಿಗಳನ್ನು ಅದಕ್ಕೆ ಕಟ್ಟುವದಲ್ಲದೆ ಜೋಳದತೆನೆ, ಚಂಡುಹೂ, ಹುಲ್ಲಿನ ನಾನಾ ಬಗೆಗಳನ್ನು ಹೆಣೆದು ಕೊರಳಿಗೆ ಹಾರ ಹಾಸುವುದರ ಮೂಲಕ ಶೃಂಗರಿಸುತ್ತಾರೆ. ಇವರಿಗೆ ದಿನಸಿತ್ಯವೂ ಕೈಗೆ ಸಿಗಬಹುದಾದಂತಹ ವಸ್ತುಗಳಿಂದ ಮಾತ್ರ ಪೂಜಿಸುತ್ತಾರೆ ವಿನಹ ಹೊಸತಾದದನ್ನ ಅಳವಡಿಸುವುದೇ ಇಲ್ಲ. ಹುಲ್ಲು ತರಕಾರಿ ಮುಂತಾದುವುಗಳಿಂದ ಶೃಂಗರಿಸುವುದನ್ನು ಕಂಡಾಗ ತಮಗೆ ಊಟಕ್ಕಿಲ್ಲದಿದ್ದರೂ ತನ್ನೊಡನೆ ವ್ಯವಸಾಯ

ದಲ್ಲಿ ಇಡೀ ವರ್ಷ ಎಣೆಗುವ ಬಸವಣ್ಣನಿಗೆ ಒಂದೊತ್ತಿರಿಸುವುದು ಜನಪದರಿಗೆ ಇಷ್ಟ ವಿಷ್ಟ. ಈ ಅಲಂಕಾರಗಳ ಸಂಭ್ರಮದಲ್ಲಿ ಇರುವಾಗ ಅಪರಿಚಿತರು ಊರೊಳಕ್ಕೆ ಬಂದ ಸುದ್ದಿ ತಿಳಿದಾಗ ಹುಡುಗಿಯರೆಲ್ಲರೂ ಅವನನ್ನು ತಡೆಹಾಕಿ ಮಂಗಳಾರತಿ ತಟ್ಟೆಗೆ ಏಟ್ಟುಬೀಳುವ ತನಕ ಅಯ್ಯೋ ಎಂದರೂ ಬಿಡದೆ ಎಳೆದಾಡುತ್ತಿರುತ್ತಾರೆ. ಅಷ್ಟೋ ಇಷ್ಟೋ ಕೊಟ್ಟು ಹೋದವನು ಬಹುದೂರ ಹೋದಮೇಲೆ 'ಅಲವಾದ್ರಿಗಿತ್ತೇರೆ ರಂಕ್ಸೂಳೇರೆ' ಎಂದು ಬೈಯುತ್ತಾನೆ. ಹೀಗೆ ಅಪರಿಚಿತರಿಂದ ಕೂಡಿಟ್ಟ ಹಣದಿಂದ ಒಡವೆಯನ್ನೂ ವಸ್ತ್ರವನ್ನೂ ಕೊಂಡು ಗ್ರಾಮದೇವತೆಗೆ ಶೃಂಗಾರ ಮಾಡುತ್ತಾರೆ. ಇಂತಹ ವ್ಯವಹಾರದ ಜೊತೆಯಲ್ಲಿಯೇ ಮನೆಮನೆಗೂ ಎತ್ತಿದ ಭತ್ತವನ್ನು ಒಂದೆಡೆ ಕೂಡಿಸಿ ಹಬ್ಬದ ಹಿಂದಿನ ದಿನವೇ ಅಡಿಗೆ ಮಾಡಿ ಬಸವಣ್ಣನಿಗೆ ಎಡೆಹಾಕಿ ಆನಂತರ ಬಂದವರಿಗೆಲ್ಲ ಉಣಬಡಿಸುತ್ತಾರೆ. ಇದನ್ನು 'ಬಾನ' (ಭೋಜನ–ಬೋನಾ–ಬಾನ) ಎಂದು ಕರೆಯುತ್ತಾರೆ.

ದನಗಾಹಿಗಳ ಕಾರ್ಯವೂ ಮುಖ್ಯವಾದ್ದೆ. ಇವರೂ ಕೂಡ ಹೂ ಚೆಲ್ಲಿದ ದಿನದಿಂದ ಹಿಡಿದು ಬಾನ ಮಾಡುವ ದಿನದವರೆಗೂ ಪ್ರತಿವರ್ಷ ಹಾಕುವ ಜಾಗ ದಲ್ಲಿಯೇ (ಬಹುಶಃ ಈಡು ಶಬ್ದಕ್ಕಿರುವ ಅರ್ಥ ಗುರಿ ಎನ್ನುವುದು ಈ ಸಂದರ್ಭಕ್ಕೆ ಹೊಂದಿಕೊಳ್ಳಬಹುದು) ಜಾಲಿ, ಬೇಲ, ರೋಜಿ, ಊಡಿಗೆ ಮುಂತಾದ ಹಲವು ಜಾತಿಯ ಜೇಲಿಯನ್ನು ಕಡಿದು ಕುಂಬಳಕಾಯನ್ನ (ಆಸರಕ್ಕೆ ಇಳಿತಗುಹಾಕಲು ಬಳಸುವ ಉಪಯುಕ್ತ ತರಕಾರಿ) ಮಧ್ಯೆ ಇಟ್ಟು ರಾಶಿ ಹಾಕಿರುತ್ತಾರೆ. ಈ ರಾಶಿ ಹಾಕುವಿಕೆಯನ್ನೇ 'ಈಡು' ಎಂದು ಕರೆಯುವರು. (ಒಂದೇ ಜಾಗದಲ್ಲಿ ಹಾಕುತ್ತ ಬಂದಿರುವುದರಿಂದ ಗುರಿ ಎನ್ನುವ ಅರ್ಥ ಹೊಂದಿಕೊಳ್ಳಬಲ್ಲದು).

ಸರ್ವೇ ಸಾಮಾನ್ಯವಾಗಿ ಹಬ್ಬದದಿನ ಸ್ನಾನಮಾಡಿ ಸ್ತ್ರೀಯರು ಮನೆಯಲ್ಲಿ ಅಡಿಗೆ ಮಾಡುವುದರಲ್ಲಿ ತೊಡಗಿದರೆ ಪುರುಷರು ತಮ್ಮ ದನಕರುಗಳೊಂದಿಗೆ ತಮ್ಮ ತಮ್ಮ ಹೊಲಗಳ ಹತ್ತಿರ ಹೋಗಿ ಚೆನ್ನಾಗಿ ಮೇಯಿಸಿ ಹತ್ತಿರದ ಹಳ್ಳಕೊಳ್ಳ ಕೆರೆಗಳಲ್ಲಿ ಮೈ ತೊಳೆದುಕೊಂಡು ಇಳುಹೊತ್ತಿಗೆ ಸರಿಯಾಗಿ ಜಾನುವಾರುಗಳ ಸಮೇತ ಮನೆಯನ್ನು ತಲುಪಿ ಅವುಗಳ ಕೊಂಬುಗಳನ್ನರದು ಬಣ್ಣ ಹಚ್ಚಿ, ಮೈಗೆ ಬಣ್ಣ ಬಣ್ಣದ ಜರತಾರೀ ಗೌಸು (ಜೂಲು) ಮತ್ತು ಸೀರೆಗಳನ್ನು ಹಾಕಿ, ಕೊಂಬಿಗೆ ಕಳಸ, ಪೀಪಿ, ಟೇಪುಕಟ್ಟಿ ಎರಡುಕೊಂಬುಗಳ ಮಧ್ಯೆಯೂ ವಿಳೆಯದೆಲೆಗಳನ್ನ ಪೋಣಿಸಿ (ದೇವರಿಗೆ 'ಎಲೆಪೂಜೆ' ಕಟ್ಟಿಸುವ ರೀತಿಯಲ್ಲಿ) ಕುಚ್ಚು, ಹೂವಿನಹಾರ, ಕಾಲಿಗೆ ಗೆಜ್ಜೆ, ಅನುಕೂಲವಾಗಿರುವ ಜನ ಒಡವೆಗಳನ್ನು ಹಾಕಿಯಮೇಲೆ ಮತ್ತು ಕಾಸಿನಸರವನ್ನ ಕೊಂಬುಗಳಿಗೆ ಸುತ್ತಿಕೊಂಡು ಮೇಳ, ಹರೆಡೋಲು, ತಮಟೆ ಮುಂತಾದ ಜನಪದವಾದ್ಯಗಳ ಸಮೇತ ಸಾಲಾಗಿ ಈಡಿನಹತ್ತಿರ ಹೋಗಿ ಗ್ರಾಮದೇವತೆಯ (ಉತ್ಸವಮೂರ್ತಿಯ) ಮುಂದೆ ವ್ಯವಸ್ಥಿತವಾಗಿ ತಮ್ಮ ದನ

ಕರುಗಳ ಸಹಿತ ನಿಲ್ಲುತ್ತಾರೆ. ಪಟಾಕಿ, ಬಿರುಸು, ಬಾಣಗಳ ಸಹಿತ ಹಾಕುವ ಕೇಕೆ—ಆ ಶೃಂಗಾರ ದೃಶ್ಯಗಳು ಒಮ್ಮೆ ನೋಡಬೇಕೆನಿಸುವ ಕುತೂಹಲವಾಗುತ್ತದೆ. ಅಲ್ಲಿನ ಪೂಜಾಕಾರ್ಯಗಳು ಮುಗಿದಮೇಲೆ ಗೊಲ್ಲರೇ ಮಾಡಿಕೊಂಡು ಬಂದಿದ್ದ ರಾಗಿಮುದ್ದೆಗಳನ್ನು (ಅಕ್ಕಿಬೆರಸದ) ದನಕರುಗಳ ಮಧ್ಯೆ ಒಂದಿಬ್ಬರು ಎಸೆದಾಡುತ್ತಾರೆ. ಇದನ್ನು 'ಮುದ್ದೆಗಳು ಎಸೆಯೋದು' ಎನ್ನುತ್ತಾರೆ. ಯಾಕೆ ಈ ರೀತಿ ಅಂತ ಪ್ರಶ್ನಿಸಿದಾಗ 'ಯಾವ ರೀತಿ ನಮ್ಮಕ್ಕಳಿಗೆ ಆಸ್ರಾಪಾಸ್ರಾ ಆದ್ರೆ ಮುಸ್ಸೆ ಇಳೀ ತಗ್ದಾಕ್ತೀಪಿ ಅಂಗೇನೆ ಇದೂನು ಎತ್ತುಗಳಿಗೆ ಕಾಯಿಲೆ ಕಸಾಲೆಗಳು ಬರ್ದಂಗಿರ್ಲಿ' ಅಂತ ಅವರು ಹೇಳಿದ್ದುಂಟು. ಇಂಥ ವಿಧಿಯುಕ್ತ ಕ್ರಮಗಳು ಮುಗಿದಾಗ ಊರ ಗೌಡ ಈಡಿ (ಬೇಲಿರಾಶಿ)ಗೆ ಬೆಂಕಿಹಚ್ಚಲು ಹರಿಜನರಲ್ಲಿ ಒಬ್ಬನಿಗೆ ಆಜ್ಞೆಮಾಡುತ್ತಾನೆ. ಅದಕ್ಕೆ ಹರಿಜನ ವ್ಯಕ್ತಿ ತನ್ನ ಸುಡಿಗೆಯಿಂದ ಬೆಂಕಿ ಮುಟ್ಟಿಸಿ ಅದು ಧಗಧಗನೆ ಉರಿಯುತ್ತಿರುವಾಗಲೇ ಜಾನುವಾರುಗಳ ಸಮೇತ ಪ್ರದಕ್ಷಿಣೆ ಹಾಕಿ ವಾಲಗ ಮಾಡಿಸಿಕೊಂಡು ಊರಿನ ಪ್ರಮುಖ ಜಾಗಗಳಲ್ಲಿ ಸ್ವಲ್ಪ ಹೊತ್ತು ನಿಲ್ಲಿಸಿ ನಂತರ ಸುಡಿಗೆಯ ಬೆಳಕಿನಲ್ಲಿ ವಾಲಗ ಮಾಡಿಸಿಕೊಂಡು ಪ್ರತಿ ಮನೆಯ ಎತ್ತುಗಳು ಮನೆಯ ಬಾಗಿಲಿಗೆ ಬರುತ್ತವೆ. ಬಾಗಿಲಿಗೆ ಬಂದತಕ್ಷಣ ಮನೆಯ ಹೆಣ್ಣುಮಕ್ಕಳು ಮಂಗಳಾರತಿ ಬೆಳಗಿ (ಬಸವಣ್ಣನಿಗೆ) ತಟ್ಟೆಗೆ ಬಸವಣ್ಣನನ್ನು ಹಿಡಿದಿರುವವನಿಂದ ಕಾಸು ಹಾಕಿಸಿಕೊಂಡು ಒಳಗೆ ಬಿಡಿಸಿಕೊಳ್ಳುತ್ತಾರೆ. (ಈಡಿಗೆ ಎತ್ತು ಹೋಗುವ ಮುಂಚೆಯೇ ಎತ್ತಿಗೆ ಎಡೆ ಹಾಕಿರುತ್ತಾರೆ.) ಒಟ್ಟಿನಲ್ಲಿ ಕರಡಿಯಂತಹ ದುಷ್ಟಪ್ರಾಣಿಗಳನ್ನು ಸುಡಿಗೆ ಹಚ್ಚುವುದರಿಂದ ಓಡಿಸುವಂತೇಯೇ ಇಲ್ಲಿ ಬೆಂಕಿ (ಈಡು) ಒಂದು ಶಕ್ತಿಯಾಗಿ. ಈ ಶಕ್ತಿಯ ಮೂಲಕ ಸಂಭವಿಸಿರುವ ಅಥವಾ ಸಂಭವಿಸಬಹುದಾದ ದುಷ್ಟಶಕ್ತಿಗಳನ್ನು ಪಾರು ಮಾಡುವ ಸನ್ಮಾರ್ಗವೇನಾದರೂ ಇದ್ದು ಆ ಮೂಲಕ ಜಾನುವಾರುಗಳನ್ನು ಆರೋಗ್ಯವಾಗಿಡುವುದಕ್ಕೆ ಆಚರಿಸುವ ಅನುಸರಿಸುವ ಕ್ರಮಗಳನ್ನು ಈಡು ಸುಡುವುದರಲ್ಲಿ ಕಂಡುಕೊಳ್ಳುವ ಸಾಧ್ಯತೆಗಳುಂಟು.

ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಕೆಲವು ಭಾಗಗಳಲ್ಲಿ 'ಕಾಟಮರಾಯನ ಹಬ್ಬ'ವೆಂದು ಆಚರಣೆಯಲ್ಲಿರುವ ಆಚರಣೆಗೂ ನಮ್ಮ ಈಡಿನ ಹಬ್ಬಕ್ಕೂ ಕೆಲವು ಸಾಮ್ಯಗಳುಂಟು. ಇಲ್ಲಿ ಹಿರಿಯರ ಆದೇಶದಂತೆ ಹಬ್ಬವಿನ್ನೂ ಒಂದುವಾರ ಇದ್ದಾಗಲೇ ಆ ಊರಿನ ಹುಡುಗರು ತೊಂಡೇಸೊಪ್ಪನ್ನು ಕಿತ್ತುತಂದು ಪ್ರತಿಯೊಂದು ಮನೆಯ ಮಾಳಿಗೆಯ ಮೇಲೆ ಎಸೆಯುತ್ತಾ 'ಕಾಟಂಗರಾಯನ ಹಾಡುಗಳನ್ನು ಹಾಡುತ್ತ ಸಾಗುತ್ತಾರೆ. ಹಬ್ಬ ನಾಳೆ ಇರುವಾಗ ಪ್ರತಿಮನೆಯಲ್ಲೂ ಎತ್ತಿದ ಅವರೆ, ಹುರಳಿ, ಅಲಸಂದೆ. ತೊಗರಿ ಮುಂತಾದ ಕಾಳುಗಳನ್ನು ಕಲ್ಲು ಮಣ್ಣು ಆರಿಸದೆ ಒಂದೆಡೆ ಬೇಯಿಸಿ ಜನಮನೆಗೆಲ್ಲಾ ಬಡಿಸುತ್ತಾರೆ. ಇದನ್ನು

'ಗುಗ್ರೀ ಬೇಯಿಸುವುದು' ಎನ್ನುವ ಪರಿಪಾಠ. ಇವುಗಳನ್ನು ತಿನ್ನುವಾಗ ಕಲ್ಲಿದೆ ಮಣ್ಣಿದೆ ಎಂದರೆ ಕಜ್ಜಿ ತುರಿ ಏಳುತ್ತವೆಂಬ ಭಯವುಂಟು. ಗುಗ್ರಿಹಬ್ಬ ಮುಗಿದ ಮೇಲೆ ಊರಹೊರಗೆ ಹಾಕಿರುವ ಬೇಲಿಯ ರಾಶಿಗೆ ಬೆಂಕಿ ಹಚ್ಚುವುದುಂಟು. ಕಾಟನು ರಾಯನಿಗೆ ಅದೇ ದಿನ ಕೋಳಿಕುರಿಗಳನ್ನು ಬಲಿ ಕೊಡುವ ಪದ್ಧತಿಯಿದೆ ಎಂದೂ ಹೇಳುತ್ತಾರೆ. ಒಟ್ಟಿನಲ್ಲಿ ಕಾಟಮರಾಯನ ಹಬ್ಬವೂ ಕೂಡ ಜಾನುವಾರುಗಳಿಗೆ ಕಾಯಿಲೆ ಕಸಾಲೆಗಳು ಬಾರದಿರಲೆಂದು ಆಚರಿಸುವ ಒಂದು ಆಚರಣೆ.

● ●

ಕೋರ್ಟಿನಲ್ಲಿ

ಶಿವರಾಮು ಕಾಡನಕುಪ್ಪೆ

ನಾನು
ಗೆಳೆಯರಿಬ್ಬರು ಕೂಡಿ
ಆದೆವು ಮೂರು ಮಂದಿ
ಲೋಕ ಸತ್ತಿದೆ ಅನ್ಯಾಯಗಳ
ಕಂತೆ ಕಂತೆ ಫೈಲುಗಳಲ್ಲಿ
ಎಂದು
ಹೋದೆವು ಕೋರ್ಟಿಗೆ.

ಸಿಗಲಿಲ್ಲ ಹುಡುಕಿದೆವು
ಬದುಕಿನ ನಿಗೂಢ ಸತ್ಯ ಅಸತ್ಯಗಳು
ಬದುಕಿನ ನಗ್ನ ಭಾಗದ ಕಸರತ್ತುಗಳು
ಆದ್ದರಿಂದ
ಸುಸ್ತಾಗಿ ಕಾಫಿಗೆಂದು ಕ್ಯಾಂಟಿನ್ನಿಗೆ
ನಡೆದಾಗ
ಲಾಯರುಗಳು ಜಡ್ಜಿಗಳು ಅಳಕು
ಮೋರೆಯ ಅಪರಾಧಿ ಪಿರ್ಯಾಧಿಗಳು
ಸುತ್ತ ನೆರೆದಾಗ
ಕಾಫಿ ಬಟ್ಟಲಲ್ಲಿ ರಕ್ತ ಕಂಡಿತ್ತು

"ಜೀವದಾನಿಸುವ ಹಕ್ಕಿಲ್ಲದ ಕೈಗೆ
ಜೀವ ತೆಗೆಯುವ ಹಕ್ಕಿಲ್ಲ."

ನ್ಯಾಯದೇವತೆಯ ಕರುಣಾರ್ದ್ರ
ದೃಷ್ಟಿ
ಗಾಗಿ ಲೋಕ ಬೇಡಿತ್ತು.

ಮಟ ಮಟ ಮಧ್ಯಾಹ್ನದ ಸುಡು
ಸುಡು ಬಿಸಿಲಲ್ಲಿ ಬೆವರ ಗಬ್ಬಿನಲ್ಲಿ
ವಾಕರಿಕೆಯ ತಂದಿತ್ತು
ದುರ್ವಾಸನೆ ಹೊತ್ತ
ಗಾಳಿ.

ನೋಡಿದೆ ;
ನ್ಯಾಯಾಲಯದಲ್ಲಿ ಕತ್ತೆಯೊಂದು ಸತ್ತು
ಬಿದ್ದಿತ್ತು,
ಕಾಕ ಬಳಗ ಅದರ ಮೇಲೆರಗಿ
ಮಾಂಸ ಕಿತ್ತು
ತಿನ್ನುತ್ತಿತ್ತು.

• •

ಇಮ್ಮಡಿ ಚಿಕ್ಕಭೂಪಾಲ ಮತ್ತು ಹರದನಹಳ್ಳಿ ಬಸವಲಿಂಗಸ್ವಾಮಿಗಳು

ಬಿ. ಆರ್. ಹಿರೇಮಠ

ಮಹಾನಾಡಪ್ರಭು ಕಂಠೀರವ, ಚಿಕ್ಕಪ್ಪಗೌಡ ಹಾಗೂ ಸೋಮಾಂಬೆಯರಿಗೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಆಶೀರ್ವಾದದಿಂದ ಹುಟ್ಟಿದ ಮಗ, ಇಮ್ಮಡಿ ಚಿಕ್ಕಭೂಪಾಲ[೧] ತಾನು ಸಿದ್ಧಲಿಂಗ ಶಿವಯೋಗಿಗಳ ಆಶೀರ್ವಾದ ಬಲದಿಂದ ಹುಟ್ಟಿದವನೆಂಬ ಕಾರಣದಿಂದ ಇಮ್ಮಡಿ ಚಿಕ್ಕಭೂಪಾಲನು ಶ್ರೀಗುರುವಿನಲ್ಲಿ ಅತ್ಯಂತ ಭಕ್ತಿಯುಳ್ಳವನಾಗಿದ್ದನು. ಶ್ರೀಗುರುವಿನ ಹೆಸರಿನಲ್ಲಿ ಸಿದ್ಧಾಪುರವೆಂಬ ಗ್ರಾಮವನ್ನು ಕಟ್ಟಿಸಿದ ಈತನು ಬಿಜ್ಜಾವರ ರಾಜಧಾನಿಯಿಂದ ರಾಜ್ಯಭಾರ ಮಾಡಿದನು.

ತೋಂಟದರಾಯ, ನಂಜೇಂದ್ರ, ಚೆನ್ನಪ್ಪಗೌಡರು ಮಹಾನಾಡಪ್ರಭು ಇಮ್ಮಡಿ ಚಿಕ್ಕಭೂಪಾಲನ ಮಕ್ಕಳು. ಕ್ರಿ.ಶ. ೧೫೫೪–೧೬೬೦ ಮಧ್ಯ ನಡೆದ ಹಲವು ಕಾಳಗದಲ್ಲಿ[೨] ಇಮ್ಮಡಿ ಚಿಕ್ಕಭೂಪಾಲ ಹಾಗೂ ಮಗ ತೋಂಟದರಾಯರು ಮರಣವನ್ನಪ್ಪಿದರು. ನಂತರ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯರಾದ ಬೋಳ ಬಸವೇಶ್ವರರು ಇಮ್ಮಡಿ ಚಿಕ್ಕಭೂಪಾಲನ ಎರಡನೆಯ ಮಗ ನಂಜೇಂದ್ರನಿಗೆ ಮಹಾನಾಡ ರಾಜ್ಯದ ಪಟ್ಟವನ್ನು ಕಟ್ಟಿದ ವಿಷಯ ತಿಳಿಯುತ್ತದೆ[೩]. ನಂಜೇಂದ್ರನು ಮುಂದೆ

---

೧ ಈತನ ಪಟ್ಟಮಹಿಷಿ ಚೆನ್ನಾಜಮ್ಮ.

೨ ಡಾ. ಎಂ. ಎಂ. ಕಲಬುರ್ಗಿ ಮತ್ತು ಬಿ. ಆರ್. ಹಿರೇಮಠ : ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ—ಪೀಠಿಕೆ, ಪುಟ : xiii.

೩ ಡಾ. ಎಂ. ಎಂ. ಕಲಬುರ್ಗಿ ಮತ್ತು ಬಿ. ಆರ್. ಹಿರೇಮಠ : ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ : ೧೭–೩೮.

ಮುಮ್ಮಡಿ ಚಿಕ್ಕಭೂಪಾಲನಾಗಿ ಬಿಜ್ಜಾವರ ರಾಜಧಾನಿಯಿಂದ ಆಳಿದನು. ಇದರಿಂದ ಬೋಳಬಸವೇಶ್ವರರು ಮುಮ್ಮಡಿ ಚಿಕ್ಕಭೂಪಾಲನ ಗುರುಗಳಾಗಿದ್ದರೆಂಬುದು ಸ್ಪಷ್ಟವಾಗುತ್ತದೆ.♥

ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಂಶೋದ್ಭವ(=ಶಿಷ್ಯ)ರಾದ ಹರದನಹಳ್ಳಿ ಗೋಚರ ಬಸವಲಿಂಗಸ್ವಾಮಿಗಳು ಮುಮ್ಮಡಿ ಚಿಕ್ಕಭೂಪಾಲನ ಎರಡನೆಯ ಗುರುಗಳಾಗಿದ್ದರೆಂಬ ಹೊಸಸಂಗತಿ ಬಿಜ್ಜಾವರದ ದಪಾಡದಯ್ಯನವರ ಮನೆಯಲ್ಲಿರುವ ಕಾಗದಪತ್ರದಿಂದ ವೇದ್ಯವಾಗುತ್ತದೆ.* ಈ ಮನೆತನದವರು, ತಾವು ಮುಮ್ಮಡಿ ಚಿಕ್ಕಭೂಪಾಲ ಮನೆತನದ ಗುರುಗಳೆಂದು ಹೇಳುವರು. ಮಹಾನಾಡಪ್ರಭುಗಳ ರಾಜಧಾನಿಯಲ್ಲಿಯೇ ಈ ಹಸ್ತಪ್ರತಿ ದೊರೆತಿರುವುದು ಹೆಚ್ಚು ಮಹತ್ವಪೂರ್ಣವೆನಿಸಿದೆ.

ಈ ಕಾಗದಪತ್ರ, ಹರದನಹಳ್ಳಿ ಗೋಚರ ಬಸವಲಿಂಗಸ್ವಾಮಿಗಳು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯ(=ವಂಶೋದ್ಭವ)ರೆಂಬ ಹೊಸ ವಿಷಯವನ್ನು ತಿಳಿಸಿಕೊಡುತ್ತದೆ. ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯಪರಂಪರೆಯಲ್ಲಿ ಈ ಹೆಸರನ್ನು ಯಾವ ಕೃತಿಗಳೂ ಹೇಳದಿರುವುದು ಆಶ್ಚರ್ಯ. ಸಿದ್ಧಲಿಂಗ ಶಿವಯೋಗಿಗಳ ಶಿಷ್ಯರಾದ ಬಸವಲಿಂಗಸ್ವಾಮಿಗಳನ್ನು ಮೊದಲಬಾರಿಗೆ ಹೆಸರಿಸುವ ಈ ಕಾಗದಪತ್ರಿಕೆಗೆ ವಿಶೇಷ ಮಹತ್ವ ಸಲ್ಲುತ್ತದೆ. ಇವರು ಬೋಳಬಸವೇಶ್ವರರ ತರುವಾಯ ಮಹಾನಾಡಪ್ರಭು ಮುಮ್ಮಡಿ ಚಿಕ್ಕಭೂಪಾಲನ ಗುರುಗಳಾಗಿದ್ದರು. ಬೋಳಬಸವೇಶ್ವರರ ನಂತರ ಬಂದ ಬಸವಲಿಂಗಸ್ವಾಮಿಗಳು ಬಿಜ್ಜಾವರದಲ್ಲಿ ನಿಂತು ವೀರಶೈವದ ಚಟುವಟಿಕೆಗಳನ್ನು ತೀವ್ರಗೊಳಿಸಲು ಹೆಚ್ಚು ಅನುಕೂಲವಾಯಿತು. ಮಹಾನಾಡಪ್ರಭುಗಳ ಆಶ್ರಯ ವೀರಶೈವಕ್ಕೆ ವರವಾಗಿ ಪರಿಣಮಿಸಿತು.

ಬಿಜ್ಜಾವರದ ದಪಾಡದಯ್ಯನವರ ಮನೆಯಲ್ಲಿರುವ ಕಾಗದಪತ್ರವು ಆದಿಯಲ್ಲಿ ಹೀಗಿದೆ: "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷಂಗಳು...ತಾರಣ ಸಂವತ್ಸರದ ಮಾರ್ಗಶಿರ ಶುದ್ಧ ೫ ಸ್ಥಿರವಾರದಲ್ಲು ಶ್ರೀಮತ್ತೋಂಟದ ಸಿದ್ಧಲಿಂಗ ಸ್ವಾಮಿಯವರ ವಂಶೋದ್ಭವರಾದಂಥ ಶ್ರೀ ಬಸವಲಿಂಗಸ್ವಾಮಿಯವರಿಗೆ ಮುಮ್ಮಡಿ ಚಿಕ್ಕಣ್ಣಗೌಡರ ಶಿಷ್ಯರ ವಂಶಾವಳಿಯೊಳಗೊಂದರೆ ಹರದನಹಳ್ಳಿ ಬಸವಲಿಂಗದೇವರು

♥ ಕ್ರಿ. ಶ. ೧೫೯೪–೧೬೦೦ ರಿಂದ ಕ್ರಿ. ಶ. ೧೬೪೫ ರ ವರೆಗೆ ಮುಮ್ಮಡಿ ಚಿಕ್ಕಭೂಪಾಲನ ಗುರುವಾಗಿದ್ದರು.

* ೧೨-೫-೧೯೭೭ ರಿಂದ ೧೬-೮-೧೯೭೭ ರ ವರೆಗೆ ಮಧುಗಿರಿ, ಸಿದ್ದಾಪುರ, ಬಿಜ್ಜಾವರ ಮೊದಲಾದ ಪ್ರದೇಶದಲ್ಲಿ ಹಸ್ತಪ್ರತಿ ಹಾಗೂ ಶಾಸನಗಳ ಸರ್ವೇಕ್ಷಣಾಕಾರ್ಯವನ್ನು ಕೈಕೊಂಡಾಗ ಲಭಿಸಿದ ಹಸ್ತಪ್ರತಿ.

ಬಿಜಾಪಟ್ಟಣಕ್ಕೆ ಬಂದದ್ದು."[೬] ಇಲ್ಲಿ ಬರುವ 'ತಾರಣ ಸಂವತ್ಸರದ ಮಾರ್ಗಶಿರ ಶುದ್ಧ ೫ ಸ್ಥಿರವಾರ', ಕ್ರಿ. ಶ. ೧೬೪೫ ಕ್ಕೆ ಸಮಾನವಾಗಿದೆ. ಇದು ಮುಮ್ಮಡಿ ಚಿಕ್ಕ ಭೂಪಾಲನ ಆಳಿಕೆಯ ಕಾಲವೂ ಹೌದು. ಹೀಗಾಗಿ ಹರದನಹಳ್ಳಿ ಬಸವಲಿಂಗ ಸ್ವಾಮಿಗಳು ಕ್ರಿ. ಶ. ೧೬೪೫ ರಲ್ಲಿ ಮುಮ್ಮಡಿ ಚಿಕ್ಕಭೂಪಾಲನ ಗುರುಗಳಾಗಿದ್ದ ರೆಂಬುದು ಖಚಿತಗೊಳ್ಳುತ್ತದೆ.

ಸಿದ್ಧಲಿಂಗ ಶಿವಯೋಗಿಗಳ ಶಿಷ್ಯರಾದ ಹರದನಹಳ್ಳಿ ಗೋಚರ ಬಸವಲಿಂಗ ಸ್ವಾಮಿಗಳ ವಿಷಯವಾಗಿ ತಿಳಿದುಬರುವ ಅಂಶಗಳು ಹೀಗಿವೆ :

೧. ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯ (=ವಂಶೋದ್ಭವ)ರಾದ ಹರದನಹಳ್ಳಿ ಗೋಚರ ಬಸವಲಿಂಗ ಸ್ವಾಮಿಗಳು ಸಂಚಾರ ಕೈಕೊಂಡು ಬಿಜ್ಜಾವರ ಪಟ್ಟಣಕ್ಕೆ ಬಂದು(ಕ್ರಿ. ಶ. ೧೬೪೫), ಕೆರೆಯ ದಂಡೆಯ ಮೇಲಿರುವ ಬೊಮ್ಮಪ್ಪ ದೇವರಿರುವ ಸ್ಥಳದಲ್ಲಿ ಶಿವಪೂಜಾ ನಿರತರಾದರು. ೮–೧೦ ದಿವಸಗಳ ತರುವಾಯ ಬೊಮ್ಮಪ್ಪನು ಪ್ರತ್ಯಕ್ಷನಾಗಿ ಬಿಜ್ಜಾವರ ಪಟ್ಟಣಕ್ಕೆ ಹೋಗಲು ಬಸವಲಿಂಗಸ್ವಾಮಿ ಗಳಿಗೆ ವರವನ್ನು ಕರುಣಿಸಿದ. ಸ್ವಾಮಿಗಳು ಬಿಜ್ಜಾವರದ ವೀರಭದ್ರದೇವಾಲಯಕ್ಕೆ ಆಗಮಿಸಿದರು. ವೀರಭದ್ರದೇವರ ಪೂಜಾರಿ ಸ್ಥಾನಿಕ ನಂಜಪ್ಪನು ಕಾವಿಬಟ್ಟೆ, ಕಮಂಡಲ, ರುದ್ರಾಕ್ಷಿ, ವಿಭೂತಿ ಭೂಷಿತ ಬಸವಲಿಂಗಸ್ವಾಮಿಗಳನ್ನು ಕಂಡು, ಮುಮ್ಮಡಿ ಚಿಕ್ಕಭೂಪಾಲನಿಗೆ ತಿಳಿಸಿದನು. ಆಮೇಲೆ ಗುರುಗಳನ್ನು ಚಿಕ್ಕಪ್ಪ ಗೌಡರು ಅರಮನೆಗೆ ಕರೆಸಿಕೊಂಡರು. ವೀರಭದ್ರದೇವಾಲಯದಲ್ಲಿದ್ದ ಬಸವಲಿಂಗ ಸ್ವಾಮಿಗಳಿಗೆ ಅರಮನೆಯಿಂದ ಎರಡು ಹೊತ್ತು ಎಡೆ ಒಯ್ಯುತ್ತಿದ್ದನು. ಒಂದು ದಿನ ಗುರುಗಳು ವೀರಭದ್ರದೇವರ ಮೂಗು ಕೊಯ್ದು ಹೊರಟುಹೋದರು. ಒಂದು ಮಗುವಿನ ಮೈಯಲ್ಲಿ ವೀರಭದ್ರದೇವನು ಪ್ರತ್ಯಕ್ಷನಾಗಿ, ಬಸವಲಿಂಗಸ್ವಾಮಿಗಳು ಹರಿಹರೇಶ್ವರದೇವಸ್ಥಾನದ ಹುಲಿಚಲುಮೆಯಲ್ಲಿ ಶಿವಪೂಜೆ ಮಾಡುತ್ತಿದ್ದಾರೆಂದು ಹೇಳಿದನು. ಅರಸನು ನಾಲ್ಕುಜನರೊಂದಿಗೆ ಹರಿಹರದೇವಸ್ಥಾನಕ್ಕೆ ಹೋಗಿ, ಶಿವಪೂಜಾ ನಿರತರಾದ ಸ್ವಾಮಿಗಳನ್ನು ಕಂಡು, ಭಕ್ತಿಯಿಂದ ನಮಸ್ಕರಿಸಿದನು. ಆಮೇಲೆ ಗುರು ಗಳನ್ನು ಪಾಲಿಕೆ(ಪಲ್ಲಕ್ಕಿ)ಯಲ್ಲಿ ಕುಳ್ಳಿರಿಸಿಕೊಂಡು ಬಿಜ್ಜಾವರಕ್ಕೆ ಬಂದನು. ಅರಸನು ಅವರಿಗೆ ೫೦ ಅಂಕಣದ ಮಠ ಕಟ್ಟಿಸಿ, ಗುರುವಡೇರಹಳ್ಳಿ, ಆದಮ್ಮನ ಬೀಳು ಜಹಗೀರಾಗಿ ನೀಡಿದನು. ಅರಸನು ಜಹಗೀರಾಗಿ ನೀಡಿದ ಗುರುವಡೇರಹಳ್ಳಿ ಹಾಗೂ ಆದಮ್ಮನ ಬೀಳು ಇದೇ ಹೆಸರಿನಲ್ಲಿ ಬಿಜ್ಜಾವರದ ಹತ್ತಿರವಿರುತ್ತವೆ. ಆದರೆ ೫೦ ಅಂಕಣದ ಮಠ ಮಾತ್ರ ಕಂಡುಬರುವುದಿಲ್ಲ. ಮುಮ್ಮಡಿ ಚಿಕ್ಕಭೂಪಾಲ

---

೬ ಅಂತ್ಯದಲ್ಲಿ "ಶ್ರೀತೋಂಟದ ಸಿದ್ಧಲಿಂಗ ಸ್ವಾಮಿಯವರ ವಂಶೋದ್ಭವರಾದಂಥ ಹರದನ ಹಳ್ಳಿ ಬಸವಲಿಂಗಸ್ವಾಮಿ ಗುರುಗಳಿಗೆ ಮುಮ್ಮಡಿ ಚಿಕ್ಕಪ್ಪ ದೊರೆಗಳು ಕೊಟ್ಟ ವಂಶಾ ವಳಿ" ಎಂದಿದೆ.

ಮೊದಲಾದವರು ಮುಂದಿನ ತಮ್ಮ ವಂಶಜರಿಗೆ ಇವರೇ ಗುರುಗಳೆಂದು ಒಪ್ಪಿಕೊಂಡರು ಬಸವಲಿಂಗಸ್ವಾಮಿಗಳು, ಅರಮನೆಯಲ್ಲಿ ಪೂಜಿತರಾಗಿ "ಗುರುಗಳೇ ದೊರೆಗಳಾಗಿ ಆಳಿದರು."

೨. ಮುಮ್ಮಡಿ ಚಿಕ್ಕಭೂಪಾಲನಿಗೆ ಶಾಂತಮ್ಮ ಎನ್ನುವವಳು ಮಗಳಿದ್ದಳೆಂಬ ಹೊಸ ವಿಷಯವನ್ನು ಬಿಜ್ಜಾವರದ ಹಸ್ತಪ್ರತಿ ಒದಗಿಸಿಕೊಡುತ್ತದೆ. ಕ್ರಿ.ಶ ೧೬೬೨ರ ಒಂದು ಶಾಸನ[೭] ಮುಮ್ಮಡಿ ಚಿಕ್ಕಪ್ಪಗೌಡನು ಕರಿಯಪಗೌಡನಿಗೆ ಮಗಳನ್ನು ಕೊಟ್ಟು, ಕರಿಕೆರೆ ಗ್ರಾಮವನ್ನು ಉಂಬಳಿಯಾಗಿ ನೀಡಿದನೆಂದು ತಿಳಿಸುವುದು. ಈ ಹಸ್ತಪ್ರತಿ ಉಲ್ಲೇಖಿಸುವ ಶಾಂತಮ್ಮನೇ (ಮುಮ್ಮಡಿ ಚಿಕ್ಕಭೂಪಾಲನ ಮಗಳು) ಕರಿಯಪಗೌಡನ ಹೆಂಡತಿಯಾಗಿರುವಂತೆ ಕಾಣುತ್ತದೆ.

ಒಂದುದಿನ ಗುರುಗಳು ಹಾಗೂ ಮುಮ್ಮಡಿ ಚಿಕ್ಕಪ್ಪಗೌಡರು ಮಧುಗಿರಿಗೆ ಹೋದರು. ಆಗ ಬಿಜ್ಜಾವರದಲ್ಲಿ ಗೌಡರ ಮಗಳಾದ ಶಾಂತಮ್ಮ ಅಗ್ನಿಕುಂಡ ತಯಾರಿಸಿದಳು. ಆ ಸಮಯದಲ್ಲಿ "ನಮ್ಮ ತಂದೆಗಳ ವಂಶಸ್ಥರಾದವರಿಗೆ ಈ ತ್ವಾಂಟದ ಸಿದ್ಧಲಿಂಗಸ್ವಾಮಿಯವರ ವಂಶಸ್ಥರಾದವರೆ ಗುರುಗಳು. ಇದಕ್ಕೆ ಯಾರಾದರು ಗುರುವುಗಳು ಅಲ್ಲ" ಎಂದು ಶಾಂತಮ್ಮ ಹೇಳಿದಳು. ಅಗ್ನಿಕುಂಡದಲ್ಲಿ ಬೀಳಲು ಸಿದ್ಧಳಾಗಿ (ಅಗ್ನಿಕುಂಡಕ್ಕೆ) ಹೀಗೆ ಹೇಳಿದಳು: "ನಾನು ಪತಿವ್ರತೆಧರ್ಮವನ್ನು ಯಿದ್ದರೆ ನನ್ನ ಏಳುಬಾರು ಕೂದಲನ್ನು ಬಾಡದಂತೆ ನನ್ನನ್ನು ಕಡೆಹಾಯಿಸು. ಈ ಪತಿವ್ರತಧರ್ಮವನ್ನು ಇಲ್ಲಿಗೆ ಯಿದ್ದರೆ ಈಗಲೇ ನನ್ನನ್ನು ಸುಟ್ಟು ಬೂದಿ ಆಗಲಿ." ಆಮೇಲೆ ಶಿವಶಿವಾ ಎನ್ನುತ್ತ ಅಗ್ನಿಕುಂಡದಲ್ಲಿ ಜಿಗಿದಳು. ಆಗ ತಕ್ಷಣವೇ ಉರಿಯುವ ಅಗ್ನಿಕುಂಡ ಬತ್ತಿ ತಣ್ಣಗಾಯಿತು. ಮಧುಗಿರಿಯಿಂದ ತಿರುಗಿಬಂದ ಹರದನಹಳ್ಳಿ ಬಸವಲಿಂಗಸ್ವಾಮಿಗಳು ಈ ಘಟನೆಯನ್ನು ಪ್ರತ್ಯಕ್ಷ ಕಂಡರು. ನಂತರ ಶಾಂತಮ್ಮನಿಗೆ ಕೈಲಾಸಪದವಿ ಪ್ರಾಪ್ತವಾಯಿತು.

೩. ಬಿಜ್ಜಾವರದ ಹುಂಡಿವೀರಶೆಟ್ಟಿ, ಕೋಡಿವೀರಶೆಟ್ಟಿ ಭಾವ–ಮೈದುನರು ತಮ್ಮ ಗುರುಗಳಾದ ಹರದನಹಳ್ಳಿ ಗೋಚರ ಬಸವಲಿಂಗದೇವರಿಗೆ ಕಾಳಿ, ಛತ್ರಿ, ಪಂಚಲೋಹದ ಆವಿಗೆ, ಜಾಗಟೆಗಳನ್ನು ನೀಡಿದುದು (ಬಿಜ್ಜಾವರ ಹಸ್ತಪ್ರತಿಯಿಂದ) ಗೊತ್ತಾಗುತ್ತದೆ.

ಹೀಗೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯರಾದ ಹರದನಹಳ್ಳಿ ಗೋಚರ ಬಸವಲಿಂಗಸ್ವಾಮಿಗಳನ್ನು ಮೊದಲುಬಾರಿಗೆ ಪರಿಚಯಿಸಿಕೊಡುತ್ತದೆ, ಬಿಜ್ಜಾವರದ ಹಸ್ತಪ್ರತಿ. ಬೋಳಬಸವೇಶ್ವರರ ತರುವಾಯ ಬಸವಲಿಂಗಸ್ವಾಮಿಗಳು (ಕ್ರಿ. ಶ. ೧೬೪೫), ಬಿಜ್ಜಾವರದಲ್ಲಿ ಮಹಾನಾಡಪ್ರಭುಗಳ ಗುರುಗಳಾಗಿ

೭ EC. XII ತುಮಕೂರ ೬೬ ಕರಿಕೆರೆ.

ನಿಂತುದು ರಾಜಶಕ್ತಿ ಧರ್ಮಶಕ್ತಿಗಳ ಅಪೂರ್ವ ಸಂಗಮವೆನಿಸಿದೆ. ಸಿದ್ಧಲಿಂಗ ಶಿವಯೋಗಿಗಳ ಕಾಲದಲ್ಲಿ ಎಡೆಯೂರು ವೀರಶೈವದ ಮರುಸುಗ್ಗಿಗೆ ಕೇಂದ್ರವಾಗಿದ್ದರೆ, ಬೋಳಬಸವೇಶ್ವರ ಹಾಗೂ ಬಸವಲಿಂಗದೇವರ ಸಮಯದಲ್ಲಿ ಬಿಜ್ಜಾವರ ವೀರಶೈವ ಚಟುವಟಿಕೆಗಳ ಪ್ರಧಾನಸ್ಥಳವಾಗಿದ್ದಿತು. ಮಹಾನಾಡಪ್ರಭುಗಳು ವೀರಶೈವಕ್ಕೆ ರಾಜಾಶ್ರಯ ನೀಡಿ ಬೆಳೆಸುತ್ತ ಬಂದರು.

ಜನಪದ ಕವಿಚರಿತೆ

ಮಲ್ಲಿಕಾರ್ಜುನ ಲಠ್ಠೆ

೧೦೧ ಯಳವೇಲಿ ಬಸಯ್ಯ. (೧೮೫೦-೧೯೩೦)

ವಿಜಾಪುರ ಜಿಲ್ಲೆಯ ಇಂಡೀ ತಾಲೂಕಿನ ವೈದರಗಿ ಗ್ರಾಮದ ಬಸಯ್ಯನು ಕೊನೆಯುವರೆಗೂ ಲಗ್ನಮಾಡಿಕೊಳ್ಳಲಿಲ್ಲ. ತಾಯಿ ಮತ್ತು ತಂಗಿ ಅವರ ಜೊತೆಗೆ ವೈದರಗಿಯಿಂದ ಯಳವೇಲಿಗೆ ಬಂದನು. ಅಲ್ಲಿ ಇದ್ದುಕೊಂಡು ಜನಪದ ಹಾಡು ಕಟ್ಟುತ್ತಾ ಅಷ್ಟೇ ಸುಶ್ರಾವ್ಯವಾಗಿ ಹಾಡುತ್ತ ನಾಡಿನ ತುಂಬೆಲ್ಲ ಸಂಚರಿಸಿದ ಬಸಯ್ಯನು ಯಳವೇಲಿ ಬಸಯ್ಯನೆಂದೇ ಪ್ರಸಿದ್ಧಿ ಪಡೆದಿದ್ದಾನೆ.

ಬಸಯ್ಯನ ಹಾಡುಗಳು ಹಸಿಗೋಡೆಯಲ್ಲಿ ಹರಳು ನಟ್ಟಂತೆ. ಹರದೇಶಿ ಪಂಗಡಕ್ಕೆ ಸೇರಿದ ಕವಿ ಇವನು. ೧೮೫೦ರಲ್ಲಿ ಜನಿಸಿ ೧೯೩೦ರಲ್ಲಿ ಸ್ವರ್ಗವಾಸಿಯಾಗಿರಬೇಕು. ಬಸಯ್ಯನ ಹಲವಾರು ಶಿಷ್ಯರಲ್ಲಿ ಸಾಲೋಟಗಿ ನಿಂಗಪ್ಪನು ಒಬ್ಬನು. ಅವನು ಇಂದಿಗೂ ಸುಶ್ರಾವ್ಯವಾಗಿ ಗುರುವಿನ ಸ್ಮರಣೆಗೈಯುತ್ತ ಹಾಡುತ್ತಿದ್ದಾನೆ.

ಬಸಯ್ಯನು ಮಳವೇಲಿಯ ಈಶ ವಿಶ್ವೇಶ್ವರನನ್ನು ಸ್ಮರಿಸಿದ್ದಾನೆ. ಈತನ ಹಾಡುಗಳಿಂದ ಜನಪದ ಸಾಹಿತ್ಯ ಶ್ರೀಮಂತಿಕೆ ಮೆರೆದಿದೆ. ವಾಸ್ತವಿಕತೆಯನ್ನು ಸಾರಿವೆ.

"ಮಾನಗೇಡಿ ಮಂದಿ ಹುಟ್ಟಿ ಮರ್ತ್ಯ ಕೆಡಸ್ಯಾರೊ |
ಉಡಾಳ ಮಂದಿ ಊರ ತುಂಬ ಹಿರಿಯರಾಗ್ಯಾರೊ |
ಪುಂಡ ಪುಂಡ ಮಂದಿ ಕೂಡಿ ದರೂಡಿಮಾಡವರೊ |
ಗುಂಡ ಗುಂಡ ಮಂದಿ ಕೂಡಿ ಚೆಂಡಿಲಾಡವರೊ |
ಕಚ್ಚಾಕೆಲಸಾ ಮಾಡುವಂಥಾ ಲುಚ್ಚಾ ಸಾವಕಾರೊ |

ಬಡವನ್ನ್ಹೇಣ್ತಿ ಚಲೊ ಇದ್ದರ ಬಡ್ಡಿ ವ್ಯವಹಾರೊ |
ಹೋತಿನ್ಹಂಗ ಜೋತಿಬಿಟ್ಟು ಮನಿಮುಂದ ಕೂಡ್ರವರೊ |
ದೇಶದೊಳಗ ಆಲಮೆಲಾದಗೊ ಈ ಶರಣಗುರೂಪದೇಶ ನೆಸದಾನ್ರೊ |
ಆತನ ಪಾದಕ ಹೊಂದೊನ್ರೊ್ಯ ಆಮೇಲೆ ಮುಕ್ತಿ ಪಡಿಯುರೊ |"

೧೦೨ ಶೀಗಿಹಳ್ಳಿಯ ರಾಮರಾವ (೧೮೫೬–೧೯೨೬)

ಶೀಗಿಹಳ್ಳಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಒಂದುಹಳ್ಳಿ. ಇಲ್ಲಿಯ ತಮ್ಮಾಜಿಯವರ ಮಗನೇ ಈ ರಾಮರಾವ-ಲಾವಣಿಕಾರ. ಈತನು ಸು. ೧೮೫೬ ರಲ್ಲಿ ಹುಟ್ಟಿ ೧೯೨೬ರಲ್ಲಿ ವೈಕುಂಠವಾಸಿಯಾಗಿದ್ದಾನೆ.

ಈತನ ಉದ್ಯೋಗ-ಕುಲಕರಣಿಕೆ. ಕಲಿತದ್ದು ಕನ್ನಡ ಮತ್ತು ಮೋಡಿ. ತನ್ನ ವಯಸ್ಸಿನ ೨೫ರಿಂದಲೇ ಲಾವಣಿ ರಚಿಸಲು ಪ್ರಾರಂಭಿಸಿದನು. ಭಕ್ತಸುಧಾಮ, ಘಟೋದ್ಗಜ ಸಂಹಾರ, ಗಣಪತಿ, ದ್ರೌಪದೀ ವಸ್ತ್ರ ಹರಣ–ಹೆಣ್ಣುಗಂಡಿನ ಲಾವಣಿ, ರಾಮಾಯಣ ಮಹಾಭಾರತಕ್ಕೆ ಸಂಬಂಧಿಸಿದ ಹಾಡು- ಹೀಗೆ ನೂರಾರು ಲಾವಣಿ ರಚಿಸಿ ಜನಪ್ರಿಯ ಜಾನಪದ ಕವಿಯೆನಿಸಿದ್ದಾನೆ. ಈತನ ಶಿಷ್ಯನಾದ ಬಸವಂತಪ್ಪ ಭೀಮನಗೌಡ, ಎಂಬುವವನು ಈತನ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದನು. ಶೀಗೀಹಳ್ಳಿಯ 'ಜಲಭೀಮ' ದೇವರು ಈತನ ಹಾಡುಗಳಲ್ಲಿ ಬರುವ ಅಂಕಿತವಾಗಿದೆ. ರಾಮರಾವ ಎನ್ನುವ ಹೆಸರು ಅಲ್ಲಿ ಬರುತ್ತದೆ. ಸುಧಾಮನ ಲಾವಣಿಯಲ್ಲಿಯ ಕೆಲಸಾಲು ಇಲ್ಲಿ ಓದಬಹುದು.

"ಹುಡುಗರದ ಹಸಿತ ಭಾಳಹೊಟ್ಟಿ। ಬೇಡತಾರ ರೊಟ್ಟಿ।
ಕೊರಳೀಗಟಮಿಟಿ ಹಾಕಿ ತಾಯಿನಾ। ನೂಕ ನಡಿ ಲಗುಮಾಡಿ ಹಾಕ ಅನ್ನಾ।
ಸುದಾಮ ಸುರಿಸಿ ಕಣ್ಣೀರು। ಹಾಕತಾನ ಉಸಿರು।
ತಂದೆ ದೇವರು ಎಂಥಾಬಡತನಾ। ಇದರೊಳಗ ಉಳೂದು ಕಠಿಣಾ।
ಯಾರ್‍ಯಾರು ಕೊಡವಲ್ರ ಏನೇನಾ। ಎಷ್ಟಂತ ದಿನದಿನಾ।
ಕೊಟ್ಟಾರ ನಿಮಗಿನ್ನಾ। ಮುಗಬಿಟ್ಟ ಜನಾ। ಹ್ಯಾಂಗ ತಿರಿಗವರಿಗೆ ಬೇಡುವಾ।
ಸತಿ ಅಂತಾಳ ಏನ ಹೇಳೀ ಬಗಿ। ಎತ್ತಿ ನೀರ ಕುಡದೇವಂದ್ರ ಇಲ್ಲ ಮಗಿ।
ಎತ್ತಹೋದ್ರ ಮನಿ ಸೋರಿ ಹುದಲಾಗಿ ಸುತ್ಲ ಬರ್‍ಸಂಥ ಗಾಳಿ ಬಿಸಲೀಗಿ।

ನಿರು

> ನೀವ ನಮಗಪರೂಪವೆಂದು ಸಂತಾಗ ಕುಚ್ಯೆಲಿಗಾಗಿ ಅತಕೊತಾ।
> ನಿಂತಾವ ಹುಡುಗರಾರೆ ಸುತ್ತಮುತ್ತಾ। ಅಂತಾವ ಹನವ ಆತ್ಗೋ
> ಭಾಳೊತ್ತಾ॥"

ಶಾಂತಗಿರಿಯ ಅಯ್ಯಪ್ಪಯ್ಯ (೧೮೬೮-೧೯೧೪)

'ಶಾಂತಗಿರಿ' ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಒಂದುಹಳ್ಳಿ. ಇಲ್ಲಿಯ ಹಿರೇಮಠದ ಗಂಗಯ್ಯ ಮತ್ತು ವೀರಮ್ಮ ದಂಪತಿಗಳ ಮಗನಾಗಿ ಅಯ್ಯಪ್ಪಯ್ಯನು ೧೮೬೮ರಲ್ಲಿ ಹುಟ್ಟಿದನು. ೪೫ ವರುಷಗಳ ತುಂಬು ಜೀವನ ಸಾಗಿಸಿದ ಅಯ್ಯಪ್ಪಯ್ಯನು ೧೯೧೪ರಲ್ಲಿ ಲಿಂಗೈಕ್ಯನಾಗುತ್ತಾನೆ.

ಹುಟ್ಟು ಪ್ರತಿಭಾವಂತನೂ ಜಾಣನೂ ಆದ ಅಯ್ಯಪ್ಪಯ್ಯನಿಗೆ ಅಕ್ಷರಭ್ಯಾಸ ಅಷ್ಟಕ್ಕಷ್ಟೆ. ಈತನ ಅಣ್ಣ ಬಸಯ್ಯನು ಓದು ಬರಹ ಕಲಿಸಿರುತ್ತಾನೆ. ವಯಸ್ಸಿಗೆ ಬಂದ ಅಯ್ಯಪ್ಪಯ್ಯನನ್ನು ಇಟಗಿ ಹಾಗು ಶಾಂತಗಿರಿ ದೇಶಗತಿಯ ಕಾರಭಾರಿಯನ್ನಾಗಿ ಆಯ್ದುಕೊಳ್ಳುತ್ತಾರೆ. ಇದಕ್ಕೂ ಮೊದಲು ಗಜೇಂದ್ರಗಡದಲ್ಲಿ ಕಾರ್ಯ ಮಾಡುತ್ತಿದ್ದನು.

ಅಯ್ಯಪ್ಪಯ್ಯನದು ಸುಸಂಸ್ಕೃತ-ಶರಣ ಜೀವನ; ಹಾನಗಲ್ಲ ಕುಮಾರ ಸ್ವಾಮಿಗಳ ಪರಮಭಕ್ತನಾಗಿದ್ದನು. ಆಶುಕವಿಯಾಗಿದ್ದನು. ಜಾನಪದ ಹಾಡುಗಳನ್ನು ರಚಿಸುವಲ್ಲಿ ಅದೂ ತತ್ವದ ಪದಗಳನ್ನು ಸೋಬಾನದ ಹಾಡುಗಳನ್ನು ಹೆಣೆಯುವಲ್ಲಿ ನಿಷ್ಣಾತನಿದ್ದನು. ಲೋಕಮಾನ್ಯ ಟಿಳಕರು ಇವನ ದೇಶಪ್ರೇಮಕ್ಕೆ ಮಾರುಹೋಗಿ ಸತ್ಕರಿಸಿದ್ದರಂತೆ. ಗೀಮಾಲದ ದಾಸರು ಈತನಿಂದ ಹಾಡು ಬರೆಯಿಸಿಕೊಂಡು ಹಾಡುತ್ತ ಹೋಗುತ್ತಿದ್ದರು. ಮೋಹರಮ್ ಹಾಡು, ಲಾವಣಿ, ಬೀಗತಿಯರ ಹಾಡು, ಭಜನಿಪದಗಳನ್ನು ರಚಿಸಿದ್ದಾನೆ ಅಷ್ಟೇ ಪಂಡಿತನೂ ಆಗಿದ್ದನು

> 'ಲಿಂಗವಂತರ ಕುಲವು ಹಾಂಗೆ ಹೀಗೆಂಬುವರು
> ಮಂಗಮಾನವರ ಮಾತೇನೇ ಲಿಂಗಾಂಗ
> ಸಂಗೀಯ ಕುಲಕೆ ಸರಿಯುಂಟೆ?'
>
> 'ಒಕ್ಕಲಿಗರಾಗಲಿ ಬಿಕ್ಕೆಯಬೇಡಲಿ
> ಭಕ್ತಿಯಾಚಾರ ಬೇಕವ್ವ ಜನಮುಕ್ಕ
> ಮುಕ್ತಿಯ ಮಾರ್ಗ ಕಣ್ಮುಂದ'

'ಶಾಂತಗಿರಿವಾಸ'-'ಶಾಂತೇಶ್ವರ'-ಇವು ಅಯ್ಯಪ್ಪಯ್ಯನ ಹಾಡುಗಳ ಮುದ್ರಿಕೆಯಾಗಿವೆ. ಶಾಂತಗಿರಿಯ ದೇವಸ್ಥಾನವೂ ಇದಾಗಿದೆ.

ಕಿತ್ತೂರಿನ ಬಸವಾರ್ಯ (೧೮೭೬-೧೯೨೧)

ಕೆ. ಬಸವಾರ್ಯ ಎನ್ನುವ ಹೆಸರಿನಿಂದ ಪ್ರಸಿದ್ಧಿ ಪಡೆದ ಕವಿಯು ಕಿತ್ತೂರಿನ ಚೆನ್ನಬಸವಾರ್ಯ ಹಿರೇಮಠರ ಮಗನಾಗಿದ್ದಾನೆ. ಇವನು ಮೂಲತಃ ಬೆಳಗಾವಿ ಜಿಲ್ಲೆಯ ಪಾರಿಶ್ವಾಡ ಗ್ರಾಮದವನು. ಬಡತನದಲ್ಲಿ ಹುಟ್ಟಿದ ಬಸವಾರ್ಯ ತನ್ನ ಜಾಣ್ಮೆಯಿಂದ ಆ ಕಾಲದ ಪ್ರಾಥಮಿಕ ಶಾಲಾ ಶಿಕ್ಷಕನಾಗಿದ್ದನು. ಸಾಮಾಜಿಕವಾಗಿ ಸರಳ ಹಾಗೂ ಉನ್ನತ ವಿಚಾರಗಳಿಂದ ಆದರ್ಶ ಶಿಕ್ಷಕ ಎನಿಸಿ ಸಾವಿರಾರು ಶಿಷ್ಯ ಬಳಗವನ್ನು ಕಟ್ಟಿಕೊಂಡ ಜಾನಪದ ಕವಿಯೂ ಆಗಿದ್ದನು.

'ಸಮಾಜಾದರ್ಶ' ಎಂಬ ಖಂಡಕಾವ್ಯ, ಚಂದ್ರಿಕಾ ಎಂಬ ನಾಟಕ 'ಲಿಂಗರಾಜರ ಸ್ತವನ' ಎಂಬ ಜಾನಪದ ಕೃತಿ ರಚಿಸಿ ಕೀರ್ತಿಶೇಷನಾಗಿದ್ದಾನೆ. ಇವನ ಮಂಟೂರ ಲಾವಣಿ, ಉಟದ ಪದ, ಸ್ವದೇಶಿ ಕೋಲಾಹಲದ ಲಾವಣಿಗಳಂತೂ ಕ್ರಾಂತಿಯ ಕಿಡಿ ಊದಿವೆ. ಹಲವಾರು ಪ್ರಬಂಧಗಳನ್ನೂ ರಚಿಸಿದ್ದಾನೆ. ಕ್ರಿ.ಶ. ಸು ೧೮೭೬ರಲ್ಲಿ ಹುಟ್ಟಿ ೧೯೨೧ರಲ್ಲಿ ಲಿಂಗೈಕ್ಯನಾಗಿದ್ದಾನೆ. ಜಾನಪದಕ್ಕಿಂತ ಶಿಷ್ಟ ಸಾಹಿತ್ಯದೆಡೆಗೆ ಹೆಚ್ಚು ವಾಲಿದ್ದಾನೆ.

"ನಿನ್ನ ಚರಿತೆ ಪುಣ್ಯ ಚರಿತೆ ಲೋಕಭರಿತ ಲಿಂಗರಾಜ.
ನಿನ್ನ ತೇಜ ದಿವ್ಯ ತೇಜ ಕಲ್ಪಭೂಜ ಲಿಂಗರಾಜ.
- -
ಪಾರ್ಶ್ವವಾಡ ಗ್ರಾಮದವನು ಬಸವ ನಾನು ಲಿಂಗರಾಜ"
(ಲಿಂಗರಾಜ ಸ್ತವನದಿಂದ)

'ಧೀರ ರಜಪೂತ ರಣ। ಶೂರ ಶೀಕ ಮಹಾರಾಷ್ಟ್ರ।
ವೀರ ಛತ್ರಪತಿ ಮೊದಲಾದವರು। ಮಹಾ
ಘೋರ ಯುದ್ಧದೊಳು ಹೋರಾಡಿದರು। ವೈರಿ
ಚೂರ ಚೂರ ಮಾಡಿ ಕೀರ್ತಿ ಹೊಂದಿದರು
ನಾನಿ ಹೇಳತೇನ ಕೇಳಿರ್ರಿ। ಕೋರಿ ಹರಕ ಮುಂದೇಗಂತಾರಿ
ಸೂರಿಮುಚಿಗೊಂಡ ಕುಂತ್ರ ನಿಮ್ಮನ್ಯಾರ-ಕೇಳವರು
ಸೋಮಾರಿತನ ಬಿಟ್ಟು ಬಿಡಿರಿ ನೀವೆಲ್ಲರು।
(---ಸ್ವದೇಶಿ ಕೋಲಾಹಲದಿಂದ)

೧೦೫ ಯಕ್ಕುಂಡಿ ಗುರುಪಾದಪ್ಪ (೧೮೮೦-೧೯೬೯)

ಯಕ್ಕುಂಡಿ ಬೆಳಗಾವಿ ಜಿಲ್ಲೆಯ ಒಂದುಹಳ್ಳಿ. ಈಗ ಈ ಹಳ್ಳಿ ಮಲಪ್ರಭಾ ಆಣೆಕಟ್ಟು ಯೋಜನೆಯಲ್ಲಿ ಮುಳುಗಿಹೋಗಿದೆ. ಇಲ್ಲಿ ವಾಸಿಸುತ್ತಿದ್ದ ಜನರಿಗೆ ಹೊಸ ಊರು ಕಟ್ಟಿಸಿಕೊಟ್ಟಿದ್ದಾರೆ.

ಯಕ್ಕುಂಡಿಯ ಆಡಿವೆಪ್ಪ ಹೊಂಗಲ ಅವರ ಮಗನೇ ಈ ಗುರುಪಾದಪ್ಪ. ಗುರುಪಾದಪ್ಪನು ಪ್ರಾಥಮಿಕ ಶಾಲೆಯ ಶಿಕ್ಷಕನಾಗಿದ್ದನು. ಅಧ್ಯಾತ್ಮಿ, ಬ್ರಹ್ಮ ನಿಷ್ಠನೂ ಆಗಿದ್ದನು. ಕನ್ನಡ-ಮರಾಠಿ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಪರಿಣತಿ ಪಡೆದಿದ್ದನು. ಶ್ರೀಸಾಮಾನ್ಯರಿಗಾಗಿ ಜನಪದ ಹಾಡು ರಚಿಸಿ ಕೃತಕೃತ್ಯನಾಗಿದ್ದಾನೆ.

ಕ್ರಿ. ಶ ಸು. ೧೮೭೦ ರಲ್ಲಿ ಜನಿಸಿ ದಿ. ೨೯-೮-೧೯೬೯ ರಲ್ಲಿ ಸ್ವರ್ಗವಾಸಿ ಯಾದನು. ಕಿತ್ತೂರಿನ ಬಸವಾರ್ಯರು ಇವನ ವಿದ್ಯಾಗುರುಗಳಾಗಿದ್ದರು. ಸವ ದತ್ತಿಯ ಬೆಟಸೂರಮಠದ ಪಟ್ಟದ್ದೇವರು ಮತ್ತು ಗುರ್ಲಹೊಸೂರಿನ ಬಾಬಾಗರ್ದೆ ಅವರು ಇವನಿಗೆ ಆಧ್ಯಾತ್ಮವಿದ್ಯೆ ನೀಡಿದ್ದರು. ತನ್ನ ಗುರುಗಳ ಜೊತೆ ಕೂಡಿ ಕೊಂಡೂ ಹಲವಾರು ಗೀಗೀ, ಲಾವಣಿ ಹಾಡುಗಳನ್ನು ಗುರುಪಾದಪ್ಪ ರಚಿಸಿ ದ್ದುಂಟು. ಸ್ವತಂತ್ರವಾಗಿಯೂ ನೂರಾರು ಪದಗಳನ್ನು ಕಟ್ಟಿದ್ದಾನೆ. ಸ್ವತ ಪುರಾಣ-ಕೀರ್ತನ-ಪ್ರವಚನ ಹೇಳುತ್ತಿದ್ದನು. ಸಾಮಾಜಿಕ ಕಾರ್ಯಕರ್ತನೂ ಆಗಿದ್ದನು.

ಬ್ರಿಟಿಶರ ವಿರುದ್ಧ ಹೋರಾಟ ನಡೆದ ಆ ಕಾಲದಲ್ಲಿ ಲಾವಣಿ ರಚಿಸಿ ಜನತೆಯಲ್ಲಿ ದೇಶಾಭಿಮಾನ ಹೆಚ್ಚಿಸುತ್ತಿದ್ದನು. ಬಡವ-ಶ್ರೀಮಂತರಲ್ಲಿಯ ಭೇದ-ಭಾವ ಹೊಡೆದುಹಾಕುವಲ್ಲಿ ಪ್ರಯತ್ನಿಸುತ್ತಿದ್ದನು ಅಜ್ಞಾನವೆಂಬ ರಾಕ್ಷಸನನ್ನು ಹೊಡೆ ದೋಡಿಸಲು ಹಲವಾರು ರೀತಿಯಲ್ಲಿ ಜನತೆಗೆ ತಿಳುವಳಿಕೆ ಮಾಡಿಕೊಡುತ್ತಿದ್ದನು. ಸಾಕ್ಷರತಾಪ್ರಚಾರಕ್ಕಾಗಿ, ಸದ್ಗುಣಿಗಳನ್ನಾಗಿ ಪರಿವರ್ತಿಸಲು-ಪ್ರೇರೇಪಿಸುತ್ತಿದ್ದನು. ಯಕ್ಕುಂಡಿಯ ರಾಮಲಿಂಗ ಇವನ ಹಾಡುಗಳಲ್ಲಿ ಬರುವ ಅಂಕಿತವಾಗಿದೆ. ಈತ ಬರೆದ 'ತಗಣಿ' ಹಾಡು ಬಹು ಜನಪ್ರಿಯವಾದ ಲಾವಣಿಯಾಗಿರುತ್ತದೆ. ಅಲ್ಲಿ ಅನ್ಯೋಕ್ತಿ ಸೂಸಿ ಹರಿಯುತ್ತದೆ.

'ತಗಣಿ ಕಡೂತದ ಹಾಸಿಗ್ಯಾಗ ಮೊಕ್ಕ। ಹಾವಳಿ ನಡಿಸೇದ । ಪಲ್ಲ।
ಅಗಣಿತ ಮರಿಗಳ ಹಡೆಯುವ ತಗಣಿ। ಹಗಲಿರುಳೆನ್ನದೆ ಕಾಡುವ ತಗಣಿ
.. ..
.. ..
ದುಷ್ಟ ದುರ್ಜನ ಆಗಿ ಹುಟ್ಟಿದ ತಗಣಿ। ರಾಷ್ಟ್ರಕ ಘಾತಾ ಮಾಡುವ ತಗಣಿ
ಶ್ರೇಷ್ಠ ಯಕ್ಕುಂಡಿಯ ರಾಮಲಿಂಗನ ಪಾದ।
ನಿಷ್ಠೆಯ ಕೆಡಿಸುವ ಮಾಮದ ತಗಣಿ॥

ಹಾಗೆಯೆ ಎಚ್ಚರಾಗಿರಿ ಎನ್ನುವ ಪದದಲ್ಲಿ ಕವಿಯ ದೇಶಾಭಿಮಾನದ ಕೆಚ್ಚನ್ನು ಕಾಣಬಹುದಾಗಿದೆ.

"ಸರಕಾರ ಬಾಲಾಬಡಸಿ ಡೊಳ್ಳುಬಿಳಿಸಿಕೊಳ್ಳುವ ಮಂದಿ
ದೇಶದಾಗ ಬಾಳಾಯ್ತು।
ಜ್ಞಾನವಿಲ್ಲದ ಈ ಮಾನಗೇಡಿ ಮಂದಿಗೆ ಹೇಳಿ ಹೇಳಿ। ಸಾಕಾಯ್ತು॥
ಪರತಂತ್ರ ಆಗಿ ನಾವು ಕೊಳಕೊಂತ ಬಿದ್ದು ಈಗ ದೀಡನೂರು
ವರ್ಷಾಯ್ತು।
ಬಂಗಾರದಂಥ ಭಾರತಮಾತೆಗೆ ಎಂಥಾ ಪಾಳಿ ಬಂತು ।।—"

"ಯಾವುದು ಕೆಟ್ಟ" ಎನ್ನುವಲ್ಲಿಯು ಕವಿಯು ಲೋಕ ವ್ಯವಹಾರವನ್ನು ಗುರುತಿಸಬಹುದಾಗಿದೆ.

"ಜಗಳಗಂಟಿ ಮಡದಿ ಕೆಟ್ಟ।
ಸುಗುಣ ಇಲ್ಲದ ಮಗಾ ಕೆಟ್ಟ
ತಗಲ ತಂಟಿ ಮಾಡಾವ ಕೆಟ್ಟ
ಹಗಲಗಳ್ಳರ ನೆರಿ ಕೆಟ್ಟ
ಸಗಣಾ ತಿನ್ನು ನವಕರದಾರಾ ಇನ್ನೂ ಕೆಟ್ಟ .."

೧೦೬ ಮಮದಾಪುರದ ಮಾರೋತೆಪ್ಪ (೧೮೮೦–೧೯೫೦)

ಮಮದಾಪುರ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಒಂದು ಹಳ್ಳಿ. ಮೇಧಾವಿ ಡಾ. ಡಿ. ಸಿ. ಪಾವಟೆಯವರಿಂದ ಈ ಗ್ರಾಮಕ್ಕೆ ಇನ್ನೂ ದೊಡ್ಡ ಹೆಸರು ಬಂದಿದೆ. ಇದೇ ಗ್ರಾಮದ ಪ್ರಸಿದ್ಧ ಪೈಲವಾನ ಎನಿಸಿದ ಮಾರೋತೆಪ್ಪ ಜನಪದ ಕವಿಯೂ ಆಗಿದ್ದನ್ನು ಮರೆಯುವಂತಿಲ್ಲ.

ಇಲ್ಲಿಯ ಭೀಮಪ್ಪ ಉಪ್ಪಾರಟ್ಟಿ ಎಂಬವರಿಗೆ ಮಗನಾಗಿ ಸು. ೧೮೮೦ರಲ್ಲಿ ಜನಿಸಿದ ಮಾರೋತೆಪ್ಪನು ದೇವಾಂಗ ಜಾತಿಯವನು. ಉದ್ಯೋಗ ನೇಕಾರಿಕೆಯಾಗಿತ್ತು. ಕಲಿತದ್ದು ಕನ್ನಡ ೭ನೆಯ ಇಯತ್ತೆ. ಬಸವಗುರು ಎಂಬವರ ಸಾನಿಧ್ಯದಲ್ಲಿದ್ದುಕೊಂಡು ನೂರಾರು ಜನಪದ ಹಾಡುಗಳನ್ನು ರಚಿಸಿದ್ದಾನೆ. ಈತನ ಹಾಡುಗಳಲ್ಲಿ 'ಮಾರೋತಿ'ಯನ್ನು ಸ್ಮರಿಸಿದ್ದಾನೆ. ಈತ ತೀರಿಕೊಂಡು ಇಂದಿಗೆ ೩೦ ವರುಷಗಳಾದವೆ (೧೯೫೦) ವೇದಾಂತದಲ್ಲೂ ಈತನಿಗೆ ವಿಶೇಷ ಆಸಕ್ತಿ. ಕುಸ್ತಿ ಕಲೆಯಲ್ಲಿ ನಿಷ್ಣಾತ. ಹೋಳಿಹಾಡು, ಲಾವಣಿ ಹಾಗೂ ಕಲ್ಕಿ-ತುರಾಯಿ ಪದಗಳನ್ನು ರಚಿಸಿದ್ದಾನೆ

'ಗಿರಿಜಕಂದನೆ ನಿನ್ನ ಚರಣ ಪೂಜಿಸುವೆನು
ಕರುಣದಿ ಕಾಯೊ ಸಭಾದೊಳಗ॥

ಗೌರಿಯುಕಂದನೆ ನೀನು ವರವಕೊಟ್ಟು ಪಾಲಿಸೋ ನನ್ನ
ಧರೆಯೊಳು ಮುಮುದಾಪುರ ಭಕ್ತರನ್ನ॥"

ಎಂದು ಪ್ರಾರ್ಥಿಸಿದ್ದಾನೆ

'ಮುಮುದಾಪೂರ ಗಂಡಮೆಟ್ಟ।
ಗುರು ಮಾರುತಿ ಇರುವ ಮೆಟ್ಟ।
ಹೋಳಿಪದ ಹುಟ್ಟತಾವ ಅಜಕಟ್ಟ।
ಅವನ ಪಾವಕ ಹೊಂದಿ ಕಳಿಯಾನು ಜಲ್ಮದ ಪಾಪ
ಕಂಚಿನದ ಗೌರಿ ಕಾಲಿಡ ನನಗೆಣತಿ ಹಂಚಿಕಿಲಿ ಬಾಳೆ ಮಾಡೋಣ"

ಎನ್ನುವಲ್ಲಿ ಕವಿ ಊರ 'ಮಾರುತಿ' ದೇವರನ್ನು ಸ್ಮರಿಸಿದ್ದನ್ನು ಕಾಣಬಹುದಾಗಿದೆ.

ಹೆಣ್ಣು ಗಂಡಿನ ಸಂವಾದವೊಂದರಲ್ಲಿ ಕವಿಯ ಪ್ರತಿಭೆ, ಪ್ರಜ್ಞೆಗಳು ವಾಸ್ತವಿಕತೆಯೊಂದಿಗೆ ಸೂಸುವರಿದುದನ್ನು ಅರಿಯಬಹುದಾಗಿದೆ. ಜನಪದ ಕವಿಗಳು ಎಷ್ಟು ರಸಿಕರಾಗಿದ್ದರೆಂಬುದನ್ನೂ ತಿಳಿಯುಬಹುದು.

"ಹೆಣ್ಣು

ಕೇಳ ಕೆಡಬ್ಯಾಡೊ ತಮ್ಮ। ಬಾಳಿವಂತರ ಮಗಳೊ।
ತೋಳ ಹಿಡಿವೂದ ತರವಲ್ಲೊ॥
ಕೂಲಿಯು ಮಾಡುವ ಕುರೂಪಗೇಡಿ। ಗಿರಪಾವ ಜೋಳಾ ತರತೇನಂತಿ।
ಕುರಪಿ ಹೊರ್ತ ಇಲ್ಲೊ ನಿನಗ ಗತಿ। ಪರನಾರ್‍ಯಾರ ಕಂಡ।
ಪರಪ ಮಾಡಿದರ ಮುರಸೇನೊ ಜಾಯಾಗಿನ ಹಲ್ಲ।
ತಂಗಿ ಅಂತ ಕರಿಯಬೇಕು ಮುಂಗ್ಯಾನಂಗ ಮಾಡಬಾರದು।
ಭಂಗಿ ಸೇದಿ ಬಂದಿದಿ ಏನೊ ಮೂರ್ಖ ಇಂಥಾದರ।
ಸಲವಾಗಿ ಹೋಗೇತೊ ಮಳಿಮಾರಾ"
ಕಡಸಿನ ಹೋಗೊ ಕಬ್ಬಿನ್ಹಂಗ, ಸುಲಸೀನ ಹೋಗೊ ಸ್ವಾಗಿಹಂಗ।
ಅಂಜಿಕಿ ಅಳಿಕಿ ಇಲ್ಲೊ ನಿನಗ। ಏಟ ನಿನ್ನ ಮನದಾಗ ಗೇನಕಿ।
ಅಂಬರಕ ಹಾಕಿನಂದರ ಇಲ್ಲೊ ಠಾರಾ ತೋಳ ಹಿಡಿವುದ
ತರವಲ್ಲೊ ನಿನ್ನ ಮುಸಿಯೊ ಹಾಳ ಬಿದ್ದೈತೊ ಹಂಚಿಲ್ಲೊ।"

ಗಂಡು

ಹಂಚಿಲ್ಲನ್ನಬ್ಯಾಡ ಮುಂಚಿನ ತಂದೀನ। ಕಂಚಿನದ ಗೌರಿ ಕಾಲಿಡ।
ಕಂಚ್ಯಾನಂಬುದು ಕಡಿಮಿಲ್ಲ ಪಂಚೇರ ಬಂಗಾರ ಕೊಡುವೆನು ಮೊದಲ।
ಚಂಚಗಾರಿಕೆ ಕೊಡುವೆ ಮುನ್ನೂರ ರೊಕ್ಕ ಆ।

ಮುಂಚವನೇ ಶಿರಸ ನಡಿಯು। ನನ್ನ ಕಾಮುಲೋಕ।
ಜಂಬಿನ ಮಾತಾ ಬಿಟ್ಟಬಿಡ। ತುಂಬಿದ ಕೊಡ ಈಗ ಆಗುವನು ಕೇಡ।
ಗಂಭೀರ ಹುಡುಗ ನಾನು ದೇಶಕ। ರಂಜ ನನ್ನ ಕೈಲಿಂಪ
ದಾಟುವದೈತಿ ನಾಜೂಕ।

ಒಲ್ಲೆನ ಒಲ್ಲೆನಬ್ಯಾಡಾ। ಜಲ್ಲಿಲಿ ಎಳದ ಒಯ್ಯುವೆ ಮೊದಲ।
ಗುಲ್ಲಿ ಮಾಡುವುದಲ್ಲ ತಿಳಿಯ ಮನಕ ಸಲ್ಲ। ಇಲ್ಲದಂಗ ಇರುನ
ನನ್ನಮನಿಯು ತನಕ – – – – –"

೧೦೭ ಗೋಕಾಕದ ಬನಪ್ಪ (೧೮೮೪–೧೯೬೪)

ಗೋಕಾಕ ಜನಪದ ಕವಿಗಳಿಗೂ ಕಲಾಕಾರರಿಗೂ ಸ್ಫೂರ್ತಿಯ ಕೇಂದ್ರವಾಗಿದೆ. ಇಲ್ಲಿಯ ಹುನೂರ ಮನೆತನದ ಶಂಕ್ರೆಪ್ಪನವರಿಗೆ ಸು ೧೮೮೪ ರಲ್ಲಿ ಬನಪ್ಪ ಹುಟ್ಟಿದನು. ಈತ ಕಲಿತದ್ದು ಕನ್ನಡ ೪ನೇ ಇಯತ್ತೆ. ಅಲ್ಲದೆ ಮೋಡಿ ಕೂಡ ಓದಲು ಬರೆಯಲು ಕಲಿತಿದ್ದನು. ತನ್ನ ೮೦ ವರುಷಗಳ ತುಂಬುಜೀವನದಲ್ಲಿ ಕಂಡುಂಡ ಅನುಭವ ಹಿರಿದಾದುದಾಗಿದೆ. ಈತನ ಲಾವಣಿಗಳಲ್ಲಿ ಅಂಥ ಹಲವಾರು ಘಟನೆಗಳನ್ನು ಕಾಣಬಹುದಾಗಿದೆ. ಈತನಿಗೆ ೬ ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣುಮಗಳಿದ್ದು–ಎಲ್ಲರೂ ಉದ್ಯೋಗಸ್ಥರಿದ್ದಾರೆ. ಸ್ಥಿತಿವಂತರು.

ಬನಪ್ಪನಿಗೆ 'ಬಾನೂ' ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಸಾಂಗತಿ ಹಾಡು ರಚಿಸುತ್ತಿದ್ದನು. ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಮುಖಂಡರ ಮೇಲೂ ಹಲವಾರು ಲಾವಣಿ ಬರೆದಿದ್ದಾನೆ. ಮನೆದೇವರು ಬಾದಾಮಿಯ ಬನಶಂಕರಿ. 'ಬನಶಂಕ್ರಿಮ್ಯಾಲ ಇದ್ರಿ ಸಿಪ್ಪಾ' ಎಂದು ತನ್ನ ಹಾಡುಗಳಲ್ಲಿ ಆ ದೇವತೆಯನ್ನು ಸ್ಮರಿಸಿದ್ದಾನೆ. ಗೋಕಾಕದ ಬರಗಾಲಿ ಪರಶುರಾಮ ಮತ್ತು ಬನಪ್ಪ ಕೂಡಿಯೇ ಹಾಡು ರಚಿಸುತ್ತಿದ್ದುದರಿಂದ 'ಬನು ಪರಶುರಾಮ ಸಹಮಾಡಿದಾರ' ಎಂದೂ ಹಾಡಿದ್ದುಂಟು. ಒಮ್ಮೊಮ್ಮೆ ಬನೂನ ಹೆಸರೇ ಬರುತ್ತದೆ. 'ಕವಿಮಾಡಿ ಬನು ಸಹ ಜಾತತನ ಗೋಕಾವ್ಯಾಗ ಮಾಡಿದ ರಚನಾ.'

ಈತನು ನೇಕಾರವೃತ್ತಿಯವನಾಗಿದ್ದುದರಿಂದ ನೇಕಾರರ ಪರಿಸ್ಥಿತಿ ಕುರಿತು ಲಾವಣಿಯೊಂದನ್ನು ರಚಿಸಿದ್ದಾನೆ.

'ಭಾರತದಲ್ಲಿ ನೇಕಾರ ಆದಾರ। ನೇಕಾರ ಮುಂದಿಗ ಇಲ್ಲ ಅನ್ನ।
ಕೂಳ ಕೂಳ ಅಂತ ಘೋಳಾಡಿ।
ಅಳತಾರ ಹೇಂಘಾ ಮಾಡ್ಯಾರ್ಯ ತಂದಿ ಭಗವಾನಾ।

ಸಾಲ ಇಲ್ಲದಲೆ ಖಾಲಿ ಕೂತಿದಾರಾ, ಸಾಲಾ ಕೊಡೊದಿಲ್ಲ ಯಾರ್‍ಯಾರಾ
ಹೊಟ್ಟೆಗಿಲ್ಲದೆ ಎಷ್ಟಂತ ತಾಳೂಸಂತ, ಬಿಟ್ಟಹ್ವಾವ್ರ ತಮ್ಮ ಮನಿಮಾರಾ
ಹಂಡೆ ಭಾಂಡೆ ಎಲ್ಲಾ ಮಾರಿಕೊಂಡಾರು।
ಕೊಂಡ ತಗೊಂಡಾರ ಬೋಗಾರಾ।
ಎಷ್ಟ ಮಾಡಿದರೇನ ಹೊಟ್ಟೆ ತುಂಬವಲ್ದು। ಎಂಥಾಕೆಟ್ಟ ನಮ್ಮ ಹಣೆಬಾರಾ
.. ..
ಎಷ್ಟ ಹೇಳಿದರ ತೀರುದಿಲ್ಲ ವಿಧಿ। ಕಾಡುಕಾಲ ಶನಿ ಕಂತ್ರಾಟಾ
ಬನಶಂಕ್ರಿಮ್ಯಾಲ ಇಡ್ರಿ ನಿಷ್ಠಾ।
ಕವಿಸಾಡಿ ಬಸು ಸವಿ ಹಾಡತಾನ। ಗೋಕಾವ್ಯಾಗ ಮಾಡಿದ ರಚನಾ।
ಕುಳಕೂಳ ಅಂತ ಘೋಳಾಡಿ ಅಳತಾರ।
ಹೆಂಥಾಮ್ಯಾಳ್ಯಾ ತಂದಿ ಭಗವಾನಾ।"

ಸುಣಧೋಳಿಯ ಸಿದ್ಧರಾಮು (೧೮೮೮-೧೯೩೭)

ಗೋಕಾಕ ತಾಲೂಕಿನ ಸುಣಧೋಳಿ ಗ್ರಾಮದಲ್ಲಿ ೩೯ ವರ್ಷ ಟ್ರೇಂಡ್ ಶಿಕ್ಷಕನಾಗಿ ಸೇವೆಸಲ್ಲಿಸಿದ ಸಿದ್ಧಗಿರಿಯಪ್ಪ ರೇವಪ್ಪ ಸಬರದ ಇವನು–ಹಲವಾರು ಬಯಲಾಟ ಹಾಗೂ ಲಾವಣಿ, ಹೋಳಿ ಪದಗಳನ್ನು ರಚಿಸಿದ್ದನೆಂದು ತಿಳಿದು ಬರುತ್ತದೆ. ಕುಮುದಿನಿ, ಚಾಲುಕ್ಯರ ಪುಲಿಕೇಶಿ, ನಲಿನಿ, ಭ್ರಮರ, ಮಹಾರಾಣಾ ಸಿಂಹ ಮೊದಲಾದ ಬಯಲಾಟದ ಕಥೆಗಳನ್ನು ರಚಿಸಿದ್ದಾನೆ. ಈತನು ಹೋಮಿಯೋಪಥಿ ವೈದ್ಯನೂ ಆಗಿದ್ದನೆಂದು ಜನ ಹೇಳುತ್ತಾರೆ.

ಸು. ೧೮೮೮ರಲ್ಲಿ ಜನಿಸಿದ ಸಬರದ ಮಾಸ್ತರರು ೧೯೩೭ರಲ್ಲಿ ತೀರಿಕೊಂಡನ್ನು ತಿಳಿದುಬರುತ್ತದೆ. ಕೃತಿಗಳು ಮಾತ್ರ ನನಗೆ ನೋಡಲು ಇನ್ನೂ ದೊರೆತಿಲ್ಲ.

೧೦೯ ಗಂದಿಗವಾಡದ ಬಾಳಂಭಟ್ಟ (೧೮೮೭–೧೯೪೮)

ಗಂದಿಗವಾಡ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನಲ್ಲಿರುವ ಒಂದು ಚಿಕ್ಕ ಹಳ್ಳಿ. ಕಿತ್ತೂರ ಸಂಸ್ಥಾನದ ದೊರೆಗಳಿಗೆ ಗುರುಸ್ಥಾನದಲ್ಲಿದ್ದ ಜೋಯಿಸರ ಮನೆತನದಲ್ಲಿ ಖಂಡೋ ಹಾಸನೆ ಅವರ ನಾಗನಂಗಿ ಕ್ರಿ. ಶ. ೧-೧೦ ೧೮೮೭ರಲ್ಲಿ ಬಾಳಕೃಷ್ಣ ಹುಟ್ಟಿದನು. ಈ ಬಾಳಕೃಷ್ಣನೇ ಜನಪದ ಕವಿಯಾಗಿ ನೆರೆದ ಬಾಳಂಭಟ್ಟ. ಚಿಕ್ಕಂದಿನಿಂದಲೂ ಸಾಹಿತ್ಯ–ಸಂಗೀತದ ಕಡೆಗೆ ಒಲವು ಇಟ್ಟುಕೊಂಡವನಾಗಿದ್ದನು. ಜಾನಪದ ಬಯಲಾಟಗಳಿಗೆ ಮನಸೋತು ರಾಮಾಯಣ-ಮಹಾಭಾರತದಲ್ಲಿಯ ಉತ್ತಮೋತ್ತಮ ಕಥೆಗಳನ್ನು ಆಯ್ದುಕೊಂಡು ಹಲವಾರು ಬಯಲಾಟಗಳನ್ನು ರಚಿಸಿದ್ದಾನೆ.

ಬಾಳಂಭಟ್ಟ ಕಲಿತದ್ದು ಕನ್ನಡ ೬ ನೇ ಈಯತ್ತೆ ಮಾತ್ರ. ವ್ಯವಸಾಯ ಮಾಡಿಸುವುದೇ ಈತನ ಕಾಯಕವಾದಂತಿತ್ತು. ಹೆಚ್ಚಿನ ವೇಳೆಯನ್ನೆಲ್ಲಾ ಹಾಡು ಕಟ್ಟುವುದು, ಬಯಲಾಟ ಬರೆಯುವುದರಲ್ಲಿ ಕಳೆಯುತ್ತಿದ್ದನು. ಆಗಾಗ ಜೊತೆಗೆ ಹೇಳುವ ಕಾವ್ಯವನ್ನೂ ಮಾಡುತ್ತಿದ್ದನು.

ಬಾಳಂಭಟ್ಟ ೩೦ ಕ್ಕೂ ಹೆಚ್ಚು ಬಯಲಾಟಗಳನ್ನು ಬರೆದಿದ್ದಾನೆಂದು ತಿಳಿದು ಬರುತ್ತದೆ. ಇವುಗಳಲ್ಲಿ ಪ್ರಸಿದ್ಧವಾದವುಗಳಿವು

೧ ತಾಮ್ರಧ್ವಜ	೨ ಲವಕುಶರ ಕಾಳಗ	೩ ಐರಾವಣ-ಮೈರಾವಣ
೪ ಲಂಕಾದಹನ	೫ ರಾವಣವಧೆ	೬ ವೀರ ಅಭಿಮನ್ಯು
೭ ಕರ್ಣಾರ್ಜುನರ ಕಾಳಗ	೮ ವಿರಾಟ ಪರ್ವ	೯ ಮಯೂರ ಧ್ವಜ

ಉತ್ತರ ಕರ್ನಾಟಕದಲ್ಲಿ ಜಯಭೇರಿ ಬಾರಿಸಿದ ದೊಡ್ಡಾಟಗಳಿವು. ಪ್ರೌಢವೂ, ಛಂದೋಬದ್ಧಶೈಲಿಯೂ ಇದ್ದುದರಿಂದ ಸಾಮಾನ್ಯರಿಗೆ ಒಮ್ಮೊಮ್ಮೆ ಹಾಡುಗಳ ಅರ್ಥವೇ ಆಗುವುದಿಲ್ಲ. ದೊಡ್ಡಾಟದ ಗತಿಯೇ ಹೀಗೆ. ಬಯಲಾಟಗಳ ಹೊರತಾಗಿ ಬಾಳಂಭಟ್ಟ ಲಾವಣಿ, ಚಿನಿಕೋಲ ಪದ, ಮೊಹರಮ್ ಹಾಡುಗಳನ್ನೂ ರಚಿಸಿದಾನೆಂದು ಜನರ ಹೇಳಿಕೆ. ಯಾವದೇ ವಿಷಯದ ಮೇಲೆ ತತ್‌ಕ್ಷಣ ಹಾಡು ರಚಿಸುವ ಆಶುಕವಿತ್ವ ಶಕ್ತಿ ಇವನದಾಗಿತ್ತು.

'ವಿಜಯನಗರ ಸಾಮ್ರಾಜ್ಯ' ಎಂಬ ಐತಿಹಾಸಿಕ ಬಯಲಾಟವನ್ನು ಇವನು ರಚಿಸಿದ್ದಾನೆ. ಇಲ್ಲಿ ಶಿಷ್ಟ ಮತ್ತು ಜಾನಪದ ಶೈಲಿಗಳೆರಡರ ಸಮನ್ವಯವನ್ನು ಕಾಣುತ್ತೇವೆ. ಇಲ್ಲಿ ಬರುವ ಸಾರಥಿ ಹಾಗೂ ಸೂತ್ರಧಾರನ ಮಾತುಗಳು ಪ್ರೇಕ್ಷಕರ ಹಾಗೂ ಜಾದುಗರ ಮನವನ್ನು ಸೂರೆಗೊಳ್ಳುತ್ತವೆ. ಹುಟ್ಟುಪ್ರತಿಭಾವಂತನಾದ ಈ ಕವಿ ಅಷ್ಟೇ ಪಂಡಿತನೂ ಇದ್ದನು. ಜೀವನದ ಕೊನೆಯುಸಿರುವವರೆಗೂ ಬಯಲಾಟದ ಕಥೆ, ಜಾನಪದ ಹಾಡು ರಚಿಸುವಲ್ಲಿಯೇ ಕಾಲಕಳೆದನು.

'ಶ್ರೀ ರಾಮೇಶ' ಈತನ ಮುದ್ರಿಕೆಯಾಗಿದೆ. ಕವಿ ದಿ. ೨೧-೪-೧೯೪೮ ರಲ್ಲಿ ವೈಕುಂಠವಾಸಿಯಾದನು. ಇವನಿಗೆ ೫ ಜನ ಗಂಡುಮಕ್ಕಳು. ಅವರಲ್ಲಿ ಹೈಸ್ಕೂಲ ಮುಖ್ಯಾಧ್ಯಾಪಕರಾಗಿ ಒಬ್ಬರು ನಿವೃತ್ತಿ ಹೊಂದಿದ್ದಾರೆ. ಇನ್ನೊಬ್ಬರು ಪಾಟೀಲ ವೆಂಕಟರಾಜ ಸಾತಪಡೆ – ಮದ್ರಾಸ – ಹೋಮಿಯಾಪತ್‌ದೇವ – ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

'ವರಗಂದಿಗವಾಡದ ಭೂ।
ಸುರಕುಲಸಂಜಾತ ಬಾಳಕೃಷ್ಣ ಕವೀಂದ್ರನ।
ವರ ರಾಮೇಶನ ದಯದಿಂ।
ವಿರಚಿತ ತಾಮ್ರಧ್ವಜನ ಕಥಾಮೃತ ಸಾರಂ' ।

'ಅಗಣಿತ ಗುಣಮಣಿ ಭಾರಥಾರರ।
ಗಣಪತಿ-ವಾಹನ ಗಂಭೀರಾ।
ಯದುಕುಲ ಜನನಿಧಿ ಚಂದಿರಾ।
ಕವಿ ಬಳವಂತನ ಮಂದಾರಾ'।

ಕವಿ ತನ್ನ ಹಾಡುಗಳಲ್ಲಿ ಅಲ್ಲಲ್ಲಿ ಬಳವಂತ, ಬಾಳಕೃಷ್ಣ ಎಂದೂ ಹೆಸರು ಉಲ್ಲೇಖಿಸಿದ್ದಾನೆ.

೧೧೦ ಮುತನಾಳದ ಮಲ್ಲಪ್ಪ (೧೮೯೦–೧೯೫೦)

ಬೆಳಗಾವಿ ಜಿಲ್ಲೆಯ ಮುತನಾಳ--ಬೆಂಗಳೂರ ಪೂನಾ ಹೆದ್ದಾರಿಯ ಬದಿಗಿರುವ ಒಂದು ಚಿಕ್ಕಹಳ್ಳಿ. ಈ ಗ್ರಾಮದ ಮಲ್ಲಪ್ಪ ರಾಮಪ್ಪ ಬುಚಡಿ ಈತನು ನೇಕಾರಿಕೆ ಉದ್ಯೋಗ ಮಾಡುತ್ತಿದ್ದನು. ಸು. ೧೮೯೦ರಲ್ಲಿ ಜನಿಸಿದ ಮಲ್ಲಪ್ಪನನ್ನು ಜಾಡರ ಮಲ್ಲೇಶಿ ಎಂದೇ ಜನ ಕರೆಯುತ್ತಿದ್ದರು. ಈತನು ಕಲಿತದ್ದು ಕನ್ನಡ ನಾಲ್ಕನೆ ಇಯತ್ತೆ ಮಾತ್ರ. ಜನಪದ ತಾಳ, ಗತ್ತು, ಧಾಟಿಗಳನ್ನು ಕರತಲಾಮಲಕ ಮಾಡಿಕೊಂಡಿದ್ದನು. ಪ್ರತಿಭಾಬಲದಿಂದ ಜಾನಪದ ಧಾಟಿಗಳನ್ನು ಬಳಸಿಕೊಂಡು ಸುಂದರ ಹಾಡುಗಳನ್ನು ಗ್ರಾಮೀಣರಿಗೆ ಬರೆದು ಕೊಡುತ್ತಿದ್ದನು.

ಮಲ್ಲಪ್ಪ ವಿಶೇಷವಾಗಿ ರಸಿಕ ಕಲಾಕಾರನಾಗಿದ್ದನು. ಅವನು ಬರೆದಿರುವ ಬಯಲಾಟದ ಕಥೆಗಳಲ್ಲೆಲ್ಲಾ 'ಗುರುಭಕ್ತ' ಎಂಬ ಡಪ್ಪಿನಾಟ (ಸಣ್ಣಾಟ) ಅತ್ಯಂತ ಜನಪ್ರಿಯವಾದ ಆಟವಾಗಿರುತ್ತದೆ. ಈಗಲೂ ಮುತನಾಳನ ಹಿರಿಯರು ಈ ಇಡೀ ಆಟವನ್ನು ಕಂಠಪಾಠ ಹೇಳುತ್ತಾರೆ. (ಶ್ರೀ ಬಸನಗೌಡ ಪಾಟೀಲ ವ. ೬೨) ಮುಗಟಖಾನ ಹುಬ್ಬಳ್ಳಿಯಲ್ಲಿ ಈ ಆಟವನ್ನು ಆಡಿದಾಗ ಕವಿಗೆ ಒಳ್ಳೆಯ ಗೌರವ ಮಾಡಿದ್ದರಂತೆ. ಆಗಿನ ಕಾಲದಲ್ಲಿ ಒಂದು ಬೆಳ್ಳಿಯಪದಕ ಹಾಗೂ ೫೦ ರೂ. ಗಳನ್ನು ಆಹೇರು ಮಾಡಿದ್ದರಂತೆ. ಈತನು 'ಚಿತ್ರಕೇತು' ಎಂಬ ಬಯಲಾಟವನ್ನು ರಚಿಸಿದ್ದಾನೆ.

ಮಲ್ಲಪ್ಪನ ಪ್ರಾಪಂಚಿಕ ಜೀವನ ಅಷ್ಟಕ್ಕಷ್ಟೆ. ಇವನಿಗೆ ಮೂವರು ಹೆಂಡಂದಿರರು. ತನ್ನ ೬೦ನೇ ವಯಸ್ಸಿನಲ್ಲಿ ತೀರಿಕೊಂಡನು. ಮುತನಾಳ ಕಲ್ಮೇಶ್ವರನನ್ನು ತನ್ನ ಹಾಡುಗಳಲ್ಲಿ ಸ್ಮರಿಸಿದ್ದಾನೆ. ನೂರಾರು ಭಜನೆಪದ ಹಾಗು ಮಂಗಳಾರತಿ ರಚಿಸಿದ್ದಾನೆ.

'ಶರಣಭಕ್ತರ ಹರಸಕಾಯ್ವ, ಗುರುಮಹೇಶ್ವರಾ।
ಧರಿಯೊಳಿರುವ ಪುರದಿ ಮುತನಾಳ।
'ಕರುಣಸಾಗರ ವರಕಲ್ಮೇಶ್ವರಾ।

೧೧೧ ಮನ್ನಿಕೇರಿ ಲಕ್ಷ್ಮಣ (೧೮೯೪–೧೯೩೬)

ಕೌಜಲಗಿ ಗೋಕಾಕ ತಾಲೂಕಿನ ಒಂದು ಗ್ರಾಮ. ಈ ಗ್ರಾಮದ ಸಮೀಪವೇ ಮನ್ನಿಕೇರಿ–ಚಿಕ್ಕ ಹಳ್ಳಿ. ಇಲ್ಲಿಯ ಉಪ್ಪಾರ ಲಕ್ಷ್ಮಣನು ಪ್ರಸಿದ್ಧ ಹಾಡುಗಾರನಾಗಿ ಹೋಗಿದ್ದಾನೆ. ಈತನು ಸ್ವತ. ಕವಿಯೂ ಇದ್ದನು. ನೂರಾರು ಲಾವಣಿ ರಚಿಸಿದ ವಿಷಯ ತಿಳಿದುಬರುತ್ತದೆ ಕೌಜಲಗಿಗ್ರಾಮದ ಶ್ರೀಶೈಲಪ್ಪ ಕಬ್ಬಿಣ ಅವರು ಲಕ್ಷ್ಮಣನು ತೀರಿಕೊಂಡು ಸು. ೪೩ ವರುಷಗಳಾಗಿರಬೇಕೆಂದೂ ಆಗ ಅವನಿಗೆ ೪೨ ವರುಷಗಳು ಇರಬೇಕೆಂದೂ ಹೇಳುತ್ತಾರೆ. ಇದರಿಂದ ಕವಿ ೧೮೯೪ ರಿಂದ ೧೯೩೬ ರ ಅವಧಿಯಲ್ಲಿ ಬಾಳಿರಬೇಕು. ಕಬ್ಬಿಣ ಅವರು ಹೇಳಿವ ಕೆಲ ಪದ್ಯಗಳಿವು.

"ಕರ್ಮ ಹೆಚ್ಚಆದವ್ಯಾಲ ಕಾಡುಕಾಲ ಹತ್ತೇತಿ
ಕೇಳಿ ಕಂಮಸ ಖೂನ ಹಿಡಿಯಲಿಲ್ಲ ಬೇಗ ತಂಗೀದ
ಅವರಿಬ್ಬರನ ವೋದ ನೀಚ ಬಂದಿನೊಳಗಿಟ್ಟಿದ್ದ
ಮುಂದ ಕೃಷ್ಣ ಹುಟ್ಟಿಬಂದ ಅವನ ಸಂಹಾರ ಮಾಡಿದ್ದ
ಇವ್ವ ದುಷ್ಟರನ್ನೆಲ್ಲ ನಾಶಮಾಡಿದರ ಪಾಪಹ್ಯಾಂಗ ಆಗತತಿ
ಏನು ತಿಳಿತತಿ ಅರ್ಥಮಾತಿಂದ
ಏನು ತಿಳಿಯದ ಹಾಡಿ ಹೋಗುದು ಅಲ್ಲ ನೀ ಬಂದ
ದೇಶದೊಳಗ ಜಾಹಿರ ನಮ್ಮ ಶಾರ ಮಾದವಾಡ
ಊರ ಬಸವೇಶೂರ ಪ್ರಸನ್ನಾದ ನಮಗ ದೇವರಾ
ಲಕ್ಷ್ಮಣ ಪದ ಮಾಡಿದಾನ ಕವಿ ಚತುರಾ
ಡಪ್ಪಿನವ್ಯಾಲ ತುರಾಯಿ ಹಚ್ಚಿ ನಾವು ಹಾಡವರ"

೧೧೨ ಯಡಾಲದ ಚೆನ್ನಪ್ಪ (೧೮೯೬–೧೯೭೪)

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಒಂದುಹಳ್ಳಿ, ಈ ಯಡಾಲ. (ಯರಡಾಲ) ತೋಟಪಟ್ಟಿಗಳಿಂದ ಸಮೃದ್ಧವಾದಂತೆ ವಿದ್ಯಾವಂತರಿಂದಲೂ ಊರು ಶೋಭಿಸುತ್ತಿದೆ. ಪ್ರೊ. ಎಸ್. ಸಿ ಹೊಗರ್ತಿ, ಎಂ.ಎ., ಎಂ.ಎ. (ನನ್ನ ಗುರುಗಳು) ಅವರ ತಂದೆಯವರೇ ಈ ಜನಪದಕವಿ ಚನ್ನಪ್ಪ.

ಚನ್ನಪ್ಪ ಹುಟ್ಟಿದ್ದು ಸು. ೧೮೯೬ರಲ್ಲಿ. ಇವರ ತಂದೆಯ ಹೆಸರು ಶಿವಲಿಂಗಪ್ಪ. ಚನ್ನಪ್ಪ ಅಂದಿನ ಕಾಲದಲ್ಲಿ ಕನ್ನಡ ೭ನೇ ಇಯತ್ತೆ ಪಾಸಾದವನು. ಇವನ ಬರಹ ವ[illegible] ಮುತ್ತಿನಂತಹದು. ಶ್ರೀ ಸದ್ಗುರು ನಾಗೇಂದ್ರ ಶಿವಯೋಗಿಗಳ ಪರಮ ಭ[illegible] ಚನ್ನಪ್ಪ ಕಾವ್ಯಕಟ್ಟುವ ಕಲೆಯನ್ನು ಈ ಶಿವಯೋಗಿಗಳ ಕೃಪಾಶೀರ್ವಾದ ದಿಂದಲೇ ಪಡೆದವನು. 'ಗುರುಪಾದೇಶ್ವರ' ಇವನ ಗುರುಗಳು. ಗುರುಗಳ ಪ್ರಭಾವವೂ ಚನ್ನಪ್ಪನ ಮೇಲೆ ಸಾಕಷ್ಟಾಗಿದೆ.

ಚನ್ನಪ್ಪಕವಿ ನೂರಾರು ಮಂಗಳಾರತಿ ಪದಗಳನ್ನು ರಚಿಸಿದ್ದಾನೆ. ಹೆಚ್ಚಾಗಿ ನಾಗೇಂದ್ರ, ಶಿವಯೋಗಿ ಕುರಿತೇ ಇವೆ. ಸು ೧೯೭೪ರಲ್ಲಿ ಸ್ವರ್ಗವಾಸಿಯಾಗಿದ್ದಾನೆ. ಮಂಗಳಾರತಿಯ ಕೆಲ ಚರಣಗಳಿವು

"ಬಾಲಲೀಲೆಯನಾಡಿದ ಭಾಗ್ಯಕೊಳ್ಳದ ಬಾಳಾರ್ಕನ್ನಾ !
ಭವದಲಿ ಬಂದು ಭವಿಗಳನುದ್ಧಾರಂಗೈದ ಮಹಿಮಾರ್ಕನ್ನಾ !
ಭಾಸರಾಂಗನಾಗಿ ಭವ್ಯಪ್ರಕಾಶದಿಂದೆ ದಿವ್ಯಕೊಳ್ಳದಿ
ಶೋಭಿಸುವ ದೀನರಕ್ಷನ್ನಾ"

"ಕವಿಪುಂಗವರ ಕರುಣಾಸಾಗರಾ |
ಕಲಿಯುವ ಶಿಶು ಮಕ್ಕಳ ಬುದ್ಧಿಗಾಧಾರಾ |
ಕಲಿಕಲಿತು ವರಕವಿಯಾದವರ ವಾಗೀಶ್ವರಾ |"

೧೧೩ ಬಂಕಾಪುರದ ಯೋಗೀಶ (೧೯೦೪–೧೯೬೭)

ಧಾರವಾಡ ಜಿಲ್ಲೆಯ ಬಂಕಾಪುರದ ಸದ್ಗುರು ಶ್ರೀ ಶಿವಾನಂದ ಗುರುಮಹಾರಾಜರ ಚಿರಂಜೀವನೇ ಈ 'ಯೋಗೀಶ' ಕವಿ. 'ಯೋಗೀಶ' ಎನ್ನುವುದು ಕವಿಯ ಕಾವ್ಯನಾಮವಾಗಿದೆ ಮೂಲಹೆಸರು ದತ್ತಾತ್ರಯ ಮನೆಯ ಹೆಸರು ಬಂಕಾಪುರ. ಹುಟ್ಟಿದ್ದು ಸು. ೧೯೦೪ ರಲ್ಲಿ.

ಚಿಕ್ಕಂದಿನಿಂದಲೂ ಅಧ್ಯಾತ್ಮದ ಪರಿಸರದಲ್ಲಿಯೆ ಬೆಳೆದುಬಂದ ದತ್ತಾತ್ರಯನು ಮುಂದೆ ಯೋಗಿಯೆನಿಸಿ ಕವಿಯೆನಿಸಿ ಸೇವಾ ಸದನಗಳನ್ನು ತೆರೆದು ಜನತೆಗೆ ಪರಮಾನಂದ ಬೋಧೆ ನೀಡುತ್ತಬಂದ ಮಹಾನುಭಾವಿಯೆನಿಸಿದ್ದಾನೆ. ಮೊದಮೊದಲು 'ಶಿವಾನಂದಸೂನು' ಎಂಬ ಅಂಕಿತದಲ್ಲಿ ಹಲವಾರು ತತ್ವಪದಗಳನ್ನು ರಚಿಸಿದ್ದಾನೆ. ಮುಂದೆ 'ಯೋಗೀಶ' ಅಂಕಿತದಲ್ಲಿ ಗುರುದೇವ ಭಜನ ಪುಸ್ತಿಕೆಯನ್ನೂ ಪ್ರಕಟಿಸಿದ್ದುಂಟು (೧೯೪೯). ಈತನು ವೇದಾಂತ ಪ್ರವಚನ ಹೇಳುವಲ್ಲಿ ಪಳಗಿದವನಾಗಿದ್ದನು. ಹರಿಹರ, ಕಾರವಾರ, ಹುಬ್ಬಳ್ಳಿ ಮೊದಲಾದ ಕಡೆ ಶಿವಾನಂದ ಮಂದಿರಗಳನ್ನು ತೆರೆದು ಸರ್ವರನ್ನೂ ಸಮಾನದೃಷ್ಟಿಯಿಂದ ಕಾಣುವ ಸೇವಾ ಮಂಟಪಗಳ ಸಂಚಾಲಕನೆನಿಸಿದ್ದನು. ಹಲವಾರು ಮಂಗಳಾರ್ತಿ ಪದಗಳನ್ನೂ ರಚಿಸಿದ್ದಾನೆ. ಈತನು ವೈಕುಂಠವಾಸಿಯಾಗಿ ಇಂದಿಗೆ ಸು ೧೨ ವರುಷಗಳಾಗಿರಬೇಕು.

'ಮಂಗಳಾರತಿ ಗುರುರಾಯಾ ಬೆಳಗುವೆ | ಮಂಗಳಾರತಿ | ಪಲ್ಲ
ಇಂದುಕೋಟಿ ತೇಜಾ ಛಂದಾತೀತ ದೇವಾ | ಮಂದಮತಿಗಳಾನೈ
ಅಂದದಿಂದ ಪಾಲಿಸು | ಮಂಗಳಾರತಿ | ॥ ೧ ॥

ಅಚಲಚಿತ್ತ ನಿಮ್ಮ | ವಚನವೇ ಪ್ರಮಾಣ
ಸಚ್ಚಿದಾತ್ಮ ನೀವೈ ನಿಚ್ಚಲಾತ್ಮನೀವುದು ॥ ೨ ॥
ಮಂದರನ್ನು ಕಾಯ್ವ | ಬಂಧನಾಶ ಕರುಣ |
ದಿಂದ ಪೊರೆಯೊ ಶಿವಾ | ನಂದ ಸದ್ಗುರುವರ' ॥ ೩ ॥

೧೧೪ **ಎಂಕಚಿ-ರಾಮಚಂದ್ರ: (೧೯೦೭-)**

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಒಂದುಹಳ್ಳಿ ಎಂಕಚಿ. ಇಲ್ಲಿಯ ಹರಿಜನ ಕುಟುಂಬಕ್ಕೆ ಸೇರಿದ ರಾಮಚಂದ್ರನು ಜನಪದ ಕವಿಯಾಗಿ ಕಂಗೊಳಿಸುತ್ತಿದ್ದಾನೆ. ವಿಜಾಪುರ ಜಿಲ್ಲೆಯಾದ್ಯಂತ ಈತನ ಪ್ರಖ್ಯಾತಿ. ಈತನಿಗೀಗ ಸು. ೬೦ ವರುಷಗಳಾಗಿರಬೇಕು. ಇದೇ ಊರ ಮಲ್ಲಿಕಾರ್ಜುನ ದೇವರನ್ನು ತನ್ನ ಹಾಡುಗಳಲ್ಲಿ ಸ್ಮರಿಸಿದ್ದಾನೆ. 'ಮಲ್ಲಿಕಾರ್ಜುನ' ಎನ್ನುವುದು ಈತನ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿರುತ್ತದೆ.

ರಾಮಚಂದ್ರನ ಉದ್ಯೋಗ ಇಂಥದೇ ಎಂದೇನೂ ಇಲ್ಲ. ಆಸ್ತಿ-ಪಾಸ್ತಿ ಯಾವುದೂ ಇಲ್ಲದ ಈತ ಕೂಲಿಗಾಗಿ ಅತ್ತಿತ್ತ ಅಡ್ಡಾಡುತ್ತಿದ್ದರೂ-ದುಡಿದು ಹೊಟ್ಟೆತುಂಬಿಕೊಳ್ಳುತ್ತಿದ್ದರೂ-ಈತನ ಜಾನಪದ ಕಾವ್ಯಶಕ್ತಿ ಯಾರೂ ಕಸಿದುಕೊಳ್ಳದ್ದು. ಜೋಡಹಳ್ಳ ಹರಿಯುವ ದಂಡೆಯೊಂದರಲ್ಲಿ ಕಾಡಸಿದ್ಧನ ದೇವಾಲಯವೂ ಕಂಗೊಳಿಸುತ್ತದೆ.

"ಸುತಿ ಹಿಡದ ಸುರುಮಾಡೆದಿ ಕೆಲಸಾ।
ಭೋಗದ ಸಾಲ್ಯಾಗ ಆಗೇದಿ ನೀ ಪಾಸಾ।
ದಾಸರ ಹುಡುಗ ನಾ ಧ್ಯಾಸ ಹೋಗಲಿಲ್ಲ ಎಷ್ಟ ಸೆಡಿಜ್ಯಾಸಾ।
ಕಲಮಡಿ ಮರಿಗ್ಯಾ ಕ್ಯಾಟ್ಯಾನ ಉಪದೇಶಾ ಸೂಳಿ ನೀನು
ಸೆಳ ಕೊಳ್ಳೋದು ಲೇಸಾ।
ಸೂಳಿ ಬಲ್ಲಳೇನ ಗೆಳೆಯನ ಬಡತಾನ ಮಡಿಮಾಡೆ ದಿನಸಾ।
ನಮ್ಮ ಕೈಯಾಗ ಸಿಕ್ಕಾದಿ ಈ ದಿವಸಾ ಜೆಕ್ಕಿನಮುಂದ ಜೆಣ್ಣಿ ಇಟ್ಟ
ರಾಸಾ।
ಜೆಣ್ಣಿ ನೋಡಿ ಬೆಕ್ಕ ಎಂದೂ ಬಿಡುವದಿಲ್ಲ ಉಂಡ ಹರಸಾ।
ಕರ್ನಾಟದಲ್ಲಿ ಎಂಕಚಿ ಊರದುರಸಾ ಗುರುವಿನ ನಾಮ ಇರವೂದು ಬಹು
ಲೇಸಾ।
ಗುರುಗಿರಿ ಮಲ್ಲೇಶಾನ ಪುತ್ರ ರಾಮಚಂದ್ರ ಗುರು ಧ್ಯಾನಮೊಳು
ದಾಸಾ।"

೧೧೫ ಹೊಸೂರ ಸೋಮಲಿಂಗ (೧೯೧೪—)

ಸವದತ್ತಿ ತಾಲೂಕಿನ ಹೊಸೂರಿಗೆ ಮುರಗೋಡ ಹೊಸೂರ ಎಂದೂ ಕರೆಯುವರು. ಇಲ್ಲಿಯ ಗೀಗೀ ಮೇಳ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅದ್ಭುತ ಸೇವೆ ಸಲ್ಲಿಸಿದ್ದನ್ನು ಸ್ಮರಿಸಬಹುದಾಗಿದೆ. ಸೋಮಲಿಂಗನಿಂದ ಈ ಮೇಳಕ್ಕೆ ಇನ್ನೂ ದೊಡ್ಡ ಹೆಸರು ಬಂದಿದೆ.

ದೊಡನಾಡ ಮನೆತನದ ಫಕೀರಪ್ಪನ ಮಗನೇ ಈ ಸೋಮಲಿಂಗ. ಸು. ೧೯೧೪ ರಲ್ಲಿ ಹುಟ್ಟಿದ ಕವಿ ಮೊದಮೊದಲು ಕಂಪನಿ–ನಾಟಕಗಳಲ್ಲಿ ಭಾಗವಹಿಸುತ್ತಿದ್ದನು. ಕಲಿತದ್ದು ಕನ್ನಡ ೫ ನೇ ಇಯತ್ತೆ ಮಾತ್ರ. ಚಿಕ್ಕಂದಿನಿಂದಲೂ ಜನಪದ ಹಾಡು ಗಳನ್ನು ಹಾಡುವತ್ತ ವಿಶೇಷ ಆಸಕ್ತಿ ತೋರಿಸಿದ್ದನು. ಸಾತಂತ್ರ್ಯ ಸಂಗ್ರಾಮದಲ್ಲೂ ಧುಮುಕಿ ೧೯೪೩ ರಲ್ಲಿ ಜೇಲು ಸೇರಿದ್ದನು. ಆದರಿಂದಾಗಿ ಸ್ವಾತಂತ್ರ್ಯಯೋಧರ ವೃದ್ಧಾಪ್ಯವೇತನ ಇವನಿಗೀಗ

ಮುಲ್ಲಪ್ಪ ಸಂಗಪ್ಪ ಸಂಪಗಾವ ಇವನ ಪ್ರಭಾವದಿಂದ ಜಾನಪದ ಹಾಡು ಗಳನ್ನು ಹಾಡುವುದಕ್ಕೆ ಪ್ರಾರಂಭಿಸಿದ ಸೋಮಲಿಂಗ ಕವಿಯು ದೇಶದ ತುಂಬೆಲ್ಲ ನಡೆಯುವ ಮೇಳಗಳಲ್ಲಿ ಭಾಗವಹಿಸಿ ಪ್ರಸಿದ್ಧಿಪಡೆದಿದ್ದಾನೆ ರಾಜ್ಯ ಹಾಗೂ ಕೇಂದ್ರ ಸರಕಾರಗಳು ತಮ್ಮ ಪ್ರಚಾರ ಇಲಾಖೆಯ ಮುಖಾಂತರ ನಡೆಯುವ ಕಾರ್ಯಕ್ರಮಗಳಲ್ಲಿ ಹಲವಾರು ಬಾರಿ ಈತನನ್ನು ಆಮಂತ್ರಿಸಿವೆ. ಆಕಾಶವಾಣಿ ಕೇಂದ್ರದಲ್ಲಿ ಹಾಡಿದ್ದಾನೆ ಜಾನಪದ ಗೀಗೀ ಮೇಳ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾನೆ.

'ಮಡಿವಾಳಸ್ವಾಮಿ' ಎಂಬುದು ಸೋಮಲಿಂಗನ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿದೆ ಗರಗ ಮಡಿವಾಳಸ್ವಾಮಿಯ ಗದ್ದುಗೆ ಪೂಜೆ ಮಾಡುವ ನಿಷ್ಠಾವಂತನಿವನು. ಲಿಂಗವಂತ ಧರ್ಮಕ್ಕೆ ಸೇರಿದ ಇವನು–ಅಷ್ಟೇ ಸದಾ ಚಾರಿಯೂ ಆಗಿದ್ದಾನೆ.

ಸೋಮಲಿಂಗನ ಉದ್ಯೋಗ–ಒಕ್ಕಲುತನವಾಗಿದೆ. ಡಪ್ಪು ಬಾರಿಸುವ ಕಲೆ ಇವನಿಗೆ ಕರತಲಾಮಲಕವಾಗಿದೆ. ಇವನಿಗೆ ಸಾತಿ ಕೊಡುವವರು–ಕಾರಿಮನಿಯ ನೀಲಪ್ಪ ಮತ್ತು ಬೈಲಹೊಂಗಲದ ರಾಮಪ್ಪ. ಸೋಮಲಿಂಗನು ಸುಮಾರು ೨೦೦ರ ಮೇಲ್ಪಟ್ಟು ಜಾನಪದ ಹಾಡುಗಳನ್ನು ರಚಿಸಿದ್ದಾನೆ. ಬೀಸುಕಲ್ಲಿನ ಪದ, ಭಲೇರಿ ಹಾಡು, ಗರತೀಹಾಡು, ಸೋಬಾನಪದ, ಲಾವಣಿಗಳನ್ನು ರಚಿಸಿದ್ದಾನೆ. ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಸುಭಾಷಚಂದ್ರ, ಬೆಳವಡಿ ಮಲ್ಲಮ್ಮ ಮೊದಲಾ ದವರ ಮೇಲೆ ಕಟ್ಟಿದ ಹಾಡುಗಳು ಮಹತ್ವದವುಗಳಾಗಿವೆ. ಈತನ ಸನ್ನಿಧಾನದಲ್ಲಿ

ಹಲವಾರು ಜನರು ಹಾಡು ಕಲಿಯುತ್ತ ಬಂದುದರಿಂದ ಇವನಿಗೆ 'ಗೀಗೀ ಮಾಸ್ತರ' ಎಂದೂ ಕರೆಯುತ್ತಾರೆ.

ಸೋಮಲಿಂಗನು ದೇಶಾಭಿಮಾನಿ, ಖಾದಿಭಕ್ತ. ಧಾರವಾಡ ಮೃತ್ಯುಂಜಯಸ್ವಾಮಿಗಳ ಪರಮಭಕ್ತ. ಮಡಿವಾಳ ಅಜ್ಜನಮೇಲೂ ಹಲವಾರು-ಹಾಡು ರಚಿಸಿದ್ದಾನೆ. ಸೋಮಲಿಂಗನಿಗೆ ಮೂವರು ಗಂಡುಮಕ್ಕಳು. ಕಲಾಕಾರರನ್ನು ಹದ ಇದ್ದಾಗ ಮಾತ್ರ ಮಾತನಾಡಿಸುವ ಜನರನ್ನು ಕಂಡು ಈ ಕವಿಗೆ ಹೇಸಿಕೆ ಎನಿಸುತ್ತದೆ. ಕೆಲಸ ಮಾಡಿದರೂ ಉಪಕರಿಸುವ ಗುಣ ಸಮಾಜಕ್ಕಿಲ್ಲ ಎಂದು ಮರುಗುತ್ತಾನೆ. ಪ್ರತ್ಯಕ್ಷ ಸಂದರ್ಶನದಲ್ಲಿ ಹೇಳಿದ ಈ ಮಾತುಗಳನ್ನು ಕೇಳಿದಾಗ ಕಲಾಕಾರರ ನೈಜಚಿತ್ರ ನಮ್ಮ ನಾಡಿನಲ್ಲಿ ಹೇಗೆ ಇದೆ ಎಂಬುದರ ಅರಿವಾಗದಿರದು. ಸೋಮಲಿಂಗ ರಚಿಸಿದ ಭಲೇರಿ ಹಾಡು, ಹಂತಿ ಹಾಡು, ಮುಲ್ಲಮ್ಮನ ಪದಗಳಲ್ಲಿ ಕೆಲ ಪದ್ಯಗಳಿವು.

'ಬಣ್ಣದಲೇನುಂಟು
ಹೆಣ್ಣಿಗೆ ಗುಣಮೇಲು
ವುಂಣಲಾರದ ಅಡಿಗಿ ವಳಿತಲ್ಲ। ಅಂದಂತೆ।
ಅನ್ಯಥಾಭಾವ ತರಬ್ಯಾಡ।'

'ಬಣ್ಣಕಿತ್ಹಾಕೀ
ಅನ್ನಾ ನಿಡುವ ತಂದೆ
ಎನ್ನಕೂಡಿಂದು ಮ್ಯಾತಾಡೊ। ಮಾತಾಡದಿದ್ರೆ
ವುಣಂದ್ರೆ ಪ್ರಾಣಾ ನೀಗುವೆ।'

'ಸುಂಕದರಾಸಿಯು।
ಶಂಕರ ಹೌದೇನೊ।
ಕಂಕೀಮುಕಣವನೀ ತುಳದಿ। ಬಸವಯ್ಯ
ಸೋಂಕಿದ ಪಾದಾ ಹುಲಸುಂಟೊ।'

'ಶರಣು ಶರಣಯ್ಯಾ
ಹರದ ಅವತಾರಿಯೆ
ಸಿರಿವುಂಟು ನಿನ್ನಿಂದ ಲೋಕಕ್ಕೆ। ವೃಷಭೇಶ।
ಗುರುಮಡಿವಾಳೇಶ ನೆನದಾನೊ'

'ಮಡಿವಾಳ ಸ್ವಾಮಿಯು।
ಆಡಿದ ಈ ಮಾತು।
ಪೊಡವಿಯುಮ್ಯಾಲ ನಡೆದಪ್ಪು। ತಿಳಿಶ್ಯಾನ
ಹಾಡುವ ಜನಕೆ ಈ ಮಾತ'

'ಕನ್ನಡ ನಾಡಿನ । ವೀರವನಿತೆಯೆಂದು । ಮಾಡತಾನ ಆಕಿ ಗುಣಗಾನಾ ।
ಮಾತಾಮಲ್ಲಮ್ಮಗ । ಪ್ರೀತಿಯಿಂದಲಿ । ಛತ್ರಪತಿಯು ಮಾಡಿದ ಶರಣಾ ।
ಮಲ್ಲಮ್ಮ ರಾಣಿಯು ಶೌರ್ಯಧೈರ್ಯಕೆ ಛತ್ರಪತಿ ಮೆಚ್ಚಿದಾ ।
ಮಾಡಿಕೊಂಡ ಆಗ ಒಪ್ಪಂದಾ ।
ಚಿಕ್ಕ ಸಂಸ್ಥಾನದ ವಡತಿ ಮಲ್ಲಮ್ಮ ರಾಜಮರ್ಯಾದಿಯಿಂದಾ
ಇರುವಂತೆ ಕೊಟ್ಟಾನ ಬಿರದಾ ॥

ಮಹಾರಾಜನ್ನ ಉದಾರಗುಣಕೆ ಮಲ್ಲಮ್ಮಾಜಿ ಆನಂದಾ
ಬರಿಶಾಳ ಇತಿಹಾಸ ಹಿಂದಾ ॥

ಶೂರ ಶಿವಾಜಿಯು । ಕುರುಹುವುಳಿಯಲೆಂದು ವೀರಗಲ್ಲೊಂದೊಂದಾ ।
ಇಡಿಶ್ಯಾಳ ಅಗಸಿಯು ಮುಂದಾ ॥

ಹೊಸೂರ ಮಡಿವಾಳೇಶ ತುಸು ವೇಳೆಯಲ್ಲಿ । ಮಲ್ಲಮ್ಮನ ಪದ ಬರೆದಾ ।
ಹಸನಾಗಿ ಕೇಳ ನೀ ಬಿಡದಾ ॥

ಮಲ್ಲಮ್ಮನ ರಾಜ್ಯ । ಮಲ್ಲಮ್ಮ ಆಳಲೆಂದು ಛತ್ರಪತಿ ಹೇಳಿ ತೆರಳಿದ್ದು ।
ಶೂರ ಶಿವಾಜಿನ್ನ । ಭಯುಗೊಳಿಸಿದ ವೀರ । ನಾರಿ ಮಲ್ಲಮ್ಮನ ಚರಿತ್ರೆಯಿಂದ॥ '

೧೧೬ ಮುರಗೋಡದ ಬಾಳಪ್ಪ (೧೯೧೫–   )

'ಹುಕ್ಕೇರಿ ಬಾಳಪ್ಪ' ಎಂದೇ ಪ್ರಸಿದ್ಧಿ ಪಡೆದ ಜಾನಪದ ಹಾಡುಗಾರನೇ ಈ ಮುರಗೋಡದ ಬಾಳಪ್ಪ. ಮೂಲತಃ ಬೈಲಹೊಂಗಲ ತಾಲೂಕಿನ ಮುರಗೋಡದಲ್ಲಿ ಸು. ೧೯೧೫ರಲ್ಲಿ ಜನಿಸಿದನು. ಈತನ ತಂದೆ ವೀರಭದ್ರಪ್ಪ, ತಾಯಿ–ಚನವೀರಮ್ಮ. ಚನವೀರಮ್ಮ ಒಳ್ಳೆಯ ಸುಶ್ರಾವ್ಯವಾಗಿ ಜನಪದ ಹಾಡು ಹೇಳುತ್ತಿದ್ದಳು. ಬೀಸುವಾಗ ಬಾಳಪ್ಪ ತೊಡೆಯಮೇಲೆ ಮಲಗಿಕೊಂಡು ತಾಯಿಯ ಹಾಡು ಕೇಳಿದುದರ ಪರಿಣಾಮವಾಗಿ ಹಾಡು ಹೇಳುವ ನಾದ ಚಿಕ್ಕಂದಿನಿಂದಲೂ ಬಾಳಪ್ಪನಿಗೆ ರಕ್ತಗತವಾಗಿಯೆ ಬಂದಂತಿತ್ತು. ಶಿವಲಿಂಗಯ್ಯ ಎಂಬ ಶಾಸ್ತ್ರಿಗಳವರಿಂದ ಸಂಗೀತ ಹೇಳಿಸಿಕೊಂಡದ್ದರಿಂದ ಅದಕ್ಕೆ ಒಂದು ಸ್ವರೂಪ ಬಂದಿತು. ಬಾಳಪ್ಪನ 'ಗಿರಕಿ' ಹೊಡೆಯುವುದನ್ನು ಕೇಳಿದವರು ತಲೆದೂಗಲೇಬೇಕು. ಅಂಥ ತನ್ಮಯತೆ, ಮಾಧುರ್ಯ ಅವನಿಗೆ ಅಂಟಿಕೊಂಡು ಬಂದಿದೆ. ಸಂಗೀತದ ಜೊತೆಗೆ ಮಾತೂ ಬಳಸಿ ಸಂಗೀತ ಕಚೇರಿಯನ್ನೇ ಏರ್ಪಡಿಸುತ್ತಾನೆ. ಬೈಲಹೊಂಗಲ ತಾಲೂಕಿನ ಒಂದು ಹಳ್ಳಿ ಮುರಗೋಡ. ಪ್ರಸಿದ್ಧ ಹಾಡುಗಾರರಾದ ರಾಣಾ ಮತ್ತು ಕುಬಣ ಅವರ ಊರೂ ಇದಾಗಿದೆ.

ಬಾಳಪ್ಪ ಮ್ಯಾಟ್ರಿಕ್‌ವರೆಗೆ ಅಭ್ಯಾಸ ಮಾಡಿದವನು. ಉಪಜೀವನಕ್ಕೆಂದು ಬೆಲ್ಲದವ್ಯಾಪಾರ ಮಾಡುತ್ತಿದ್ದನು. ಅತ್ಯಂತ ಕಷ್ಟದ ಜೀವನ ಸಾಗಿಸುತ್ತಿದ್ದ ಬಾಳಪ್ಪ ಯಾವ ವ್ಯಸನಕ್ಕೂ ಅಂಟಿಕೊಳ್ಳದೆ-ಪ್ರಾಮಾಣಿಕತೆಯಿಂದ ಬೆಳೆದುಬಂದಿದ್ದಾನೆ. ನಾಲಿಗೆ ಎಂದೂ ಅಲ್ಲದ್ದನ್ನು ಆಡುವುದಿಲ್ಲ. ಯಾವಾಗಲೂ ಸವಿನಗೆ ಮಾತು. ಹಾಡಲು ಹೋದಲ್ಲೆಲ್ಲಾ ಎಲ್ಲರಿಗೂ ಬಾಳಪ್ಪ ಬೆಲ್ಲದ್ಹೇರು.

೧೯೩೦ರಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರಿಂದ ಆವನಿಗೀಗ ಪೆನ್ಶನ್ ಕೂಡ ದೊರಕುತ್ತದೆ. ಇವನ ಹಾಡುಗಾರಿಕೆಗೆ ಮೆಚ್ಚಿಕೊಂಡ ಸರಕಾರ ಒಕ್ಕಲುತನ ಇಲಾಖೆಯಲ್ಲಿ ಸಂಗೀತ ಪ್ರಚಾರಕನೆಂದು ನಿಯಮಿಸಿಕೊಂಡಿದೆ. ಪೂಜ್ಯ ಮೃತ್ಯುಂಜಯ ಅಪ್ಪಗಳ ಆಶೀರ್ವಾದ ಬಾಳಪ್ಪನ ಮೇಲೆ. ಮುರಗೋಡ ಮಹಾಂತ ಶಿವಯೋಗಿಗಳ ಕೃಪಾಬಲ ಬಾಳಪ್ಪನಿಗೆ. ಅಲ್ಲದೆ ಶಿ. ಶಿ. ಬಸವನಾಳ, ಬೇಂದ್ರೆ, ಸ್ವಾಣಿಕ–ಮೊದಲಾದವರ–ಆತ್ಮೀಯತೆಯಿಂದ ಭಾರತ ದೇಶಕ್ಕೆಲ್ಲಾ ಬಾಳಪ್ಪ ಬೇಕಾದವನಾದನು. ಹಳ್ಳಿಯಿಂದ ದಿಲ್ಲಿಯತನಕ ಜಾನಪದ ಹಾಡು ಹೇಳಿ ಹೆಸರುವಾಸಿಯಾಗಿದ್ದಾನೆ.

ಬಾಳಪ್ಪ ಚಿಕ್ಕವನಿದ್ದಾಗ ದೊಡ್ಡಾಟಗಳಲ್ಲಿ ವೇಷಹಾಕಿ ಕುಣಿಯುತ್ತಿದ್ದನು ಅಲ್ಲಿ ಕೋಲು ಎಳೆಯುತ್ತಿದ್ದನು. ಇಂದು ಚಲನಚಿತ್ರಗಳಲ್ಲೂ ಬಾಳಪ್ಪ ಪಾರ್ಟು ಹಾಕಿ, ಹಾಡಿದ್ದಾನೆ. ತನ್ನ ೧೫ನೇ ವಯಸ್ಸಿನಿಂದ ಹಾಡುವ ಗೀಳು ಹಚ್ಚಿಕೊಂಡ ಬಾಳಪ್ಪ ಅರವತ್ನಾಲ್ಕರ ಈ ವೃದ್ಧಾಪ್ಯದಲ್ಲೂ ತರುಣನಂತೆ ಹಾಡುವ ಹುಮ್ಮಸ್ಸು ತಾಳಿದ್ದಾನೆ.

ಬಾಳಪ್ಪ ಬೇರೊಬ್ಬರ ಹಾಡುಗಳನ್ನೇ ಮೊದಮೊದಲಿಗೆ ಹಾಡುತ್ತಿದ್ದ. ಇತ್ತೀಚಿಗೆ ಸುಮಾರು ೫೦ ಹಾಡುಗಳನ್ನು ತಾನೇ ಸ್ವತಃ ರಚಿಸಿ ಜನಪದ ಕವಿಯಾಗಿ ಕಂಗೊಳಿಸಿದ್ದಾನೆ. ಮುರಗೋಡದ 'ಗವಿಸಿದ್ಧನನ್ನು' ತನ್ನ ಹಾಡುಗಳಲ್ಲಿ ಅಂಕಿತವನ್ನಾಗಿ ಇರಿಸಿಕೊಂಡಿದ್ದಾನೆ. ಮಿತ್ರ ಬಾಳಣ್ಣ ಎಂದು ತನ್ನ ಹೆಸರನ್ನು ಸೇರಿಸಿದ್ದಾನೆ.

"ನಂದ ಮರಸಾಕ ಹತ್ತಿದೇನ ಚೆನ್ನಾ। ಒಂದ ಸವನಾ। ಕಕಲಾತಿ ಇಲ್ಲ
ಪ್ರಾಣಾಗ
ಹಡದ ತಾಯಿ ತಂದಿ ಬಿಟ್ಟೇನಿ ಮಾತಬ್ಯಾಡ ನಂದೇತಿ ನಾ
ಮುದವಿ ಕೊಂಡ್ತಿ ಬಂಗಾರದಂತಾಕಿ ಆಕಿನ್ಯಾಲ ನೀ ಬಿಟ್ಟಾಕಿ
ಮಾಡತೇನ ಜ್ವಾಕಿನಾ ऽ ऽ ॥
ನನ್ನ ವಾರಿಗಿ ಬಂದರ ಮಾಡಿಕೊಳ್ತೇನಿ। ನಿನ್ನ ಲಂಡತೇನ।
ನಿನಗಾಗಿ ಕಟಿಸೇನ ಹೊಸಮಾಲ। ಗಚ್ಚಿನ ಹುಂಗಟ್ಟಿ।

ನಡಿಸೇನ ನಿನ್ನ ಹೊಟ್ಟಿ ನಾ। ನಿನ್ನ ಹೆಸರಿಳ ಖಾತೆಮಾಡಿ ಕೊಡತೇನ
ಮಾನ್ಯದ ಪಟ್ಟಿನಾ ss ॥
ದೇಶದೊಳಗ ಮುರಗೋಡದ ಊರ ಸುತ್ತೆಲ್ಲಾ।
ಜಾಹೀರ ಗುರಿಸಿದ್ದ ನೆನದಾನ ಮಿತ್ರ ಬಾಳಣ್ಣಾ।
ಹೇಳಿದ್ಹಂಗ ಕೇಳಿಕೊಂತ ಇರನಡಿ ನೀನಾ। ”

೧೧೭ ಚಿನ್ನ ಹೊಸೂರ ಮಲ್ಲೇಶಿ (೧೯೧೬—)

ಬೆಳಗಾಂವ ತಾಲೂಕಿನ ಗುಡ್ಡದ ಓರೆಯಲ್ಲಿರುವ ಒಂದು ಹಳ್ಳಿ ಚಿನ್ನ ಹೊಸೂರ. ಇಲ್ಲಿಯ ರಾಮಪ್ಪ ತಾಂಡಿಯವರ ಮಗನೇ ಈ ಮಲ್ಲೇಶಿ. ಇವನನ್ನು ಮಲ್ಲಪ್ಪ ಎಂದೂ ಕರೆಯುವರು. ಮನೆತನದ ಉದ್ಯೋಗವಾದ ಒಕ್ಕಲುತನ ಈತನ ಕಾಯಕವಾಗಿದೆ. ಸು. ೧೯೧೬ ರಲ್ಲಿ ಜನಿಸಿದ ಮಲ್ಲೇಶಿ ಏನೂ ಕಲಿಯದ ನಿರಕ್ಷರಿ. ಆದರೂ ಕಲಿತವರಿಗೂ ತಿಳಿಹೇಳುವ ಅನುಭವ ಈತನಿಗಿದೆ.

ಜನಪದ ಹಾಡು ಹೇಳುವುದೆಂದರೆ ಮಲ್ಲೇಶಿಗೆ ನೆಪ್ಪು ಉಬ್ಬು; ಹಬ್ಬದ ಊಟ. ಎಲ್ಲ ಕೆಲಸವನ್ನು ಬಿಟ್ಟು ಹಾಡು ಹೇಳುತ್ತ-ಹಾಡುವ ಹವ್ಯಾಸ. ಕೈಯಲ್ಲಿ ಡಪ್ಪು ಹಿಡಿದು ಬಾರಿಸಲೂ ಬಲ್ಲನು. ಅಷ್ಟೇ ಅಲ್ಲ ಜನಪದ ಧಾಟಿ, ಲಯ-ಗತ್ತುಗಳನ್ನು ಬಲ್ಲ ಈತನು ಸ್ವತಃ ಹಾಡು ರಚಿಸುತ್ತಾನೆ. ಅಲ್ಲಿಯೇ ಪದಕಟ್ಟಿ ಹಾಡುತ್ತಾನೆ. ಬೇರಾದವರು ಬರೆದಿಡಬೇಕು. ಅಂಥ ಪ್ರತಿಭಾವಂತ ಜನಪದ ಕವಿ ಇವನು. ಮಲ್ಲೇಶಿ-ದೊಡ್ಡಾಟಗಳಲ್ಲೂ ಭಾಗವಹಿಸುತ್ತಿದ್ದನು. ಇದೀಗ ೬೦ ವರುಷ ದಾಟಿದ್ದರೂ ಮಾತು ಹೇಳುವ, ಹಾಡುವ ಹುಮ್ಮಸ್ಸು ಈತನಿಗೆ. ಮಹಾತ್ಮಾಗಾಂಧಿ, ಕಿತ್ತೂರ ಚೆನ್ನಮ್ಮ, ಸಿಂಧೂರ ಲಕ್ಷ್ಮಣ, ಭಾಪಿಹಾಳದ ದೇವರಕೊಂಡ ಅಜ್ಜ ಮೊದಲಾದ ಐತಿಹಾಸಿಕ ವ್ಯಕ್ತಿಗಳ ಮೇಲೆ ಹಾಡು ರಚಿಸಿದ್ದಾನೆ. ಕುಟುಂಬಯೋಜನೆ, ರೈತ, ಕಲಿಯುಗಗಳ ಮೇಲೂ ಹಾಡು ಬರೆದಿದ್ದಾನೆ.

ಈತನ ಅಂಕಿತ 'ಚಂದನಹೊಸೂರ ಮಲ್ಲೇಶಿ' ಎಂದು ಇದೆ. ಚಿನ್ನ ಹೊಸೂರಿಗೆ 'ಚಂದನ ಹೊಸೂರ' ಎಂದೂ ಕರೆಯುತ್ತಾರೆ.

ಉದಾಹರಣೆಗಾಗಿ:

'ಚಂದನ ಹೊಸೂರ ಮಲ್ಲೇಶಿ ಸಹಿಮಾಡಿ ಹೇಳ್ತಾನ
ಬಂದ್ರಿ ಬರುವ ಸೂಳ್ಯಾರ ತಿಮ್ಮಾಟ ಭಾಳ।'

'ಸಿರಿಹಂಡದ ಆಕಳ ಒದ್ಯಾಟ ಭಾಳ।
ಅರೆಗ್ಹಾ ಇದ್ದಾಕಿ ಅರ್ಭಾಟ ಭಾಳ।
ತುಂಬಿದ ಕೊಡಾ ಎಂದೂ ತುಳಕಾಡೆಲ್ಲಾ।

ಸೇರ ಜ್ವಾಳ ಇದ್ದಾಕಿ ಕೇರ್ಯಾಟ ಭಾಳ।

.. ..'

'ಮನ್ಯಾಗ ತಿಡ್ತಾ ಬರುವದು ಅಡ್ತಾ ಮಲಮಗ ಮನಿಯಾಗ ಇರಬಾರದು।
ಬಾಗಲದಾಗ ನ್ಯಾಯಿ ಹಚ್ಚ್ಯೋದ ನಾಯಿಸುಳಿ ಆಯಿಮನ್ಯಾಗ
ಇರಬಾರದು। ಗೀ ಗೀ

.. ..

ಚಂದನ ಹೊಸೂರ ಮಲ್ಲೇಶಿ ಕವಿಮಾಡಿ ಹೇಳತಾನ ಇಲ್ಲದ ಹೆಣ್ಣ
ಇರಬಾರದು।'

೧೧೮ ತಿಗಡೊಳ್ಳಿಯ ಮರಿಕಲ್ಲಪ್ಪ (೧೯೨೨-)

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ತಿಗಡೊಳ್ಳಿ ಗ್ರಾಮವು ಸ್ವಾತಂತ್ರ್ಯಯೋಧರ, ಕುಸ್ತಿ ಪೈಲ್ವಾನರ ಜನ್ಮಭೂಮಿಯಾದಂತೆ ಜನಪದಕವಿಗಳಿಗೂ ತವರುಮನೆಯಾಗಿದೆ. ಇಲ್ಲಿಯ ರೈತಮನೆತನದಲ್ಲಿ ಹುಟ್ಟಿ ಬೆಳೆದ ಮರಿಕಲ್ಲಪ್ಪ ಮಲಶೆಟ್ಟಿ ಪ್ರಸಿದ್ಧ ಒಕ್ಕಲಿಗನಾಗಿದ್ದಾನೆ. ಪೈಲ್ವಾನನೂ ಅಹುದು. ಜೊತೆಗೆ ಜಾನಪದ ಕವಿಯೂ ಆಗಿ ಕಂಗೊಳಿಸಿದ್ದಾನೆ. ಇವನ ತಂದೆ ರುದ್ರಪ್ಪನವರು ಕೂಡ ಲಾವಣಿ ಹಾಡುವಲ್ಲಿ ಪ್ರಸಿದ್ಧಿ ಪಡೆದಿದ್ದರು. ಇಂಚಲದ ಕೆಂಚನಾಯ್ಕ, ಗೋಕಾಕದ ಸಾತೂಕ್ಯಾಮಣ್ಣ ಹಾಗೂ ತೇರದಾಳದ ಗೋಪಾಳ ದುರದುಂಡಿ ಮೊದಲಾದ ಕವಿಗಳು ರಚಿಸಿದ ಜನಪದ ಹಾಡುಗಳನ್ನು ತಂದೆಯಿಂದ ಕಲಿತುಕೊಂಡ ಮರಿಕಲ್ಲಪ್ಪ ಚಿಕ್ಕಂದಿನಿಂದಲೂ ಹಾಡಲು ಕಲಿತಿದ್ದನು. ವಯಸ್ಸಿಗೆ ಬಂದಾಗಲಂತೂ ಕಲ್ಹೊಳ್ಳಿ ಪಿಂಜಾರ, ಕೌಲಗುಡ್ಡ ರತ್ನಾಬಾಯಿ ಇವರ ಗೀಗೀ ಪದಗಳನ್ನು ಕೇಳಿ ಪ್ರಭಾವಿತನಾಗಿ ತಾನೂ ಅಂತಹ ಪ್ರಸಿದ್ಧ ಹಾಡುಗಾರನಾಗಬೇಕೆಂದು ಬಯಸಿದನು. ಅದರಂತೆ ಪ್ರಯತ್ನವನ್ನೂ ಮಾಡಿದನು.

ಮರಿಕಲ್ಲಪ್ಪನ ತಂದೆ-ತನ್ನ ಮಗ ಕುಸ್ತಿಪಟು ಆಗಲೆಂದು ಬಯಸಿದ್ದರಿಂದ ಹಾಡುವ ಕಡೆಗೆ ಅಲಕ್ಷ್ಯ ತಾಳಿದನು. ಮುಂದೆ ೧೯೪೨ರಲ್ಲಿ ಚಳುವಳಿಯಲ್ಲಿ ಭಾಗವಹಿಸಿದನು. ಕಕ್ಕಂದಿರಾದ ಶಿವಪ್ಪನವರ ಮುಂದಾಳುತನದಲ್ಲಿ ಚಳುವಳಿಯಲ್ಲಿ ಸಕ್ರಿಯ ಭಾಗವಹಿಸಿ-ಬ್ರಿಟಿಷರ ವಿರುದ್ಧ ಹೋರಾಡಿದನು. ಇದರಿಂದ ಜೇಲೂ ಅನುಭವಿಸಿ ಬಂದನು. ಜೇಲಿನಲ್ಲಿ ಇವನಿಗೆ ಹುಲಕುಂದ ಭೀಮಕವಿಯ ಪರಿಚಯವಾದುದರಿಂದ ಅಲ್ಲಿ ಹಲವಾರು ಜನ ಸೇರಿ ಒಂದು ಗೀಗೀ ಮೇಳವನ್ನೇ ಕಟ್ಟಿದರು. ಭೀಮಕವಿ ಹಾಡುಗಾರಿಕೆಯಲ್ಲಿ ಹಾಗೂ ರಚನೆಯಲ್ಲಿ ಮರಿಕಲ್ಲಪ್ಪನಿಗೆ ದೀಕ್ಷೆ ಕೊಟ್ಟನು. ಹುರಿದುಂಬಿಸಿದನು.

ಮರಿಕಲ್ಲಪ್ಪ ಒಂದೂವರೆ ವರುಷ ಜೇಲುವಾಸ ಸೋಸಿ ಹೊರಬಂದನು. ಬಾಳಪ್ಪ ಮತ್ತು ಹನುಮಂತಪ್ಪ ಎಂಬ ಇಬ್ಬರು ಹರಿಜನ ಕಲಾಕಾರರನ್ನು ಕೂಡಿ ಕೊಂಡು ಗೀಗೀ ಮೇಳ ಕಟ್ಟಿಕೊಂಡನು. ಕೆಲವೇ ದಿನಗಳಲ್ಲಿ ನಾಡಿನ ತುಂಬ ಸಂಚರಿಸಿ ಹಾಡು ಹಾಡಿ ಪ್ರಸಿದ್ಧಿ ಪಡೆದನು. ೧೯೩೫ರಿಂದತ್ತ ಸ್ವತಃ ಹಾಡು ರಚಿಸುವ ಕಲೆ ಗಿಟ್ಟಿಸಿಕೊಂಡ ಮರಿಕಲ್ಲಪ್ಪ ನೂರಾರು ಹಾಡು ರಚಿಸಿದ್ದಾನೆ.

೧೯೩೫ರಲ್ಲಿ ಮಲಪ್ರಭೆಗೆ ಮಹಾಪೂರ ಬಂದಾಗ ಆದ ಹಾನಿಯನ್ನು, ಭೀಕರ ದೃಶ್ಯವನ್ನು ಕಣ್ಣಾರೆ ಕಂಡ ಈ ಕವಿಗೆ ಹೊಸ ಸ್ಫೂರ್ತಿ ದೊರೆಯಿತು. ಕಾವ್ಯಸೆಲೆ ಚಿಮ್ಮಿತು. ಅಂದಿನಿಂದ ಹಲವಾರು ಹಾಡು ರಚಿಸುತ್ತ, ಹಾಡುತ್ತ, ಕಲಿಸುತ್ತ ಬಂದಿದ್ದಾನೆ.

ಮರಿಕಲ್ಲಪ್ಪ ಶಾಲೆಗೆಹೋಗಿ ಓದಿದವನಲ್ಲ. ಮನೆಯಲ್ಲಿಯೇ ಸ್ವಂತ ಪರಿಶ್ರಮ ದಿಂದ ಓದು ಬರೆಯಲು ಬಲ್ಲವನು. ೧೯೪೫ರಲ್ಲಿ ಧಾರವಾಡ ಆಕಾಶವಾಣಿ ಕೇಂದ್ರ ಇವನನ್ನು ತನ್ನ ಕಲಾಕಾರನೆಂದು ಆಯ್ಕೆ ಮಾಡಿಕೊಂಡು ಗೌರವಿಸಿತು. ಅವರು ಹೇಳಿದಂತೆಯೆ ಪದಗಳನ್ನು ರಚಿಸಬೇಕೆನ್ನುವ ಪಾರತಂತ್ಯಕ್ಕೆ-ಶರಣು ಹೊಡೆದು ನಿಮ್ಮಲ್ಲಿ ಹಾಡುಗಳನ್ನೇ ಹೇಳುವ ಗೊಡವೆ ಬೇಡ ಎಂದು ಅದರ ಹುಸಾಬರಿಯನ್ನೇ ಬಿಟ್ಟುಬಿಟ್ಟಿದ್ದಾನೆ. ಹೊತ್ತುಬಂದತ್ತ ಜಾರಿಕೊಳ್ಳುವ, ಸ್ವಾರ್ಥ-ವಂಚನೆ-ಡಂಭಾ ಚಾರಗಳಿಗೆ ಮರಿಕಲ್ಲಪ್ಪ ರೋಸಿಹೋಗಿದ್ದಾನೆ. ಮಾತನಾಡದಿರುವುದೇ ಲೇಸೆಂದು ಮೌನ ತಾಳಿದ್ದಾನೆ. ಇವರ ಮಗ-ಇಂದು ಹೊಸಪೇಟೆಯಲ್ಲಿ ಕನ್ನಡ ಅಧ್ಯಾಪಕ-ಬಸವರಾಜ ಮಲಶೆಟ್ಟಿ ಜಾನಪದ ಹಾಡುಗಳನ್ನೂ ಹಾಡುತ್ತಾರೆ. ಬಯಲಾಟಗಳ ಮೇಲೆ ಪ್ರೌಢ ಪ್ರಬಂಧ ಬರೆದಿದ್ದನ್ನು ಸ್ಮರಿಸಬಹುದು.

ನೂರಾರು ಗೀಗೀ ಪದಗಳ ಜೊತೆಗೆ, ಹಂತಿಹಾಡು, ಹೋಳೀಪದ, ಭಲೇರಿ ಹಾಡು, ಭಜನೆಪದ ಹಾಗು ಲಾವಣಿಗಳನ್ನೂ ರಚಿಸಿದ್ದಾನೆ. 'ನಿಜಗುಣಿ' ಆಟ ವನ್ನೂ ರಚಿಸಿ ೮-೧೦ ಸಲ ಆಡ ಹಚ್ಚಿದ್ದಾನೆ. ಕುಸ್ತಿಕಲೆಯ ಬಗ್ಗೆಯಂತೂ ಅಮಿತೋತ್ಸಾಹ. ಬಸವಣ್ಣ, ಸಿರಿಯಾಳ, ೪೦ರ ಚಳವಳಿ, ಕಿತ್ತೂರ ಚೆನ್ನಮ್ಮ, ಅನಸೂಯಾ, ಹೋಳಿಯ ಹಾಡು, ಕುಸ್ತಿಪದ ಮೊದಲಾದವು ಪ್ರಮುಖವಾಗಿರುತ್ತವೆ.

ಮರಿಕಲ್ಲಪ್ಪನ ಹಾಡುಗಳಲ್ಲಿ ಬರುವ ಅಂಕಿತ

'ತಿಗಡೊಳಿ ಊರಿನ ಮಾರುತಿ' ಯಾಗಿದೆ.

'ತಿಗಡೊಳ್ಳಿ ಮಾರುತಿ ದಯದಿಂದಾ |
ಮರಿಕಲ್ಲ ಕವಿ ಮಾಡಿದಾ'

ಕಿತ್ತೂರ ಚೆನ್ನಮ್ಮನ ಹಾಡಿನಲ್ಲಿ ಬರುವ ಕೆಲಸಾಲುಗಳಿವು:

"ಕಿತ್ತೂರ ಸಂಸ್ಥಾನದೊಳು ರಾಜ್ಯಭಾರ ಮಾಡುವಂಥ ಶಿವಲಿಂಗರುದ್ರ
ಮರಣ ಹೊಂದಿದರಾ | ವಟ್ಟಗೂಡಿ ದತ್ತಕ ಮಾಡಿದರಾ ॥
ಕಣ್ಣೂರ ಮಲ್ಲಪ್ಪಸೆಟ್ಟಿ ಕಂಪನಿ ಸರಕಾರಕ್ಕ ವಳಗಿಂದೊಳಗ
ಮಾಡಿದಾನ ಪಿತೂರಾ | ಬರದ ಪತ್ತರಾ ॥ ೧ ॥

ಕಪಿಕುಲದ ಪಿರಂಗೇರ್ನ ಕೈಮಾಡಿ ಕರದಂಗಾತು ಹಾತವರದ
ಬಂದ ಹೊಕ್ಕರ ಕಿತ್ತೂರಾ | ಅಲ್ಲಿ ಅಧಿಕಾರಿಗಳ ಮನಸ ಒಡಸಿದರಾ
ಸಂಸ್ಥಾನ ಕೈಸೇರೀ ತಂತ ಖಜಾನಿಗಳನ್ನ ಸೀಲಮಾಡಿ
ಶಾಮರಾಯ ಮಲ್ಲಪ್ಪಸೆಟ್ಟಿಗೆ ಒಪ್ಪಿಸಿದರಾ | ಎಲ್ಲಾ ಅಧಿಕಾರಾ ॥ ೨ ॥
ಮನಸಿನೊಳಗ ಮಾಡಿದ ಸಾಸ ನೆನಸಗೊಡದ ಆದೀತಂತ
ಉಲ್ಲಾಸದಿಂದ ಇಬ್ರು ಉಬ್ಬಿದರಾ ಒಳ್ಳೆಉಮ್ಮೇದ್ವರಾ ॥
ಕುಟಿಲ ಕಾರಸ್ಥಾನವಿದು ಕಣ್ಮುಂದ ಆಗೋದಕಂಡು ಚನ್ನಮ್ಮಾಜಿ
ಹಲ್ಲತಿಂದ್ಲ ಕರಾಕರಾ । ಆಗ ಇಲ್ಲ ಖಬರಾ ॥ ೩ ॥
ಕಷ್ಟಸಹಿಸಿ ಚನ್ನಮ್ಮ ರಾಣಿ ಕರಕೇಳತಾಳ ತನ್ನ ಸಂಸ್ಥಾನದ
ಉಪ್ಪ ಉಂಡ ಬಂಟರಾ । ಬಂದ್ರ ಎಲ್ಲಾರಾ |
ಉಪಾಯೇನ ಮಾಡೂಣಂತ ಒಟ್ಟಗೂಡಿ ಮಾತಾಡತಾರ
ಸಂಧಾನಾಗೋದೊಂದೆ ಸಥ್ಯ ವಿಚಿಯಾರಾ | ಬಂದ್ರ ಪತ್ತಾರಾ ॥ ೪ ॥
.. ..
.. ..
ತಿಗಡೊಳ್ಳಿ ಮಾರುತಿದಯದಿಂದಾ । ಮರಿಕಲ್ಲ ಕವಿಮಾಡಿದಾ ॥
.. .."

೧೧೯ ಅಥಣಿಯ ಮುರಲೀಧರ (೧೯೨೨-)

'ಅಥಣಿ' ಬೆಳಗಾವಿ ಜಿಲ್ಲೆಯ ತಾಲೂಕ ಸ್ಥಳವಾಗಿದೆ. ಇಲ್ಲಿಯ ಸಿದ್ಧರಾಮ ಜಾಧವ ಅವನ ಮಗನೇ ಮುರಲೀಧರ ಕವಿ. ಇದು ಕವಿಯ ಕಾವ್ಯನಾಮವೂ ಆಗಿದೆ. ಈತನ ಹೆಸರು 'ಪಂಡಿತ' ಎಂದಿದೆ. ಗ್ರಾಮದೇವತೆಯಾದ ಸಿದ್ಧೇಶ್ವರನನ್ನು ತನ್ನ ಹಾಡುಗಳಲ್ಲಿ ಸ್ಮರಿಸಿದ್ದಾನೆ. ತೇರದಾಳ ಬಾಲತುಕಾರಾಮನ ಶಿಷ್ಯನಿವನು.

ಮುರಲೀಧರ ಕಲಿತದ್ದು -ಮ್ಯಾಟ್ರಿಕ್‌ವರೆಗೆ. ತೇರದಾಳ ಬಾಲತುಕಾರಾಮನ ಹಾಡುಗಾರಿಕೆಗೆ ಮನಸೋತು ಗಂಡು ಹೆಚ್ಚು ಎಂದು ಸಾರುವ ಹರದೇಶಿ ಹಾಡು

ಗಳನ್ನು ರಚಿಸಹತ್ತಿದನು. ೫೭ ವರುಷದ ಮುರಲಿಗೆ ಸಲೀಸಾದ ಮೈಕಟ್ಟು. ಪ್ರಾಮಾಣಿಕ ಮನುಷ್ಯ. ಎಂಥವರನ್ನೂ ಆಕರ್ಷಿಸುವ ವ್ಯಕ್ತಿತ್ವವಿದೆ.

ಮಹಾಭಾರತ ರಾಮಾಯಣದ ಕಥೆಗಳನ್ನು ಆಯ್ದುಕೊಂಡು ಹಾಡು ರಚಿಸುವಲ್ಲಿ ಪಳಗಿದವನಾಗಿದ್ದಾನೆ. ಮೇಲಾಗಿ ಪ್ರಸಂಗಕ್ಕೆ ತಕ್ಕಂತೆ ಹಾಡು ಹೇಳಿಕೊಡುವ ಆಶು ಕವಿಯೂ ಆಗಿದ್ದಾನೆ. ನೂರಾರು ಲಾವಣಿಗಳನ್ನೂ ರಚಿಸಿದ್ದಾನೆ. ಅಥಣಿಯ ಮುರುಘೇಂದ್ರ ಸ್ವಾಮಿಗಳನ್ನು ಸ್ಮರಿಸಿದ್ದುಂಟು.

"ಅಥಣಿಯೊಳು ಶ್ರೀ ಮುರುಘೇಂದ್ರನೆಂದು ನಾಡೊಳು
ಆಗೇದ ನಿಂದು ವಾಹಿನಾ।
ಭಕ್ತ ಮುರಲೀಧರನ ಭಕ್ತಿಗೆ ವರಗೈದು ಜಯಾ
ಕೊಡೊ ಜಗದ ನಾರಾಯಣಾ।"

ಇನ್ನೂ ಈತನ ಹಾಡುಗಳು ದೊರಕಬೇಕಾಗಿದೆ. ಇವನ ಹತ್ತರವಿದ್ದ ಜೋಪಡಿಯನ್ನೇ ಒಯ್ದವರು ತಿರುಗಿಸಿಲ್ಲವಂತೆ.

ಹೊಸೂರ ದುಂಡಪ್ಪ (೧೯೨೬)

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಒಂದು ಹಳ್ಳಿ ಹೊಸೂರ. ಇಲ್ಲಿಯ ಒಡಿಗೇರ ದುಂಡಪ್ಪನು ಜನಪದ ಹಾಡು ರಚಿಸುತ್ತಾನೆ. ಪ್ರಸಿದ್ಧ ಕೀರ್ತನಕೇಸರಿಯಾದ ಶಿವಲಿಂಗ ಕವಿಗಳ ಶಿಷ್ಯನಿವನು. ದುಂಡಪ್ಪ ಕೇವಲ ಕವಿಯಷ್ಟೆ ಅಲ್ಲ, ಶ್ರೇಷ್ಠ ಜಾನಪದ ಕಲಾಕಾರನೂ ಆಗಿದ್ದಾನೆ. ಉದ್ಯೋಗ ಒಡಿಗತನವಿದ್ದುದರಿಂದ ಬಣ್ಣ; ಚಿತ್ರಕೆತ್ತುವಲ್ಲೂ ಬಲ್ಲಿದನು. ಶಿಲ್ಪಕಲೆಯಲ್ಲೂ ನಿಷ್ಣಾತ. ಹಾರ್ಮೋನಿಯಂ ಕೂಡ ಬಾರಿಸುತ್ತಾನೆ.

ಯಾವ ಓದು ಬರಹ ಬಾರದ ದುಂಡಪ್ಪ ಜನಪದ ಹಾಡುಗಳನ್ನು ಬಲ್ಲವನಾದ್ದರಿಂದ, ಆ ಹಾಡಿನ ಗತ್ತು-ತಾಳಗಳಿಗೆ ತಕ್ಕ ಪದ್ಯಗಳನ್ನು ಸ್ವತಃ ಸೃಷ್ಟಿಸಬಲ್ಲವನಾಗಿದ್ದಾನೆ. ಸುಶ್ರಾವ್ಯವಾಗಿ ಹಾಡುವ ಕಲೆಯೂ ಇವನಿಗೆ ಗೊತ್ತು. ಬಯಲಾಟದಲ್ಲಿ ಸ್ವತಃ ವೇಷಧರಿಸುತ್ತಾನೆ. ನಿಜಗುಣಿಯ ವೇಷ ಹಾಕುವಲ್ಲಿ ಹೆಸರು ಗಳಿಸಿದ್ದಾನೆ. ೫೨ ವರುಷದ ದುಂಡಪ್ಪ 'ಹೊಸೂರ ಶಿವಲಿಂಗ ಕವಿಯ ಶಿಷ್ಯ' ಎಂದು ಅಂಕಿತ ಹಾಕುತ್ತಾನೆ.

ಓಪಾಯ್ತು ಪದ, ಡೊಳ್ಳಿನ ಹಾಡು, ಲಾವಣಿ, ಅನುಭಾವಗೀತೆ ಮೊದಲಾದ ನೂರಾರು ಹಾಡು ರಚಿಸಿದ್ದು ತಿಳಿದು ಬರುತ್ತದೆ

'ದೇವನ್ನ ಉಣಿಸಿ ಮನೆಗೆ ಬಂದಾನ ಖರೆ ಅನಬೇಕೊ ಅಂತಾ ಭಕ್ತರನಾ।

ಸುತ್ತ ದೇಶದಾಗ ಶಾರ ಹೊಸ ಊರ್। ಕವಿ ಹುಚ್ಚ್ಯಾದ ರತನಾ।
ಗುರು ಶಿವಲಿಂಗನ ಕರುಣಾ ಅವರ ಶರಣ ಹೇಳಿದ ಕರುಣಾ। ಸಾಕ
ಮಾಡ್ರಿ ಸಾಂಬನ ಕಥನಾ॥

● ●

ಅಗ್ರಹಾರ ನೀಲಗುಂದ

ಎಸ್. ರಾಜಶೇಖರ

ಶಿಕ್ಷಣ, ವಾಸ್ತುಶಿಲ್ಪ ಮತ್ತು ಆಡಳಿತ ವ್ಯವಸ್ಥೆಗೆ ಅಗ್ರಹಾರಗಳು ತಮ್ಮದೇ ಆದ ವಿಶಿಷ್ಟಕೊಡುಗೆಯನ್ನು ನೀಡಿವೆ. ಅನೇಕ ಅಗ್ರಹಾರಗಳು ಮಧ್ಯಯುಗೀನ ಕಾಲದಲ್ಲಿ ತಮ್ಮ ಪರಮೋಚ್ಚಸ್ಥಿತಿ ಮುಟ್ಟಿದುದನ್ನು ಕರ್ನಾಟಕವು ಕಂಡಿದೆ. ಇವುಗಳಲ್ಲಿ ಕೆಲವು ಮಧ್ಯಯುಗೀನ ಕಾಲದ ಪ್ರಾರಂಭದಲ್ಲಿ ಮಹತ್ವದ ಪಾತ್ರವಹಿಸಿದ್ದರೆ, ಇನ್ನು ಕೆಲವು ಕಲ್ಯಾಣಿ ಚಾಲುಕ್ಯರ ಮತ್ತು ಹೊಯ್ಸಳರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದು ಪ್ರಾಬಲ್ಯವನ್ನು ಸ್ಥಾಪಿಸಿದುದು ಕಂಡುಬರುತ್ತದೆ. ತುಂಗಭದ್ರೆಯ ಎಡಬಲಗಳಲ್ಲಿರುವ ಅನೇಕ ಅಗ್ರಹಾರಗಳು ದೇವಾಲಯಗಳನ್ನು ನಿರ್ಮಿಸುವುದರ ಮೂಲಕ ಕಲ್ಯಾಣಿಚಾಲುಕ್ಯರ ಕಾಲದ ಶಿಲ್ಪಕಲೆಗೆ ಸಾಕಷ್ಟು ಪೋಷಣೆಯನ್ನು ಒದಗಿಸಿವೆ. ಉದಾಹರಣೆಗೆ ತುಂಗಭದ್ರೆಯ ದಕ್ಷಿಣಕ್ಕಿರುವ ಕುರುವತ್ತಿ, ನೀಲಗುಂದ ಹೊಳಲು, ಹೂವಿನಹಡಗಲಿ ಹಾಗೂ ಕೋಗಳಿ ಮೊದಲಾದವುಗಳನ್ನು ಹೆಸರಿಸಬಹುದು.

ಪ್ರಸ್ತುತ ಲೇಖನವು ಅಗ್ರಹಾರ ನೀಲಗುಂದಕ್ಕೆ ಸಂಬಂಧಪಟ್ಟಿದೆ. ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ನೀಲಗುಂದದ ಮೇಲ್ಮೆಯನ್ನು ಕಂಡುಕೊಳ್ಳುವಲ್ಲಿ ಇಲ್ಲಿಯ ಶಾಸನಗಳು ಉಪಯುಕ್ತ ಸಾಮಗ್ರಿಗಳನ್ನು ಒದಗಿಸುತ್ತವೆ.

ಅಗ್ರಹಾರ ನೀಲಗುಂದವು ಕಲ್ಯಾಣಿಚಾಲುಕ್ಯ ಅರಸ ತ್ರಿಭುವನ ಮಲ್ಲದೇವನ ಕ್ರಿ. ಶ. ೧೦೭೯ ರ ಶಾಸನದಲ್ಲಿ ಮೊದಲ ಸಲ ಕಾಣಿಸಿಕೊಂಡಿದ್ದು ನಂತರ ಸು. ೧೩೦೯ ರ ವರೆಗಿನ, ಕಲ್ಯಾಣಿಚಾಳುಕ್ಯ, ಕಳಚುರ್ಯ ಮತ್ತು ಹೊಯ್ಸಳರಿಗೆ ಸಂಬಂಧಿಸಿದ ಅನೇಕ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಇದನ್ನು ಶಾಸನಗಳಲ್ಲಿ

"ಅಗ್ರಹಾರ ಸೀರುಗುಂದ'[೧] ಮತ್ತು 'ಅಗ್ರಹಾರ ಸೀಗ್ಗುಂದ"[೨] ಎಂದು ಕರೆಯಲಾಗಿದೆ. ಕ್ರಿ. ಶ. ೧೦೩೯ ರ ಸುಮಾರಿಗಾಗಲೇ[೩] ಸೀಲಿಗುಂದವು ಅಗ್ರಹಾರವಾಗಿ ಬೆಳವಣಿಗೆ ಹೊಂದಿ ಜನಜೀವನದಲ್ಲಿ ಪ್ರಮುಖಪಾತ್ರವಹಿಸುವ ಅನೇಕ ದೇವಾಲಯಗಳನ್ನು ಹೊಂದಿತ್ತು. ಅನೇಕ ಅಗ್ರಹಾರಗಳಂತೆ ಸೀಲಿಗುಂದವು ಜನತೆಯ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ಅಗ್ರಪಾತ್ರವನ್ನು ವಹಿಸಿದುದು ಕಂಡುಬರುತ್ತದೆ.

ಕಲ್ಯಾಣಿಚಾಳುಕ್ಯ ತ್ರಿಭುವನಮಲ್ಲ[೪] ಮೊದಲಾದವರ, ಕಳಚುರ್ಯ ಭುಜಬಲ ಚಕ್ರವರ್ತಿ ಬಿಜ್ಜಲದೇವ[೫] ಹಾಗೂ ಹೊಯ್ಸಳ ಇಮ್ಮಡಿ ನರಸಿಂಹರ[೬] ಆಧೀನಕ್ಕೆ ಒಳಪಟ್ಟ ಸೀಲಗುಂದವು ಸುಪ್ರಸಿದ್ಧ ಕೋಗಳಿ (೫೦೦) ವಿಭಾಗಕ್ಕೆ ಸೇರಿದುದಾಗಿತ್ತು[೭]. ಈಗಿನ ಬಳ್ಳಾರಿ ಜಿಲ್ಲೆಯ ಇತರ ಐತಿಹಾಸಿಕ ಸ್ಥಳಗಳಂತೆ ಕೋಗಳಿ ಜೈನಧರ್ಮದ ಪ್ರಮುಖ ಕೇಂದ್ರವಾಗಿತ್ತು. ಅಲ್ಲಿ ಲಭ್ಯವಿರುವ ಜೈನ ಮೂರ್ತಿಗಳು ಹಾಗೂ ಬಸದಿಯ ಅವಶೇಷಗಳು ಈ ವಿಷಯವನ್ನು ಸ್ಪಷ್ಟಪಡಿಸುತ್ತವೆ. ಗಂಗ ದುರ್ವಿನೀತನು ಇಲ್ಲಿ ಬಸದಿಯೊಂದನ್ನು ಕಟ್ಟಿಸಿದುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು[೮]. ಇಲ್ಲಿ ದೊರೆತಿರುವ ಅನೇಕ ಅವಶೇಷಗಳಲ್ಲಿ ಪಾರ್ಶ್ವನಾಥನ ಭವ್ಯ ಮೂರ್ತಿ ಉಲ್ಲೇಖನೀಯವಾಗಿದೆ. ಕೋಗಳಿ ೫೦೦ ವಿಭಾಗವು ನೊಳಂಬವಾಡಿ ೩೨೦೦೦ ದ ಉಪವಿಭಾಗವಾಗಿತ್ತು. ಶಾಸನಗಳು ಈ ವಿಭಾಗದ ಹಾಗೂ ಇದಕ್ಕೆ ಒಳಪಟ್ಟ ಅನೇಕ ಪಟ್ಟಣಗಳನ್ನು ಸುಂದರವಾಗಿ ವರ್ಣಿಸುತ್ತವೆ. 'ಜಲನಿಧಿವೇಷ್ಟಿತಾವನಿಯೊಳೊಪ್ಪುವ ಕುಂತಳದೇಶಮೊಳ್ತ್ರನಂಗೊಳಿಪ ಮುಖಕ್ಕೆ ನಾಶಿಕವೆನಿಪ್ಪ ನೊಣಂಬವಾಡಿ ನಾಡೊಳಗಿದು ದೃಷ್ಟಿ ತಾನೆನಿಪ ಕೋಗುಳಿ ನಾಡೊಳಗ್ರಹಾರ—'[೯] ಮುಂತಾಗಿ ಶಾಸನಗಳಲ್ಲಿ ವರ್ಣನೆ ಬರುತ್ತದೆ. ಕ್ರಿ. ಶ. ೧೧೦೮ ರ ಒಂದು ಶಾಸನದಲ್ಲಿ ಸೀಲಿಗುಂದವು ಬಿಕ್ಕಿಗ ೭೦ ರ ಶ್ರೇಷ್ಠ ಅಗ್ರಹಾರವೆಂದು ಉಲ್ಲೇಖಗೊಂಡಿದೆ.[೧೦] ೧೧೧೦ ರ ಶಾಸನದಲ್ಲಿ ಅಗ್ರಹಾರ ಸೀಲಿಗುಂದವನ್ನು 'ಕೋಗಳಿಯಯ್ನೂಱಱ

---

೧ ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಪುಟ ೯, ಭಾಗ ೧, ನಂ ೧೮೫ ಮತ್ತು ೨೯೩

೨ ಅದೇ, ೧೮೧ ಮತ್ತು ೧೮೨

೩ ಅದೇ, ೧೮೧

೪ ಅದೇ,

೫ ಅದೇ, ೨೯೩

೬ ಅದೇ, ೩೪೦

೭ ಅದೇ, ೧೮೧

೮ ಅದೇ, ೧೧೭

೯ ಅದೇ, ೩೭೧

೧೦ ಅದೇ, ೧೭೬

ಕಂಪಣಂ ಬಿಕ್ಕಿಗನೆಪ್ಪರ್ತ್ತಱ ಮೊದಲ ಕಂಪಣಂ ಶ್ರೀಮದಗ್ರಹಾರಂ ನೀಗ್ಗುಂದ—' ಎಂದು ವರ್ಣಿಸಲಾಗಿದೆ[೧೧]. ಈ ಅಗ್ರಹಾರವು ಕೋಗಳಿ ೫೦೦ ಳ ಉಪವಿಭಾಗವಾದ ಬಿಕ್ಕಿಗ ೭೦ ರಲ್ಲಿ ನೆಲಸಿತ್ತು. ಕ್ರಿ. ಶ. ೧೧೬೨ ರ ಕಳಚುರ್ಯರ ಶಾಸನದಲ್ಲಿ ಅಗ್ರಹಾರ ನೀಲಗುಂದವನ್ನು ಕೋಗಳಿ ೫೦೦ ರ ಪ್ರಾಮುಖ ಪಟ್ಟಣವೆಂದು ಹೆಸರಿಸಲಾಗಿದೆ[೧೨]. ಬಿಕ್ಕಿಗ ೭೦ ಚಿಕ್ಕ ಉಪವಿಭಾಗವಾಗಿದ್ದರೂ ಅಗ್ರಹಾರ ತೆಲಗಿ ತಲವಗೆ, ತುಂಬಿಗೆಱೆ, ಅರಸಿಕೆಱೆ, ದುಗ್ಗತಿ ಮೊದಲಾದ ಅನೇಕ ಪ್ರಮುಖ ಸ್ಥಳಗಳನ್ನು ಒಳಗೊಂಡಿತ್ತು.

ನೀಲಗುಂದದ ಅಸ್ತಿತ್ವವನ್ನು ಪ್ರತಿಪಾದಿಸುವ ಪ್ರಾಚೀನ ಶಾಸನವು, "ನಾಡುಗಳೊಳಗೆಲ್ಲ ಗಾಡಿವೆತ್ತಸಮುದ ನಾಡುಗಳರಸನತಿ ಚೆಲ್ವ ಕೊಗಳಿನಾಡು ನೋಡಲ್ಕೆ ಸೊಗಯಿಕ್ಕುಂ॥ ಆ ನಾಡೊಳೆಸೆವುದು ನಾನಾವಿದ್ವಜ್ಜನ ಸ್ಥಾನಂ ನೀಗ್ಗುರ್ಂದವೆನಿಪಗ್ರಹಾರವತ್ಯಾನನ್ದಕಾರಿ ಜಗಕ್ಕೆಲ್ಲಂ॥" ಎಂದು ಸುಂದರವಾಗಿ ತ್ರಿಪದಿಯಲ್ಲಿ ವರ್ಣಿಸಿದೆ.[೧೩]

ನೀಲಗುಂದವು ಶಾಸನಗಳಲ್ಲಿ ಅಗ್ರಹಾರ,[೧೪] ಅನಾದಿಯಗ್ರಹಾರ,[೧೫] ಮಹಾ ಅಗ್ರಹಾರ[೧೬] ಮತ್ತು ಮಹಾಗ್ರಾಮ[೧೭] ಎಂದು ಕರೆಯಲ್ಪಟ್ಟಿದೆ. ೩೦೦ ಮಹಾಜನರು ಇದರ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ೩೦೦ ಮಹಾಜನರ ಉಲ್ಲೇಖ ನೋಡಿದರೆ ನೀಲಗುಂದವು ಸಾಕಷ್ಟು ಪ್ರಮಾಣದಲ್ಲಿ ಜನಸಂಖ್ಯೆಯನ್ನು ಹೊಂದಿದ್ದು ವಿಸ್ತೀರ್ಣವಾದ ಸ್ಥಳವಾಗಿತ್ತೆಂದು ವ್ಯಕ್ತವಾಗುತ್ತದೆ. ಅಗ್ರಹಾರದ ಮಹಾಜನರು ಶಾಸ್ತ್ರ, ಪುರಾಣ, ಪಂಚಯಜ್ಞ, ಷಟ್ಕರ್ಮ, ದಾನ, ಧರ್ಮ ಮೊದಲಾದ ವಿಧಿನಿಯಮಗಳಲ್ಲಿ ಪ್ರಸಿದ್ಧರಾಗಿದ್ದುದನ್ನು ಶಾಸನಗಳು ಹೇಳುತ್ತವೆ.[೧೮]

ನೀಲಗುಂದವು ಅನೇಕ ಸುಪ್ರಸಿದ್ಧ ಅಧಿಕಾರಿಗಳ ಆಡಳಿತವ್ಯಾಪ್ತಿಗೆ ಒಳಪಟ್ಟಿದ್ದಿತು. ಕ್ರಿ. ಶ. ೧೦೭೯ ರಲ್ಲಿ ಇದು ನೊಳಂಬವಾಡಿ ೩೨೦೦೦ ಮತ್ತು ಕಣಿಯಕಲ್ಲು ೩೦೦ ರ ಅಧಿಕಾರಿಯಾಗಿದ್ದ ತ್ರಿಭುವನಮಲ್ಲರಾಮ ಪಾಂಡ್ಯದೇವನ ಆಧೀನ

---

೧೧ ಅದೇ, ೧೮೧

೧೨ ಅದೇ, ೨೯೩

೧೩ ಅದೇ, ೧೪೧

೧೪ ಅದೇ, ೧೪೧ ಮತ್ತು ೨೯೩

೧೫ ಅದೇ, ೩೪೦

೧೬ ಅದೇ, ೧೪೧

೧೭ ಅದೇ,

೧೮ ಅದೇ,

ಕೊಳ್ಳಲಾಗಿದ್ದಿತು.[೧೯] ಕ್ರಿ. ಶ. ೧೧೬೨ ರಲ್ಲಿ ಬಿಜ್ಜಳನ ಮಾಂಡಲಿಕನಾದ ತ್ರಿಭುವನ ಮಲ್ಲ ವೀರಪಾಂಡ್ಯದೇವನ ಅಧೀನದಲ್ಲಿದ್ದು ಇವನು ಕೋಗಳಿ ೫೦೦ ಮತ್ತು ಕದಂಬಳಿಗೆ ೧೦೦೦ ವಿಭಾಗಗಳಿಗೆ ಅಧಿಕಾರಿಯಾಗಿದ್ದನು.[೨೦] ಈ ಅಧಿಕಾರಿಗಳಲ್ಲದೆ ಕಲ್ಲಮಯ್ಯ, ಅನನ್ತಪಾಲಯ್ಯ ಮತ್ತು ಮುದ್ದರಸರು ಸೀಲಗುಂದದ ಚರಿತ್ರೆಯಲ್ಲಿ ಪ್ರಮುಖಪಾತ್ರವನ್ನು ವಹಿಸಿದ್ದರು. ಅನನ್ತಪಾಲಯ್ಯನು ಕಲ್ಯಾಣಚಾಳುಕ್ಯರ ಹಿರಿಯ ಆಡಳಿತಾಧಿಕಾರಿಯಾಗಿದ್ದು ಕಂದಾಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ.[೨೧] ಕಂದಾಯದ ಆಡಳಿತಾಧಿಕಾರಿಯಾಗಿದ್ದ ಕಲ್ಲಮಯ್ಯನನ್ನು ಶಾಸನಗಳಲ್ಲಿ ದಂಡನಾಥ, ಮಹಾಪ್ರಧಾನ ಮತ್ತು ಸುಂಕವಧಿಷ್ಠಾಯಕನೆಂದು ಕರೆಯಲಾಗಿದೆ.[೨೨] ಮುದ್ದರಸನು ಕಿರ್ಬಟ್ಟೆಯ ಸುಂಕದ ಮೇಲ್ವಿಚಾರಕನಾಗಿದ್ದನು.[೨೩]

ಸೀಲಗುಂದ ಧಾರ್ಮಿಕ ಕ್ಷೇತ್ರವಾಗಿತ್ತೆಂಬುದು ನಿರ್ವಿವಾದ. ಶಾಸನಗಳಿಂದ ಸ್ವಯಂಭು ರಾಮೇಶ್ವರ, ಸ್ವಯಂಭು ವೀರೇಶ್ವರ ಮತ್ತು ಭೀಮೇಶ್ವರ ಎಂಬ ಮೂರು ದೇವಾಲಯಗಳ ವಿಷಯ ತಿಳಿದು ಬರುತ್ತದೆ. ಇವುಗಳಲ್ಲಿ ಹೆಚ್ಚಿನ ಶಾಸನಗಳು ಭೀಮೇಶ್ವರ ದೇವರನ್ನು ಉಲ್ಲೇಖಿಸುತ್ತವೆ. ೧೦೭೯ರ ಶಾಸನವು ಮೂಲಸ್ಥಾನ ಸ್ವಯಂಭು ರಾಮೇಶ್ವರ ದೇವಾಲಯವು ಹಳೆಯ ಹಾಳುವಿನಲ್ಲಿತ್ತೆಂದು ಉಲ್ಲೇಖಿಸುತ್ತದೆ.[೨೪] ಈ ಹಳೆಯ ಹಾಳವು ಊರಿನ ಬಡಗಣ ದಿಸೆಯಲ್ಲಿದ್ದುದಾಗಿ ಈ ಶಾಸನದಿಂದ ತಿಳಿದು ಬರುತ್ತದೆ. ಕ್ರಿ.ಶ. ೧೦೭೯ರಲ್ಲಿ ಸೀಲಗುಂದದ ೩೦೦ ಮಹಾಜನರು ರಾಮೇಶ್ವರನಿಗೆ ಭೂಮಿಯನ್ನು ದಾನವಾಗಿತ್ತ ವಿಷಯ ಶಾಸನದಿಂದ ತಿಳಿದುಬರುತ್ತದೆ. ಅಲ್ಲದೇ ೫೦೦ ಬಣಂಜಿಗರು, ನಾನಾ ದೇಶಿಗಳು ಕೂಡ ದತ್ತಿಬಿಟ್ಟ ಉಲ್ಲೇಖವಿದೆ. ೧೧೩೩ರ ಒಂದು ಶಾಸನದಲ್ಲಿ ಸಮಸ್ತ ತೋಂಟಿಗರು, ೬೦೦ ಕೊನೆಕಾರರು, ಸಮಸ್ತ ಕೊಯಿಲ್ಲಳಿಗಳು, ಮೆತ್ತಕಾರರು ಮತ್ತು ೫೦ ಒಕ್ಕಲು ತೆಲ್ಲಿಗರು ದತ್ತಿಬಿಟ್ಟ ಉಲ್ಲೇಖವಿದೆ.[೨೫] ೧೧೭೪ರಲ್ಲಿ ಚಿದ್ದಣನು ದೇವರ ನಿತ್ಯಪೂಜೆಗಾಗಿ ಅಡಕೆತೋಟ, ಹೂವಿನ ತೋಟಗಳನ್ನು ಕೊಟ್ಟು ಬಾವಿಯೊಂದನ್ನು ತೋಡಿಸಿದುದಾಗಿ, ಅದೇ ಸಂದರ್ಭದಲ್ಲಿ ಮಹಾಜನರು, ಆದನೂರ ತಳವಾರಿಕಾರ ಇರುಳುಸೀಕ್ರಿಯಾಂಡರು ಕೂಡ ದೇವರಿಗೆ ಭೂಮಿಯನ್ನು ದತ್ತಿಯಾಗಿ ಕೊಟ್ಟರೆಂದು ತಿಳಿದು ಬರುತ್ತವೆ.[೨೬]

---

೧೯ ಅದೇ,

೨೦ ಅದೇ, ೨೯೩

೨೧ ಅದೇ, ೧೮೧

೨೨ ಅದೇ, ೨೯೩

೨೩ ಅದೇ, ೧೮೧

೨೪ ಅದೇ, ೧೪೧

೨೫ ಅದೇ,

೨೬ ಅದೇ,

೧೦೭೯ರ ಒಂದು ಶಾಸನದಲ್ಲಿ ರಾಮೇಶ್ವರ ದೇವಾಲಯದ ಉಲ್ಲೇಖವಿದ್ದರೂ ಯಾರು, ಯಾವಾಗ ಕಟ್ಟಿಸಿದರು ಎಂದು ತಿಳಿದು ಬರುವುದಿಲ್ಲ. ಆದ್ದರಿಂದ ಅದನ್ನು ಕನಿಷ್ಠ ಪಕ್ಷ ೧೧ನೇಯ ಶತಮಾನದ ಆದಿಭಾಗದಲ್ಲಿ ಕಟ್ಟಿಸಿರಬಹುದೆಂದು ಮಾತ್ರ ಊಹಿಸ ಬಹುದು.

ಕ್ರಿ.ಶ. ೧೧೦೮ರ ಒಂದು ಶಾಸನವು (ಸಾಕಷ್ಟು ಸವೆದಿದೆ) ಅರಸ ತ್ರಿಭುವನ ಮಲ್ಲದೇವನ ದಂಡನಾಯಕನೊಬ್ಬ (ಹೆಸರು ಸವೆದಿದೆ) ಸುಂಕದ ಅಧಿಕಾರಿ ಯಾಗಿದ್ದು, ಶ್ರೀಸ್ವಯಂಭು ವೀರೇಶ್ವರ ದೇವರಿಗೆ ದತ್ತಿಬಿಟ್ಟ ಉಲ್ಲೇಖವಿದೆ.[27] ಬಹುಶ: ಈ ಅಧಿಕಾರಿಯು ಅನನ್ತಪಾಲಯ್ಯನಾಗಿರಬಹುದೇ ಎಂದು ಶಂಕಿಸಲವ ಕಾಶವಿದೆ. ಏಕೆಂದರಲ್ಲಿ ೧೧೧೦ರ ಶಾಸನವೊಂದು ಅನನ್ತಪಾಲಯ್ಯನು ಈ ಭಾಗದಲ್ಲಿ ಅಧಿಕಾರಿಯಾಗಿದ್ದು ಭೀಮೇಶ್ವರ ದೇವರಿಗೆ ದತ್ತಿ ಬಿಟ್ಟಿರುವುದನ್ನು ಉಲ್ಲೇಖಿಸುತ್ತದೆ. ಈ ದೇವಾಲಯವೂ ಕೂಡಾ ಯಾವಾಗ ಕಟ್ಟಲ್ಪಟ್ಟಿತೆಂದು ತಿಳಿದು ಬರುವುದಿಲ್ಲ.

ಭೀಮೇಶ್ವರ ದೇವಸ್ಥಾನವು ನೀಲಗುಂದದಲ್ಲಿಯ ಮುಖ್ಯದೇವಸ್ಥಾನವಾಗಿತ್ತು. ಭೀಮೇಶ್ವರ ದೇವಾಲಯ ಕಲ್ಯಾಣಿ ಚಾಳುಕ್ಯರ ಕಟ್ಟಡಗಳಲ್ಲಿ ಅಪೂರ್ವವಾದುದು. ಅನೇಕ ಶಾಸನಗಳು ಈ ದೇವಸ್ಥಾನವನ್ನು ಉಲ್ಲೇಖಿಸುತ್ತವೆ. ೧೦೭೯ ರ ಒಂದು ಶಾಸನದಲ್ಲಿ ಇವರ ಮೊದಲ ಉಲ್ಲೇಖವಿದೆ. ರಾಮೇಶ್ವರದೇವರ ದತ್ತಿಯ ವಿವರ ಗಳನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಶ್ರೀ ಭೀಮೇಶ್ವರ ದೇವರ ತೋಟದ ಉಲ್ಲೇಖ ಬಂದಿದೆ. ಆದ್ದರಿಂದ ೧೦೭೯ ರ ಮುಂಚೆ ಈ ದೇವಾಲಯವು ಅಸ್ತಿತ್ವದಲ್ಲಿದ್ದಿತೆಂದು ಹೇಳಬಹುದು.[28] ೧೧೧೦ ರ ಶಾಸನವು ಭೀಮೇಶ್ವರ ದೇವಾಲಯವು ಊರಿನ ಉತ್ತರ ದಿಶೆಯಲ್ಲಿತ್ತೆಂದು ತಿಳಿಸುತ್ತದೆ.[29] ಅಲ್ಲದೆ ತ್ರಿಭುವನಮಲ್ಲನ ಅಧಿಕಾರಿ ಗಳಾದ ಅನನ್ತಪಾಲಯ್ಯ ಮತ್ತು ಮುದ್ದರಸರು ಭೀಮೇಶ್ವರನ ಪೂಜೆ ಪುನಸ್ಕಾರ ಗಳಿಗಾಗಿ ಸುಂಕದ ಒಂದು ನಿರ್ದಿಷ್ಟ ಭಾಗವನ್ನು ದತ್ತಿಯಾಗಿ ಬಿಟ್ಟಿದುದನ್ನು ತಿಳಿಸುತ್ತದೆ. ೧೧೬೨ ರ ಒಂದು ಶಾಸನದಲ್ಲಿ ಕಳಚುರ್ಯ ಬಿಜ್ಜಳದೇವನ ಸಾಮಂತ ನಾದ ವೀರಪಾಂಡ್ಯನ ಆದೇಶದ ಮೇರೆಗೆ ಸುಂಕದಧಿಷ್ಠಾಯಕ ಕಲ್ಲಿಮಯ್ಯನು ಭೀಮೇಶ್ವರನಿಗೆ ಸುಂಕದ ಒಂದು ನಿರ್ದಿಷ್ಟ ಭಾಗವನ್ನು ಬಿಟ್ಟನೆಂದು ತಿಳಿದು ಬರು ತ್ತದೆ.[30] ಹೊಯ್ಸಳ ಇಮ್ಮಡಿ ನರಸಿಂಹನ ಸಾಕಷ್ಟು ಸವೆದುಹೋದ ಕ್ರಿ. ಶ. ೧೨೨೪ ರ ಶಾಸನವೊಂದು ಭೀಮೇಶ್ವರನಿಗೆ ಕೊಟ್ಟ ದತ್ತಿಯೊಂದನ್ನು ಉಲ್ಲೇಖಿಸು

---

೨೭ ಅದೇ, ೧೭೩

೨೮ ಅದೇ, ೧೪೧

೨೯ ಅದೇ, ೧೮೧

೩೦ ಅದೇ, ೨೯೩

ತ್ತದೆ.[೩೧] ಈ ಶಾಸನ ಒಂದು ಮಹತ್ವದ ಶಾಸನವಾಗಿದ್ದು ಇದರಲ್ಲಿ ಇಮ್ಮಡಿ ನರಸಿಂಹನ ತಂದೆ ಬಲ್ಲಾಳನು ಸೇವುಣರ ಸೈನ್ಯವನ್ನು ಸೊರಟೂರಿಂದ ಕೃಷ್ಣವೇಣಿಯ ತೀರದವರೆಗೆ ಅಟ್ಟಿಸಿಕೊಂಡು ಹೋದುದರ ಉಲ್ಲೇಖವಿದೆ

● ●

೩೧ ಅದೇ, ೩೪೭

ಶಿವಬಸೂನ ಕತಿ (ದುರಂತ ಲಾವಣಿ)

ರಚಿಸಿದವರು : ದಿ ಖಂಡೂನವರ ಫಕ್ಕೀರಪ್ಪ
ಸಂಗ್ರಹ : ಸದಾನಂದ ಶಿ. ಪಾಟೀಲ

ಸೂರಿಯಾದ ಮಾತ ನಾನು ಸಾರಿ ಹೇಳುವೆನು
ಪೂರಾ ಕೇಳ್ರಿ ಪಂಡಿತ ಜನರ
ಅಲ್ಪ ಬುದ್ದಿಲಿಂದ ಸ್ವಲ್ಪ ಹೇಳುವೆನು
ಕಲ್ಪ ಇಲ್ಲದಂಗ ಏನೂ ಕಸರ ॥

ಪಾಲಿಕೊಪ್ಪ ಗ್ರಾಮದೊಳು ಪ್ರತ್ಯಕ್ಷ ಆದಮಾತು
ಪೃಥ್ವಿಯೊಳಗಾದೀತಪ್ಪ ಜಾಹೀರ
ಕತ್ತಿಯವರ ಮನಿಯದು ನಿತ್ಯ ನುಡಿಯುತಿತ್ತ ಜನ
ಕಾಗದ ವ್ಯಾಲ ಸೈ ಇತ್ರಿ ಅಡ್ರೆಸ್ರ ॥

ಸುದ್ದ ಬಾವದಿಂದ ಇದ್ರ ಸದ್ ಮುದ್ದ ಸತಿಪತಿ
ಸಿದ್ದಗೊಂದ ಫಲಕೊಟ್ಟ ಶಂಕರ
ಕೂಸ ನೋಡಿ ಕುತಿಗೊಂಡ ಲೇಸವಾದಿ ತಂತಾಳ
ಕಾಶೀತಾಯಿ ಗಾದಿತೊಳೀ ಬಂಗಾರ ॥

ಬಂದs ಬಾಲ್ಯಾರೆಲ್ಲs ಚೆಂದಾಗಿ ಅಂತಾರ
ಹುಟ್ಟಿದಂಗ ಹುಣವೀs ಚಂದಿss ರ
ಚಿತ್ರಾ ತಗದ ಗೊಂಬಿಯುಂತೆ ನೇತ್ರದೊಳು ಕಾಣತಿತ್ತ
ಬಣ್ಣಾ ಕೊಟ್ಟಂಗಾಗತ್ತಾವ್ನ ಜಿನಗಾರ ॥

ಜನಿಸಿದಿಂದ ಅವರು ಜಂಗಮನ ಕರದು
ಲಿಂಗ ಕಟ್ಟಿದಾರೋ ಶಿವನೆಂದು
ಪಾದವ ಪಡಿದಾರೋ ಎಲ್ಲರೂ ಬಂದು
ಧೂಳ ಪದಕ ನೀರು ಮನಿಗೊಡದು ॥

ಹರುಷದಿಂದ ಹತ್ತು ಮಂದಿ ಕರಸೀದಾರ ಮುತ್ತೈದಿರನ
ಸರಸವಾಗಿ ಇಡಲಾಕ ಕಂದಗೆಸರ
ಜೋಜೋ ಎಂದು ಜೋಗುಳ್ಪಾಡಿ ಕಂದನಮ್ಯಾಲ ಹಾಡಿ ಹಾಡಿ
ಶಿಸ್ತಿಲಿಂದ ಶಿವಬಸಂತ ಇಟ್ಟ್ಯಾರೆಸರ ॥

ಪ್ರೇಮದಿಂದ ಕೇಳೀರಣ್ಣಾ ಕಂದಾಗೊಸ್ತ ಬಾಳಶಿಸ್ತಾ
ಇಡಲಾಕ ತರಿಸಿದಾರ ಚಂದಕ ಅವರ
ಉಣ್ಣಿ ಕಡೇ ಉಂಗುರ ಸರಪಳಿ ಹತ್ತಿ ಮುರವು ಹಾಲ್ಗಡಗು
ಶಿಸ್ತಿಲಿಂದ ಹಾಕ್ಯಾರಪ್ಪ ಉಡದಾರ ॥

ಕಂದನೀಗೆ ಹೊಚ್ಚಲ್ಯಾಕ ಚಂದ ಕುಂಚ್ಗಿ ಹೊಲಿಸ್ಯಾರ
ಕಡಕೀಲಿಂದ ಹಾದಿತ್ತಣ್ಣ ಕಡ್ಡೀಜರಾ
ಚಂಡಿನಂತ ಗೊಂಡೇ ಕಟ್ಟಿ ಚಂದ ಬಾಳಾ ಕಾಣತಿತ್ತ
ಕಂದಗ್ಹೊಚ್ಚಿ ಪ್ರೀತಿ ಕಣ್ಣೀಲೆ ನೋಡಿದರ ॥

ಶಿಸ್ತಿಲಿಂದ ಶಿವಬಸೂನ ಜಡೀ ।
ಇಳವಿಕೊಂಡು ಬರೂನ ನಡೀ ॥

ಶಾರ ಹುಬ್ಬಳಿ ಸಂತಿಗೋಗಿ ಸೂರಿಮಾಡಿ ತಂದಾನ್ಪೈಚ್ಚ
ಮಾಡ ಬೇಕೋ ಅಂಬೂ ಇಚ್ಛ ದುಂದಾಕರ ।
ಹರುಷದಿಂದ ಕೇಳೀರಣ್ಣ ಹತ್ತ ಮಂದಿಗೆ ಬೇಕಾವಂವ
ಮುತ್ತಿನಂತಾ ಹುಡುಗಾ ಅಂವಾ ಗಂಬೀರ ॥

ಜವುಳಾ ಇಳವಲಾಕ ಜಡದ ಹೊಂಡಿಸ್ಯಾನ
ಬಂಡಿ ಕೊಲಾರಿ ಎಲ್ಲಾ ತಯ್ಯಾರ ॥

ಊರ ಬಿಟ್ಟು ಹೊಂಟಾರಣ್ಣ ಊದೂತ ಬಾರಸೂತ
ಸಾಜೂ ಸಂಬಾಳ ಹಲಗಿ ಕಾಳಿ ಬರಪೂರ ॥

ಹರಸದಿಂದ ಕೇಳಿರಣ್ಣ ಸುರಸತಾನ ಬಿರುಸು ಬಾಣ
ಶಾರ ಕೊಪ್ಪದ ಬಸವಗವರು ತೋಗೂ ವರ।

ಹೊಂಟ ಯೊಳೆದಾಗವರಿಗೆ ಕಂಟಕ ಬಂದು ಗಂಟ ಬಿದ್ದ
ಪಂಟು ಹಚ್ಚಿ ನಿಂತಿತಪ್ಪಾ ಆಗ ಇದರಾ ॥

ಸೋಸಿ ನೋಡಿ ಶುಕ್ರವಾರ ಬೇಸಿ ಅಯ್ತಿ ಅಂದಾರಪ್ಪ
ಹೇಸಿ ಮುಂಡೇ ಮಕ್ಕು ಪಂಚಾಂಗ ಹೇಳುವವು
ಸೂರ್ಯೋದಯ ಆಗುದ್ರೊಳಗ ಶುಕ್ರವಾರ ಶ್ನಿನಿ ಹೋಗೆ
ಭರಣೀ ಬಂದ ಕೂಡ್ತೇತ್ರಪ್ಪ ಬರಪೂರ ॥

ಹುಗ್ಗಿ ಹೋಳ್ಗಿ ಮಾಡ್ಸಿದಾನ ಹಿಗ್ಗಿ ಕಾರ ಮನದೊಳು
ಜಗ್ಗಿ ಮಂದಿ ಬಂತ್ರಪ್ಪ ಬರಪೂರ
ಸಾರುಬಾನಾ ಮಾಡ್ಸೇಕಂತ ಕಟ್ಗಿ ಕುಳ್ಳು ಉರಿಸಿಕ್ಯಾರ
ಮಾಡತಿದ್ರ ನೆರೆಪವ್ರೊಳಗ ಅಡಗೀಬಲ್ಲವರು ॥

ಬಾನಾ ಬಸವ ಮುಗಿಸಿದ್ರಣ್ಣಾ ಜವುಳ ತಯ್ಯಾರ ನಡಸಿದಾರ
ಗಮಗುಡಕೊಂತ ಕುದಿಯತಿತ್ತ ಹರವ್ಯಾಗ ಸಾರ
ಸಾರಿನ ಗಡಗಿ ಇಳವಿದ್ದಿಲ್ಲ ಸನೇಕ ಹೋಗಿ ಕುಳಿತಿದ್ಲಪ್ಪ
ಅತ್ತಿ ಎಲ್ಲವ್ವರದ ಆದ ಮಜಕೂರ ॥

ಬಿಚ್ಚಿ ಹರವಿ ಭಾಗ ಆತು ಹೋಗದಂಗ ಹೊಗಿ ಆತು
ತೆಪ್ಪಿಟ್ಟ ತೇಲತಾವ ಹುಡಗೂರ
ತೆಕ್ಕಿ ಮುಕ್ಕಿ ಬಿದ್ದ ಕ್ಯಾರ ಹೊರಕ ತೆಗೆದಾರಪ್ಪ ಆಗ
ಉಕ್ಕ ಬಂದಂಗಾತೋ ಏರಿ ಸಮುದ್ರ
ಚಂದದಿಂದ ಕೇಳೀರಣ್ಣಾ ಚರ್ಮಾಸುಲಿದು ಹೋದೀತೆಲ್ಲಾ
ನೋಡಲಾರದೆ ನಿಂತುಕೊಂಡೆ ನಾ ದೂರ
ಹೊಟ್ಟೆಲಿದ್ದ ಬಾಲಿ ಆಕಿ ರಟ್ಟೆ ಹಿಡದ ಎಬ್ಬಿಸಿದಾರ
ಹೊಟ್ಟೆಯೊಳಗ ಬಿತ್ತೋ ಬೆಂಕಿ ಭಯಂಕರ.
ಕಿಚ್ಚಿನೊಳಗ ಬಿದ್ದಂಗ ಕಿಡೀ
ಇಳವಿದ್ದಿಲ್ಲೋ ಹುಡಗಂದ ಜಡೀ ॥

ಬಂಡ ಮಾತು ಅಲ್ಲ ಇದು ಕಂಡ ಮಾತು ಹೇಳುವೆನು
ಶಿಸುವಿನ್ನೊಯ್ದು ಹಾಕ್ಯಾರಪ್ಪ ಬಸವನ ಹತ್ತಿರ
ಶಿರಬಾಗಿ ನಿಂತಕೊಂಡು ಕರಜೋಡಿಸಿ ಬೇಡತಾರೋ
ಕಂದನ್ನ ಮಾಡಂದರೋದ್ಧಾರಾ ॥

ಬೇಗದಿಂದ ಬಿನ್ನಾಯ ಮಾಡಿಸಿ ಅಯ್ಯನವನ್ನ ಎಬಿಸಿದಾರೋ
ಮುಯ್ಯಮುಟ್ಟ ಮಾಡಿದಾರೋ ಎಲ್ಲಾರೋ

ಮಾಡಿಕೊಂಡ ಎಲ್ಲ ಚಂದ ಕೈ ಬಿಟ್ಟ ಹೋದ ಕಂದ
ಅಪ್ಪ ಇತ್ತ ಅನಬೇಕವನ ಹಣೇಬರಾ ॥

ಕಂದನ ಮಾರಿ ಚಂದಾಗಿ ನೋಡಿ ಅಳತಾರವರು ಜೋರ್‍ರ್ಯಾಡಿ
ಮಲಿ ಕುಡಿ ಬಾರೋ ಕಂದಾ ಲಗುಮಾಡಿ
ಹೋಗಲೆಂಗೋ ಮಣ್ಣಿಗೆ ಮರಿಮಾಡಿ
ಅದೃಷ್ಟ ಹಣೇ ಬರಹ ನಮ್ಮದು ಕೋಡಿ
ಬಂದಿಲ್ಲೋ ಶಿವನಲ್ಲಿ ನಾ ಬೇಡಿ
ಸೃಷ್ಟಿಯೊಳಗ ಮೆರಿಯೂವಂತ ಶ್ರೇಷ್ಠವಾದ ಕರಡೀಪುರದ
ಫಕ್ಕೀರಣ್ಣನ ಕವಿತಾ ಬಂಗಾರ ಜೋಡಿ ॥

ಶಾಸನ ಪದಸೂಚಿ

—ಚೆನ್ನಕ್ಕ ಎಲಿಗಾರ

(ಸಂಪುಟ ೧೦–ಸಂಚಿಕೆ ೪ ರಿಂದ ಮುಂದುವರಿದದ್ದು)

'ಮ' ವಿಭಾಗ

ಮಂಟೂರು	ಗ್ರಾ.	೯೬ : ೫೧ ಗ್ರಾ.
ಮಗರಮುರಾರಿರಾಮನಾಥದೇವ	ಮಾಂಡ	೬೨೨ : ೨
ಮಗರ ಮುರಾರಿ ಜಯಿತಪಾಳದೇವ	ಮಾಂಡ	೧೭೧ : ೧೩ : ೧೪
ಮಗರ ಮುರಾರಿಲಕ್ಷ್ಮಿದೇವನಾಯಕ	ಮಾಂಡ	೧೪೭ : ೩
ಮಗಧ	ದೇ.	೨೧೬ : ೪೪, ೧೬೪ : ೪
ಮಳಲೆನಾಡು	ಗ್ರಾ.	೫೬೭ : ೧
ಮಳೆಯುವತಿ	ಸ್ತ್ರೀ	೧೨೨ : ೪೪
ಮಯಿಳಲದೇವಿ	ಕದಂ. ರಾ.	೧೫೫ : ೪೨
ಮಹಾಲಿಂಗದೇವರು	ದೇ.	೧೨೩ : ೮
ಮಂಮರಸ	ಅಧಿ.	೧೨೪ : ೪೦
ಮಸಣಯ್ಯ ದಂಡನಾಥ	ಅಧಿ.	೨೧೬ : ೬೦
ಮಧುವರಸವ್ವೆ	ಸ್ತ್ರೀ.	೩೫ : ೨೩
ಮಧುವರಸ	ಅಧಿ.	೨೪೦ : ೧೨
ಮಧುವರಸ	ಅಧಿ.	೬೬೭ : ೨೨
ಮಧುಸೂದನದೇವರು	ದೇ.	೧೬೭ : ೭
ಮಧುಸೂದನಭಟ್ಟ	ವ್ಯ.	೧೯೪ : ೭೩

'ಲ' ವಿಭಾಗ

ಕಾರಂಜ ನದಿ ಪ್ರದೇಶದ ಪ್ರಾಗೈತಿಹಾಸಿಕ ನೆಲೆಗಳ ಶೋಧನೆ

ರು. ಮ. ಷಡಕ್ಷರಯ್ಯ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗವು ಕೈಕೊಂಡ ಯೋಜನೆಯ ಅಂಗವಾಗಿ ಬೀದರ ಜಿಲ್ಲೆಯ ಹಳ್ಳಿಯಿಂದ ಹಳ್ಳಿಗೆ ಹೋಗಿ ಶಾಸನಗಳ ಅನ್ವೇಷಣೆಯನ್ನು ಜನವರಿಯಿಂದ ಆಗಸ್ಟ ೧೯೭೭ರ ವರೆಗೆ ಭಾಲ್ಕಿ ಮತ್ತು ಬೀದರ ತಾಲೂಕಿನ ಹಳ್ಳಿಗಳಲ್ಲಿ ಕೈಕೊಂಡೆನು ಆ ಸಮಯದಲ್ಲಿ ಹೆಚ್ಚಾಗಿ ಕಾರಂಜ ನದಿ ಪ್ರದೇಶದಲ್ಲಿ ಕೆಲವು ಮುಖ್ಯ ಪ್ರಾಗೈತಿ, ಹಾಸಿಕ ನೆಲೆಗಳು ಕಂಡು ಬಂದವು. ಅವು ಹಳೆ ಶಿಲಾಯುಗ, ಶಿಲಾ-ತಾಮ್ರಯುಗ, ಕಬ್ಬಿಣ ಯುಗ, ಮತ್ತು ಇತಿಹಾಸಯುಗದ ನೆಲೆಗಳು. ಈ ನೆಲೆಗಳಲ್ಲಿಯ ಮೃತ್‌ಪಾತ್ರೆ ಚೂರುಗಳು, ಮಣ್ಣಿನ ಗೊಂಬೆಗಳು ಮತ್ತು ಮಣಿಗಳು; ಕಬ್ಬಿಣದ ಸಾಮಾನುಗಳು ಮತ್ತು ಎಲಬು ಚೂರುಗಳು ದೊರೆತಿವೆ. ಈ ನೆಲೆಗಳ ವಿವರಣೆ ಯನ್ನು ಮತ್ತು ಮಹತ್ವವನ್ನು ಕೆಳಗೆ ವಿವರಿಸಲಾಗಿದೆ.

೧. ಹಳೆ ಶಿಲಾಯುಗ :

ಬಂಗೂರ, ಶ್ರೀಕಂಠನಹಳ್ಳಿ, ಔರಾದ, ಹಜರಗಿ (ಬೀದರ ತಾ.) ಗಳಲ್ಲಿ ಮಧ್ಯ ಹಳೆ ಶಿಲಾಯುಗಕ್ಕೆ ಸೇರಿದ ಕೆಲವು ಆಯುಧಗಳಾದ ಹೆರೆಯುವ ಚಕ್ಕೆಗಳು, ಮೊನೆಗಳು ಮುಂತಾದವುಗಳು ದೊರೆತಿವೆ. ಇವುಗಳನ್ನು ಹೆಚ್ಚಾಗಿ ಚರ್ಟ್, ಜಾಸ್ಪರ ಮತ್ತು ಬೆಣಚು ಕಲ್ಲುಗಳಿಂದ ಮಾಡಲಾಗಿದೆ. ಈ ಕಾಲಕ್ಕೆ ಸೇರಿದ ಇನ್ನೂ ಕೆಲ ಆಯುಧಗಳು ಕಾರಂಜನದಿ ಬೇಸಿನ್‌ಸಲ್ಲಿ ಸಿಕ್ಕವು.

೨. ಶಿಲಾ ತಾಮ್ರ ಯುಗ :

ಶಿಲಾ - ತಾಮ್ರಯುಗ ಸಂಸ್ಕೃತಿಯ ವಾಸ್ತವ್ಯದ ನೆಲೆಗಳು ನಾಗೂರ ಮತ್ತು ಗೋರಚಿಂಚೋಳ್ಳಿ (ಭಾಲ್ಕಿ ತಾ.) ಗಳಲ್ಲಿವೆ. ನಾಗೂರ – ಚಂದಾಪುರ ರಸ್ತೆಯ ಎಡಬದಿಗೆ ಎತ್ತರ ಮಣ್ಣಿನ ದಿಣ್ಣೆಯಲ್ಲಿ ಸುಮಾರು ೧ ಮೀ. ಆಳ ಮತ್ತು ೬೦ಸೆಂ. ಮೀ. ಅಗಲವಿದ್ದ ಎರಡು ಗುಂಡಿಗಳು ಕಂಡು ಬಂದಿದ್ದವು. ಈ ಗುಂಡಿಗಳಿಂದ ವಿವಿಧ ಬಣ್ಣದ ಮೃತ್‌ಪಾತ್ರೆ ಚೂರುಗಳು ಮತ್ತು ಎಲಬು ಚೂರು ದೊರೆತವು. ಇವುಗಳಲ್ಲದೆ ಒಂದು ಅರೆಯುವ ಕಲ್ಲು ಸಹ ಒಂದು ಗುಂಡಿಯಲ್ಲಿತ್ತು. ಮೃತ್‌ಪಾತ್ರೆಗಳು ಎರಡು ತರಹದ್ದು : ೧) ಕಪ್ಪೊತ್ತಿದ ಬೂದು ಬಣ್ಣದ್ದು. (೨) ದಾಳಿಂಬೆ ಕೆಂಪೊತ್ತಿದ್ದ ಬೂದು ಬಣ್ಣದ್ದು.

ತುಲನಾತ್ಮಕವಾಗಿ ಮಸ್ಕಿ – ಪಿಕ್ಲಿಹಾಳ ನೆಲೆಗಳಲ್ಲಿಯ ಈ ಸಂಸ್ಕೃತಿಯ ಮೃತ್‌ಪಾತ್ರೆಗಳಿಗಿರುವ ಹಾಗೆ ಮೈಕ ಲೇಪನ ಇರುವುದಿಲ್ಲ.

ಪಾತ್ರೆ ಮತ್ತು ಬಟ್ಟಲುಗಳು ಹೆಚ್ಚು ಸಾಮಾನ್ಯವಾಗಿವೆ. ಅಪರೂಪವಾಗಿ ಅಂಚಿನಲ್ಲಿ ಬೆರಳು ಗುರುತಿನ ಅಲಂಕಾರವಿದೆ.

ಒಂದನೇ ಗುಂಡಿಯಲ್ಲಿ ಗೋದಾವರಿ ಬಯಲಿನಲ್ಲಿರುವ ಜೋರ್ವೆ ಶಿಲಾ-ತಾಮ್ರ ಯುಗ ಸಂಸ್ಕೃತಿಯ ಮೃತ್ ಪಾತ್ರೆಯಂಥ ಒಂದು ಕೆಂಪು ಮೃತ್‌ಪಾತ್ರೆ ಚೂರು ದೊರೆತಿದೆ. ಬಾಹ್ಯರೂಪವೆಲ್ಲ ಸವೆದು ಹೋಗಿದೆ. ಜೋರ್ವೆ ಸಂಸ್ಕೃತಿಯ ಕೊನೆ ಕಾಲದ ರಚನೆ ಎಂದು ತೋರ್ಪಡುತ್ತದೆ.

ಮತ್ತೊಂದು ಗುಂಡಿಯಲ್ಲಿಯೂ ಕಪ್ಪೊತ್ತಿದ ಬೂದು ಬಣ್ಣದ ದಾಳಿಂಬೆ, ಕೆಂಪು ಬಣ್ಣದ ಮೃತ್ ಪಾತ್ರೆ ಚೂರುಗಳು ದೊರೆತವು. ಇದು ಸಹ ಒಂದನೇ ಗುಂಡಿಯಷ್ಟು ಆಳ ಮತ್ತು ಅಗಲವಿದ್ದು ಮೇಲ್ಭಾಗದಲ್ಲಿ ಹಾಳಾಗದೆ ಸ್ವಲ್ಪ ಭಾಗ ಉಳಿದ ಸಣ್ಣ ದುಂಡಾದ ಕಪ್ಪು ಕಲ್ಲಿನ ಗುಪ್ಪೆ ಇದೆ. ಈ ಗುಂಡಿಗಳ ದಕ್ಷಿಣಕ್ಕೆ ೧.೫೦ ಮೀ. ದೂರದಲ್ಲಿ ಮತ್ತೊಂದು ಅಂಡಾಕಾರದ ಕಲ್ಲು ಗುಪ್ಪೆಯು ಉದ್ದ ೨.೫೦ ಮೀ. ೧.೦೦ ಮೀ. ಅಗಲ ಮತ್ತು ೪೫ ಸೆಂ. ಮೀ. ಎತ್ತರ ಇದೆ. ಇವರ ಬದಿಗೆ ಮತ್ತೊಂದು ಇಷ್ಟೇ ಅಳತೆಯ ಕಲ್ಲು ಗುಪ್ಪೆ ಇದೆ. ಈ ಎರಡು ಕಲ್ಲು ಗುಪ್ಪೆಗಳ ಬುಡದಲ್ಲಿ ಕೂಡ ಗುಂಡಿಗಳಿರಬಹುದೇನೋ. ಉತ್ಖನನ ಇಲ್ಲಿ ಅವಶ್ಯವೆಂದು ನನಗೆ ಕಾಣುತ್ತದೆ. ಈ ನೆಲೆಯು ಸುಮಾರು ೩ ಹೆಕ್ಟೇರ್‌ನಷ್ಟು ಇದೆ.

೩) ಗೋರ ಚಿಂಚೋಳ್ಳಿ (ಭಾಲ್ಕಿ ತಾ.) :

ಶಿಲಾ-ತಾಮ್ರ ಯುಗದ ನೆಲೆಯಲ್ಲಿ ಮೇಲೆ ವಿವರಿಸಿದ ಮೃತ್ ಪಾತ್ರೆ ಮತ್ತು ಬಟ್ಟಲ ಚೂರುಗಳು ದೊರೆತಿವೆ. ಇಲ್ಲಿ ಹೆಚ್ಚಾಗಿ ಬಟ್ಟಲ ಚೂರುಗಳು ದೊರೆತಿವೆ.

ಇವು ಕಪ್ಪೊತ್ತಿದ ಬೂದು ಬಣ್ಣದ ಪಾತ್ರೆಗಳು, ಎಲುಬು ಚೂರುಗಳು, ಮತ್ತು ಒಂದು ಕರಿಕಲ್ಲಿನ ನಯಗೊಳಿಸಿದ ಕೊಡಲಿ ದೊರೆತಿವೆ.

ಕಬ್ಬಿಣ ಯುಗ:

ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿಯ ನೆಲೆಗಳು ಸಿರ್ಸಿ ಮತ್ತು ಕಡವಾಡ ರಸ್ತೆ, ಬಗದಲ್ – ಹೊನ್ನಡ್ಡಿ ರಸ್ತೆ (ಬೀದರ ತಾ.) ಮತ್ತು ಯಣ್ಣಿಕುರ ಭಾಲ್ಕಿ ತಾಲೂಕ ನಲ್ಲಿವೆ.

೧) ಹೊನ್ನಡ್ಡಿ – ಬಗದಲ್ ರಸ್ತೆ ಪಕ್ಕದಲ್ಲಿರುವ ನೆಲೆಯು ಸುಮಾರು ೩/೪ ಹೆಕ್ಟೇರಿನಷ್ಟು ಇದೆ. ಇಲ್ಲಿ ಅಗೆದಾಗ ಕಂಡು ಬಂದ ಒಂದು ಗುಂಡಿಯಲ್ಲಿ ಮೃತ್ ಪಾತ್ರೆ ಚೂರುಗಳು, ಕಬ್ಬಿಣ ಸಾಮಾನುಗಳು ಮತ್ತು ಎಲಬು ಚೂರುಗಳು ದೊರೆತವು. ಈ ಭೂಮಿ ಕೆಂಪು ಮೃದುಕಲ್ಲಿನದು (laterite). ಇಲ್ಲಿ ಇಂಥ ಹಲವಾರು ಗುಂಡಿಗಳಿದ್ದು ಅವುಗಳ ಮೇಲೆ ಕಲ್ಲು ಕುಪ್ಪಿಗಳಿತ್ತು. ಬಹಳಷ್ಟು ಹಾಳಾಗಿವೆ.

ಸಿರ್ಸಿ ಉತ್ತರಕ್ಕೆ ಸುಮಾರು ೧೫ ಕಿ. ಮೀ. ಅಂತರದ ಕೆಂಪು ಕಲ್ಲು ಗುಡ್ಡದ ಮೇಲೆ ೧೫ ಕಿ. ಮೀ. ಎತ್ತರ ೧ ಮೀ. ಅಗಲದ ಕಲ್ಲು ಗುಪ್ಪೆಗಳಿವೆ. ಈ ನೆಲೆ ಸುಮಾರು ೧ ಹೆಕ್ಟರಿನಷ್ಟು ವಿಸ್ತಾರವಾಗಿದೆ ಈ ಗುತ್ತಿಗಳಿಗೆ "ಧನಗುತ್ತಿ" ಎಂದು ಕರೆಯಲಾಗಿದೆ. ಈ ನೆಲೆಯಲ್ಲಿ ಕೆಲವು ಕೆಂಪು – ಕಪ್ಪು ಬಣ್ಣದ ಮೃತ್ ಪಾತ್ರೆ ಚೂರುಗಳು ಮಾತ್ರ ದೊರೆತವು.

ಯಣ್ಣಿಕುರ ಊರ ಪೂರ್ವಕ್ಕೆ ಸುಮಾರು ೫೦ ಮೀ. ಅಂತರದ ಹಾಳು ಹೊಲದಲ್ಲಿ ಈ ಸಂಸ್ಕೃತಿಯ ಕೆಂಪು ಮತ್ತು ಕಪ್ಪು ಬಣ್ಣದ ಮತ್ತು ಕೆಲವು ಕಪ್ಪು ಬಣ್ಣದ ಮೃತ್ ಪಾತ್ರೆ ಚೂರು ಮಾತ್ರ ಕಂಡು ಬಂದಿವೆ.

ಇತಿಹಾಸ ಯುಗದ ನೆಲೆಗಳು ಸಂಗೊಳ್ಳಿ, ಬಗದಲ್, ಕಡವಾಡ (ಬೀದರ ತಾ.) ಮತ್ತು ಲಂಜವಾಡ ಭಾತಂಬ್ರ. ಭಾಲ್ಕಿ ಮತ್ತು ಚಿಟ್ಟ (ಭಾಲ್ಕಿ ತಾ.) ಗಳಲ್ಲಿ ಇವೆ.

ಈ ನೆಲೆಗಳಲ್ಲಿ ಕೆಂಪು ಬಣ್ಣದ ಉಸುಕಿನಡಿಯಲ್ಲಿ ಬಿಳಿ ಬಣ್ಣದ ರೇಖಾ ಚಿತ್ರಗಳುಳ್ಳ ಮೃತ್‌ಪಾತ್ರೆಗಳ ಕಪ್ಪು – ಕೆಂಪು. ಕೆಂಪು ಬಣ್ಣದ ಮೃತ್ ಪಾತ್ರೆ ಸಾಮಾನ್ಯವಾಗಿವೆ.

ಭಾತಂಬ್ರ, ಭಾಲ್ಕಿ ಮತ್ತು ಚಿಟ್ಟ ನೆಲೆಗಳಲ್ಲಿ ಶಂಖದಿಂದ ಮಾಡಿದ ಬಳೆಚೂರುಗಳು ಕೂಡ ದೊರೆತಿವೆ.

ಇಲ್ಲಿಯವರೆಗೆ ಕರ್ನಾಟಕದ ಭೀಮಾ, ಕೃಷ್ಣಾ, ತುಂಗಭದ್ರ ಮತ್ತು ಕಾವೇರಿ ನದಿಗಳ ಬಯಲಿನಲ್ಲಿರುವ ಕೆಲವು ಜಿಲ್ಲೆಗಳಲ್ಲಿ ಪ್ರಾಗೈತಿಹಾಸಿಕ ನೆಲೆಗಳಿರುವುದು ತಿಳಿದಿದೆ. ಈ ಜಿಲ್ಲೆಯಲ್ಲಿ ಹಿಂದೆ ಕೆಲವು ಹಳೆ ಶಿಲಾ ಯುಗದ ಕಲ್ಲಿನ ಆಯುಧಗಳು ಬೀದರ ಹತ್ತಿರ ದೊರೆತಿದ್ದವು ಆದರೆ ಸ್ಪಷ್ಟವಾಗಿ ನೆಲೆಗಳು ಕಂಡು ಬಂದಿರಲಿಲ್ಲ. ಮೇಲೆ ವಿವರಿಸಿದ ನೆಲೆಗಳೆಲ್ಲ ಕಾರಂಜ ನದಿ ಪ್ರದೇಶಕ್ಕೆ ಹೊಂದಿಕೊಂಡಿವೆ. ಕಾರಂಜ ನದಿಯು ಮಾಂಜ್ರ ನದಿಗೆ ಕೂಡುತ್ತದೆ. ಮಾಂಜ್ರ ಗೋದಾವರಿ ನದಿಗೆ ಕೂಡುತ್ತದೆ. ಉತ್ತರಕ್ಕೆ ಗೋದಾವರಿ ಬಯಲಿನಲ್ಲೂ ಭಿನ್ನ ಲಕ್ಷಣಗಳುಳ್ಳ ಈ ಶಿಲಾ-ತಾಮ್ರ ಯುಗದ ನೆಲೆಗಳು ಕಂಡು ಬಂದಿವೆ. ಜೋರ್ವೆ ಸಂಸ್ಕೃತಿ ಕೊನೆಕಾಲದ ಒಂದೇ ಒಂದು ಮೃತ್ ಚೂರು ನಾಗೂರಿನಲ್ಲಿ ದೊರೆತಿರುವುದು ಮಹತ್ವದ್ದು. ಈಗಾಗಲೇ ಜೋರ್ವೆ ಸಂಸ್ಕೃತಿಯ ಕೊನೆಗಾಲದ ಮೃತ್ ಪಾತ್ರೆಗಳು ಕರ್ನಾಟಕದ ಭೀಮಾ-ಕೃಷ್ಣಾ-ತುಂಗಭದ್ರಾ ಬಯಲುಗಳಲ್ಲಿ ಅಲ್ಪ ಪ್ರಮಾಣದಲ್ಲಿ ದೊರೆತಿದ್ದು ಗೋದಾವರಿ-ಕೃಷ್ಣಾ ಬಯಲುಗಳ ನಡುವೆ ಪರಸ್ಪರ ಸಾಂಸ್ಕೃತಿಕ ಸಂಬಂಧ ಸೂಚಿಸುತ್ತದೆ. ಈಗ ಕರ್ನಾಟಕ ಉತ್ತರ ತುದಿಯಲ್ಲಿರುವ ಬೀದರ ಪ್ರದೇಶದ ಮಾಂಜ್ರ ಬಯಲಿನಲ್ಲಿ ಇಂಥ ಸಾಂಸ್ಕೃತಿಕ ಸಂಬಂಧವಿದ್ದಿರಬಹುದೆಂಬ ಸಂಶಯಕ್ಕೆ ಈ ಶೋಧನೆ ಎಡೆಮಾಡಿದೆ.

● ●

ಕನ್ನಡ ವೃತ್ತಿಪದಕೋಶ-೪

ವಿ. ಶಿವಾನಂದ

ಹಗ್ಗ — ಹುರಿ ಹೆಸರುಗಳು.

1. 0. ಹಗ್ಗ[೧] ಹೊಸೆಯುವುದು ಒಂದು ಉದ್ದಿಮೆಯೇ ಆಗಿದ್ದರೂ, ಮುಖ್ಯವಾಗಿ ಹಳ್ಳಿಗಳಲ್ಲಿನ ಒಕ್ಕಲಿಗರು ಹೊಲದ ಕಾರ್ಯಗಳಲ್ಲಿ ತಮಗೆ ಬಿಡುವು ದೊರೆತಾಗ ವೃಥಾ ಕಾಲಹರಣ ಮಾಡದೆ, ತಮ್ಮ ವ್ಯವಸಾಯದಲ್ಲಿ ಉಪಯುಕ್ತವಾದ ಹಗ್ಗ-ಹುರಿಗಳನ್ನು ತಾವೇ ನಿರ್ಮಿಸಿಕೊಳ್ಳುವರು. ಅವರು ಉಪಯೋಗಿಸುವ ಆ ಹಗ್ಗ-ಹುರಿಗಳಿಗೆಲ್ಲ ಬೇರೆ ಬೇರೆ ಹೆಸರುಗಳಿವೆ. ಭಾಷಿಕ ಅಧ್ಯಯನಕ್ಕೆ ಆಯಾ ಪ್ರದೇಶದ ವೃತ್ತಿ-ವ್ಯವಸಾಯದ ಪದಗಳೂ ಸಹ ಹೇಗೆ ನೆಲೆಯಾಗಬಲ್ಲವು ಎಂಬುವರ ನಿದರ್ಶನಕ್ಕೆ ಈ ಹಗ್ಗ-ಹುರಿಗಳ ಪ್ರಸ್ತಾಪವನ್ನಿಲ್ಲಿ ಮಾಡಲಾಗಿದೆ. ಕಲಬುರ್ಗಿ ಜಿಲ್ಲೆ

---

೧ 'ಪ್ರಗ್ರಹ'ದ ತದ್ಭವ ಹಗ್ಗ. (ಶ. ಮ. ದ. ಸೂ. ೨೮೩. ಸಂಸ್ಕೃತದ ಈ ಪದಕ್ಕೆ ಸಮಾನಾರ್ಥಕವಾಗಿ 'ರಶ್ಮಿ' 'ಯೋಕ್ತ' 'ಅಗ್ಗರಣೆ' 'ದಾಮು' 'ರಜ್ಜು' 'ಅಲೋತ್ರ' ಮುಂತಾದ ಪದಗಳನ್ನು ಕನ್ನಡಕವಿಗಳು ಪ್ರಯೋಗಿಸಿದ್ದಾರೆ. 'ಸೆರೆ,' 'ಬಂಧ' ಎಂಬರ್ಥದಲ್ಲಿ 'ಪ್ರಗ್ರಹೋ'ಪದದ ನಿರ್ದೇಶನ ಅಮರಕೋಶದಲ್ಲಿದೆ. 'ಸೂತ್ರೇಶ್ವಾರಾದಿ ರಶ್ಮೌ ಪ್ರಗ್ರಹಃ (ಪ್ರಗ್ರಾಹೋಪಿಚ) (ಅ. ಕೋ. ಪು. ಸ. ೩೮೪, ೫೯೨, ಸಂ. ಲೂಯಿ ರೈಸ್. ಮೈ. ವಿ. ವಿ. ೧೯೬೧) ದ್ರಾವಿಡ ಭಾಷೆಗಳಲ್ಲಿ ಪದಾದಿಯ 'ಹ' ಕಾರ ಶೂನ್ಯದೊಂದಿಗೆ ಈ ಪದ ದೊರೆಯುತ್ತದೆ. ತಮಿಳು-ಅಕ್ಕಂ. ತೊದ-ಒಗ್ಮ ಒಗ್ತ (< ಒಡಗ) ಕನ್ನಡ-ಅಗ್ಗ, ಅಗ್ಗ-ರಣೆ > ಹಗ್ಗ C/f ಮರಾಠಿ, ಗುಜರಾಥಿ ಪಾಗ (tether) 'ಪಗಹಾ' (Turner S. V.) ಟಿ. ಬರೋ, ಎಮಿನೊ, Ety. D. D. L. No 24 oxford Press, 1970.

ಯಲ್ಲಿ ಲೇಖಕನು ಸಂಗ್ರಹಿಸಿದ ಕೆಲವು ಪದಗಳು ಮಾತ್ರ ಈ ಲೇಖನದ ಸಾಮಗ್ರಿಯಾಗಿವೆ.[೨]

1. 1. ಹಗ್ಗ-ಹುರಿ ಉತ್ಪಾದಕ ವಸ್ತುಗಳು.

೧) ಹುಲ್ಲು ೨) ನಾರು ೩) ನೂಲು ೪) ಸಣಬು ೫) ತೆಂಗು ೬) ತಾಡು ೭) ಬಿದಿರು ೮) ಸಿಂಧಿಗಿಡ ೯) ತೊಗಲು ೧೦) ತಂತಿ. ಮುಂ.

1. 1. 1 **ಹುಲ್ಲು :** ಹೊಸೆಯಲು ಬರುವ ಹುಲ್ಲು ಹಲವು ವಿಧವಾಗಿದೆ. 'ಬಂಗಾರ ಗ್ಯಾನಹುಲ್ಲು' ಒಂದು ಪ್ರಕಾರವು; ಗಣಜಿಲದಂತೆ ಹಳ್ಳದಲ್ಲಿ ಬೆಳೆಯುವುದು. ಒಕ್ಕಲಿಗರು ಅದರ ಹಗ್ಗ ಹೊಸೆದು ದೀವಳಿಗೆ ಹಬ್ಬದ ದಿನ 'ಗ್ವಾಂತ' (<ಗೋ+ಮೂತ್ರ)ದಲ್ಲಿ ನೆನೆಯಿಟ್ಟು, ಆಕಳ ಹಣೆಗೆ ಕಟ್ಟುವುದು ಸಂಪ್ರದಾಯ. ರಾಶಿಯ ಕಾಲದಲ್ಲಿ ಕೊಯ್ಲಿಯಾದ ಸೂಡುಗಳನ್ನು ಕಟ್ಟಲು ಅಲ್ಲಿರುವ ಹಸಿಯ ಹುಲ್ಲಿನ ಎಳೆಯೊಂದನ್ನೇ ಉಪಯೋಗಿಸುವರು. ಅಲ್ಲಿ ಅದು ದಾರದಂತೆ ಉಪಯೋಗವಾಗುತ್ತದೆ. 'ಹುಲ್ಲುಕಟ್ಟು'[೩] ಪದಕ್ಕೆ ಈಗ ಹುಲ್ಲಿನ 'ಹೊರೆ' ಎಂಬರ್ಥ ಬಂದಿದ್ದರೂ, ಒಂದು ಕಾಲಕ್ಕೆ ಅದನ್ನು ಕಟ್ಟಲು ಉಪಯೋಗವಾದ ಹುಲ್ಲಿನ ಎಳೆಯ ಮೇಲಿಂದಲೇ ಈ ಪದ ಬಳಕೆಯಲ್ಲಿ ಬಂದಿರಬೇಕು. ಹುಲ್ಲಿನ ಹಗ್ಗ ಹೊಸೆಯುವುದು ಹಿಂದೆ ಒಂದು ವೃತ್ತಿಯಾಗಿತ್ತು.[೪]

11.2 **ನಾರು :** (Asbestos)ನೆಯ್ಗೆಗೆ ಬರುವ ನಾರುಗಳಲ್ಲಿ ಎಲಿನಾರು. ತೆಂಗಿನ ನಾರು, ಕಲ್ನಾರು, ಹೂವಿನ ನಾರು ಮುಂತಾಗಿ ಹಲವು ವಿಧ. ಆದರೆ ಹಗ್ಗ ಹೊಸೆಯಲು ಬರುವ ನಾರಿನಲ್ಲಿ ರೈತರು ಹೇಳುವುದು— ೧) ಪುಂಡಿಯನಾರು (The Deckanee Hemp) ೨) ಚಾಗ ಮಟ್ಟಿನಾರು ೩) ಭೂತರಾಕ್ಷಿನಾರು 'ತೆಂಗಿನನಾರು' ಎಂದಿದ್ದರೂ ಈ ತೆಂಗಿನ ಹಗ್ಗವೇ ಬೇರೆ. ನಾರಿನ ಹಗ್ಗವೇ ಬೇರೆ. ಭೂತರಾಕ್ಷಿನಾರು ಅಥವಾ ಕಲ್ನಾರು (Asbestos) ಪುಂಡಿಗಿಂತ ಹೆಚ್ಚು ತಾಳುವದು. ಇದರಲ್ಲಿ ಗಂಡು-

೨ ಕಲಬುರ್ಗಿ ಜಿಲ್ಲೆಯ 'ಕಣ್ಣಿ' ಗ್ರಾಮ ನಿವಾಸಿಗಳಾದ ಭೂತಾಳಿ ವೀರಪ್ಪ (೫೦) ಸಿದ್ಧಪ್ಪ (೪೫) ಹಾಗೂ ಉಪಳಾಂವದ ರಾಮಚಂದ್ರಪ್ಪ (೫೫) ಈ ರೈತರು ನೀಡಿದ ಮಾಹಿತಿಗೆ ಲೇಖಕ ಉಪಕೃತ.

೩ atie made of grass or Straws (ಕ. ಕೋ. ಪು. ೧೭೪೭. ಮದ್ರಾಸ ವಿಶ್ವವಿದ್ಯಾಲಯ.)

೪ ನೊಡೆಯ ಹುಲ್ಲಿನ 'ನುಲಿ' ಹೊಸೆದು ಅದನ್ನು ಮಾರಿ ಜೀವಿಸುತ್ತಲಿದ್ದ ಶಿವಶರಣ 'ನುಲಿಯ ಚಂದಯ್ಯ (ಕ. ಚ. ಭಾ. I ಪು ೨೦೮. ೧೯೭೨. ಕ. ಸಾ. ಪ. ಬೆಂಗಳೂರ.) ಕೈಯಲ್ಲಿ ಹಗ್ಗ ಸುತ್ತಿ ಇವನ ಕಾಯಕವನ್ನು ಸಾಂಕೇತಿಕವಾಗಿಸಿದ ಒಂದು ಶಿಲ್ಪ ವಿಗ್ರಹ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿದೆ.

ಹೆಣ್ಣು ಎಂವೆರಡು ಜಾತಿಗಳಿದ್ದು, ಹೆಣ್ಣಿನಿಂದ ಮಾತ್ರ ಹಗ್ಗಗಳು-ಉತ್ಪನ್ನವಾಗುತ್ತವೆ. ಪುಂಡಿ ಮತ್ತು ಭೂತರಾಕ್ಷಿಯನ್ನು ಹಳ್ಳದ ನೀರಿನಲ್ಲಿ ೮-೧೦ ದಿನ ನೆನೆಯಿಟ್ಟು ಅವನ್ನು ಎಳೆ ಎಳೆಯಾಗಿ ಬಡಿಸಿ ತಂದು ಒಣಗಿಸಿ ಹಗ್ಗಗಳನ್ನು ಹೊಸೆಯುವರು.[೫]

1. 1. 3. **ನೂಲು :** (< ನೂಲ್/ನುಲಿ-to make thread) 'ತನ್ತ್ರೀಕರಣ' (ಶ. ಮ. ದ. ನುಲಿ ಎಂಬುದು ಈಗ ನಾಮವಾಚಕವಾಗಿ ಹೊಸೆದ ಹುರಿ ಎಂಬರ್ಥ ಕೊಡುತ್ತಿದ್ದರೂ ಮೂಲತಃ 'ನೂಲ್' ಮತ್ತು 'ನುಲಿ' ಎರಡೂ ಪದಗಳು ಕ್ರಿಯಾಪ್ರಕೃತಿಗಳೇ ಆಗಿವೆ. 'ಬಾಲಮಂ **ನುಲಿ ನುಲಿದು ಕೊಳ್ಳುತ್ತ**' (ಜ. ಪು. ೫೧. ೫೯.) ಎಂಬ ಪ್ರಯೋಗದಲ್ಲಿ 'ನುಲಿ'ಗೆ to twist as a rope, to wind up, to roll between the hands ಅರ್ಥಗಳಿವೆ.(ಕಿ.ಕೋ.೯೪೮)ತೆಲುಗು-ನುಲುಮು; ಮಲೆಯಾಳಂ-ನುಳ್ಳು; ತುಳು-ನುರ್ಲು ರೂಪಗಳಿಗೆಲ್ಲ ಮೇಲಿನದೇ ಅರ್ಥ. ಈ ಕ್ರಿಯೆಯಿಂದಾದ ವಸ್ತು ಈಗ ನೂಲು. ಆದರೆ 'ನೂಲೆಳೆ' ನೂಲಹುರಿ' 'ನೂಲ ಹಗ್ಗ' 'ನುಲಿಕೆ' 'ನುಲಿ' ಎಂಬುದಕ್ಕೆಲ್ಲ ಅರಳೆಯಿಂದ ನೂತದ್ದು ಮಾತ್ರ ಎಂಬರ್ಥ ಈಗ ಸೀಮಿತವಾಗಿದೆ. ಕಂಬಳಿಯ ಕರೆಕಟ್ಟುವುದನ್ನು ಈ ಪ್ರದೇಶದಲ್ಲಿ 'ಬೆನ್ನುಲಿ' ಎಂದು ಹೇಳುವರು,[೬] (< ತದ್ಭವ+ನುಲಿ).

1·1·4 **ಸೆಣಬು :** (<ತದ್ಭವ — 'ಶಣ', 'ಮಾತುಲಾಗಿ)', 'ಭಂಗೆ', (ಸಂ) 'ಭಾಂಗೀನ' (ಮರಾಠೀ) (Erotoluria Juniea - the sun henp

೫ ಇದನ್ನು 'ನಾರು ಬಿಡಿಸುವುದು' ಎನ್ನುವರು. ನೆನೆಹಾಕಿದ ನೀರು ಕೊಳೆಯಾಗಿ ಅಲ್ಲಿ ನಾರುವುದರಿಂದ ಇದಕ್ಕೆ 'ನಾರು' ಎಂಬ ಹೆಸರು ಬಂದಿರಬಹುದೇ? (>ನಾಱ್ (ಹ.ಗ.) ನಾಱು+ತ=ನಾತ 'ನಾರು' ಪದಕ್ಕೆ ಹಿಂದೆ ಸುವಾಸಕ್ಕಿಂತ 'ದುರ್ಗಂಧ'ವೆಂದೇ ಹೆಚ್ಚು ಪ್ರಯೋಗಗಳಿವೆ. 'ಪೊಲಸು ನಾಱಿ ಮೆಯ್ಯ್' (ಪಂ. ಭಾ ೧೧. ೫೧) ಸುವಾಸನೆಗೆ 'ಸುಗನ್ಧ ಪರಿಮಳಂ ನಾರ್ಪ ತುಪ್ಪಮುಂ' (ವಡ್ಡಾರಾಧನ ೭೮-೧೫) ಇಲ್ಲಿ 'ನಾರು' ಪದಕ್ಕೆ ಸುಗನ್ಧ, ಪರಿಮಳ ಎಂಬವು ವಿಶೇಷಣವಾಗಿ ಬಂದಿದೆ. ಇದರಿಂದ ಶಬ್ದಮಣಿದರ್ಪಣದಲ್ಲಿ ಕೇಶಿರಾಜನು ಹೆಸರಿಸುವ 'ನಾರುಗ' ಮತ್ತು 'ಗಂಧಿಗ' ಉದ್ಯೋಗಗಳು (ಶ. ಮ. ದ. ಸೂ. ೨೪೦) ಬೇರೆ ಬೇರೆ ಎನ್ನಬಹುದು. ನಾರುಗ-who deals with fibers. ನಾರು ಬಟ್ಟೆಗಳನ್ನು ವಿಕ್ರಯಿಸುವವ. ಗನ್ಧಿಗ-ಸುಗಂಧ ಪರಿಮಳ ದ್ರವ್ಯಗಳನ್ನು ಮಾರುವವ.

೬ 'ಬೆಂದನುಲಿಯಂತೆ' ಮನ್ಮಥ ಸುಟ್ಟು ಸೀಗುರಿಗೊಂಡನೆಂದು ವರ್ಣನೆ ಬರುತ್ತದೆ. ಇಲ್ಲಿ ಇದು ಬೆನ್ನುಲಿ ಅಲ್ಲ. (ಗಿ. ಕ. ಹರಿಹರ) 'ನೂಲ ಸಂಕಲಿಗಡಿಮ ಕನಕದ ಕೋಲಮಂ ಕಾಲಿಗೆ ಶೀಲ್ವಂತೆ' (ಪ್ರ. ಲಿಂ ಲೀ.- ಚಾಮರಸ) ಇಲ್ಲಿ ನೂಲಿನಹಗ್ಗವೆನ್ನುವದಕ್ಕಿಂತ ಹುರಿ.-ದಾರ. ಇದನ್ನು ಕಾಲಿಗೆ ಕಟ್ಟಿಕೊಳ್ಳುವ ಸಂಪ್ರದಾಯದ ಬಗೆಗೆ ಇನ್ನೂ ಜನಪದದ ವಿವರಣೆ ಬೇಕು.

plant) ರೈತರು ಇದನ್ನು ಹೆಚ್ಚಾಗಿ 'ಕಾಲಿಗ್ಗೆ'ಗೆಂದು (rotation of crops) ಬೆಳೆಯುತ್ತಾರೆ. ಇದರ ತೊಪ್ಪಲು ಗೊಬ್ಬರವಾದರೆ, ದೇಟು, ನಾರಿಗೆ ಉಪಯುಕ್ತ. ಪುಂಡಿನಾರಿನ ಹಗ್ಗಗಳಿಗಿಂತ ಇವುಗಳ ತಾಳಿಕೆ ಬಾಳಿಕೆ ಹೆಚ್ಚು.

1·1·5 **ತೆಂಗು :** (ತ - ಮ. ತೆಙ್ಙು; ತು. ತೆಙ್ಗಾಯಿ) ವಿಶೇಷವಾಗಿ ತಾರೆ ಸಂ-ನಾರಿಕೇಳ; ಲಾಂಗುಲಿ: ಮರಾಠಿ ನಾರಿಕೇಲ/ಳ. ತೆಂಗು ಬೆಳೆಯುವ ಪ್ರದೇಶ ಇದಲ್ಲವಾದುದರಿಂದ ಇಲ್ಲಿ ಅವುಗಳ ಉತ್ಪಾದನೆಯಿಲ್ಲ. ರೈತರು ಅಂಗಡಿಗಳಿಂದ ಕೊಂಡು ತಂದು ಇದನ್ನು ಉಪಯೋಗಿಸುವರು.

1·1·6 **ತಾಟ :** (ತಾಟ್ <ತದ್ಭವ, ತಾಲ್, ಶ. ಮ. ಪ ಸೂ. 30) the palhyra tree ಕೃಷಿಕರು ಇವನ್ನು ಉಪಯೋಗಿಸುವುದಿಲ್ಲ. ಇವು ಕಾರಖಾನೆಯಲ್ಲಿ ತಯಾರಿಸುವ ಹಗ್ಗಗಳು.

1·1·7 **ಬಿದಿರು :** (ಸಂ. ವಿಪುಲ. ಬಿದಿರು ಉ ಬಿದರ) ಬಿದಿರಿನ ಹಗ್ಗಗಳೂ ಸಹ ಹೆಚ್ಚಾಗಿ ರೈತರಲ್ಲಿ ಉಪಯೋಗವಿಲ್ಲ.

1·1·8 **ಸಿಂಧಿ :** (=ಈಚಲುಗಿಡ ಮ. 'ಶಿಂದೀ'. ಇದರ ಪರಕೆಗಳನ್ನು ಬಚ್ಚಿ ಸೀಳಿ 'ಕೊರವ' ಜಾತಿಯ ಜನ ಹಗ್ಗ ಮಾಡುತ್ತಾರೆ.

1·1·9 **ತೊಗಲು :** ಎತ್ತು, ಎಮ್ಮೆಗಳು ತೀರಿದಾಗ ಅದರಿಂದ 'ಡೋರರು' ಬಾಣ್ಣಿ, ಕಣ್ಣಿಗಳನ್ನು ಮಾಡುವರು.

1·1·10 **ತಂತಿ :** ತಂತಿಯ ಸರಪಳಿಗಳು ಹಗ್ಗದಂತೆ ಉಪಯೋಗವಾದರೂ, ಅವನ್ನು ರೈತರು ನಿರ್ಮಿಸಲಾರರು.

1·2 ಹಗ್ಗಗಳ ಹುಟ್ಟಿಗೆ :

1·1 ರಲ್ಲಿ ಹೇಳಿದ ಕೆಲವು ಉತ್ಪಾದಕ ಸಾಮಗ್ರಿಗಳಿಂದ ಒಂದೊಂದನಲ್ಲಿ ಹುಟ್ಟುವ ಹಗ್ಗ-ಹುರಿ, ಹೆಸರುಗಳನ್ನು ಕೆಳಗೆ ಕೊಟ್ಟಿವೆ.

ನಾರಿನ ಹಗ್ಗಗಳು : (ಪುಂಡಿ/ನಾರು/ಭೂತರಾಕ್ಷಿ)

(೧) ಪಡುಪಿನ ಹಗ್ಗ (೨) ಒಂಬತ್ತುಂಡಿ ಹಗ್ಗ (೩) ಕುಂಡಿಗೆಂಡ
(೪) ಕೈ ಸೇರಿ ಹಗ್ಗ (೫) ಸೋಲಹಗ್ಗ (೬) ಹಣಿಗ್ಗ (೭) ಹಳಗಿನ ಹಗ್ಗ

ನೂಲಿನ ಹಗ್ಗಗಳು :

(೧) ಹಣಿ ಹಗ್ಗ/ಆಟಿಗ್ಗ (೨) ಹಣಿಕಟ್ಟ (೩) ಮಗ್ಗಾ (೪) ಬಾರಕೋಲ ಹುರಿ (೫) ಸರ್ಧಗ್ಗ (೬) ಸೊಂಡ್ಡಿಗ್ಗ.

ತೊಗಲಿನ ಹಗ್ಗಗಳು :

೧) ಬಾಣ್ಲೆ ೨) ವಿಣಿ ೩) ಜತ್ತಿಗಿ ೪) ಗೆಜ್ಜೆಸರ
೫) ಬಾರಗಳು (ಬಾರಕೋಲು, ಮುಂಡಿಬಾರು) ೬) ಕುರಗೊಡ್ಡು

ತಂತಿಯ ಹಗ್ಗಗಳು: ೧) ನೇಗ್ಲ ಸರಪಳಿ ೨) ಎದಿಬಿರಿತಂತಿ ಮುಂ.

ತೆಂಗಿನ ಹಗ್ಗಗಳು: ೧) ಸೇದೀ ಹಗ್ಗ ೨) ಸೊಂಡ್ಲೆಗ್ಗ ೩) ವಿಣೆ.

1. 3 ಹಗ್ಗಗಳ ತಯಾರಿಕೆ ವಿಧಾನ :

ಒಂಬತ್ತು ಹುರಿಹಗ್ಗ : ಮೊದಲೆರಡು ಹುರಿ ಹೊಸೆದು, ಅವಕ್ಕೆ ಮತ್ತೊಂದು ಹುರಿ ಸೇರಿಸಿ, ಆ ಮೂರನ್ನೂ ಕೂಡಿಸಿ ಪುನಃ ಹೊಸೆದಾಗ ಅದು ಎರಡು ಪದರುಗಳಾಗಿ ಆರು ಹುರಿಗಳಾಗುವುದು. ಅದಕ್ಕೆ ಮತ್ತೆ ಮೂರರ ಒಂದು ಹುರಿ ಸೇರಿಸಿದಾಗ ಈ ಹಗ್ಗ ಸಿದ್ಧವಾಗುವುದು. ಇದು ಒಕ್ಕಲಿಗರು ಹೇಳುವಂತೆ 'ಮೂರು ಗೂಡಿಸಿ ಉಡಿದ ಹಗ್ಗ'

ಕಣ್ಣಿ/ದಾವು : ಹಗ್ಗಗಳ ಕೊನೆಯಲ್ಲಿ ಒಂದು ಭಾಗಕ್ಕೆ 'ಕಿವಿ' ಇನ್ನೊಂದು ಕಡೆ ಕುಣಿಕೆ (< ಕೊರಳ್ + ಇಕೆ) ಅವೆರಡನ್ನೂ ಎತ್ತುಗಳ ಕೊರಳಿಗೆ ಕೂಡಿಸಿ ಕಟ್ಟುವುದು ಕಣ್ಣಿ. a net which is drawn together by means of two ropes (ಅ. ಕೋ. ೩೭೪) ಈ ಕಣ್ಣಿಗಳನ್ನು 'ದಾವು'ಗಳೆಂದೂ ಕರೆಯುವರು.

ಕುರುಗೊಡ್ಡು : ಒಂಬತ್ತು ಹುರಿಗಳಿಂದ ಹೊಸೆದ ಹಗ್ಗ.

ಚಪ್ಪು : ಸೇದೆ ಹಗ್ಗಗಳ ಮುಂದೆ ಇದನ್ನು ಹೊಸೆದು ಜೋಡಿಸುವರು. ಕೊನೆಯಲ್ಲಿ ಕೊಡಗಳ ಕಂಠವನ್ನು ಸಿಕ್ಕಿಸಲು 'ಬಾಯಿ' ಯಾಕೃತಿ ಒಂದು ಸರಕು ಇರುವುದು. ಈ ಭಾಗಕ್ಕೆ 'ಚಪ್ಪು' ಎನ್ನುವರು.

---

೭ 'ಉರುಳ್, ಕೋಲ್ ಕಣ್ಣಿ ಮೊದಲಾದ ಮೃಗ ಪಕ್ಷಿಗಳ ಬನ್ಧನೋಪಕರಣಂಗಳ್' (ನಾಚಿ ರಾಜೀಯ ಕೋಶ)ಹಗ್ಗಕ್ಕೆ ಸಾಮಾನ್ಯವಾಗಿ ಮೊದಲು 'ಕಣ್ಣಿ'ಇಲ್ಲವೆ ದಾವು ಎಂದೇ ಅರ್ಥವಿತ್ತು. ಕಣ್ಣಿ = ಯೋತ್ರ; ಹಗ್ಗ (ನಾ. ಕೋ) ದಾಮುಸ (ಮರಾಠಿ) 'ದಾವಣಿಯ ದನ ಮಾಡಿ ಕಟ್ಟುವ' (ಪ್ರ. ಲಿಂ. ಲೀ. ಗ. I) ಇಲ್ಲಿ 'ಡಾವು' ಎಂದರೆ ಕಣ್ಣಿ. ಇದನ್ನು ಗೂಟಕ್ಕೆ ಕಟ್ಟಿ ಅಲ್ಲಿನ ಕಣಿಯಿಂದ ದನಗಳನ್ನು ಕಟ್ಟುವ ಸ್ಥಳ ದಾಮದಿ > ಡಾವಣಿ > ಡಾವ್ಲಿ. ಇಂತಹ ಕಣ್ಣಿ ಅಥವ ದಾವುಗಳ ಪ್ರಸ್ತಾಪ (ಕಾಲಗಣ್ಣಿ, ಜಲ್ಗಣ್ಣಿ, ಕಣ್ಣಿವಲೆ) ಕಾವ್ಯಗಳಲ್ಲಿ ಬೇಟೆಯ ವರ್ಣನೆಯಲ್ಲಿ ಬರುತ್ತದೆ. ಇದು ಕಣ್ಣಿನಾಕೃತಿಯಲ್ಲಿ ರಚಿತವಾಗಿರುವುದರಿಂದ 'ಕಣ್ಣಿ' ಹೆಸರು 'ಪ್ರತ್ಯಾಪನ್ನತದ್ಧಿತನಾಮ'ವಾಗಿದೆ. ನೋಡಿ. ೧. ೫. ೭. ೨.

ಚಿಂಪೂ ಚಿಪ್ಪ: ಒಂದು ಹಗ್ಗ ಕತ್ತರಿಸಿದಲ್ಲಿ ಅದನ್ನು ಪುನಃ ಆ ಹಗ್ಗದ ಹಿಂಬದಿಯಿಂದ ಹೊಸೆದು ಜೋಡಿಸುವುದು. ಹಿಂದಿಸಿಂದ ಹೊಸೆಯುವುದು ಚಿಂಪ (<ಚಿವ್ = ಹಿವ್; ಚಿಮ್ಮುರಿ)[೮]

ಜತ್ತಿಗೆ: (< ಯೋಕ್ತ್ರಿಕಾ .ಯುಗ = ನೊಗ) ಇದು 'ಮಾರು'ಗಳಷ್ಟು ಎರಡು ಹಗ್ಗ ಹೊಸೆದು ಉಡಿದು ಮಾಡುವ ಹಗ್ಗ. ಇವು ಜೋಡು ಪದರುಗಳುಳ್ಳ ನಾರಿನ ಜತ್ತಿಗೆಗಳು. ಇತ್ತೀಚೆಗೆ ತೊಗಲಿನ ಜತ್ತಿಗೆಗಳ ಉಪಯೋಗವೇ ಹೆಚ್ಚಿದೆ.

ನೊಗಸುತ್ತ: ಇದು 12 ಹುರಿಗಳ ಹಗ್ಗ. ಒಂಬತ್ತು-ಹುರಿ ಹಗ್ಗಕ್ಕೆ ಮತ್ತೆ ಮೂರನ್ನು ಸೇರಿಸುವುದು.

ಪಡುವಿನ ಹಗ್ಗ: ನಾರನ್ನು ಕಾಲಿನ ಬೆರಳ ತುದಿಯಲ್ಲಿ ಹಿಡಿದು ಹುರಿ ಹಾಕುತ್ತ ಹೋಗುವುದನ್ನು 'ಪಡು ಬಿಡು' ಎನ್ನುವರು. ಹಾಗೆ ಹುರಿಗೊಂಡ ಭಾಗವನ್ನು ಪಾದಕ್ಕೆ ಸುತ್ತಿಕೊಳ್ಳುವರು. ಇಂತಹ 15 ಪಾದಗಳಿಗೆ ಒಂದು ಪಡುವಿನ ಹಗ್ಗವೆಂಬ ಲೆಕ್ಕ. ಹೊಸ ಪಾರಗಳನ್ನು ಒಂದರ ಮೇಲೊಂದು ಹುರಿಹಾಕುವುದನ್ನು 'ಉಡಿಯುವುದು,' ಎನ್ನುವರು. ಉಡಿ = to twist with the palms of the hands.[೯]

ಲಗ್ಗೋಣಿ: ಎರಡು ಪದರು ಹೊಸೆದು ಮೂರುಗೂಡಿಸಿ ಉಡಿದರೆ ಲಗ್ಗೋಣಿ. ಇದರ ಉದ್ದ ಏಳುಮಾರು.

ಸರದಾವ್ಲಿ: ಸಾಲಾಗಿ ಎತ್ತುಗಳನ್ನು ಕಟ್ಟುವುದಕ್ಕೆ ಒಂದೇ ಹಗ್ಗಕ್ಕೆ ಕಣ್ಣಿಗಳನ್ನು ಮಾಡಿರುವುದು.

ಸರ್ಪಗ್ಗ: ಇದು ಎಲ್ಲಕ್ಕಿಂತ ಹೆಚ್ಚು ಉದ್ದವಾದ ಹಗ್ಗವಾದುದರಿಂದ ಸರ್ಪಗ್ಗ. ಉದ್ದ 20 ಮಾರು* ಇದನ್ನು 'ಹಳಗಿನ ಹಗ್ಗ' ವೆಂದೂ ಕರೆಯುವರು.

ಸೇದೀಹಗ್ಗ: ಸೇದು (< ಸೇನ್ದು) ಎಂದರೆ ಜಗ್ಗು (to Pull) ತೆ-ಚೇದು. ತು-ಚಾಮ್ಪು. ಬಾವಿಗಳಲ್ಲಿಂದ ನೀರು ಸೇದಲು ಉಪಯೋಗಿಸುವುದು. ಒಂಬತ್ತು ಹುರಿಗಳ ಹಗ್ಗವೇ ಇದಾಗಿದ್ದು ಮುಂದೆ ಚಿಪ್ಪು (ಬಾಯಿಕಣ್ಣು) ಇರುವುದು.

---

೮ The act of fastening the arms to the back pinioning (ಕಿ. ಕೋ. ೬೫೦) ಕಿರಿದು + ಪು > ಚಿಪ್ಪು > ಚಿಂಪು. ಹಗ್ಗ ಕಿರಿದಾಗುತ್ತಾ ಹೋಗುವುದರಿಂದ ಈ ಹೆಸರು ಸೇರಿರಬಹುದು. 'ತುಜುಬು ಚಿಮ್ಮುರಿ' ಪ್ರ. ಲಿಂ. ಲೀ. ಚಾಮರಸ.

೯ ಕಿಟೆಲ್ ಕೋಶದಲ್ಲಿ ಈ ಅರ್ಥವಿದ್ದರೂ ಪ್ರಯೋಗವನ್ನು ಹೇಳಿಲ್ಲ. ಹಿಂದಿನ ಕೋಶಗಳಲ್ಲಿ 'ಪಡು' 'ಉಡಿ' ಕ್ರಿಯಾಧಾತುಗಳು ಉಲ್ಲೇಖವಿಲ್ಲ.

* ಮೂರು-ನಾಲ್ಕು ಮೊಳ. ಶಬ್ದಮಂಜರಿ ಸಂ. ಗಂಗಾಧರ ಮಡಿವಾಳೇಶ್ವರ ತುರಮುರಿ (1869)

ಹಂತಿ ಕಣ್ಣಿ : ರಾತ್ರಿಯ ಕಾಲದಲ್ಲಿ 5, 7 ರಂತೆ ಎತ್ತುಗಳನ್ನು ಬೆಸಸಂಖ್ಯೆಯಲ್ಲಿ ಕಟ್ಟುವರು. ಆ ಎಲ್ಲ ಎತ್ತುಗಳು ಒಂದೇ ಸಮನಾಗಿ ಸುತ್ತ ತಿರುಗುವುದಕ್ಕೆ ಒಂದೇ ಹಗ್ಗದಲ್ಲಿ ಕಣ್ಣಿ ಹಾಗೂ 'ಮುಲಕು'ಗಳನ್ನು ಮಾಡಿ ಕಟ್ಟುವುದು ಹಂತಿಕಣ್ಣಿ.

ಹಸ್ಗೆಗ್ಗ : 9 ಹುರಿ ಹಗ್ಗ. ಎರಡೂ ಕಡೆಗಳಲ್ಲಿ 'ಕಣ್ಣಿ'ಗಳನ್ನು ಹಚ್ಚಿರಲಾಗುವುದು.

ಹಳಗಿನ ಹಗ್ಗ : (=ಸರ್ಪಗ್ಗ) ಸರ್ಪಗ್ಗದಲ್ಲಿ ಕಟ್ಟಿಗೆಯ ಗೇಣುದ್ದದ ಬೆಣೆಗಳಿದ್ದು. ಎರಡೂ ಕಡೆ ಅದಕ್ಕೆ 'ಕಿವಿ'ಗಳಿರುತ್ತವೆ. ಅವೆರಡರ ಬದಿಯಿಂದ ಹಗ್ಗವನ್ನು ಹಾಕಿ ಬಿಗಿಮಾಡಲು ಬರುವುದು. ಇಂತಹ ಬಿಗಿಸಮೇತವಾದ ಹಗ್ಗ ಹಳಗಿನ ಹಗ್ಗ.

1.4 ಹಗ್ಗದ ಪ್ರಕಾರಗಳು–ಅವುಗಳ ಉಪಯೋಗ :

ಕೃಷಿ ವ್ಯವಸಾಯದಲ್ಲಿ ಉಪಯೋಗಕ್ಕೆ ಬರುವ ಒಟ್ಟು ಹಗ್ಗಗಳನ್ನು ಕೆಳಗಿನಂತೆ ವಿಭಾಗಿಸಿ ಆಯಾ ಹಗ್ಗಗಳು ಎಲ್ಲಿ ಉಪಯೋಗವಾಗುತ್ತವೆಯೆಂಬುದನ್ನಿಲ್ಲಿ ಹೇಳಿದೆ.

1.4.1 I ನಾರಿನ ಹಗ್ಗಗಳು :

ಇದರಲ್ಲಿ ಸಮಾವೇಶವಾಗುವ ಮುಖ್ಯ ಹಗ್ಗಗಳು :

1) ಸರ್ಪಗ್ಗ/ಹಳಗಿನ ಹಗ್ಗ 2) ಕೈಸೇರಿಹಗ್ಗ 3) ಸೇದೀಹಗ್ಗ 4) ಪಡುವಿನ ಹಗ್ಗ 5) ಕುರುಗೊಡ್ಡ 6) ಹೂಟ್ಟೆಗ್ಗ.

ನಾರಿನ ಹಗ್ಗದಲ್ಲಿಯೇ ಅಂಶಿಕವಾಗಿ ಸೇರುವ ಅನ್ಯತ್ರ ಹಗ್ಗ–ಹುರಿಗಳು.

i) ಸುತ್ತುಗಳು :

1) ನೊಗಸುತ್ತ 2) ಕೊಳಸುತ್ತ

ii) ಚರಿಗಳು :

1) ಕೊಮುಚರಿ 2) ಮೂಗಚರಿ

iii) ಹುರಿಗಳು :

1) ಸಪ್ಪುರಿ (=ಎರಡು ಎಳೆ) 2) ಚಿಂಪುರಿ (=ಮೂರು ಎಳೆ) 3) ಒಂಬತ್ತುರಿ.

iv) ಕಣ್ಣಿಗಳು :

1) ಹಂತಿಕಣ್ಣಿ 2) ಲಂಬಕಣ್ಣಿ 3) ಒಂಗಲಕಣ್ಣಿ 4) ಬಾಯಿಗಣ್ಣಿ.

v) **ಸೋಲುಗಳು :**

1) ಹಿಂಗೋಡ ಸೋಲ (ದಿಂಡಿಗೆ) 2) ಲಗ್ಗೋಣೆ ಸೋಲ. (ನೊಗಕ್ಕೆ) 3) ಮೇಲಸೋಲ (ಸೇದಿಹಗ್ಗಕ್ಕೆ) 4) ಹಳಗಿನ ಸೋಲ.

vi) **ಜಾಳಿಗೆಗಳು :**

1) ಚಿಕ್ಕ ಬಾಯಿಜಾಳಿಗೆ 2) ಧೋಟಿ ಜಾಳಿ 3) ಹೊಟ್ಟಿನ ಜಾಳಿಗೆ.

1.4.2. II **ತೊಗಲಿನ ಹಗ್ಗಗಳು :**

1) ಮಿಣಿ 2) ಬಾಣ್ಣಿ 3) ಜತ್ತಿ 4) ಕವ್ಣಿಹಗ್ಗ 5) ಮಗ್ಗಾ 6) ಸುತ್ತಬಾರ 7) ಕೊಳಬಾರ 8) ಮಂಡಿಬಾರ 9) ಬಾರಕೋಲ ಬಾರ 10) ಹುರಿಬಾರ 11) ತುದಿಬಾರ 12) ಪತಿಯೋಣ 13) ಚಿಪ್ಪು 13) ಗೆಜ್ಜೆಸರ.

1.4.3. **ಹಗ್ಗಗಳ ಉಪಯೋಗ :**

ಆಟ್ಟಿಹಗ್ಗ—ಎತ್ತುಗಳನ್ನು ವ್ಯವಸಾಯದಲ್ಲಿ ಉಪಯೋಗಿಸುವಾಗ ಅವುಗಳ ಹಣೆಗೆ ಕಟ್ಟುವ ಹಗ್ಗ.

ಆಟ್ಟಿಹಗ್ಗದಕಣ್ಣಿ—ಆಟ್ಟಿಗ್ಗದ ತುದಿಯಲ್ಲಿ ಕಟ್ಟಿದ ಎರಡು ಕಣ್ಣಿಗಳು. ಹಿಡಿಯಲು ಉಪಯುಕ್ತ.

ಒಂಬತ್ತುಹುರಿಹಗ್ಗ—ಕುರುಗೋಡ ಹಾಗೂ ನೊಗ ಸುತ್ತಗಳಿಗೆ ಉಪಯೋಗಿಸುವ ಹಗ್ಗ. ಅಲ್ಲದೆ ಕಣಿಕೆ ಕಟ್ಟಲು, ನೀರು ಸೇದಲು, ತೊಟ್ಟಿಲು ಕಟ್ಟಲು ಉಪಯುಕ್ತ.

ಕಣ್ಣಿ—ಕುಣಿಕೆಗಳು ದನ-ಕರುಗಳನ್ನು ಕಟ್ಟುವರು.

ಕವ್ಣಿದಾರ—ಕಲ್ಲುಗಳನ್ನು ತೂರಲು ಕವಣೆಗೆ ಕಟ್ಟುವ ದಾರಗಳು.

ಕಾಂಡಾ—ಎತ್ತುಗಳ ಕೊರಳಿನ ಅಲಂಕಾರ.

ಕುರುಣಿ — ಎತ್ತುಗಳ ಟೊಂಕಕ್ಕೆ ಸುತ್ತಲೂ ಅಲಂಕಾರಕ್ಕೆಂದು ಕಟ್ಟುವುದು. ಎತ್ತಿನ ಕಾಲುಗಳಿಗೂ ಸಹ ಕಟ್ಟುವರು. ಇದು ಉಣ್ಣೆಗುರಿ ಕೂದಲಿನಿಂದ ಹೊಸೆದುದು.

ಕುರುಗೋಡ — ಗಳೇದ ನೊಗಕ್ಕೆ ಕಟ್ಟುವ ಹಗ್ಗ.

ಕುರುಗೋಡ ಸೋಲ — ಕುರುಗೋಡಿಗ ಬಿಂದು ಭಾಗ.

ಕೈಸಿ ಹಗ್ಗ — ಕಣಿಕೆ ಹೊರೆ ಕಟ್ಟಲು ಹಾಗೂ ದನ-ಕರುಗಳ ದಾವು. ನಾಂಡಿಗೆ ಕಟ್ಟಲು ಉಪಯುಕ್ತ.

ಕೊಳಕಣ್ಣಿ — ಕೊರಳಿಗೆ ಕಟ್ಟುವ ದಾವು.

ಗಳೇವ ಸೋಲ — ಗಳೆ ಹೊಡುವಾಗ ಬೇಕಾಗುವ ಹಗ್ಗ

ಗಾಡೀ ಹಗ್ಗ — ಕಣಿಕೆ ಗಾಡಿಗೆ ಬೇಕಾಗುವ ಹಗ್ಗಗಳು

ಚಪ್ಪ — ನೀರು ಸೇದುವ ಹಗ್ಗದ ತುದಿ (ನರಿಬಾಲ ಬಾಯಿಕಣ್ಣಿ)

ಚಾರೀ ಹಗ್ಗ — (<ಬೌವರ್ ಹಿಂ) ನಾಲ್ಕು ಅಥವ ಆರು ಪದರಿನದು ನಾಲ್ಕೆತ್ತಿನ ಕಬ್ಬಿಣ ನೇಗಿಲಿಗೆ ಬೇಕಾಗುವುದು.

ಚಿಕ್ಕ / ಚುಕ್ಕೆ (≪ ಸಿಕ್ಕು) ಬೆಳೆ ತಿನ್ನದಂತೆ ಎತ್ತುಗಳ ಬಾಯಿಗೆ ಕಟ್ಟುವ ಭಾಳಿಗೆಗಳು

ಚಿಟ್ಲಿ — ಬಾರಕೋಲಬಾರಿನ ಕೊನೆಯ ಗಂಟು

ಚಿಯು — ಹಗ್ಗ ಕಡಿದಲ್ಲಿ ಪುನಃ ಹಿಂದಿನಿಂದ ಹೊಸೆದು ಜೋಡಿಸುವ ಭಾಗ

ಚಿಂಪುರಿ — ಮೂರು ಹುರಿ ಹಾಕಿದ ಸಾದಾ ಎಳೆ

ಜಪ್ಲಿ — ಗಳೆ, ಗಾಡಿಯಲ್ಲಿ ಎತ್ತಿನ ಕೊರಳಿಗೆ ಕಟ್ಟುವದಾರ ತೊಗಲಿನ ಪಟ್ಟಿಗಳು

ಜಪ್ಲಿ ಕಣ್ಣಿ — ಜತ್ತಿಗೆ ಸಮೇತವಾಗಿರುವ ಕಣ್ಣಿ

ಜಾಳ್ಗಿ — ಹೊಟ್ಟು ತುಂಬುವುದು

ತಲಾರ ದಾಂಡ — ಎತ್ತುಗಳ ತಲೆಯ ಅಲಂಕಾರ

ತಾಳಿನ ಕಣ್ಣಿ — ತಾಳುಗಳಿಗೆ ಕಟ್ಟಿರುವ ಕಣ್ಣಿ

ತೆಂಗಿನ ಹಗ್ಗ — ನೀರು ಸೇದಲು, ಮಟ್ಟಿಯ ನೀರು ಜಗ್ಗಲು ಸೋಂಡಿಗ್ಗ ಹಾಗೂ ಮಿಣಿಗಳಿಗೆ ಬೇಕಾಗುವುದು.

ದಾಂಡ — ಎತ್ತುಗಳ ಕೊರಳಿಗೆ ಕಟ್ಟುವುದು.

ದಾವ — ದನ ಕರುಗಳನ್ನು ಕಟ್ಟುವುದು

ನರಿಬಾಲ — ಸೇದೀ ಹಗ್ಗದ ತುದಿ (ಚಿಪ್ಪ)

ನೊಗಸುತ್ತ — ಗಳೇದ ದಿಂಡನ್ನು ಹೂಡಲು ಬೇಕಾಗಿರುವುದು ಪರ್ಯಾ : ಹೂಟ್ಗಿಗ್ಗ

ಪಡಿಸ್ಗಗ್ಗ — ಉಡಿದಿಟ್ಟು ತಮಗೆ ಬೇಕಾದಾಗ ಹಗ್ಗಗಳನ್ನು ಮಾಡಿಕೊಳ್ಳುವುದು. ದಾವು, ಕಣಿಕೆ, ಕಟ್ಟಿಗೆ, ಹೊರೆಕಟ್ಟಲು ಉಪಯುಕ್ತ

ಪಾವರ್ಗಿ ಸೋಲ — ನೀರು ಸೇದಲು ಪಾವರ್ಗಿಗೆ ಕಟ್ಟುವ ಹಗ್ಗ

ಪುಂಡ ಹಗ್ಗ — ಪುಂಡಿನಾರಿನ ಹಗ್ಗ

ಬಾಣ್ಣಿ — ೪-೮ ಎತ್ತುಗಳ ಕಬ್ಬಿಣ ನೇಗಿಲು ಎಳೆತಕ್ಕೆ ಬೇಕಾಗುವದು

ಬಾರಕೋಲ ಬಾರ - ಬಾರಕೋಲಿನ ತುದಿಯ ಬಾರು; ಪರ್ಯಾ: ಪಲಿಯೇಣು

ಮಂಡಿದಾರ - ಬಿತ್ತುವ ಉಪಕರಣವಾದ ಮಂಡಿಯನ್ನು ಬಿಗಿಯಲು ಬೇಕಾಗುವ ದಾರಗಳು

ಮಂಡಿಹಗ್ಗ — ಮಂಡಿಗೆ ಉಪಯೋಗವಾಗುವ ಹಗ್ಗ

ಮಗಡಾ — ಎತ್ತುಗಳ ಮುಖದ ಮೇಲಿನ ಅಲಂಕಾರದ್ದು

ಮಿಣಿ — ಎರಡೆತ್ತುಗಳ ಕುಂಟಿ, ಕೂರಿಗೆ ಮುಂತಾದುವಕ್ಕೆ ಬೇಕಾಗುವದು

ಮುಗದಾಣಿಚರಿ — ಇರಕಳು ಎತ್ತುಗಳ ಮೂಗಿನಲ್ಲಿ ಕಟ್ಟುವ ಎಳೆ

ಮೇಲ್ಹಗ್ಗ — ಕಣಿಕೆ ಗಾಡಿಯಲ್ಲಿ ಉಪಯೋಗಿಸುವ ಹಗ್ಗ

ಮೂರಿಕಿ — ಎಮ್ಮೆಗಳನ್ನು ಕಟ್ಟಲು ಬೇಕಾಗುವ ಗಡುತರವಾದ ಹಗ್ಗ

ಲಂಬ — ಒಕ್ಕಲುತನದ ಎಲ್ಲ ಹಗ್ಗಗಳನ್ನು ಕೂಡಿಸಿಕಟ್ಟಿರುವ ಹಗ್ಗ ಒಕ್ಕಲಿಗರು ಇದನ್ನು ಕುಡದ ಹಿಂದೆ ಸಿಕ್ಕಿಸಿಕೊಂಡು ನಡೆಯುವರು.

ಲಂಬಗಣ್ಣಿ : ಲಂಬದ ತುದಿಗೆ ಮಾಡಿರುವ ಕಣ್ಣಿ

ಲಗ್ಗೋಣಿ — ನೊಗಕ್ಕೆ ಕಟ್ಟಿರುವ ಮಿಣಿಯೊಂದಿಗೆ ಇರುವುದು; ನೇಗಿಲು ಮಟಿ ನೀರನ್ನು ಎಳೆಯಲು ಉಪಯೋಗಿಸುವ ದಪ್ಪಾದ ಹಗ್ಗ

ಸಪ್ಪುರಿ — ಎರಡು ಎಳೆಯ ಸಾದಾ ಹಗ್ಗ

ಸಣಬಿನ ಹಗ್ಗ — ಹೆಚ್ಚು ತಾಳಿಕೆಗೆಂದು ನೀರು ಸೇವಲು ಉಪಯೋಗಿಸುವದು.

ಸರಪಳಿ — ಕಬ್ಬಿಣ ನೇಗಿಲು ಎಳೆಯುವಾಗ ನೇಗಿಲಿಗೆ ಕಟ್ಟುವದು. ಎತ್ತುಗಳ ಕೊರಳಿಗೆ ಸಹ ಕಟ್ಟಲು ಬರುವುದು

ಸರ್ಲಗ್ಗ — ಕಣಿಕೆ ಹೊರೆಗಳನ್ನು ತರುವಾಗ ಮೇಲಿನಿಂದ ಬಿಗುತರು ಗೊಳಿಸಲು ಬರುವ ಹಗ್ಗ

ಸೇದೀಹಗ್ಗ — ಬಾವಿಯ ನೀರು ಸೇದಲು ಬರುವದು

ಸೊಂಡಿ ಕಣ್ಣಿ — ಸೊಂಡಿ ಹಗ್ಗದ ತುದಿಯಲ್ಲಿರುವ ಕುಣಿಕೆ

ಸೊಂಡ್ಹಗ್ಗ - ಮಟ್ಟಿ ಹೊಡೆಯುವಾಗ ಉಪಯೋಗಿಸುವ ದಪ್ಪನೆಯ ಮಿಣಿ

ಸೋಲ್ಹಗ್ಗ - ಕುಣಿಕೆ ತರುವಾಗ ಹಿಂದೆ - ಮುಂದೆ ಬಿಗಿ ಮಾಡಲು ಬೇಕಾಗುವದು.

ಹಂತಿ ಕಣ್ಣಿ - ಹಂತಿ ನಡೆದಾಗ ಎತ್ತುಗಳ ಕೊರಳಿಗೆ ಕಟ್ಟುವ ಒಂದೇ ಹಗ್ಗಕ್ಕೆ ಬೇಕಾಗುವ ಕಣ್ಣಿಗಳು

ಹಣೆಗ್ಗ - ಎತ್ತುಗಳ ಹಣೆಗೆ ಕಟ್ಟಲು ಬೇಕಾಗುವ ಎರಡು ಸಮಾನ ಮಟ್ಟಿನ ಹಗ್ಗಗಳು [ಪರ್ಯಾ : ಆಟಿಗ್ಗ]

ಹಳಗಿನ ಹಗ್ಗ - ಕುಣಿಕೆ ತರುವಾಗ ಕಟ್ಟಿಗೆಯ ಕಿವಿಗಳಿರುವ ಹಗ್ಗಗಳು. ಅಲ್ಲಿಂದ ಎರಡೂ ಕಡೆ ಜಗ್ಗಿ ಹೊರೆಗಳನ್ನು ಬಿಗಿ ಮಾಡುವರು

ಹಿಂಗಲ ಗಣ್ಣಿ - ಮಿಣಿಯ ಹಿಂದೆ ಕಟ್ಟಲು ಬೇಕಾಗುವ ಕಣ್ಣಿ.

ಹಿಂದೋಟಿಸೋಲ - ಗಳೆಯ ದಂಡಿಗೆ ಹಿಂದೆ ತಂದು ಕಟ್ಟುವ ಹಗ್ಗ. ಇದು ಕುರಗೊಡ್ಡಿನ ಒಂದು ಭಾಗ

ಹೂಟಿ ಕಣ್ಣಿ - ಹೂಟಿಗ್ಗದ ತುದಿ.

ಹೂಟ್ಟಿಗ್ಗ - ಗಳೆ, ಕೂರಿಗೆಗಳ ನೊಗವನ್ನು ಎತ್ತುಗಳಿಗೆ ಹೂಡುವಾಗ ಬೇಕಾಗುವ ಹಗ್ಗ (ಹೂಡುವ + ಹಗ್ಗ > ಹೂಟಹಗ್ಗಲ ಹೂಟಿಗ್ಗ,)

೧.೫ : ಹಗ್ಗ — ಹುರಿಪದಗಳ ಭಾಷಿಕ ಸ್ವರೂಪ :

ಇವು ಮುಖ್ಯವಾಗಿ ಒಕ್ಕಲಿಗರ ಆಡುನುಡಿ ಪ್ರಯೋಗಗಳಾದುದರಿಂದ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಇವುಗಳ ಹೆಸರಿನಲ್ಲಿ ವ್ಯತ್ಯಾಸವುಂಟು. ಕಲಬುರ್ಗಿ ಜಿಲ್ಲೆಯೊಂದರಲ್ಲಿಯೇ ನಾವು ಹಲವಾರು ಪ್ರಭೇದಗಳನ್ನು ಕಾಣುತ್ತೇವೆ. ಇದು ಬಹುಕಾಲದಿಂದ ಉರ್ದು ಪ್ರಭಾವಕ್ಕೊಳಗಾದ ಪ್ರದೇಶವಾದ್ದರಿಂದಲೂ, ಅಲ್ಲದೆ ಪಶ್ಚಿಮಕ್ಕೆ ಮಹಾರಾಷ್ಟ್ರ ಪ್ರದೇಶವಿರುವುದರಿಂದಲೂ ಉರ್ದು ಮತ್ತು ಮರಾಠಿಯ ಹೊಕ್ಕು - ಬಳಕೆ ಇಲ್ಲಿದೆ. ಧ್ವನಿ ವ್ಯತ್ಯಾಸ ಮಟ್ಟದಲ್ಲಿನ ಕೆಲವು ಉದಾಹರಣೆಗಳು.

೧ : ೫ : ೧ : ಮರಾಠೀ ಉಚ್ಚಾರ ಪರಿಕ್ರಮ :

ದಾँವು —< ದಾವುಣಿ (ಸಂ) ದಾಮಣೀ (ಮರಾಠಿ) ದಾँವರೀ (ಹಿಂ)

ಉಕ್ರ ⇄ ಉಗ್ಗಡ

ಚರಿ ⇉ ಚಾವರ

ಲಂಬ ⇆ ಲಾಂಬ

ದಾರ ⇆ ಧಾರಾ

ಸುತಿ ⇆ ಸುತಾರೀ

ದಾಂಡ ⇆ ದಾಂಡಾ

೧:೫:೨: ಉರ್ದು ಉಚ್ಚಾರ ಪರಿಕ್ರಮ :

ಕನ್ನಡದಲ್ಲಿ ಬಳಕೆಯಾಗುವ ಪದಗಳು ಉರ್ದು ಮಾತನಾಡುವ ಇಲ್ಲಿನ ಮುಸಲ್ಮಾನ ರೈತ ಬಂಧುಗಳಿಂದ ಉಚ್ಚರಿಸಲ್ಪಡುವಾಗ 'ಇ' ಕಾರಾಂತಗಳು ಆ ಕಾರಾಂತವಾಗುವ ಪ್ರವೃತ್ತಿ ಕಂಡು ಬರುತ್ತದೆ.

ಕನ್ನಡ		ಉರ್ದು
ಜತ್ತಿಗಿ	⇄	ಜತಾ಼
ಲಗೊ಼ಣಿ	⇄	ಲಗೆ಼ಣಾ

ಅನ್ಯ ಭಾಷಾ ಪ್ರಭಾವದಲ್ಲಾಗುವ ಧ್ವನಿ ವ್ಯತ್ಯಾಸ ಪ್ರಕ್ರಿಯೆಯೊಂದಲ್ಲದೆ ಕನ್ನಡದಲ್ಲಿಯೇ ಈ ಪದಗಳು ಬಳಕೆಗೊಳ್ಳುವಾಗ ಧ್ವನಿಗಳಲ್ಲಿ ವ್ಯತ್ಯಾಸ ನಡೆಯುತ್ತದೆ. ಪ್ರಮುಖವಾದ ಕೆಲವಕ್ಕೆ ಇಲ್ಲಿ ಉದಾಹರಿಸಿದೆ.

1·5·3 : **ಸ್ವರ ಧ್ವನಿ ವ್ಯತ್ಯಾಸಗಳು :**

ಅ / ಎ > ಸಣಮು = ಸೆಣಮು
ಇ / ಉ > ಚಿಕ್ಕ = ಚುಕ್ಕ
ಎ / ಏ > ಕೈಸೆರಿ ಹಗ಼ = ಕೈಸೇರಿ ಹಗ಼
ಒ / ಓ > ಕುರಗೊಡ್ಡ = ಕುರುಗೋಡ
ಒ / ಅ > ನೊಗಸುತ್ತ = ನಗಸುತ್ತ
ಓ / ಅ. > ಬಾರಕೋಲಬಾರ = ಬಾರ್ಕಲಬಾರ

1·5·4 : **ವ್ಯಂಜನ ಧ್ವನಿ ವ್ಯತ್ಯಾಸಗಳು :**

ತ / ಟ > ತೆಂಗಿನಗ಼ = ಟೆಂಗಿನಗ಼
ದ / ರ > ಮುಗದಾಣಿ = ಮುಗರಾಣಿ
ಬ / ಮ > ಸಣಬಿನ ಹಗ಼ = ಸಣಮಿನಗ಼
ಣ / ಳ > ವಿಣಿ = ವಿಳಿ
ಲ / ನ > ಲಗೊ಼ಣಿ = ನಗೊ಼ಣಿ ಲ ನಗೊ಼ಡ
ಸ > ಶ > ಸಣಬ = ಶೆಣಬ
ಸ > ಚ > ಸಂಪುರಿ + ಚಿಂಪುರಿ
ಹ > ф > ಹೂಟಿಗ಼ = ಊಟಿಗ಼ (ಸುರಪುರ — ಶಾಪುರ ಪ್ರದೇಶ)
ಹಗ಼ = ಅಗ಼ (,, ,,)

1:5:5: ಸಂಧಿ ನಿಯಮಗಳು :

ಇಲ್ಲಿನ ಪೂರ್ವ ಪದಗಳೆಲ್ಲವೂ 'ಹಗ್ಗ' ಎಂಬ ಪ್ರಧಾನ ಪದಕ್ಕೆ ವಿಶೇಷಣಗಳಾಗಿ ಸೇರುವವು. ಇಲ್ಲಿ ಪರಸ್ಪರ ಸಂಧಿ ಘಟಿಸುವಾಗ ನಡೆಯುವ ಧ್ವನಿ ವ್ಯತ್ಯಾಸಗಳು ಮುಖ್ಯವಾಗಿ ಇಂತಿವೆ.

ಲೋಪ : ಪಡುವಿನ + ಹಗ್ಗ = ಪಡಗ್ಗ (I ಅ > φ ೨. ಹ > φ)
ಹಣಿ + ಹಗ್ಗ = ಹಣಿಗ್ಗ (I ಇ > φ ಎ. ೨. ಹ > φ)
ಸೇದು + ಹಗ್ಗ = ಸೇದಗ್ಗ (I ಉ > φ ಎ. ೨. ಹ > φ]
ಒಂಭತ್ತು + ಹುರಿಹಗ್ಗ = ಒಂಭತ್ತುರೆಗ್ಗ (I ಉ > φ ೨. ಹ > φ)
ಆಟಿ + ಹಗ್ಗ = ಆಟಿಗ್ಗ (I ಇ > φ ಎ ೨. ಹ φ)
ಚೆಂಪು + ಹುರಿ = ಚೆಂಪುರಿ (I ಉ > φ)
ಸೊಂಡಿ + ಹಗ್ಗ = ಸೊಂಡಗ್ಗ (I ಇ > φ ಎ)

ಆದೇಶ : ಲಂಬ + ಕಣ್ಣಿ = ಅಂಬಗಣ್ಣಿ (ಕ > ಗ)

ದೀರ್ಘಾದೇಶ : ಗಾಡಿ + ಹಗ್ಗ = ಗಾಡೀಹಗ್ಗ (ಇ > ಈ)
ಚಾರಿ + ಹಗ್ಗ = ಚಾರೀಹಗ್ಗ (ಇ >)

1:5:6: ಪರ್ಯಾಯ ರೂಪಗಳು[೧೦] :

ಈ ಪ್ರದೇಶದ ಆಡು ಭಾಷೆಯಲ್ಲಿ ಭೌಗೋಲಿಕ, ರಾಜಕೀಯ, ಸಾಮಾಜಿಕ ಸನ್ನಿವೇಶ ಕಾರಣಗಳಿಂದ ಹಲವಾರು ಆಂತರಿಕ ಪ್ರಭೇದಗಳನ್ನು ಗುರುತಿಸಲು ಸಾಧ್ಯವಿದೆ. ಇದಕ್ಕೆ ಹಗ್ಗ – ಹುರಿ ಹೆಸರುಗಳನ್ನು ಸಹ ನಿದರ್ಶನವಾಗಿ ಕೊಡಬಹುದು. (i) ಧ್ವನಿ ವ್ಯತ್ಯಾಸ (ii) ಅನ್ಯಭಾಷಾ ಸ್ವೀಕರಣ ಹಾಗೂ (iii) ರೂಪ ವ್ಯತ್ಯಾಸ ಈ ಮೂರು ಘಟ್ಟಗಳಲ್ಲಿ ಈ ಹೆಸರಿನ ಪರ್ಯಾಯ ರೂಪಗಳನ್ನು ಇಲ್ಲಿನ ಹಲವು ತಾಲೂಕುಗಳ ಭಾಷಾ ಪ್ರಭೇದದ ಹಿನ್ನೆಲೆಯಲ್ಲಿ ಕೆಳಗೆ ಪಟ್ಟಿಮಾಡಿದೆ.

---

೧೦. ಇಲ್ಲಿ ಸ್ವೀಕೃತವಾದ ಮುಖ್ಯ ಪದಗಳು ಕಲಬುರ್ಗಿ ಜಿಲ್ಲೆಯ 'ಮಧ್ಯವಲಯ'ದ ಜೇವರಗಿ, ಚಿಲಾಪುರ, ಹಾಗೂ ಶೇಡಂ ತಾಲೂಕುಗಳಲ್ಲಿನ "ಶಿಷ್ಟ"ವೆಂದು ಪರಿಗಣಿಸಲ್ಪಟ್ಟ ಭಾಷಾರೂಪಗಳು. ಕ್ಷೇತ್ರಕಾರ್ಯದಲ್ಲಿ ಲೇಖಕ ಗಮನಿಸಿದಂತೆ ಈ ಜಿಲ್ಲೆಯ ಪಶ್ಚಿಮ-ಉತ್ತರಕ್ಕೆ ಮಹಾರಾಷ್ಟ್ರ, ಪೂರ್ವಕ್ಕೆ ಆಂಧ್ರ ಪ್ರದೇಶದ ಗಡಿಗಳಿರುವುದರಿಂದ ಕೃಷ್ಣಾ – ಭೀಮಾನದಿಗಳ ಮಧ್ಯವಲಯದಲ್ಲಿ ಹೆಚ್ಚಾಗಿ ಈಗಲೂ ಕನ್ನಡದ ಮೂಲ ರೂಪಗಳು ನಮಗೆ ದೊರೆಯುತ್ತವೆ.

ಪರ್ಯಾಯ ರೂಪುಗಳು

ಮುಖ್ಯ ಪದಗಳು	ಆಳಂದ ತಾಲೂಕು	ಸುರಪುರ ತಾಲೂಕು	ಕಲಬುರ್ಗಿ ತಾಲೂಕು	ಚಿಂಚೋಳಿ ತಾಲೂಕು	ಗಡಿ ಪ್ರದೇಶ ಹುಮ್ನಾಬಾದ ಭಾಗ
೧ ಉಡ್ಕ	ಚಪ್ಪ	—	ಬಾಯಿಕಣ್ಣಿ (ಕಪನೂರ)	—	—
೨ ಚಿಕ್ಕ	ಮುಸ್ಕಿ (ಜಿಗಡಾ)	—	—	ಚುಕ್ಕಾ (ಕಾಳಗಿ)	ಮುಸ್ಕಿ
೩ ಕುರಗೊಡ್ಡ	ಲಗೇಣಿ (,,)	ನಗ್ಗೋಡ (ಅಗ್ನಿ)	ಸೋಲ (ಅವರಾದಿ)	—	—
೪ ಕೊಳ್ಳಹಗ್ಗ	ಕೊಳಂಗಡ (,,)	—	—	—	ಕೊಳಂಗಡ
೫ ಜತ್ತಿಗಿ	ಕೊಳಸುತ್ತ (,,)	—	—	—	ಕೊಳಸುತ್ತ
೬ ದಾವ್ಲಿಹಗ್ಗ	ಬೋರಗಡಿ (,,)	—	—	—	ಬೋರಗಡಿ
೭ ಪಡುವಿನಹಗ್ಗ	ಕೈಸೇರಿ ಹಗ (ನಿಂಬರಗಿ)	—	—	—	—
೮ ಬಾರಕೋಲ	ಚಬ್ಬ (,,)	—	—	—	ಚಬ್ಬ
೯ ಬಾಣ್ಣಿ	ಮಿಣಿ (,,)	—	ನೊಗಸುತ್ತ (ಕಲ್ಲಹಂಗರಗ)	—	—
೧೦ ಮುಗದಾಣಿ	ಮೂಗ್ತಿದಾರ	—	—	ಮುಗರಾಣಿ (ರಜಕಲ್)	ಮೂಗ್ತಿದಾರ
೧೧ ಹಗ್ಗ	—	ಅಗ್ಗ (ಸುರಪುರ)	—	—	—
೧೨ ಹಗ್ಗಹರಿ(ಕ್ರಿ)	ಹಗ್ಗಕಡಿ (,,)	ಅಗ್ಗ ಅರಿ	—	—	ಹಗ್ಗರಡಿ
೧೩ ಹಂತಿಕಣ್ಣಿ	—	ಉಂಗ್ರ ಕಣ್ಣಿ (,,)	—	—	—
೧೪ ಹಣಿಕಟ್ಟಿ	—	ಅಣಿಕಟ್ಟಿ (,,)	—	—	—
೧೫ ಹಣೆಗ್ಗ	ಆಟೆಗ್ಗ (,,)	ಅಣೆಗ್ಗ	—	—	—
೧೬ ಹೂಟೆಗ್ಗ	ಹೂಟಿಹಗ್ಗ	ಊಡಗ್ಗ	—	—	ಹೂಟಿಹಗ್ಗ

1·5·7 ಹಗ್ಗ-ಹುರಿ ಪದಗಳ ನಾಮಪ್ರಕ್ರಿಯೆ :

ಮೂಲತಃ ರೂಢ, ಸ್ವಯಂಆಚಲಿತ ನಾಮವರ್ಗಕ್ಕೆ ಸೇರುವ ಈ ಪದಗಳು[೧೦] ಒಂದೊಂದು ವಿಶೇಷಣಗಳಿಂದ ಅಂಕಿತನಾಮವಾಗಿ ಸಂಬೋಧ್ಯಗೊಳ್ಳುವುದರಿಂದ ಇಲ್ಲಿನ ನಾಮಪ್ರಕೃತಿಗಳನ್ನು ಕೆಳಗಿನಂತೆ ವಿಭಾಗಿಸಲು ಸಾಧ್ಯವಾಗುತ್ತದೆ.

(1) ಸ್ವತಂತ್ರ ಶಬ್ದಗಳು (Inherents)
(2) ತದ್ಧಿತಗಳು (Derived)
(3) ಸಮಾಸಗಳು (Compounds)
(4) ವಿಭಕ್ತ್ಯಕನಾಮಗಳು (casals)

1·5·7·1 ಸ್ವತಂತ್ರ ಶಬ್ದಗಳು :

ಉದಾ ; ೧) ಕಾಂಡ ೨) ಕುರಣಿ ೩) ಮಿಣಿ ೪) ಬಾಣ್ಲಿ
೫) ಲಂಬ ೬) ಲಗ್ಗೋಣಿ ೭) ಚಪ್ಪ ೮) ದಾಂಡ
೯) ದಾಂವ ೧೦) ಮಗ್ಗ ೧೧) ಚರಿ ೧೨) ಹಗ್ಗ
೧೩) ಸೋಲ

1·5·7·2 ತದ್ಧಿತಗಳು :

ಇಲ್ಲಿ ಎರಡು ವಿಧ : ಧ್ವನಿ ವ್ಯತ್ಯಾಸದ ಮೇಲಿಂದ ನಿಷ್ಪನ್ನವಾಗುವ ಪ್ರತ್ಯಾಪನ್ನ ಪದಗಳು (replacements) ಮತ್ತು ಪ್ರತ್ಯಯಗಳನ್ನು ಹಚ್ಚಿ ನಿಷ್ಪನ್ನವಾಗಿಸುವ ಆದೇಶಕಗಳು (additions). ಉದಾ :

(i) **ಪ್ರತ್ಯಾಪನ್ನ ತದ್ಧಿತಗಳು :**

ಅ → ಇ ಕಣ್ಣ → ಕಣ್ಣಿ
ನೂಲ→ನುಲಿ

(ii) **ಆದೇಶಗಳು :**

ಇಗಿ →ಜತ್ತ + ಇಗಿ = ಜತ್ತಿಗಿ
ಇಕಿ →ಮೂರ + ಇಕಿ= ಮೂರಿಕಿ
ಇಗಿ →ಜಾಳ + ಇಗಿ = ಜಾಳಿಗಿ

---

೧೦ ನೋಡಿ ಡಾ. ಕೆ. ಕುಶಾಲಪ್ಪಗೌಡ ಅವರ—'ಕನ್ನಡ ನಾಮಪದಗಳ ವರ್ಗೀಕರಣ' ಅಮಹತ್‌ರೂಢ ಅಚೇತನ ಗಣಕ್ಕೇರು ನಾಮಗಳಲ್ಲಿನ ಸಜೀವ ವಸ್ತುವಾಚಿಗಳು- ಶ್ರೀಕಂಠತೀರ್ಥ. ೩. ನಂ. ಶ್ರೀ. ಸಂಸ್ಮರಣ ಗ್ರಂಥ.

ಕ →ಸಿಕ್ಕ್ + ಕ = ಸಿಕ್ಕ>ಚಿಕ್ಕ
ಲಿ →ಚಿಟ್ + ಅ = ಚಿಟ್ಲಿ
ಗಡ →ಕೊಳ್ಳ + ಗಡ = ಕೊಳಂಗಡ

1·5·7·3 **ಸಮಾಸಗಳು :**

ಇಲ್ಲಿನ ಪೂರ್ವೋತ್ತರ ನಾಮಪದಗಳಲ್ಲಿ ಸೇರಿರುವ ಸಮಾಸ ಘಟಕಗಳನ್ನು (Nominal Attributes) ಈ ಕೆಳಗಿನಂತೆ ವಿಭಜಿಸಿದೆ.

ನಾಮ + ನಾಮ :

(೧) ಜತ್ತಿ ಕಣ್ಣಿ (೨) ಗಾಡೀಹಗ್ಗ (೩) ಕವ್ಣಿದಾರ
(೪) ಬಾರಕೋಲಬಾರ (೫) ಮಂಡಿಹಗ್ಗ (೬) ಮಂಡಿದಾರ
(೭) ಸೊಂಡಿ ಕಣ್ಣಿ (೮) ಧೋಟೀ ಜಾಳ್ಗಿ

ವಿಶೇಷಣ + ನಾಮ :

(೧) ಸರ್ಹಗ್ಗ (೨) ಮೋಲ್ಹಗ್ಗ (೩) ನಾರ್ಹಗ್ಗ (೪) ಸಣಬಿನ ಹಗ್ಗ (೫) ಪುಂಡಿಹಗ್ಗ (೬) ತೆಂಗಿನಹಗ್ಗ
(೭) ಹುರಿಬಾರ (೮) ತುದಿಬಾರ (೯) ಕುರುಗೋಡ ಸೋಲ
(೧೦) ಮೋಲಸೋಲ

ಸಂಖ್ಯಾವಾಚಿ + ನಾಮ :

(೧) ಒಂಬತ್ಹುರಿ ಹಗ್ಗ (೨) ಚಾರೀ ಹಗ್ಗ

ಪ್ರಮಾಣವಾಚಿ + ನಾಮ :

(೧) ಲಂಬಗಣ್ಣಿ (೨) ಸಪ್ಪುರಿ (ಎರಡು ಎಳೆಯ ಪ್ರಮಾಣದ್ದು)
(೩) ಚಿಂಪುರಿ (ಮೂರು ಎಳೆಯ ಪ್ರಮಾಣದ್ದು)

ಕ್ರಿಯಾವಾಚಿ + ನಾಮ :

೧) ಹೂಟಿಹಗ್ಗ
೨) ಸೇದೀಹಗ್ಗ

ಅವ್ಯಯ + ನಾಮ :

೧) ಹಿಂದೋಟಿ ಸೋಲ
೨) ಹಿಂಗ್ಲ ಗಣ್ಣಿ

ಸಂಬಂಧಕಾರಕಗಳು (Genitives) :

೧) ಪಡುವಿನ ಹಗ್ಗ, ೨) ಗಳೇದ ಸೋಲ,
೩) ಹಳಗಿನ ಸೋಲ, ೪) ಹೆಚ್ಚಿನ ಜಾಳಿಗ್ಗ

1 : 5 : 7 : 4: **ವಿಭಕ್ತ್ಯರ್ಥಕ ನಾಮಗಳು** (Casails)[೧೦] :

ಇಲ್ಲಿನ ವಿಶೇಷಣಗಳು ಯಾವ ವಿಭಕ್ತಿಯ ಕಾರಕವನ್ನು ನಿರ್ದೇಶಿಸುತ್ತವೆ ಯೆಂಬುದನ್ನು ಅವುಗಳ ಅಂತಸ್ತರದ (Deep structure) ಮೇಲಿಂದ ಅರ್ಥೈಸಿ ಆ ಆ ಹಗ್ಗಗಳಿಗೆ ಬಂದ ಹೆಸರುಗಳ ಮೂಲವನ್ನು ಸ್ಪಷ್ಟಪಡಿಸಿದೆ.

ದ್ವಿತೀಯಾ ವಿಭಕ್ತಿ :

ಪಡುವಿನ ಹಗ್ಗ (ಪಡುವನ್ನು ಬಿಟ್ಟುಮಾಡಿದ ಹಗ್ಗ)

ತೃತಿಯಾ ವಿಭಕ್ತಿ :

ಕೈಸೇರಿ ಹಗ್ಗ (ಕೈಯಿಂದ ಉಡಿದು ಮಾಡಿದ ಹಗ್ಗ)

ಚತುರ್ಥೀ ವಿಭಕ್ತಿ :

ಕೊಮಚರಿ	(ಕೊಂಬಿಗೆ)
ಮೂಗಚರಿ	(ಮೂಗಿಗೆ)
ಬಾಯಿಚುಕ್ಕ	(ಬಾಯಿಗೆ)
ನೊಗಸುತ್ತ	(ನೊಗಕ್ಕೆ)
ಪಾವರ್‍ಗಿಸೋಲ	(ಪಾವರಿಗಿಗೆ)

ಷಷ್ಠೀವಿಭಕ್ತಿ :

ಗಳೇದ ಸೋಲ	(ಗಳೆಯ ಸಂಬಂಧದ ಹಗ್ಗ)
ಮಂಡಿ ಹಗ್ಗ	(ಮಂಡಿ ಸಂಬಂಧದ ಹಗ್ಗ)
ಜತ್ಗಿ ಕಣ್ಣಿ	(ಜತ್ತಿಗೆ ಸಂಬಂಧದ ಕಣ್ಣಿ)

---

10 ಡಾ॥ ಕೆ. ಎಮ್. ಪ್ರಭಾಕರ ವಾರಿಯರ್ ಅವರು ನಾಮವಾಚಕಗಳನ್ನು (i) Genitived (ii) Equatives (iii) Casals (iv) Indicatives (v) Relative participles ಎಂದು ಐದು ವಿಭಾಗಮಾಡುತ್ತಾರೆ. 'Nominal attributes'– Studies in Malayalam Grammar. pp 28–31 (Pub : Madras University 1978)

ಸಪ್ತಮೀ ವಿಭಕ್ತಿ :

ಹೂಟೆಗ್ಗ	(ಹೂಡುವಲ್ಲಿ)
ಹೂಟಕಣ್ಣಿ	(ಹೂಡುವಲ್ಲಿನ ಕಣ್ಣಿ)
ಕೊಳಕಣ್ಣಿ	(ಕೊರಳಿನಲ್ಲಿ ಕಟ್ಟುವ ಕಣ್ಣಿ)
ತಲಾರಿದಾಂಡ	(ತಲೆಯಲ್ಲಿ ಕಟ್ಟುವದಾಂಡ)
ಹಂತಿ ಕಣ್ಣಿ	(ಹಂತಿಯಲ್ಲಿ ಕಟ್ಟುವ ಕಣ್ಣಿಗಳು)

ಉದ್ದೇಶ ವಿಭಕ್ತಿ :

ಸೇದೀಹಗ್ಗ	(ಸೇದುವದಕ್ಕೋಸುಗ ಇರುವ ಹಗ್ಗ)


ಸಮಾರೋಪ :

ಮೇಲೆ ವಿವರಿಸಿದ ಹಗ್ಗ-ಹುರಿ ವಿಷಯ ಕನ್ನಡ ರೂಢನಾಮ ಪ್ರಕೃತಿಗಳಿಗೆ ಸಂಬಂಧಿಸಿದಂತೆ ಒಂದು ಪ್ರದೇಶದ ಸಮಕಾಲಿಕ ಆಡುನುಡಿಯ (Syncronic dialect)ಪ್ರಯೋಗದಿಂದ ಸಂಗ್ರಹಿಸಿದ ಹಲವು ರೂಪಗಳ ಸಂಕ್ಷಿಪ್ತಾಧ್ಯಯನ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಒಂದೇ ವೃತ್ತಿಯಲ್ಲಿನ ಪದಗಳ ಧ್ವನಿವ್ಯತ್ಯಾಸ, ರೂಪವ್ಯತ್ಯಾಸಗಳನ್ನು ಕುರಿತು ಅಧ್ಯಯನ ಕೈಕೊಳ್ಳುವವರಿಗೆ ಇದೊಂದು ಪ್ರವೇಶಿಕೆಯಾಗಬಲ್ಲುದು.*

* ಈ ಲೇಖನಮಾಲಿಕೆಯ ಮಾರ್ಗದರ್ಶಕ ಗುರು, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ॥ ಕೆ. ಕುಶಾಲಪ್ಪಗೌಡ ಅವರಿಗೆ ನನ್ನ ಕೃತಜ್ಞತೆಗಳು.

ಅನುಬಂಧ

ಹಗ್ಗ-ಹುರಿ ನಾಮ ವಿಶೇಷಣಗಳ ವರ್ಗೀಕರಣ



ಒಕ್ಕಲಿಗ ಮತ್ತು ಹಕ್ಕಿ

(ಒಂದು ಜನಪದ ಕಥೆಯ ವಸ್ತು ಮತ್ತು ತಂತ್ರ)

ವಿ. ಎಸ್. ದಂಡೆ

ಹೀಂಗ ಒಂದೂರಾಗ ಒಬ್ಬ ಒಕ್ಕಲಿಗ್ಯಾ ಇದ್ದನಂತ. ಅಂವಂದು ಈಟ ಅಂಗೈಯಟ ಹೊಲಾ ಇತ್ತಂತ. ಅಂವ ಆ ಹೊಲ್ದಾಗ ಜ್ವಾಳಾ ಬಿತ್ತೀನಂತ. ಜ್ವಾಳಾ ಭರ್ಚಕ ಹೊಡಿಗ ಬಂದು, ಒಂದೊಂದ ತೆನಿ ಒಂದೊಂದು ಸೇರಿನಟು ಆದುವಂತ. ಕಾಳ ಹಾಲ ತುಂಬಿ ಭರ್ಚಕ ಸೀತ್ನಿಗಿ ಬಂದುವಂತ. ಹಕ್ಕಿ ಕಾಟ ಭಾಳ ಆಯ್ತಂತ. ಅಂವ ಹಕ್ಕಿ ಹೊಡೀಕ ಒಂದ ಈಟ ಅಂಟಾ ಹಾಕಿ, ಕವಣ್ಯಾಗ ಕಲ್ಲಿಟ್ಟು, ಹಕ್ಕಿ ಹೊಡಿಕತ್ನಂತ. ಏಟ ಹೊಡ್ದೂರ್ನಾ ಹಕ್ಕಿಗೋಳು ಹೋಗ್ಲಿಲ್ಲಂತ. ಅವ್ನಿಗಿ ಬ್ಯಾಸರ ಬಂದು; 'ಇರ್ಲೂಕೆ ನಂದ ಈಟ ಹೊಲ, ಎಲ್ಲಾ ಹಕ್ಕಿಗೋಳ ಪಾಲಾಗ್ತಾದ' ಅಂತ ಇಚಾರ ಮಾಡಿ ಅಳ್ಕೋತ ಕುತ್ನಂತ. ಆವಾಗ ಅಲ್ಲಿಂದ ಹಾಯ್ಸಿ ಶಿವ-ಪಾರ್ವತಿ ನಡ್ದೀರಂತ. ಪಾರ್ವತಿ ತೆಳಗ ನೋಡಿ; "ಯಾಕೊ ಈ ಮನಸ್ಯಾ ಅಳ್ಕೋತ ಕುಂತಾನ. ಕೇಳ್ಕೊಂಡರೆ ಬಾ" ಅಂತ ಅಂದು ಖಳೂದೂಳಂತ. ಶಿವ ಒಬ್ಬ ಸಾದಾ ಮನ್ಸ್ಯಾನ ರೂಪಾ ತೊಗೊಂಡು ಅಲ್ಲಿಗಿ ಬಂದು 'ಯಾಕಪ ಅಳ್ಳ್ಯಾ-ಕತ್ತೀದಿ' ಅಂತ ಕೇಳ್ದನಂತ. ಅದಕ್ಕ ಒಕ್ಕಲಿಗ್ಯಾ 'ಏನ್ಮಾಡ್ಲಿ ನಂದ ಇರಾದೆ ಈಟ ಹೊಲ. ಎಂದೂ ಇಲ್ದ ಈ ವರ್ಸರೆ ಜ್ವಾಳಾ ಚಲೊ ಬಂದಾದ. ಅದ್ರಾಗ ಈ ಹಕ್ಕಿಗೋಳ ಹತ್ಯಾವ; ಏಟ ಹೊಡ್ದ್ರೂ ಹೋಗಾಲಾಗ್ಯಾವ' ಅಂತ ಅಂದ್ನಂತ. ಆವಾಗ ಪರಮಾತ್ಮ; 'ಏನ್ತಮ್ಮ ನಾ ಹೇಳಿದ ನೀ ಕೆಳ್ತೀನು ?' ಅಂದ್ರ 'ಕೇಳ್ತನಿ' 'ನೋಡು ಈ ಹಕ್ಕಿಗೋಳ ಹೋಗ್ಬೇಕಾದ್ರ, ನೀ ಏನ ಮಾಡ್ಬೇಕಂದ್ರ, ನಿನ್ನ ತೆಲಿ ಬೋಳ್ಸ್ಕೊ' ಬೋಳ್ಸ್ಕೊಂಡು ತೆಲಿಗ ಬೆಳ್ಳಗ ಸುಣ್ಣ ಬಡಕೊ, ಬಡಕೊಂಡು ಹೊಲ್ದಾಗ ಬಂದು ಅಂಟೆದ ಮ್ಯಾಲ ಕೂಡು. ಅಂದ್ರ ಹಕ್ಕಿಗೋಳು ಬರಾಂಗಿಲ್ಲ'

'ಅಂತ ಹೇಳೂನು. ಇಂವ ಒಕ್ಕಲಿಗ್ಯಾ 'ಯಾಕಾಗಲ್ದ' ಅಂತ ಹೇಳಿ ಮನಿಗ ಬಂದು ಹಜಾಮನ ಮನಿಗ ಹೋಗಿ ಸುಣ್ಣಗ ತೆಲಿ ಬೋಳಸ್ಕೊಂಡ್ನಂತ. ಬಂದು ತೆಲಿಗ ಸುಣ್ಣ ಬಡ್ಕೊಂಡು, ಹೋಗಿ ಅಂಟದ ಮ್ಯಾಲ ಕುಂತ್ನಂತ. ಇನ್ನ ತೆಲಿಗ ನೋಡಿ ಯಾವೂ ಹಕ್ಕಿಗೋಳು ಬರ್ಲಿಲ್ಲಂತ. ಆದ್ರ ಎಡ್ಡ ಹೆಣ್ಣ-ಗಂಡ ಹಕ್ಕಿಗೋಳು ಅವ್ನ ತೆಲಿಮ್ಯಾಲ ಬಂದು ಕುಂತುವಂತ. ಆವಾಗ ಅಂವ ಎಲಾವ್ನವ್ನ ಅಂದು ಅವ್ನ ಹಿಡಿಕ ಕೈ ಒಯ್ದ್ರ ಹೆಣ್ಣ ಹಕ್ಕಿ ಒಂದೇ ಅವ್ನ ಕೈಗಿ ಸಿಕ್ತು. ಗಂಡ ಹಕ್ಕಿ ಹಾರಿ ಹೊಯ್ತು. ಅದಕ ಅಂವ ಸಿಟ್ಟಗಿ ಬಂದು ಒಯ್ದು ಭಾವ್ಯಾಗ ನೀರಾಗ ಮುಣಗುಸಿ ಮುಣಗುಸಿ ತಗದು ಕೇಳ್ದನಂತ 'ಸತ್ತೇನ ಗುಬ್ಬಿ' ಅಂತ. ಹಕ್ಕಿ ಅಂತಂತ-

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿ ತಿಂದು, ಗುಂಡದಾನ ನೀರ ಕುಡೀಕತ್ತೀನಿ ನೋಡು.

ಅಂತಂತ. ಆವಾಗ ಒಕ್ಕಲಿಗ್ಯಾ ಅದಕ ಒಯ್ದು ಅಂಟದ ಕಾಲಿಗ ಹಗ್ಗಕ ಕಟ್ಟಿ ಜುರು ಜುರು ತೂಗಿ 'ಸತ್ತೇನ ಗುಬ್ಬಿ' ಅಂತ ಅಂದ್ನಂತ-

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿ ತಿಂದು, ಗುಂಡದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡೂಕತ್ತಿನಿ ನೋಡು.

ಅಂತಂತ. ಅವ್ನಿಗೆ ಭಾರಿ ಸಿಟ್ಟ ಬಂತಂತ. ಅದಕ ಘುಂಡಿಕಟ್ಗ್ಯಾಗ ಹಾಕಿ ಕಚಕಚ ತುಳಿತಾನ. ತುಳ್ದು ಕೇಳ್ತಾನ, 'ಸತ್ತೇನ ಗುಬ್ಬಿ' ಅಂತ. ಆವಾಗ ಹಕ್ಕಿ ಅಂತಾದ-

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿ ತಿಂದು, ಗುಂಡದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡಿ
ಘುಂಡಿ ಕಟ್ಗ್ಯಾಗ ಘುಗಡಿ ಆಡೂಕತ್ತೀನಿ ನೋಡು, -ಅಂತಂತ.

ಆವಾಗ ಗಾಣಿಗ್ಯಾರ ಮನಿಗ ಒಯ್ತಾನ. ಗಾಣಾ ನಡ್ದಿರತಾದ. ಅದಕ ಒಯ್ದು ಗಾಣ್ದಾಗ ಹಾಕ್ತಾನ. 'ಸತ್ತೇನ ಗುಬ್ಬಿ' ಅಂತ ಕೇಳ್ತಾನ. ಆವಾಗ ಹಕ್ಕಿ—

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿತಿಂದು, ಗುಂಡದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡಿ ಘುಂಡಿ ಕಟ್ಗ್ಯಾಗ ಘುಗಡಿ ಆಡಿ
ಗಾಣಿಗ್ಯಾರ ಗಾಣ್ದಾಗ ಎಣ್ಣಿ ಹಚ್ಗೊಳ್ಳಕತ್ತಿನಿ ನೋಡು,

ಅಂತಂತ. ಅಂಬಾಣಾ ಅಂವ ಅದಕ ಒಯ್ದು ಗೌಡರ ಮನ್ಯಾಗ ಬಿಸಿ ಬಿಸಿ ನೀರಾಗ ಒಯ್ದು ಎದ್ದಿ 'ಸತ್ತೇನ ಗುಬ್ಬಿ' ಅಂತ ಕೇಳ್ದ.

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿ ತಿಂದು ಗುಂಡದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡಿ ಪುಂಡಿ ಕಟ್ಗ್ಯಾಗ ಘುಗಡಿ ಆಡಿ
ಗಾಣಗ್ಯಾರ ಮನ್ಯಾಗ ಎಣ್ಣಿ ಹಚ್ಗೊಂಡು
ಗೌಡ್ರ ಮನ್ಯಾಗ ಎರ್ಕೊಲಿಕತ್ತೀನಿ ನೋಡು,

ಅಂತಂತ. ಒಕ್ಕಲಿಗ್ಯಾಗ ಭಾರಿ ಸಿಟ್ಟ ಬಂತು. ಇನ್ನವ್ನ ಇದಕ ಕೊಲ್ಲಲಾರ್ದೆ ಬಿಡಬಾರದು ಅಂದು ಕುಂಬಾರ ಮನಿಗ ಒಯ್ದ್ನಂತ. ಅವಾಗೇ ಕುಂಬಾರ ಗುಂಡಪ್ಪ ಕುಲುವಿ ಹಾಕೇನಂತ. ಬೆಂಕಿ ಲಿಗಿಲಿಗಿ ಉರಿತೀತಂತ. ಒಯ್ದು ಬೆಂಕ್ಯಾಗ ಹಾಕಿ 'ಸತ್ತೇನ ಗುಬ್ಬಿ' ಅಂದ್ನಂತ. ಅದ್ಕ ಹಕ್ಕಿ--

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿ ತಿಂದು ಗುಂಡ್ದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡಿ ಪುಂಡಿ ಕಟ್ಗ್ಯಾಗ ಘುಗಡಿ ಆಡಿ
ಗಾಣಗ್ಯಾರ ಮನ್ಯಾಗ ಎಣ್ಣಿ ಹಚ್ಗೊಂಡು ಗೌಡರ ಮನ್ಯಾಗ ಎರ್ಕೊಂಡು
ಕುಂಬಾರ ಮನ್ಯಾಗ ಕಾಸ್ಗೊಕತ್ತೀನ ನೋಡು,

ಅಂತಂತ. ಅವಾಗ ಒಯ್ದು ಕುಂಬಾರ ಮನ್ಯಾಗ ಕತ್ತಲ ಖೋಲ್ಯಾಗ ಹಾಕಿ 'ಸತ್ತೇನ ಗುಬ್ಬಿ' ಅಂದ್ರ--

ಸತ್ತಿಲ್ಲ ಮುತ್ಯಾ ಕೆಟ್ಟಿಲ್ಲ ಮುತ್ಯಾ
ಗುಂಡ ಗುಂಡ ತೆನಿ ತಿಂದು ಗುಂಡದಾನ ನೀರ ಕುಡ್ದು
ಅಂಟದ ಕಾಲಿಗ ಜೋಕಾಲಿ ಆಡಿ ಪುಂಡಿ ಕಟ್ಗ್ಯಾಗ ಘುಗಡಿ ಆಡಿ
ಗಾಣಗ್ಯಾರ ಮನ್ಯಾಗ ಎಣ್ಣಿ ಹಚ್ಗೊಂಡು ಗೌಡರ ಮನ್ಯಾಗ ಎರ್ಕೊಂಡು
ಕುಂಬಾರ ಮನ್ಯಾಗ ಕಾಸ್ಗೊಂಡು
ಕುಂಬಾರ ಮನ್ಯಾಗ ಕತ್ಲಾಗ ಸೀರಿ ಉಟ್ಗೊಕತ್ತೀನಿ ನೋಡು

ಅಂತ ಅಂದು ಫುರ್ ಅಂತ ಹಾರಿ ಹೋಯ್ತು[೧]

---

೧ ವಕ್ತೃ: ಶಿವಶರಣಪ್ಪ ಪಿ. ಭೀಮ್ನಳ್ಳಿಕರ. ವಯಸ್ಸು—೫೦, ಜಾತಿ-ಕಬ್ಬಲಿಗರು. ಮ್ಯಾಟ್ರಿಕ್‌ವರೆಗೆ ಅಭ್ಯಾಸ ಮಾಡಿದ್ದು ರೇಲ್ವೆ ಇಲಾಖೆಯಲ್ಲಿ ಗೂಡ್ಸ್ ಹೆಡ್ ಕ್ಲಾರ್ಕ ಎಂದು ಕೆಲಸ ಮಾಡುತ್ತಾರೆ. ಚಿತಾಪೂರ ತಾಲೂಕಿನ ಭೀಮ್ನಳ್ಳಿಯವರಾದ ಇವರು ಈಗ ಕಲಬುರಗಿಯ ಬ್ರಹ್ಮಪೂರದಲ್ಲಿ ವಾಸವಾಗಿದ್ದಾರೆ.
ಸಂಗ್ರಹಕಾರರು: ವೀರಣ್ಣಾ ಎಸ್. ದಂಡೆ. ಸಂಗ್ರಹ ಮಾಡಿದ ದಿನಾಂಕ: ೧೧-೧೧-೭೫.

ಈ ಕಥೆಯ ಇನ್ನೊಂದು ಪಾಠ ಶ್ರೀ ಸಿಂಪಿ ಲಿಂಗಣ್ಣ ಅವರ "ಉತ್ತರ ಕರ್ನಾಟಕದ ಜನಪದ ಕಥೆಗಳು" ಎಂಬ ಪುಸ್ತಕದಲ್ಲಿ ಪ್ರಕಟಗೊಂಡಿದೆ. ನಾನು ಮುಂದೆ ಮಾಡಲಿರುವ ಕಥೆಯ ವಿಶ್ಲೇಷಣೆಯಲ್ಲಿ ಹೇಳಿದ ಕೆಲವು ಮಾತುಗಳಿಗೆ ಆಧಾರವಾಗಿ ಶ್ರೀ ಸಿಂಪಿಯವರ ಪಾಠವನ್ನು ನೋಡುವುದು ಉತ್ತಮವೆಂದು ತೋರುತ್ತದೆ. ನಮ್ಮ ಪಾಠದಲ್ಲಿ ಇರುವ ಪ್ರವೇಶಿಕೆಯ ರೂಪದ ವಿವರಣೆ ಸಿಂಪಿಯವರ ಪಾಠದಲ್ಲಿಲ್ಲ. ಪಕ್ಷಿಯನ್ನು ಗುಂಡದ ನೀರಿನಲ್ಲಿ ಅದ್ದುವುದಾಗಲಿ, ಮಂಚಿಗೆ ಕಾಲಿಗೆ ಕಟ್ಟಿ ಊರಲು ಹಾಕುವುದಾಗಲಿ ಕಥೆಯಲ್ಲಿ ವಿವರಣೆ ನೀಡಿಲ್ಲವಾದರೂ ಗೀತೆಯಲ್ಲಿ ಈ ಘಟನೆಗಳು ಸಂಭವಿಸಿದಂತೆ ನಿರೂಪಿಸಲಾಗಿದೆ. ನಮ್ಮ ಪಾಠದಲ್ಲಿಲ್ಲದ ಗುಬ್ಬಿಯನ್ನು ಹೊಳೆಯ ನೀರಿನಲ್ಲಿ ಹಾಕುವುದು ಹಾಗೂ ಕೊನೆಯಲ್ಲಿ ಅದನ್ನು ಅಡಿಗೆ ಮಾಡಿ ತಿನ್ನುವುದು – ಈ ಎರಡು ಘಟನೆಗಳು ಸೇರಿಕೊಂಡಿವೆ. ಇಲ್ಲಿ 'ಗುಬ್ಬಿ' ಎಂಬ ಪದ ಪ್ರಯೋಗವಾಗಿರುವುದೂ ಗಮನಾರ್ಹ.

ಸಿಂಪಿಯವರ ಪಾಠದ ಸಾರಾಂಶ ಇಂತಿದೆ: "ಮಂಚಿಗೆಯ ಮೇಲೆ ನಿಂತು ಒಕ್ಕಲಿಗ ಕವಣಿ ಕಲ್ಲು ಬೀಸುತ್ತಿದ್ದಾನೆ. ಎಲ್ಲ ಗುಬ್ಬಿಗಳು ಹಾರಿಹೋದವು, ಒಂದು ಗುಬ್ಬಿ ಮಾತ್ರ ತೆನೆ ಹಿಡಿದು ಕುಳಿತಿತ್ತು. ಈತ ಮೆಲ್ಲನೆ ಹೋಗಿ ಗಪ್ಪನೆ ಹಿಡಿದು, ಅದನ್ನು 'ಸತ್ತಿಯೇನೂ ಗುಬ್ಬಿ' ಎಂದು ಕೇಳಿದ. ಅದಕ್ಕೆ ಗುಬ್ಬಿ–

ಗುಂಡ ಗುಂಡ ತೆನಿ ತಿಂದು
ಗುಂಡದಾನ ನೀರ ಕುಡಿದು
ಮಂಚಗೀ ಕಾಲಿನಲ್ಲಿ
ಜೋಕಾಲಿ ಆಡ ಹತ್ತಿದ್ದೇನೆ
ನಾನೇಕೆ ಸಾಯುವೆನು ?

ಎಂದಿತು. ನಂತರ ಅದನ್ನು ಹಳ್ಳದಲ್ಲಿ ಹಾಕಿದರೆ – ಈಸಾಡುತ್ತಿದ್ದೇನೆಂದು, ಗಾಣದಲ್ಲಿ ತುರುಕಿದರೆ– ಎಣ್ಣೆ ಹೂಸಿಕೊಳ್ಳುತ್ತಿದ್ದೇನೆಂದು, ತನ್ನ ಮನೆಯಲ್ಲಿ ಬಿಸಿ ನೀರಿನ ಭಾಂಡೆಯಲ್ಲಿ ಹಾಕಿದರೆ ಎರೆಕೊಳ್ಳುತ್ತಿದ್ದೇನೆಂದೂ ಹೇಳುತ್ತದೆ. ಕಡೆಗೆ ತನ್ನ ಹೆಂಡತಿಯಿಂದ ಅದನ್ನು ಕೊಯ್ದು ಅಡಿಗೆ ಮಾಡಿಸಿ ತಿಂದು, "ಸತ್ತೆಯಾ ಗುಬ್ಬಿ" ಎಂದಾಗ, ಒಕ್ಕಲಿಗ ಕೆರಿಕೊಳ್ಳುತ್ತಾನೆ. ಗುಬ್ಬಿ ಹೊರಗೆ ಬಂದು–

ಗುಂಡ ಗುಂಡ ತೆನಿ ತಿಂದು
ಗುಂಡದಾನ ನೀರ ಕುಡಿದು
ಮಂಚಗೀ ಕಾಲಿನಲ್ಲಿ ಜೋಕಾಲಿ ಆಡಿ
ಹಳ್ಳದ ತಿಳಿ ನೀರಿನಲ್ಲಿ ಈಸಾಡಿ

ಗಾಣಿಗರ ಗಾಣದಲ್ಲಿ ಎಣ್ಣೆ ಹೂಸಿಕೊಂಡು
ಬಿಸಿ ಬಿಸಿ ನೀರಿನಿಂದ ಎರಕೊಂಡು
ಪಲ್ಲಿ ಮಾಡಿಸಿ ಉಂಡುಗಿಂಡು
ಹೊರಬಿದ್ದೇನೆ ನೋಡು
ನಾನೇಕೆ ಸಾಯುವೆನು ?

ಎನ್ನುತ್ತ ಹಾರಿ ಹೋಯಿತು ಸಾವಿಲ್ಲದ ಗುಬ್ಬಿ."[೨]

ನಾನು ಕೇಳಿದ ಇನ್ನೂ ಒಂದೆರಡು ಪಾಠಗಳಲ್ಲಿ 'ಹಕ್ಕಿ' ಅಥವಾ 'ಗುಬ್ಬಿಯ' ಬದಲಾಗಿ "ಬಳು" ಎಂಬ ಪಕ್ಷಿ ಬರುತ್ತದೆ. ಜೋಳದ ಹೊಲದ ಬದಲಾಗಿ ಸಜ್ಜೆಯ ಹೊಲವೆಂತಲೂ ಇಲ್ಲವೆ ಮಾಳಿಗೆ ಮೇಲೆ ಸಜ್ಜೆ ಬಿಸಿಲಿಗೆ ಹಾಕಿದಾಗ ಪಕ್ಷಿ ಬಂದು ತಿನ್ನುತ್ತಿರುವಂತೆಯೂ ವಿವರಿಸಲಾಗುತ್ತದೆ. ಒಕ್ಕಲಿಗನ ಬದಲಾಗಿ ಒಂದು ಕಡೆ-[ಮಾಳಿಗೆ ಮೇಲೆ ಸಜ್ಜೆ ಒಣಗಲು ಹಾಕಿದವ]- ಸಾಹುಕಾರನೆಂದು ಹೇಳಲಾಗಿದೆ ಅಲ್ಲಿಯ ಘಟನೆಗಳು ಮಾತ್ರ ಬಹುತೇಕ ನಮ್ಮ ಪಾಠದಲ್ಲಿ ಕಾಣಿಸಿಕೊಂಡಂತೆಯೇ ಬರುತ್ತವೆ.

ಇದೊಂದು ಸೂತ್ರ ಕಥೆ (Cumulative tale). ಇದು ಮುಖ್ಯವಾಗಿ ಎರಡು ಹಂತಗಳಲ್ಲಿ ಬೆಳವಣಿಗೆ ಹೊಂದಿದೆ. ಪ್ರವೇಶಿಕೆಯ ರೂಪದಲ್ಲಿ ಜೋಳದ ಹೊಲದಲ್ಲಿ ಮೇಯುತ್ತಿರುವ ಹಕ್ಕಿಗಳನ್ನು ಓಡಿಸಲು ಮಂಚಿಗೆಯ ಮೇಲೆ ನಿಂತು ಒಕ್ಕಲಿಗನು ಕವಣಿ ಬೀಸುವುದರಿಂದ ಹಕ್ಕಿ ಆತನ ಕೈಗೆ ಸಿಗುವ ವರೆಗಿನ ಭಾಗ ಮೊದಲನೆಯದು. ನಂತರ ಒಕ್ಕಲಿಗನು ಹಕ್ಕಿಯನ್ನು ನಾನಾ ತೊಂದರೆಗಳಿಗೀಡು ಮಾಡಿ, ಸತ್ತೆಯಾ ? ಎಂದು ಪ್ರಶ್ನಿಸಿದಾಗ ಹಕ್ಕಿ ಸಂತೋಷದಿಂದ ತಾನು ಬದುಕುಳಿದಿರುವದನ್ನು ಹೇಳುವುದು ಮೊದಲಾಗಿ ಕಡೆಗೆ ಹಕ್ಕಿ ಕತ್ತಲು ಮನೆಯಿಂದ ಹಾರಿ ಹೋಗುವ ವರೆಗಿನ ಒಂದು ಹಂತ ಎರಡನೆಯದು.

ಕಥೆಯಲ್ಲಿ ಒಟ್ಟಿಗೆ ಎರಡು ಆಶಯಗಳಿವೆ. ಸಂಕಟದಲ್ಲಿ ಸಹಾಯಕರಾಗಿ ಬರುವ ದೈವೀಜೋಡಿಗಳಾದ ಶಿವ-ಪಾರ್ವತಿಯರ ಆಗಮನ- (ಶಿವನು ಮನುಷ್ಯನ ವೇಷದಲ್ಲಿ ಒಕ್ಕಲಿಗನಿಗೆ ಭೇಟಿಯಾಗುವುದು) ಪ್ರವೇಶಿಕೆಯ ಮೊದಲ ಭಾಗದಲ್ಲಿಯ ಆಶಯವಾಗಿದೆ. ಎರಡನೆ ಭಾಗದಲ್ಲಿ ಬರುವ ಒಂದೇ ಒಂದು ಆಶಯ 'ಮೇಲಿಂದ ಮೇಲೆ ಸಾವನಪ್ಪುವ ಹಕ್ಕಿ'- (Chains involving a death - Bird actor)- ತನ್ನ

೨. ಪೂರ್ಣ ಪಾಠಕ್ಕಾಗಿ ನೋಡಿ: "ಉತ್ತರ ಕರ್ನಾಟಕದ ಜನಪದ ಕಥೆಗಳು" ಸಂ. ಶ್ರೀ ಸಿಂಪಿ ಲಿಂಗಣ್ಣ ಅವರು, (ಸತ್ತೇನ ಗುಬ್ಬಿ- ಪು. ೧೭೮). ಸಾಹಿತ್ಯ ಅಕಾಡೆಮಿ ಹೊಸ ದೆಹಲಿ — ೧೯೭೨.

ಸುತ್ತಲಿನ ಆವರಣವನ್ನು ಸಮೀಕರಣಗೊಳಿಸುತ್ತ ಪುನ ಪುನ ಪ್ರವೇಶ ನಡೆಯುತ್ತದೆ. ಕಥೆಯ ಮುಖ್ಯ ಆಶಯ ಕೂಡ ಇದೇ ಆಗಿದೆ.

ನಮ್ಮ ವಕ್ತೃ ಒಳ್ಳೆಯ ಮಾತುಗಾರ ಹಾಗು ಹಾಸ್ಯಗಾರ. ಅಂತಲೇ ಇದೇ ಕಥೆಯ ಬೇರೆ ಪಾಠಗಳಿಗಿಂತ ಪ್ರಸ್ತುತ ಪಾಠದ ಪ್ರವೇಶಿಕೆಯ ಭಾಗ ವಿಸ್ತಾರವಾಗಿ ಹಾಸ್ಯಭರಿತವಾಗಿ ತುಂಬಿ ಬಂದಿದೆ. ಬೇರೆ ಪಾಠಗಳಲ್ಲಿ ಮಂಚಿಗೆಯ ಮೇಲೆ ನಿಂತ ಒಕ್ಕಲಿಗ ಕವಣೆ ಬೀಸಿದಾಗ ಹಕ್ಕಿಯ ಗುಂಪೆಲ್ಲ ಹಾರಿಹೋಗಿ ಅವನ ಕೈಗೆ ಒಂದೇ ಒಂದು ಹಕ್ಕಿ ಸಿಕ್ಕು ಅನೇಕ ದೊಂದರೆಗಳಿಗೆ ಒಳಗಾಗುತ್ತದೆ.[1] ಆದರೆ ಒಳ್ಳೆಯ ಮಾತುಗಾರನಾದ ನಮ್ಮ ಕಥೆಗಾರ ಶಿವ-ಪಾರ್ವತಿಯರ ಪ್ರವೇಶ ತಂದು, ಒಕ್ಕಲಿಗನ ತಲಿ ಬೋಳಿಸಿ ಸುಣ್ಣ ಬಳಿದು ನಿಲ್ಲಿಸುವಲ್ಲಿ ಕಥೆಗೆ ಹಾಸ್ಯದ ಮೆರಗನ್ನು ಬಿರಸುವಲ್ಲಿ ಕೈವಾಡ ನಡೆಯಿಸಿದ್ದಾನೆ. ಹಕ್ಕಿಗಳು ಗಂಡು-ಹೆಣ್ಣುಗಳು ಅವನ ತಲಿಯ ಮೇಲಿಯೇ ಕುಳಿತುಕೊಳ್ಳುವಂತೆ ಹೇಳಿದನಾದರೂ ಕಡೆಗೆ ಒಕ್ಕಲಿಗನ ಕೈಗೆ ಸಿಕ್ಕಿಸಿದುದು ಎಲ್ಲ ಪಾಠಗಳಂತೆ ಒಂದೇ ಒಂದು ಹಕ್ಕಿಯನ್ನು.

ನಮ್ಮ ವಕ್ತೃ ಒಳ್ಳೆ ಮಾತುಗಾರನಾಗಿರುವಂತೆ ಅಷ್ಟೇ ಜಾಣನಾಗಿದ್ದಾನೆ. ಆತನ ಜಾಣತನವು ಕಥೆಯ ಒಟ್ಟು ಔಚಿತ್ಯವನ್ನು ಕಾಯ್ದುಕೊಂಡು ಬರಲು ಕಾರಣವಾಗಿದೆ. –'ಒಕ್ಕಲಿಗನ ತಲಿಯ ಮೇಲೆ ಗಂಡು-ಹೆಣ್ಣು ಎರಡು ಹಕ್ಕಿಗಳು ಕುಳಿತವು ಆತ ಹಕ್ಕಿಯನ್ನು ಹಿಡಿಯಲು ಪ್ರಯತ್ನಿಸಿದಾಗ ಅವನ ಕೈಗೆ ಹೆಣ್ಣು ಹಕ್ಕಿ ಮಾತ್ರ ಸಿಕ್ಕುತ್ತದೆ. ಸಿಕ್ಕುಬಿದ್ದ ಹಕ್ಕಿ ಯಾವುದು? ಎಂದು ನಿರ್ಣಯಿಸುವಲ್ಲಿಯೇ ಸಹಜ ಬುದ್ಧಿವಂತಿಕೆ ತನ್ನ ಕೆಲಸ ಮಾಡಿದೆ. ಮುಂದೆ ಬರುವ ಘಟನೆಗಳು – (ಹಕ್ಕಿ ಕೊಡುವ ಉತ್ತರಗಳು)– ಘುಗಡಿಯಾಡುವುದು, ಎಣ್ಣೆ ಹಚ್ಚಿಕೊಳ್ಳುವುದು, ಎರೆದುಕೊಳ್ಳುವುದು, ಸೀರೆವುಟ್ಟುಕೊಳ್ಳುವುದು ಮುಂತಾಗಿ ಕಾರ್ಯಗಳೆಲ್ಲ ಹೆಣ್ಣಿನವು. ಇತರ ಪಾಠಗಳಲ್ಲಿ ಒಕ್ಕಲಿಗನ ಕೈಗೆ ಸಿಕ್ಕ ಹಕ್ಕಿ ಹೆಣ್ಣೋ ಗಂಡೋ ಎಂಬ ಪ್ರಸ್ತಾಪ ಬರುವದೇ ಇಲ್ಲ. ಆದರೆ ನಮ್ಮ ಕಥೆಗಾರ ತನ್ನ ಚತುರ ಜಾಣತನವನ್ನು ಔಚಿತ್ಯ ಪ್ರಜ್ಞೆಯನ್ನು ತೋರ್ಪಡಿಸಿ ಯಶಸ್ವಿಯಾಗಿದ್ದಾನೆ.

ಇಲ್ಲಿ ನಾನು ವಕ್ತೃವಿನ ಪರ ವಕೀಲಿ ವಹಿಸಿದಂತೆ ಭಾಸವಾಗಬಹುದು. ಆದರೆ ಕಥೆಯ ವಕ್ತೃ ಆ ಕಥೆ ಸಾಗಿ ಬಂದ, ಅದನ್ನು ಉಳಿಸಿಕೊಂಡು ಬಂದ ವಕ್ತೃ ಸಂಪ್ರದಾಯವನ್ನೇ ಸಂಕೇತಿಸುತ್ತಾನೆ. ಕಥೆಯ ಆ ರೂಪವನ್ನು ಹೊರಗೆಡುವ ಆತ ಹಿಂದಿನವರಷ್ಟೇ ಜವಾಬುದಾರನಾಗಿರುವುದರಿಂದ ಇಡಿಯಾಗಿ ವಕ್ತೃಸಂಪ್ರದಾಯವನ್ನೇ ಈತನನ್ನು ಎದುರು ನಿಲ್ಲಿಸಿ ಸಂಬೋಧಿಸಿದ್ದೇನೆ.

ಒಕ್ಕಲಿಗರ ಪರಿಸರವುಳ್ಳ ಈ ಕಥೆ ಅವರಿಂದಲೆ ಹುಟ್ಟಿಕೊಂಡಿರಬೇಕು. ಆದರೆ ಕಥೆ ಹೇಳಿದ್ದು ಮಾತ್ರ ಮಕ್ಕಳಿಗಾಗಿ. ಮಕ್ಕಳ ಮನವನ್ನು ರಂಜಿಸುವುದೇ

ಅಲ್ಲಿಯ ಮುಖ್ಯ ಉದ್ದೇಶ. ಕಥೆಯ ಘಟನಾವಳಿಯ ಗೀತೆಯ ತುಣುಕುಗಳು ಮಕ್ಕಳನ್ನು ಉಲ್ಲಾಸಗೊಳಿಸುವಲ್ಲಿ ಯಶಸ್ವಿಯಾಗಿವೆಯಲ್ಲದೆ ಕಥೆಯ ಪರಿಣಾಮಕತೆಯನ್ನು ಹೆಚ್ಚಿಸಿವೆ. ಕಥೆ ಹೇಳುತ್ತಿರುವ ವಕ್ತೃ ಒಕ್ಕಲಿಗನ ಪಕ್ಷ ವಹಿಸಿದರೆ ಮಕ್ಕಳು ಹಕ್ಕಿಯ ಪಕ್ಷದತ್ತ ವಾಲುತ್ತಾರೆ. ಕಾರಣವೇನೆಂದರೆ ಹಕ್ಕಿಯ ಚಿತ್ರಣದಲ್ಲಿ – ಮಕ್ಕಳಲ್ಲಿರುವಂತೆ – ಸದಾ ಚಿಮ್ಮುತ್ತಿರುವ ಸ್ಫೂರ್ತಿಯ ಲಕ್ಷಣ ಕಾಣಿಸಿಕೊಂಡಿರುವುದು. ದಮನವನ್ನು ಸಹಿಸದ ಹಕ್ಕಿ ಸಿಡಿಲುಮರಿಯಂತೆ ಪ್ರತಿಭಟಿಸಿ ಅಣಕಿಸುತ್ತದೆ -- ಮಕ್ಕಳನ್ನು ನಿಗ್ರಹಿಸಹೋದಂತೆ ಅವರ ಹಟ ಹೆಚ್ಚುತ್ತದೆ. ಬೇಡವಾದುದನ್ನು ಬೇಕಂತಲೇ ಮಾಡುವ ಪ್ರವೃತ್ತಿ ಮಕ್ಕಳದು. ಅವರು ಸೋಲನ್ನು ಸಹಿಸರು; ಚುರುಕಿನ ಚಟುವಟಿಕೆ, ಸಾಹಸದ ಯಶಸ್ಸುಗಳು ಸದಾ ಅವರ ಎದೆ ತುಂಬಿರುತ್ತವೆ — ಹಕ್ಕಿಯನ್ನು ಮೇಲಿಂದ ಮೇಲೆ ಆತಂಕ ಪಡಿಸಿದಂತೆ ಅವರ ಚೇತನ ಚಿಗುರುತ್ತ ಹೋಗುತ್ತದೆ. ಒಕ್ಕಲಿಗನು ಹಕ್ಕಿಯನ್ನು ನಾನಾತೊಂದರೆಗಳಿಗೀಡು ಮಾಡುವನಾದರೂ. 'ಹಕ್ಕಿ ಸತ್ತಿತು' ಎಂದು ಖಚಿತವಾಗಿ ಯಾವ ಕಥೆಗಾರನೂ ಹೇಳಿಲ್ಲ. ಹಾಗೆ ನೋಡಿದರೆ ಹಕ್ಕಿ ಸಾಯುವುದೇ ಇಲ್ಲ. ಒಕ್ಕಲಿಗನ ಹಕ್ಕಿ ಸತ್ತಿತೋ ಇಲ್ಲವೋ ಎಂದು ತಿಳಿಯಲು ತಿರುಗಿ ಅದನ್ನೇ 'ಸತ್ತಿಯಾ ?' ಎಂದು ಪ್ರಶ್ನಿಸುತ್ತಾನೆ. ಅದು ಸಂತೋಷದಿಂದ ಕೊಡುವ ಉತ್ತರ ನಮಗೆ ಗೊತ್ತು: 'ಸತ್ತಿಲ್ಲ ಕೆಟ್ಟಿಲ್ಲ' ಎಂದು. ಒಂದು ವೇಳೆ ಹಕ್ಕಿಯನ್ನು ಕೊಂದಿದ್ದರೆ, ಅದು ಮಕ್ಕಳಿಗೊಂದು ದುರಂತ ಘಟನೆಯಾಗಿ ಪರಿಣಮಿಸಿ ಮಾನಸಿಕ ಆಘಾತವನ್ನುಂಟು ಮಾಡುತ್ತಿತ್ತು. ಈ ವ್ಯಥೆಗೆ ಕಾರಣವೆಂದರೆ ಪರೋಕ್ಷವಾಗಿ ಅವರ ಚೇತನದ ರೂಪವೇ ಹಿಂಸೆಗೆ ಒಳಗಾಗುವುದು ಅದ್ದರಿಂದ ಹಾಗೇನಾದರೂ ಸಂಭವಿಸಿದ್ದರೆ ಅವರನ್ನು ಕರುಳು ಹಿಚುಕಿದ ಸಂಕಟಕ್ಕೀಡುಮಾಡಿದಂತಾಗುತ್ತಿತ್ತು. ಅಂತಲೇ ಹಕ್ಕಿಯನ್ನು ಘಾಸಿಗೊಳಿಸದಂತೆ ಕಥೆಯನ್ನು ಬಹುಜಾಣ್ಮೆಯಿಂದ, ಜಾಗರೂಕತೆಯಿಂದ: ಅವರ ಸೂಕ್ಷ್ಮ ಎಳೆಯ ಸುರುಳಿಯನ್ನು ಬಿಚ್ಚಿ–ತೋರಿಸುವಲ್ಲಿ ಕಥೆಗಾರರು ಸಫಲರಾಗಿದ್ದಾರೆ. ಕಡೆಗೂ ಹಕ್ಕಿ–ಅಣಕಿಸುತ್ತ ಸ್ವತಂತ್ರವಾಗಿ ಹಾರಿ ಹೋಗುವುದು ಮಕ್ಕಳ ಇಚ್ಛೆಯಂತಾಗುತ್ತದೆ. ಈ ರೀತಿ ಮಕ್ಕಳ ಮನವನ್ನು ಗೆದಿಯುವಲ್ಲಿ ಯಶಸ್ವಿಯಾದ ಈ ಕಥೆ ಒಂದು ಉತ್ತಮ ಮಕ್ಕಳ ಕಥೆಯಾಗಿ ಸಾರ್ಥಕತೆ ಪಡೆಯುತ್ತದೆ.

ಕಥೆಯಲ್ಲಿ ಒಂದು ಹಕ್ಕಿ ಹಾಗೂ ಒಬ್ಬ ಒಕ್ಕಲಿಗ ಈ ಎರಡೂ ಪಾತ್ರಗಳು ಸಮಸಮ ಸೆಣಸಾಟ ನಡೆಸುತ್ತವೆ. ಆದರೆ ಇಲ್ಲಿಯ ಕೇಂದ್ರ ಆಶಯವು 'ಮೇಲಿಂದ ಮೇಲೆ ಸಾವನ್ನಪ್ಪುವ ಹಕ್ಕಿ'ಯನ್ನವಲಂಬಿಸಿಯೇ ಸುತ್ತುವರಿಯುತ್ತದೆ. ಹೀಗಾಗಿ ಒಕ್ಕಲಿಗನ ಪಾತ್ರ ಗೌಣವಾದರೂ ಆಕರ್ಷಣೆಯಲ್ಲಿ ಎರಡನೆಯದಾಗಿ ನಿಂತು. ಕೇಂದ್ರ ಪಾತ್ರ ಹಕ್ಕಿಯದೇ ಎನಿಸುತ್ತದೆ. ಶಿವ–ಪಾರ್ವತಿಯರ ಆಗಮನವು

ಕಥೆಗಾರನ ಚಾತುರ್ಯದಿಂದಾದುದು. ಇಲ್ಲವೇ ಕಥೆ ಹರಿದು ಬಂದ ಸಂಪ್ರದಾಯ ಮಾರ್ಗವೇ ಅಂತಹುದಾಗಿರಬೇಕು. ಶಿವ-ಪಾರ್ವತಿಯರ ಬದಲಾಗಿ ಯಾರಾದರೂ ಸಾಮಾನ್ಯ ಮನುಷ್ಯರೇ ಬರಬಹುದಾಗಿತ್ತು. ಆದರೆ ಅವರ ಪ್ರವೇಶದಿಂದ ಕಥೆಗೆ ಅಲೌಕಿಕರ ಲೇಪನ ಮಾಡಿದಂತಾಗಿದೆ. ಶಿವ-ಪಾರ್ವತಿಯರು ಅಮಾನುಷ ವ್ಯಕ್ತಿಗಳಾದರೂ ಶಿವನು ಒಕ್ಕಲಿಗನಿಗೆ ಭೇಟಿಯಾಗುವದು ಮಾತ್ರ ಸಾಧಾರಣ ಮಾನವ ವೇಷದಲ್ಲಿಯೆ. ಶಿವ ಮಾಡಿದ ಸಲಹೆ ಕೂಡ ನಗೆತರಿಸುವಂತಹುದು. ಆ ಸಲಹೆಯಂತೆ ವರ್ತಿಸುವ ಒಕ್ಕಲಿಗ ನಮಗೆ ದಡ್ಡನಂತೆ ತೋರುತ್ತಾನೆ. ಹಾಗೆಂದರೆ 'ದಡ್ಡನು ನಿರ್ವಹಿಸುವ ಕಾರ್ಯಗಳು' (Foolish imitations) ಎಂಬ ಇನ್ನೊಂದು ಆಶಯವು ಇಲ್ಲಿರುವುದೆಂದು ಸೂಚಿಸಬೇಕಾಗುತ್ತದೆ. ಶಿವ ಮಾಡುವ ಸಲಹೆ ಸಾಮಾನ್ಯವಾದುದು. ಅದನ್ನು ಅನುಕರಿಸುವದು ಹೆಡ್ಡತನವಾಗಿ ಕಂಡರೂ, ಅದರಿಂದಾಗುವ ಪರಿಣಾಮ – ಎಲ್ಲ ಹಕ್ಕಿಗಳು ಹಾರಿಹೋಗುವದು – ಅಲೌಕಿಕವಲ್ಲವಾದರೂ ನಗೆ ತರಿಸುವಂತಹ ಸಲಹೆಗೆ ಅಲ್ಪಮಟ್ಟಿಗಾದರೂ ಗಭೀರತ್ವ ದಯಪಾಲಿಸುವಂತಹದಾಗಿದೆ. ಬಹುಶ ಕಥೆಯ ಮುಖ್ಯ ಘಟನೆಗೆ ಕಾಲಿಡುವ ತಿರುವನ್ನು ಒಕ್ಕಲಿಗನ ಮೂರ್ಖ ಅನುಕರಣೆ ತಂದೊಡ್ಡುತ್ತದೆ.

ಒಕ್ಕಲಿಗ ಕರ್ತೃತ್ವ ಶಕ್ತಿಯುಳ್ಳವ. ಆತನಲ್ಲಿ ಸಹಜ ಮಾನವ ಮನೋಭಾವವಿದೆ. ತನ್ನ ಜೋಳದ ಹೊಲ – ಆಸ್ತಿ – ಕಾಯಲು ಆತ ಶತ ಪ್ರಯತ್ನ ಮಾಡಿದ್ದಾನೆ. ಮಂಚಿಗೆ ಹಾಕಿದ್ದಾನೆ; ಕವಣಿ ಬೀಸುತ್ತಾನೆ. ಆದರೂ ತನ್ನ 'Ego' ವನ್ನೇ ಕೆಡಹುವ ಧೈರ್ಯ ಒಂದು ಹಕ್ಕಿ ಮಾಡುತ್ತದೆ. ಅದು ಅವನ ಆತ್ಮಕ್ಕೆ ಸಂದ ಅಗೌರವ: ಅಭಿಮಾನಕ್ಕೊದಗಿದ ಭಂಗ. ಅದಕ್ಕಾಗಿ ಮತ್ಸರ: ಅದನ್ನು ಕೊನೆಗೊಳಿಸಬೇಕೆಂಬ ಹಟಕ್ಕೆ ಕಾರಣವಾಗುತ್ತದೆ.

ವಿಚಿತ್ರವೆಂದರೆ ಒಕ್ಕಲಿಗನ ಕೈಗೆ ಹಕ್ಕಿ ಅನಾಯಾಸವಾಗಿ ದೊರಕುತ್ತದೆ. ಅಥವಾ ಕಥೆಗಾರ ಹಾಗೆ ಮಾಡುತ್ತಾನೆ. ನಮ್ಮ ಕಥೆಗಾರ ಒಕ್ಕಲಿಗನ ಕೈಯಿಂದ ಹಕ್ಕಿ ದಕ್ಕಿಸಿಕೊಳ್ಳಲು ಮಾಡಿದ ಪ್ರಯತ್ನಗಳ ಬಗೆಗೆ ಯಾವ ವಿವರಣೆಯೂ ನೀಡಿಲ್ಲ. ಇಲ್ಲವೇ ಒಕ್ಕಲಿಗನು ಅದನ್ನು ಮರುಳುಗೊಳಿಸಿ ಜಾಣತನದಿಂದ ಕೈವಶಮಾಡಿಕೊಂಡ ಬಗ್ಗೆಯೂ ವಿವರಿಸಿಲ್ಲ.[೪] ಬಹುಶ ಕಥೆಯ ಕೇಂದ್ರದ ಕಡೆಗೆ ಆತನ ಒಲವಿರಬೇಕು. ಇಲ್ಲವೆ ತಾನು ಕೇಳಿಸಿಕೊಂಡ ಕಥೆ ಹರಿದು ಬಂದ ಸಂಪ್ರದಾಯ ಮಾರ್ಗವೇ ಹಾಗಿರಬೇಕು. ಹೀಗಾಗಿ ಈ ಭಾಗ ಮೋಟಕಾಗಿರುವದಕ್ಕೆ ಉಚಿತ ಕಾರಣ ಕೊಡಲು ನಮ್ಮ ಊಹೆ ಸಾಲದು. ಆದರೂ ಕೊಟ್ಟ ಕಾರಣಗಳಲ್ಲಿ ಒಂದಾದರೂ ಭಾಗಿಯಾಗಿರಬೇಕು.

---

೪ ಸಿಂಪಿಯವರ ಪಾಠದಲ್ಲಿ ಒಕ್ಕಲಿಗನು ಹಕ್ಕಿಯನ್ನು ಹಿಡಿಯಲು – ಮೆಲ್ಲನೆ ಹೋಗಿ ಗಪ್ಪನೆ ಹಿಡಿದ–ಎಂದು ವಿವರಿಸಲಾಗಿದೆ.

ಒಕ್ಕಲಿಗನ ಕೈಗೆ ಸಿಕ್ಕ ಹಕ್ಕಿ ಅನೇಕ ತೊಂದರೆಗಳಿಗೆ ಒಳಗಾಗುತ್ತದೆ. ಅಥವಾ ಆತ ಹಾಗೆ ಮಾಡುತ್ತಾನೆ. ಬಾರಿ ಬಾರಿಗೂ ಮುಖ ಭಂಗ. – ಹಕ್ಕಿ ದಕ್ಕದತ್ತಲೇ ಹೋಗುತ್ತದೆ. ನಗುನಗುತ್ತ ಉತ್ತರಿಸುತ್ತದೆ ಆತನ ಆಶಾದಾಯಕ ಪ್ರಶ್ನೆಗೆ. ಕಡೆಗೆ 'ಒಕ್ಕಲಿಗ ಬಿಡಲಾರ ಹಕ್ಕಿ ಸಾಯದು' ಎಂಬುದು ಮನವರಿಕೆಯಾಯಿತೆಂದು ತೋರುತ್ತದೆ; ಅಥವಾ ಕಥೆಯ ತಂತ್ರವೇ ಹಾಗಿದೆ. ಅದಕ್ಕಾಗಿ ಕಥೆ ಮುಕ್ತಾಯಗೊಳಿಸಲು ಕತ್ತಲು ಕೋಣೆಯಿಂದ ಹಕ್ಕಿಯನ್ನು ಕಥೆಗಾರನೇ ಹಾರಿಸುತ್ತಾನೆ. ಒಕ್ಕಲಿಗನ ಸ್ಥಿತಿ ಏನಾಯಿತು? ಆತನ ಆತ್ಮ ಭಂಗದ ಕೊನೆಯ ಸ್ಥಿತಿ ಏನು? ಮುಂತಾಗಿ ಅನೇಕ ಪ್ರಶ್ನೆಗಳು ಗಾಢ ಕತ್ತಲೆಯಲ್ಲಿ ಕೇಳುಗರ ತಲೆಯಲ್ಲಿ ಸುಳಿದಾಡುತ್ತಿರುತ್ತವೆ; ಆದರೆ ಕಥೆಗಾರನ ಕಥೆ ಮೊದಲೇ ಮುಗಿದಿರುವುದರಿಂದ ಉತ್ತರದ ಪ್ರಶ್ನೆಯೇ ಇರುವುದಿಲ್ಲ.

ಇಲ್ಲಿ ಮುಖ್ಯವಾಗಿ ಎರಡು ಶಕ್ತಿಗಳ ನಡುವೆ ಪರಸ್ಪರ ಘರ್ಷಣೆ ನಡೆದಿದೆ. ಈ ವಿರಸ ಹೇಗೆ ಉಂಟಾಯಿತು ? ಏಕೆ ಉಂಟಾಯಿತು ? . . .

ತನ್ನ ಬದುಕಿನ ಪೋಷಣೆಗಾಗಿ ಒಕ್ಕಲಿಗ ಬೆಳೆ ಬೆಳೆಸಿದ್ದಾನೆ. ಅದು ತನ್ನ ಆಹಾರ. ಅದರಿಂದ ಅವನ ಜೀವನ ಸಾಗಬೇಕು. ಇಷ್ಟು ಬೆಳೆಬರಬೇಕಾದರೆ ಆತ ತಕ್ಕ ಮಟ್ಟಿನ ಪ್ರಯತ್ನಪಟ್ಟಿರಬೇಕು. ಹೊಲ ಉತ್ತಬೇಕು, ಬಿತ್ತಬೇಕು. ಬೆಳೆ-ಸಸಿಯಿಂದ ಕಾಯಾಗುವವರೆಗೆ–ಕಾಯಬೇಕು. ಹೀಗೆ ಇನ್ನೂ ಏನೇನೋ ನಾನಾ ರೀತಿಯ ಪೋಷಣೆ ಕೊಟ್ಟು ಬೆಳೆ ಮನೆ ಸೇರುವವರೆಗೆ ಶ್ರಮವಹಿಸಬೇಕು. ಅದು ಅವನ ಧರ್ಮ; ಕರ್ತವ್ಯ.

ಹಕ್ಕಿಗೂ ಜೀವವಿದೆ; ಅದೂ ಬದುಕಬೇಕು. ಜೋಳ ಅದರ ಆಹಾರಗಳಲ್ಲಿ ಒಂದು; ಅದನ್ನು ತಿನ್ನುವ ಹಕ್ಕು ಹಕ್ಕಿಗಿದೆ. ಅದು ತನ್ನ ಆಹಾರಕ್ಕಾಗಿ ಅಲ್ಲಿಗೆ ಬಂದಿದೆ; ಜೋಳ ತಿನ್ನುತ್ತಿದೆ.

ತಾನು ಪರಿಶ್ರಮವಹಿಸಿ ತನಗಾಗಿ ಮಾಡಿಕೊಂಡ ಆಶ್ರಯ ಹಾಳಾಗುತ್ತಿರುವುದು ಮನುಷ್ಯ ಸಹಿಸಲಾರ. ಆತ ಕವಣೆ ಬೀಸುತ್ತಾನೆ: ತನ್ನದನ್ನು ದಕ್ಕಿಸಿಕೊಳ್ಳಲು ಹವಣಿಸುತ್ತಾನೆ. ಹಕ್ಕಿ ತನ್ನ ಇಚ್ಛೆಯಂತೆ ಮೇಯುತ್ತಿದೆ: ಅದು ಕಿರುಕಿರಿಗೊಳಗಾಯಿತು. ತನ್ನ ಮೇಲೆ ದಬ್ಬಾಳಿಕೆ ನಡೆಯಿತು: ಎದುರಿಸಿತು. ಒಕ್ಕಲಿಗ ಬಿಡಲಿಲ್ಲ. ಆತ ತನ್ನದನ್ನು ಹಾಳು ಮಾಡಿಕೊಳ್ಳುವ ಮನಸ್ಸು ಮಾಡಲಿಲ್ಲ. ಕೋಪ ಉಕ್ಕಿತು; ಹಕ್ಕಿಯನ್ನು ಹಿಡಿದ. ಅದನ್ನು ಸೆರೆಯಲ್ಲಿ ಮುಳುಗಿಸಿ ತನಗೊದಗಿದ ಕಂಟಕವನ್ನು ಕೊನೆಗೊಳಿಸಬೇಕೆಂದ. ಹಕ್ಕಿಗೂ ಜೀವವಿದೆ: ಸ್ವತಂತ್ರ ರಕ್ಷಣೆ ಅದೂ ಬಯಸುತ್ತದೆ. ಅದಕ್ಕೂ ಕೋಪವುಂಟು: ಎದುರಾಳಿಯನ್ನು ಅಣಕಿಸುತ್ತದೆ. ದ್ವಂದ್ವಯುದ್ಧ ಶುರುವಾಗುತ್ತದೆ. ಒಂದು ವ್ಯವಸ್ಥೆ

ಇನ್ನೊಂದು ವ್ಯವಸ್ಥೆಯೊಳಗಿನ ವಿರಸದ ತೀವ್ರ ಹೋರಾಟ; ತಾನೇನೂ ಕಡಿಮೆಯಲ್ಲವೆಂಬ ತೋರಾಟ. ಒಂದನ್ನೊಂದು ಅಣಕಿಸುತ್ತವೆ; ತೊಂದರೆ ಕೊಡುತ್ತವೆ. ಸಮಾಜದಲ್ಲಿ ಇಂಥ ದ್ವಂದ್ವ ವಿರಸ ಯಾವ ರೀತಿ ಒಳಗೊಳಗೇ ಕಾವೇರಿ ಬೆಳೆಯುತ್ತ ಹೋಗುತ್ತದೆ ಎಂಬುದರ ಸೂಕ್ಷ್ಮ ಎಳೆ ಇಲ್ಲಿ ಕಾಣಿಸುತ್ತದೆ. ಇದು ಒಂದು ರೀತಿಯಲ್ಲಿ ಅಂತ್ಯವಾಗದ, ದಣಿವರಿಯದ, ಸೋಲಪ್ಪದ ವಿರಸ; ಘರ್ಷಣೆ. ಕಡೆಗೆ ವಿರಸದಲ್ಲೇ ಅಂತ್ಯವಾಗಬಹುದೆಂತಹುದು. 'ಹಕ್ಕಿ ಸಾಯಲಿಲ್ಲ, ಒಕ್ಕಲಿಗನ ಇಚ್ಛೆ ಪೂರೈಸಲಿಲ್ಲ'. ಇವರಲ್ಲಿ ಯಾರ ತಪ್ಪೂ ಇದ್ದಂತಿಲ್ಲ. ಜೀವಿಗಳಿಗಿರುವ ನೈಸರ್ಗಿಕ ಹಕ್ಕು ಈ ಸೆಣಸಾಟಕ್ಕೆ ಎಡೆ ಮಾಡಿದೆ. ಅದಕ್ಕಾಗಿಯೆ ಏನೋ ಸಾವೆಷ್ಟು ಸೌಹಾರ್ದತೆಯಿಂದಿದ್ದರೂ ಸಹಜತೆಯೇ ಸಮರಕ್ಕೆ ಕಾರಣವಾಗಬಲ್ಲುದಾಗುತ್ತದೆ. ಶಾಂತಿ ಜೀವಕೋಟಿ ಬಯಸುವ ಇಚ್ಛೆ. ನಿಸರ್ಗದ ನಿಯಮವೇ ಸಂಕೀರ್ಣ. ವಿರಸ ಅಲ್ಲಿ ಅನಿವಾರ್ಯದ ಹುಟ್ಟು ಪಡೆಯುತ್ತದೆ. ವಿರಸ–ಶಾಂತಿಗಳ ತಿಕ್ಕಾಟ; ಇದು ಕೊನೆಯಾಗದ ಮಾತು, ಸೋಲಪ್ಪದ ಮಾತು.

ಇದೊಂದು ಸಾಮಾನ್ಯ ಜನಪದ ಕಥೆಯಾದರೂ, ತನ್ನ ಒಡಲಲ್ಲಿ ಅನೇಕ ವಿಷಯಗಳನ್ನು ಗರ್ಭಿಸಿಕೊಂಡಿರುವಂತೆ ತೋರುತ್ತದೆ. ಆದುದರಿಂದ ಕಥೆ ಸಂಕೇತಿಸುತ್ತಿರುವ ಅಂತಹ ಒಂದೆರಡು ಅಂಶಗಳನ್ನು ನೋಡೋಣ.

ಜೋಳದ ಹೊಲ–ಪ್ರಪಂಚವನ್ನು ಸಂಕೇತಿಸುತ್ತದೆ. ಪ್ರಪಂಚದಲ್ಲಿ ಮುಖ್ಯವಾದ ವಸ್ತು ಜೀವಿ. ಇವನ್ನು ಹಕ್ಕಿ ಹಾಗು ಬೆಳೆದು ನಿಂತ ಜೋಳ ಸಂಕೇತಿಸುತ್ತಿವೆ. ಈ ಪ್ರಪಂಚವನ್ನು ನಿಯಂತ್ರಿಸುವ ಒಂದು ಶಕ್ತಿ–ಸಾಮಾನ್ಯ ನಂಬುಗೆಯಂತೆ 'ವಿಧಿ. ಹೊಲದಲ್ಲಿ ಮಂಚಿಗೆ ಹಾಕಿ ಕವಣೆ ಬೀಸುತ್ತಿರುವ ಒಕ್ಕಲಿಗ ವಿಧಿಯನ್ನು ಪ್ರತಿನಿಧಿಸುತ್ತಿದ್ದಾನೆ. ಒಕ್ಕಲಿಗನನ್ನು ನಾವು ವಿಧಿಯೆಂದು ಗ್ರಹಿಸಿದರೆ, ನಮ್ಮ ಕಥೆಗಾರನ ಹೇಳಿಕೆಯಂತೆ ಅದೂ ಒಂದು ಶಕ್ತಿಯ ಸಂಜ್ಞೆಯ ಮೇರೆಗೆ ವರ್ತಿಸುತ್ತದೆ ಎಂಬ ಅಂಶವನ್ನು ಗ್ರಹಿಸಲು ಕಾರಣವಾಗುತ್ತದೆ.—ಒಕ್ಕಲಿಗ ಪರಮಾತ್ಮನ ಆದೇಶದಂತೆ ವರ್ತಿಸುವುದನ್ನು ಕಾಣುತ್ತೇವೆ. ವಿಧಿ ಒಳ್ಳೆಯದಕ್ಕೆ ಒಳ್ಳೆಯದನ್ನು, ಕೆಟ್ಟದಕ್ಕೆ ಕೆಟ್ಟುದನ್ನು ಗೈಯ್ಯುವ ಒಂದು ವ್ಯವಸ್ಥೆಯಂತೆ ನಮ್ಮ ಕಲ್ಪನೆ ಇದೆ. ಬೆಳೆ–ತನ್ನಷ್ಟಕ್ಕೆ ತಾನು ಅಭಿವೃದ್ಧಿ ಹೊಂದುತ್ತಿರುವ ಸಾತ್ವಿಕ ಜೀವಿ–ಎಂದು ಬಗೆದರೆ, ಅದನ್ನು ಹಾಳುಮಾಡುವ ದುಷ್ಟಶಕ್ತಿಯಾಗಿ ಹಕ್ಕಿ ಕಾಣಿಸುತ್ತದೆ. ಈ ಕಂಟಕವನ್ನು ದಮನ ಮಾಡಲೆಂದೇ ಒಕ್ಕಲಿಗ ಕವಣೆ ಬೀಸುತ್ತಿದ್ದಾನೆ. ವಿಧಿಯ ಇಚ್ಛೆಯಂತೆ ದುಷ್ಟಶಕ್ತಿಯನ್ನು ಸಂಪೂರ್ಣ ಇಲ್ಲವಾಗಿಸಬೇಕೆಂಬ ಹಂಬಲದ ಅನೇಕ ಯತ್ನಗಳು ನಡೆದರೂ ಅದು ಹೇಗೆ ವಿಧಿಗೂ ಸಿಗದೆ ಉಳಿದುಕೊಳ್ಳುತ್ತದೆ ಎಂಬುದು ನಮ್ಮ ಕಣ್ಣ ಮುಂದೆ ನಡೆಯುತ್ತದೆ. ಅಂದರೆ ನಿರಂತರವಾಗಿ ದುಷ್ಟಶಕ್ತಿ ಇದ್ದೇ ಇರುತ್ತದೆ. ವಿಧಿ ಅದನ್ನು ಮೇಲಿಂದ ಮೇಲೆ ದಮನ ಮಾಡುವ ಪ್ರಯತ್ನದಲ್ಲಿ

ರುತ್ತದೆ. ಒಳ್ಳೆಯವಕ್ಕೆ ಕಟ್ಟಿದರ ಕಂಟಕ ತಪ್ಪಿಸುವಲ್ಲಿ ವಿಧಿಯೂ ಸೋಲುತ್ತಾನೆ. ಕಂಟಕದ ನಿರಂತರ ಕ್ರಿಯೆಗೆ ಉತ್ತೇಜನವಿಲ್ಲ. ಅದು ಆಗಾಗ ದಮನವಾಗುತ್ತಿದ್ದರೂ ಅದರ ಅಂತ ಸಂಪೂರ್ಣ ಕೊನೆಗೊಳ್ಳುವುದಿಲ್ಲವೆಂಬುದು ಇಲ್ಲಿಯ ಮೊದಲ ಪ್ರಯತ್ನದ ಫಲವಾಗಿ ದೊರೆತ ಒಂದು ಸಾಂಕೇತಿಕ ಅರ್ಥ.

ಈಗ ಒಕ್ಕಲಿಗ–ವಿಧಿ ಎಂದು, ಹಕ್ಕಿ–ಜೀವಿಯೆಂದು, ಉಳಿದ ಪರಿಸರ ಕೇವಲ ಪ್ರಪಂಚವೆಂದು ಗ್ರಹಿಸೋಣ. ನಮ್ಮ ಕಥೆಗಾರ ಹಕ್ಕಿಯನ್ನು ಒಕ್ಕಲಿಗನ ಕೈಗೆ ಅನಾಯಾಸವಾಗಿ ಸಿಕ್ಕಿಸುವಲ್ಲಿ 'ವಿಧಿಯಿಂದ ನಾವು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ' ಎಂಬ ಸಾಮಾನ್ಯ ಮನೋಭಾವ ಕಂಡು ಬರುತ್ತದೆ. 'ಏಕೆಂದರೆ ನಾವು ಕುಣಿಯುತ್ತಿರುವುದು ಹಕ್ಕಿಯಂತೆ ವಿಧಿಯ ಅಧೀನದಲ್ಲಿ'. ಆದರೂ ಜೀವಿಯು ವಿಧಿಯ ಕೋಟಲೆಗಳಿಂದ ಪಾರಾಗಿ ಹೇಗೆ ವಿಧಿಯನ್ನೇ ಅಣಕಿಸ ಬಲ್ಲುದು ಎಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನ. ಹಕ್ಕಿ (ಜೀವಿ)ಯನ್ನು ನಾಶಗೊಳಿಸಬೇಕೆಂಬ ವಿಧಿಯ ಯತ್ನಗಳೆಲ್ಲ ವಿಫಲವಾಗುತ್ತವೆ. ಅದು ಒಡ್ಡಿದ ಅಗ್ನಿಪರೀಕ್ಷೆಗಳಲ್ಲೆಲ್ಲ ಯಶಸ್ವಿಯಾಗಿ ಜೀವಿ ಹಿಂದಿರುಗುತ್ತದೆ. ಬಾವಿಯಲ್ಲಿ ಹಾಕುವುದು, ಕಟ್ಟಿಗೆಯಲ್ಲಿ ತುಳಿಯುವುದು, ಗಾಣಿಗನ ಗಾಣದಲ್ಲಿ ಅರೆಯುವುದು, ಸಿಗಸಿಗಿ ಬೆಂಕಿಯಲ್ಲಿ ಸುಡುವುದು, ಕತ್ತಲೆಯ ಮನೆಯಲ್ಲಿ ಕಾದಿಡುವುದು–ಇಷ್ಟಾದರೂ ಹಕ್ಕಿ ಎಷ್ಟೊಂದು ಸಮಾಧಾನದಿಂದ ಉತ್ತರ ಕೊಡುತ್ತದೆ: 'ಸತ್ತಿಲ್ಲ ಕೆಟ್ಟಿಲ್ಲ' ಎಂದು. ನಾವು ಪ್ರಪಂಚದಲ್ಲಿ ಸುಖಿಗಳಾಗಿದ್ದು, ವಿಧಿಯ ಕೋಟಲೆಗಳನ್ನು ಎದುರಿಸಿ, ಅನೇಕ ತೊಂದರೆಗಳನ್ನು ಸಹನೆಯಿಂದ ಸ್ವೀಕರಿಸಿ ಅದರಲ್ಲಿ ಒಳ್ಳೆಯದನ್ನು ತೆಗೆದು ನಗುನಗುತ್ತ ಇರುವ ರೀತಿ ಅನುಕರಣೀಯವಾಗಿದೆ. ಜೀವಿಗಳಿಗಿರುವ ಅನಿವಾರ್ಯವಾದ ತೊಡಕನ್ನು ತೀರ ಸರಳವಾಗಿ ಬಿಡಿಸಿ ತೋರಿಸಿದಂತಿದೆ.

ನಾವು ಇನ್ನೊಂದು ರೀತಿಯ ಸಾಂಕೇತಿಕ ವಿವರಣೆಯತ್ತ ಇಣಕಿ ನೋಡೋಣ. ಒಕ್ಕಲಿಗನು ಒಬ್ಬ ಪ್ರಪಂಚ ಜೀವಿಗಳ ಸರ್ವತ್ರ ಸಂಕೇತವಾಗಿ ಪ್ರತಿನಿಧಿಸಿದರೆ, ಆತನ ಹೊಲ, ಬೆಳೆ, ಮಂಚಿಗೆ, ಕವಣೆ ಕಲ್ಲು ಬೀಸುವುದು ಇತ್ಯಾದಿಗಳೆಲ್ಲ ಪ್ರಾಪಂಚಿಕ ಜೀವನವನ್ನು ಪ್ರತಿನಿಧಿಸುತ್ತವೆ. ಹಕ್ಕಿ ಆತನ ಜೀವಾತ್ಮ ಸ್ವರೂಪ. ಆದಿ ಮಾನವನ ಒಂದು ಹಂತದ ಕಲ್ಪನೆಯಲ್ಲಿ ಜೀವವು ಹಾರಾಡಬಲ್ಲ ಒಂದು ಶಕ್ತಿ.[5] ಅದು

5 Often the soul is conceived as a bird ready to take flight..... The Borrors of Bragil family that the human soul has the shape of a bird, and passes in that shape out of the body in dreams (p–33, 34).... others are of opinion that it does so in the form of a fly. Hence they make food ready to induce the absent soul to come back and the first fly that settles on the food is regarded as the returning truant. But in native poetry and popular expressions there are traces of the belief that the soul quits the body in the form of a bird (p–36).

—The Golden Bough : part–II, IIIrd. Ed. 1976.

—Sir James George Frazer

ಚಿರಂತನವಾದುದು: ಯಾವ ಕೋಟಲೆಗಳಿಗೂ ಸಿಕ್ಕದು—ಎಂದು ನಂಬಿದ್ದರು. ವಿಧಿಯ ನಿಯಾಮದಂತೆ ಜೀವವು ಹಲವು ದಿನ ಈ ಪ್ರಪಂಚದಲ್ಲಿ ಬಂದಿದ್ದು, ಪುನಃ ಬಿಡುಗಡೆ ಹೊಂದುವಂತಹದು. ಜೀವಕ್ಕೆ ದೇಹದಲ್ಲಿ ಬಂದಿರುವದೇ ಒಂದು ಬಂಧನ. ಒಕ್ಕಲಿಗನ ಕೈಗೆ ಹಕ್ಕಿ ಅನಾಯಾಸವಾಗಿ ಸಿಕ್ಕು ನಾನಾ ಪೀಡೆಗಳಿಗೀಡಾಗುತ್ತದೆ. ಆದರೆ ಅದರಿಂದ ಯಾವುದೇ ಪರಿಣಾಮಹೊಂದದೆ, ನಗುನಗುತ್ತ ಉಲ್ಲಾಸದಿಂದ ಹಾರಿಕೊಳ್ಳುತ್ತದೆ. ಆಯಾಸ ಕಾಣಿಸುವುದು ಒಕ್ಕಲಿಗನಲ್ಲಿ ಮಾತ್ರ. ಜೀವವೂ ವಿಧಿಯ ಆದೇಶದ ಮೇರೆಗೆ ದೇಹದ ಬಂಧನದಲ್ಲುಳಿಯುತ್ತದೆ. ಜೀವಿಗೆ ಇದೊಂದು ಅನಿವಾರ್ಯವಾದ ಪ್ರಸಂಗ. ಅನೇಕ ತೊಂದರೆಗಳನ್ನು ಎದುರಿಸಬೇಕಾಗಿ ಬರುತ್ತದೆ. ಆದರೆ 'ದೇಹ ದಣಿಯುವುದೇ ಹೊರತು ಜೀವ ದಣಿಯದು'. ಒಕ್ಕಲಿಗನ ಕೈಗೆ ಹಕ್ಕಿ ಸಿಕ್ಕು ಬಂಧನಕ್ಕೀಡಾಯಿತು. ಆದರೆ ಹಕ್ಕಿ ಎಷ್ಟೊಂದು ನಿರ್ಲಿಪ್ತವಾಗಿತ್ತು ಎಂಬುದು ಅದರ ಉತ್ತರಗಳಿಂದ ತಿಳಿದು ಬರುತ್ತದೆ. ಕಡೆಗೆ ಒಕ್ಕಲಿಗನಿಂದ ಹಕ್ಕಿ ನಿರಾಯಾಸವಾಗಿ ಹಾರಿ ಹೋಯಿತು. ಅದರಂತೆ ಜೀವವೂ ಹಲವು ದಿನ ಈ ದೇಹದಲ್ಲಿದ್ದು ಕಡೆಗೆ ತನಗೇನೂ ಸಂಬಂಧವಿಲ್ಲದಂತೆ ನಿರ್ಲಿಪ್ತವಾಗಿ ಹಾರಿ ಹೋಗುವಂತಹದು.

ಅನೇಕ ಸಲ ಹೊಲವನ್ನು ದೇಹಕ್ಕೆ ಸಂಕೇತವಾಗಿ ಬಳಸುತ್ತೇವೆ. ಶಿವ–ಪಾರ್ವತಿಯ ಮಾತುಗಳು – ಗುರು ಮಂತ್ರಗಳಾಗಿ–ಹೊಲಕ್ಕೆ ಹಾಕಬೇಕಾದ ಗೊಬ್ಬರವನ್ನು ಸಂಕೇತಿಸುತ್ತವೆ. ಹಾಗೆ ತಿಳಿದರೆ ಒಕ್ಕಲಿಗ–ಜೀವಾತ್ಮನಾಗುತ್ತಾನೆ. ಕಂಟಕವನ್ನು ತಂದೊಡ್ಡುವ ಹಕ್ಕಿಗಳು--ಚಂಚಲ ಸ್ವಭಾವ, ಅಷ್ಟಮದಗಳೇ ಮೊದಲಾಗಿ ಅನೇಕ ವಿಷಯಗಳನ್ನು ಸಂಕೇತಿಸುತ್ತವೆ. ಈ ವಿಷಯಗಳೆಂಬ ಹಕ್ಕಿಗಳನ್ನು ಹೊಡೆಯಲು ಪಾರಮಾರ್ಥಿಕ ಮಾರ್ಗನೆಂಬ–ಮಂಚಿಗೆಯನ್ನೇರಿ, ಕವಣೆಯಲ್ಲಿ ಕಲ್ಲಿಟ್ಟು ಬೀಸುವುದು–ಪ್ರಾರ್ಥನೆ ಮುಂತಾಗಿ ಸದಾಚಾರಗಳನ್ನು ಸಂಜ್ಞಿಸುತ್ತವೆ.[೬]

ಹಕ್ಕಿಗಳನ್ನು ಓಡಿಸಲು ಕವಣೆ ಬೀಸಿ ಬೀಸಿ ಜೀವಿ ದಣಿಯುತ್ತಾನೆ. ತಾಪಕ್ಕೊಳಗಾಗಿ ರೋದಿಸುತ್ತಾನೆ. ಜಗದ ಜೀವಿಗಳ ಉದ್ಧಾರಕ ಶಿವ. ಸನ್ಯಾಸ ಸ್ವೀಕರಿಸಲು ಹೇಳುತ್ತಾನೆ. ತಲೆ ಬೋಳಿಸಿ ಮಂಚಿಗೆಯನ್ನೇರಿ ಕುಳಿತರೆ ಪಕ್ಕಿಗಳ ಕಾಟ ತಪ್ಪುತ್ತ

೬ "ತನುವ ತೋಂಟವ ಮಾಡಿ" --ಪ್ರಭುದೇವರ ಒಂದು ವಚನದಿಂದ.
"ಚಂಚಲವೆಂಬ ಹಕ್ಕಿಯನ್ನು ಓಡಿಸಿರಯ್ಯ" --ಕನಕದಾಸರ ಕೀರ್ತನೆಯೊಂದರಿಂದ.
"ಹಸ ಮಾಡರಿ ಭವ ಎಂಬೊ ಹೊಲವು
... ...
ಗುರು ಮಂತ್ರವೆಂಬ ಗೊಬ್ಬರ ಹರವು
ಅಷ್ಟಮದಗಳ ಹಕ್ಕಿಯ ಹೊಡಿಯೊ" --ಕರಹರಿ ಶರಣಪ್ಪ ಕವಿಯ ಭಜನೆ ಹಾಡಿನಿಂದ

ದೆಂಬುದು ಅವರ ಸಹಜ ಲೆಕ್ಕಾಚಾರ. ಇಲ್ಲಿ ನಾವು ಸನ್ಯಾಸ ಸ್ವೀಕರಿಸಿ ಗುಡ್ಡ ಹತ್ತಿ ಕುಳಿತರೆ ವಿಷಯಗಳ ಕಾಟ ತಪ್ಪುತ್ತದೆಂಬ ಸಾಮಾನ್ಯ ತಿಳುವಳಿಕೆಯನ್ನೇ ಗ್ರಹಿಸೋಣ. ತಲೆ ಬೋಳಿಸಿ ಸುಣ್ಣ (ಬೂದಿ. ವಿಭೂತಿ) ಬಳಿದುಕೊಳ್ಳುವುದು ಸನ್ಯಾಸಿ ಲಾಂಛನ. ಸರಿ, ಸನ್ಯಾಸ ಸ್ವೀಕರಿಸಿ ಗುಡ್ಡ ಹತ್ತಿ ಕುಳಿತರೆ ಎಲ್ಲಾ ವಿಷಯಗಳು ಹಾರಿಹೋದವು. ಪ್ರಾಪಂಚಿಕ ಪೀಡೆಗಳಿಂದ ದೂರಾದ. ಆದರೆ ಕಾಮವನ್ನು ಸಂಕೇತಿಸುವ ಹೆಣ್ಣು-ಗಂಡುಗಳೆಂಬ ಎರಡು ಹಕ್ಕಿಗಳು ಮಾತ್ರ ಸದಾ ಅವನನ್ನು ಬೆಂಬಿಡಿದು ಕಾಡುತ್ತವೆ. ಎಲ್ಲವನ್ನು ಗೆದ್ದರೂ ಕಾಮದ ಕಾಟದಿಂದ ತಪ್ಪಿಸಿಕೊಳ್ಳುವುದು ತುಂಬಾ ದುಸ್ತರ. ಅದು ನೀರಿನಲ್ಲಿ ನೆನೆಯದು, ಬಂಧನದಲ್ಲಿ ಸಿಕ್ಕಿಕೊಳ್ಳದು, ತುಳಿತದಲ್ಲಿ ಸಾಯದು, ಅರೆದರೆ ಪುಡಿಯಾಗದು. ಸುಟ್ಟರೆ ಸುಡದು. ಕಡೆಗೆ ಕಾಮದ ಬಾಧೆಯಿಂದ ಯಾರಿಗೂ ತಪ್ಪಿಸಿಕೊಳ್ಳಲು ಆಗದು-ಎಂಬಂತಹ ಸಾಮಾನ್ಯ ನಿಯಮ ಇಲ್ಲಿದೆ. ಒಕ್ಕಲಿಗನ ಕೈಯಿಂದ ಕಠೋರ ಯಾತನೆಗಳಿಗೊಳಗಾದರೂ ಮೂರಾಗದ ಹಕ್ಕಿ ಆತನ ಕೈಯಿಂದ ತಪ್ಪಿಸಿಕೊಂಡಿತು. ಮತ್ತೆ ಅವನ ತಲೆಯ ಮೇಲೆ ಬಂದು ಕುಳಿತುಕೊಳ್ಳುವುದು ಖಂಡಿತ.

ಇಲ್ಲಿಯ ವರೆಗೆ ಕಥೆಯ ಅಂಗಾಂಗದ ಪದರುಗಳನ್ನು ಮುಟ್ಟಿ ಮುಟ್ಟಿ ತೋರಿಸುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಿದೆ. ಸಾಧ್ಯವಾದರೆ ಕೆಲವೊಂದು ವಿವರಗಳನ್ನು ಕೊಡಲಾಗಿದೆ. ಆದರೆ, ಅದು ಹಾಗೇಕೆ? ಆದರಿಂದೇನು ಪ್ರಯೋಜನ? ಅಷ್ಟೆಲ್ಲ ಇದರಲ್ಲಿದೆಯೇ? ಎಂದರೆ ನಾನು ಬಾಯಿಮುಚ್ಚಿ ಸುಮ್ಮನಾಗಬೇಕಾಗುತ್ತದೆ. ನೀವು ಗದ್ದರಿಸಿದರೆ ನಾನು ಕಿವಿ ಮುಚ್ಚೇನು. ನಿಮ್ಮ ಮುಖ ಸಿಂಡರಿಸಿ ಕಣ್ಣು ಕಿಸಿದರೆ ನಾನು ಕಣ್ಣು ಮುಚ್ಚಲೇ ಬೇಕಾದೀತು.

● ●

ಒರೆಗಲ್ಲು

೧. ಒರತೆಯ ರಾಮಯ್ಯ :

ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ 'ಒರತೆಯ' ಎಂಬ ವಿಶೇಷಣವನ್ನು ಹಚ್ಚಿಕೊಂಡ ಮೂರುಜನ ಶರಣರು ಸಿಕ್ಕುತ್ತಾರೆ.

೧. ಒರತೆಯ ಸೋಮಯ್ಯ[೧]
೨. ಒರತೆಯ ಬೊಮ್ಮಿದೇವಯ್ಯ[೨]
೩. ಒರತೆಯ ಬಪ್ಪಿದೇವ[೩]

ಇವರು ಒರತೆಯ ನೀರಿನಿಂದ ನಿತ್ಯ ಲಿಂಗಮಜ್ಜನಮಾಡಿ ಆರಾಧಿಸುವ ವ್ರತವನ್ನು ಕೈಕೊಂಡಿದ್ದರೆಂದು ಅವರ ಚರಿತ್ರೆಗಳಿಂದ ತಿಳಿದುಬರುತ್ತದೆ. ಇವರಲ್ಲಿ

---

೧ ಕವಿಚರಿತೆಕಾರರು ಇವನಿಗೆ 'ವಾರತೆಯ ಸೋಮಯ್ಯ' ಎಂದು ಕರೆದಿದ್ದಾರೆ. (ಕಕಚ. ೧. ಪು. ೨೮೮) ಅವರು ಇಲ್ಲಿ ಸುದ್ದಿಯನ್ನು ಮುಟ್ಟಿಸುವವ ಎಂಬ ಅರ್ಥವನ್ನು ಕಲ್ಪಿಸಿದಂತಿದೆ. ಆದರೆ ಯಾವ ಹಸ್ತಪ್ರತಿಯಲ್ಲಿಯೂ 'ವಾರತೆಯ' ಎಂದು ಬರೆಯಲಾಗಿಲ್ಲ. ಅದಕ್ಕಾಗಿ 'ಒರತೆಯ' ಎಂಬುದು ಸರಿಯಾದುದು. ಒರತೆಯ ನೀರಿನಿಂದ ಲಿಂಗಮಜ್ಜನಮಾಡುವ ವ್ರತಧಾರಿ ಇವನಾಗಿದ್ದುದರಿಂದ ಈ ವಿಶೇಷಣ ಬಂದುದಾಗಿದೆ. ಪಂಚೀಕರಣದ ಒಂದು ಟೀಕೆಯಲ್ಲಿ 'ಒರತೆ' ಎಂಬ ಪದಕ್ಕೆ ಪಟ್ಟಣ, ಎಂದು ಅರ್ಥ ಕೊಡಲಾಗಿದೆ. (ಒರತೆ ಎಂಬ ಪಟ್ಟಣದಲ್ಲಿರ್ದ ಸೋಮಯ್ಯ ... ಕಅಪೀ. ತಾ ಪ್ರ. ೮೧/೩)

೨ ಇವನ ಉಲ್ಲೇಖ ಸಿದ್ಧನಂಜೇಶನ ಗುರುರಾಜ ಚಾರಿತ್ರದಲ್ಲಿ ಬರುತ್ತದೆ :

"ಹರಭಕ್ತನೊರತೆಯಾ ಬೊಮ್ಮಿದೇವಂ ಲಿಂಗ-
ಕೊರತೆಯುದಕದ ಮಜ್ಜನಕ್ಕೆರೆವ ನೇಮವಿರ-
ಲೊರತೆಯುದಕಂ ದೊರೆಯದಿರೆ ನೇಮ ತಪ್ಪಿತೆಂದಸುವ
ಬಿಡಲಭವನೊಲಿದಂ" (೫-೬೮)

೩ ಉತ್ತರದೇಶದ ಬಸವಲಿಂಗನ ಕಥಾಸಾಗರದಲ್ಲಿ ಇವನ ಕಥೆ ಬರುತ್ತದೆ. ಕಥೆ ೧೧೫-೧೧೬.

ಒರತೆಯ ಸೋಮಯ್ಯ 'ಪಂಚೀಕರಣ ಪದ' ಎಂಬ ಕೃತಿ ರಚಿಸಿ ಪ್ರಸಿದ್ಧನಾಗಿದ್ದಾನೆ. ಉಳಿದ ಇಬ್ಬರು ಯಾವುದೇ ಕೃತಿ ರಚಿಸಿದ ಉಲ್ಲೇಖ ಇದುವರೆಗೆ ತಿಳಿದುಬಂದಿಲ್ಲ. ಈ ಮೂರು ಜನರ ಸಾಲಿಗೆ ಸೇರುವ ಮತ್ತೊಬ್ಬ ಶರಣಕವಿ 'ಒರತೆಯ ರಾಮಯ್ಯ' ಎಂಬವನು ಈಗ ಬೆಳಕಿಗೆ ಬಂದಿದ್ದಾನೆ. ಇತ್ತೀಚೆಗೆ ಕ. ವಿ. ವಿ. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದ ತಾ. ಪ್ರ. ೩೧೪೧ (ಗರಿ ೯೩೮-೧೦೪ ಅ ದವರೆಗೆ) ರಲ್ಲಿ ಚೆನ್ನಬಸವಣ್ಣನವರ ಹಿರಿಯ ಮಂತ್ರಗೋಪ್ಯಕ್ಕೆ[೪] ಅವನು ಬರೆದ ವ್ಯಾಖ್ಯಾನವೊಂದು ದೊರೆತಿದ್ದು ಅದರ ಹಣೆಯಲ್ಲಿ "ಈ ಪದಂಗಳರ್ಥವನು ಎಲ್ಲಾ ಶಿವಶರಣರಿಂಗೆ ತೋಱಲ್ಪಟ್ಟ ಬಿನ್ನಹಂ ಮಾಡಿದ ವೊಱತೆಯ ರಾಮಯ್ಯದೇವಗಳ ಬಿನ್ನಹ" ಎಂದು ಬರೆಯಲಾಗಿದೆ. ವ್ಯಾಖ್ಯಾನದ ಪ್ರಾರಂಭದಲ್ಲಿ ಮೂರು ವೃತ್ತಗಳಿವೆ. ಅವುಗಳಲ್ಲಿ ಶಿವ ಹಾಗೂ ಗುರುಸ್ತುತಿ ಮಾಡಿ, ಮುಂದೆ ಗದ್ಯದಲ್ಲಿ "......ಕಲ್ಯಾಣ ಕೈವಲ್ಯಪುರದ ಅಸಂಖ್ಯಾತ ಮಹಾ ಗಣಂಗಳ ಸನ್ನಿಧಿಯಲ್ಲಿ ಚನ್ನಬಸವೇಶ್ವರನು ರಚಿಸಿದ ವಚನಪದಸಿಚಯದೊಳು ಐಕ್ಯಸ್ಥಳದ ಸರ್ವಾಚಾರ ಸಂಪನ್ನತ್ವದ ಚತುರ್ವಿಧ ಪದಂಗಳಿಗೆ ನಿರತಿಶಯಮೆನಿಸುವ ಪದಂಗಳ ತಾತ್ಪರ್ಯಾರ್ಥವನು ಶೀಲವ್ರತ ಶೀಲಾವತಾರ ಶಿವಧರ್ಮಜ್ಞ ಶಿವಾಗಮಕೋವಿದ ಪರಮ ಶಿವಾಚಾರ್ಯವರಗುರು ಬಸವರಾಜ ಮಹಿಮನ ಚರಣಸರಸಿರುಹಷಟ್ಚರಣ ನಿರುಪಮ ಘನಸಿದ್ಧರಾಮನ ಭೃತ್ಯ ಸಿದ್ಧರಾಮನು ವಚನ ಪ್ರಯೋಗದಿಂ ವಿಸ್ತರಿಸಿದ ವಸ್ತುಕಪ್ರಬಂಧವನು ಸತ್ಯ ಸಾಹಿತ್ಯ ಸಜ್ಜನಶುದ್ಧ ಶಿವಾಚಾರ ಸಂಪನ್ನರಹ ಮರ್ತ್ಯಲೋಕದ ಮಹಾಗಣಂಗಳು ನಿಮ್ಮ ಶಿಶುವಿನ ತೊದಳ್ನುಡಿಗಳಂ ಸುಚಿತ್ತದಿಂ ಅವಧರಿಸೂದು" ಎಂದು ಹೇಳಿಕೊಂಡಿದ್ದಾನೆ. ಕೊನೆಯಲ್ಲಿ ೬ ಕಂದ ಮತ್ತು ಒಂದು ವೃತ್ತವಿದೆ. ಅವುಗಳಲ್ಲಿ ಕೃತಿರಚನೆಗೆ ಕಾರಣ, ಪ್ರೇರಣೆ, ಕೃಪೆ ಕುರಿತ ಸಂಗತಿ ಇವೆ.

ವ್ಯಾಖ್ಯಾನ ಸೂತ್ರ ಹಾಗೂ ವಾಚ್ಯ ಎಂಬ ಎರಡು ಮಜಲುಗಳಲ್ಲಿ ಸಾಗಿ ಬಂದಿದೆ. ಸೂತ್ರದಲ್ಲಿ ಒಂದೊಂದು ನುಡಿಯ ಭಾವವನ್ನು ಸಂಕ್ಷಿಪ್ತವಾಗಿ ಹಿಡಿದಿಟ್ಟಿದ್ದರೆ, ವಾಚ್ಯದಲ್ಲಿ ಅದನ್ನು ಬಿಡಿಸಿ ವಿಸ್ತರಿಸಿ ಹೇಳಲಾಗಿದೆ.

ವ್ಯಾಖ್ಯಾನದ ಆದಿ ಮತ್ತು ಅಂತ್ಯದಲ್ಲಿರುವ ವೃತ್ತ, ಕಂದಗಳು ಕೆಳಗಿನಂತಿವೆ:

ಆದಿ:

ಶ್ರೀ ವಿಶ್ವೇಶ್ವರ ದಿವ್ಯಲಿಂಗ ಘನತೇಜೋರಾಶಿ ಷಟ್ತ್ರಿಂಶತ
ತ್ತ್ವಾವಾಸಸ್ಥ ಸಮಸ್ತ ಕರ್ತೃ ಪರಿಪೂರ್ಣಾನಂದ ಚಿದ್ರೂಪ ಸ-
ದ್ಭಾವಾಭಾವ ವಿದೂರನನ್ವಯನತರ್ಕ್ಯಾದ್ಯಂತ ಶೂನ್ಯಂ ಮಹಾ
ದೇವಾ ಶಾಶ್ವತಮೂರ್ತಿ ನಿನ್ನ ನಿಜವೆನ್ನೊಳ್ನಿಲ್ಕೆಂದೆಂದಿಗಂ. ॥ ೧ ॥

[೪] ಈಗ ಇದಕ್ಕೆ ಬರೆದ ಎರಡು ವ್ಯಾಖ್ಯಾನಗಳು ಸಿಕ್ಕುತ್ತವೆ. ಅವುಗಳಲ್ಲಿ ವ್ಯಾಖ್ಯಾನಕಾರನ ಹೆಸರು ಸೂಚಿಸಿಲ್ಲ. ಸದ್ಯ ದೊರೆತ ವ್ಯಾಖ್ಯಾನ ಮೂರನೆಯದು. ಹಿಂದಿನ ಎರಡಕ್ಕಿಂತ ವ್ಯವಸ್ಥಿತವಾಗಿದೆ.

ಶ್ರೀ ಗುರುವೆ ಪ್ರಸನ್ನಗುರುವೆ ಪರಿಪೂರ್ಣಶಿವಾತ್ಮವಿದ್ಯದ
ಶ್ರೀ ಗುರುವೆ ಮಲತ್ರಯ ವಿಧಾರಣ ಲಿಂಗಕಲಾ ಪ್ರಸಾದದ
ಶ್ರೀ ಗುರುವೆ ಷಡುಸ್ಥಲ ಷಡಂಗ ಸಮಾಹಿತಯೋಗ ಮಾರ್ಗದ
ಶ್ರೀ ಗುರುವೆ ಮಹಾಗುರುವೆ ಮದ್ಗುರುವೆ ಸಲಹೆನ್ನ ಸಂತತಂ || ೨ ||

ಷಡ್ವಿಧ ಬ್ರಹ್ಮವಾದಿಗಳು ಷಡ್ವಿಧದಂಗ ವಿವೇಕ ಚೇತನಾ
ಷಡ್ವಿಧ ಶೀಲತತ್ಪರರು ಷಡ್ವಿಧದರ್ಪಣ ಸಾವಧಾನಿಗಳ್
ಷಡ್ವಿಧ ಹಸ್ತ ಪಂಕಜ ಮಹಾಘನಪೀಡಿತ ಲಿಂಗ ಪೂಜಕ
ರ್ಷಡ್ವಿಧ ನಿತ್ಯನಿರ್ಮಳ ಪ್ರಸಾದವಿದರ್ಸಲಹೆನ್ನನೊಲ್ಮೆಯಿಂ || ೩ ||

ಅಂತ್ಯ :

ಅಂಗಸ್ಥಳ ಲಿಂಗಸ್ಥಳ
ಸಂಗಸುಧಾನುಭವರಸ ಪ್ರವಾಹಾತ್ಮಕರ ಚಿ-
ದಂಗನೆಯ ಮುಖದ ಮುಕುರವ
ನಂ ಗುರು ಚೆನ್ನಬಸವನಾಜ್ಞೆಯಿಂ ವಿರಚಿಸಿದೆಂ || ೧ ||

ಮದ್ಗುರುವೆ ಚೆನ್ನಬಸವಾ
ಚಿದ್ಗುರುವೆ ಚೆನ್ನಬಸವಾ ಅರ್ಪಣದರ್ಪಣ
ಸದ್ಗುರುವೆ ಚೆನ್ನಬಸವ ಜ
ಗದ್ಗುರುವೆ ಚೆನ್ನಬಸವಾ ರಕ್ಷಿಪುದೆನ್ನಂ ||೨||

ಹೃಸ್ಥಲ ಬುದ್ಧಿಸ್ಥಲ ಭಾ
ವಸ್ಥಲ ಜ್ಞಾನಸ್ಥಲದೊಳು ಚೆನ್ನಬಸವ ತಾಂ
ಸ್ವಸ್ಥಿರನಾಗಿರಲಾನಂ
ದಸ್ಥಾನದೊಳಿರ್ದು ಸೂತ್ರವಾಚ್ಯಮನೊರೆದಂ ||೩||

ಇದು ವೀರಶೈವ ಸಿದ್ಧಾಂ
ತದ ಹೃದಯವಿದಂಗಲಿಂಗ ಸಂಬಂಧದ ನಿಜ
ಪದವಿದು ನಿರ್ವಾಣದ ಘನ
ಸದನವಿದನು ಓದಿಕೇಳುವುದು ಜ್ಞಾನವಿದಂ ||೪||

ನಿರ್ಮಲ ಚಿತ್ತರೆಂದೆನಿಪ ವೀರವ್ರತಾಗಮಸಾರಗ್ರಾಹಿಗ
ಳ್ಸರ್ಮವಿಧರ್ವಿಚಾರಪದರಂಗದ ಲಿಂಗದ ಸಂಗ ಸಾಧಕ
ರ್ಧರ್ಮ ಪರಾಯಣರ್ವಿಮಲ ಭಾವಕರುಜ್ವಳ ಷಟ್ಸ್ಥಲಾತ್ಮಕ
ರ್ಕರ್ಮವಿದೂರರೆನ್ನವನು ಪಾಲಿಪುದೀ ಶಿವಭಕ್ತ ಸಂಕುಳಂ ||೫||

ಸಪ್ತವಿಂಶತಿ ಪದಂಗಳ
ವ್ಯಾಪ್ತೀಕರಿಸುವಡೆ ಯೆನ್ನ ಪವಣಲ್ಲಂ ನಿ
ರ್ವ್ಯಾಪ್ತನು ಘನತೃಪ್ತಲೋ
ಲುಪ್ತ ಚೆನ್ನಬಸವನಾಜ್ಞೆಯಿಂ ವಿರಚಿಸಿದೆಂ ||೬||

ಶಿವಮಸ್ತು ಲೋಕವಿತತಿಗೆ
ಶಿವಮಸ್ತು ಶಿವಾಗಮಾರ್ಥಶೀಲರ್ಗೆ ಸದಾ
ಶಿವಮಸ್ತು ಸತ್ಯವಚರಿಗೆ
ಶಿವಮಸ್ತು ಚರಾಚರಾತ್ಮರ್ಗನವರತಂ ||೭||

೨. ಚನ್ನಬಸವೇಶ್ವರರ "ಶೂನ್ಯಮಂತ್ರಗೋಪ್ಯ" :

ಚೆನ್ನಬಸವಣ್ಣನವರ ಸಾಹಿತ್ಯಸೃಷ್ಟಿ ವೈವಿಧ್ಯಮಯವಾಗಿದೆ. ವಚನ, ಸ್ವರವಚನ (ಹಾಡು), ಕಾಲಜ್ಞಾನವಚನ, ಕರಣ ಹಸಿಗೆ. ಮಿಶ್ರಾರ್ಪಣ, ಮಂತ್ರಗೋಪ್ಯ, ಸಕೀಲಗಳು–ಹೀಗೆ ಅದು ವಿವಿಧ ಮುಖವಾಗಿ ಬೆಳೆದುನಿಂತಿದೆ; ಈಗಾಗಲೇ ಬೆಳಕೂ ಕಂಡಿದೆ. ಅವರು ರಚಿಸಿದ ಮಂತ್ರಗೋಪ್ಯ ಎರಡು. ಒಂದು ಹಿರಿಯ ಮಂತ್ರಗೋಪ್ಯ[೧], ಇನ್ನೊಂದು ಪದಮಂತ್ರಗೋಪ್ಯ[೨] ಅಥವಾ ಸ್ಥಲ ಮಂತ್ರಗೋಪ್ಯ. ಹಿರಿಯಮಂತ್ರಗೋಪ್ಯ ಅಖಂಡವಾಗಿ ೨೭ ನುಡಿಗಳಲ್ಲಿದ್ದರೆ ಪದಮಂತ್ರಗೋಪ್ಯ ಖಂಡ ಖಂಡವಾಗಿ ೭ ಹಾಡು, ಒಂದೊಂದು ಹಾಡಿನಲ್ಲಿ ಐದೈದು ನುಡಿಗಳಿಂದ ಕೂಡಿದೆ. ಪ್ರತಿ ಹಾಡಿಗೂ ಸ್ಥಲನಿರ್ದೇಶವಿದೆ. ಇವುಗಳ ಸಾಲಿಗೆ ಸೇರಲು ಈಗ ಮತ್ತೊಂದು ಮಂತ್ರಗೋಪ್ಯ ಹೊಸದಾಗಿ ದೊರೆತಿದೆ. ಅದು 'ಶೂನ್ಯಮಂತ್ರ

---

೧. ಏಕ ಕರ್ತೃವಿನ ಒಂದೇ ಹೆಸರಿನ ಎರಡು ಕೃತಿಗಳನ್ನು ಬೇರ್ಪಡಿಸಿ ಹೇಳಲು ಅಲ್ಲದೆ, ಇನ್ನೊಂದು ಮಂತ್ರಗೋಪ್ಯದಿಂದ ಇದು ದೊಡ್ಡದಾದುದರಿಂದ 'ಹಿರಿಯ ಮಂತ್ರಗೋಪ್ಯ' ಎಂಬ ಹೆಸರನ್ನು ಇದಕ್ಕೆ ಕೊಡಲಾಗಿದೆ.

೨. ಇದರಲ್ಲಿ ೭ ಪದ (ಹಾಡು)ಗಳಿರುವುದರಿಂದ "ಪದಮಂತ್ರಗೋಪ್ಯ"ವೆಂದೂ ಒಂದೊಂದು ಪದವೂ ಸ್ಥಲಗಳಿಂದ ಕೂಡಿರುವುದರಿಂದ "ಸ್ಥಲಮಂತ್ರಗೋಪ್ಯ" ವೆಂದೂ ಕರೆಯಲಾಗುತ್ತದೆ. (ನೋಡಿ ಶಿವದಾಸ ಗೀತಾಂಜಲಿ ಪು.೨೦೯–೨೧೮ ಸಂ. ಡಾ. ಎಲ್. ಬಸವರಾಜು) ಇದನ್ನು ಶ್ರೀ. ಅ. ಕ. ಪುರಾಣಿಕ ಅವರು ಅಖಂಡವಾಗಿ ಪ್ರಕಟಿಸಿದ್ದಾರೆ. (ಚೆನ್ನಬಸವ ಸಾಹಿತ್ಯ. ಪು. ೪೮–೯೪, ೧೯೫೬) ಡಾ. ಆರ್. ಸಿ. ಹಿರೇಮಠ ಅವರು ಸಂಪಾದಿಸಿದ ಚೆನ್ನಬಸವಣ್ಣನವರ ವಚನಗಳು ಕೃತಿಯಲ್ಲಿಯೂ ಇದು ಅಖಂಡವಾಗಿ ಪ್ರಕಟವಾಗಿದೆ. ಆದರೆ ಒಂದು ಹಾಡು ಮುಗಿದ ನಂತರ "ಸೂತ್ರ" ಎಂದಿದ್ದು ಅದರಲ್ಲಿ ಸ್ಥಲ ನಿರ್ದೇಶವಿದೆ. ಪ್ರತ್ಯೇಕವಾಗಿ ಸೂಚಿಸಲಾಗಿಲ್ಲ. (ಚೆನ್ನಬಸವಣ್ಣನವರ ವಚನಗಳು ಪು. ೬೮೯–೯೫, ೧೯೬೧)

ಗೋಪ್ಯ'[2]. ಕ. ವಿ. ವಿ. ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರದ ತಾ. ಪ್ರ. ನಂ. ೭೦೩ ರಲ್ಲಿ ದೊರೆತ ಈ ಕಿರುಕೃತಿ ೭ ವಾರ್ಧಕಗಳಲ್ಲಿದ್ದು ಶೂನ್ಯತತ್ತ್ವವನ್ನು ಪ್ರತಿಪಾದಿಸುತ್ತದೆ. ರಾಗ ನಿರ್ದೇಶದಿಂದ ಕೂಡಿದ ಈ ಹಾಡನ್ನು ಚಿಕ್ಕವೀರಣ್ಣೊಡೆಯರು ತಮ್ಮ ಪರಮಮೂಲಜ್ಞಾನಷಟ್‌ಸ್ಥಲ[3] ಕೃತಿಯಲ್ಲಿ ಸೇರಿಸಿಕೊಂಡಿದ್ದಾರೆ. ಡಾ. ಆರ್. ಸಿ. ಹಿರೇಮಠ ಅವರು ಇದನ್ನು 'ಚೆನ್ನಬಸವಣ್ಣನವರ ವಚನಗಳು' ಕೃತಿಯಲ್ಲಿ ಸಂಗ್ರಹಿಸಿದ್ದಾರೆ. ಆದರೆ ಅಲ್ಲಿ 'ಶೂನ್ಯಮಂತ್ರಗೋಪ್ಯ' ಎಂಬ ತಲೆಬರಹವನ್ನು ಕೊಟ್ಟಿಲ್ಲ. ಈಗ ದೊರೆತ ಪ್ರತಿಯ ಆದಿಯಲ್ಲಿ 'ಚೆನ್ನಬಸವೇಶ್ವರರು ನಿರೂಪಿಸಿದ ಶೂನ್ಯ ಮಂತ್ರಗೋಪ್ಯ' ಎಂದು ಬರೆಯಲಾಗಿದೆ. ಇದರಿಂದ ೭ ವಾರ್ಧಕಗಳಿರುವ ಈ ಗೀತಕ್ಕೆ 'ಶೂನ್ಯಮಂತ್ರಗೋಪ್ಯ' ಎಂಬ ಹೆಸರು ಇತ್ತೆಂಬುದು ಸ್ಪಷ್ಟವಾಗುತ್ತದೆ. ಅದು ಹೀಗಿದೆ :

ಶೂನ್ಯ ಮಂತ್ರಗೋಪ್ಯ

ರಾಗ : ಭೂಪಾಳಿ

ಬೆಳಗಾಯಿತೇಳಿ ಸಾಸಿರ ದಳದ[4]ಕಮಲ[4]ದೊಳು
ಬೆಳಗು ಪಸರಿಸಿ ಹೊಳೆದು ಥಳಥಳಿಸು[5]ತಾ ಪ್ರಭೆಯು[6]
ಬೆಳಗ ಬೀಱುತ ಪರಂಜ್ಯೋತಿಯುದಯಿಸೆ ಮಹಾ ಬೆಳಗಿನೊಳು
ಬೆಳಗಾದುದು ‖ ಪಲ್ಲ ‖

ಮೇರು [7]ಗಿರಿ[7] [8]ಮಂದಿರ[8]ವನೋರಂತೆ ಬಲಗೊಂಡು
ಸೂ[9]ರಿಯ[9]ನು [10]ತಿರುಗು[10]ತಿಹನಾತಂಗೆಯದು ಸಹಜ
ಧಾರುಣಿಯ ಮನುಜರಾತನ ಕಂಡುದೇ ಉದಯ ಕಾಣ[11]ದುದೆ ಅ[11]ಸ್ತಮಯವು
ಮೇರು[12] ಮಱೆಯಾಗಿ ತಿರುಗಲು ಸೂರ್ಯ ಜಗಕೆಲ್ಲ
ಕಾರಿರುಳು ಕವಿಯು[13]ಕಡು[13] [14]ನಿದಿರೆ[14]ಯೊಳು ಮೈಮರೆದು

---

೩. ಇದನ್ನು ಕ. ವಿ. ವಿ. ಯಿಂದ ಡಾ. ಎಂ. ಎಸ್. ಸುಂಕಾಪುರ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. (ಪು. ೩೯೭, ೯೮, ೯೯; ೧೯೭೫) ಚೆನ್ನಬಸವಣ್ಣನವರ ವಚನಗಳು : ಪು. ೭೫೨-೫೩.

೪. ಮಧ್ಯ (ಮೂ). ೫. ಶಿ (ಮೂ) ೬. ಯು (ಮೂ) ೭. × (ಮೂ)

೮. ಪರ್ವತ (ಚಬವ) ೯. ರ್ಯ (ಮೂ) ೧೦. ಸುತ್ತು (ಚಬವ).

೧೧. ದಿಹುದ (ಚಬವ). ೧೨. + ಮಂದಿರವನು (ಮೂ). ೧೩. × (ಚಬವ).

೧೪. ನಿದ್ರೆ (ಚಬವ).

ಘೋರ[೧೫]ಗೊಳಿಸುವ ತ್ರಿವಿಧ[೧೬]ವಸ್ಥೆ[೧೬]ಗಳನೊಳಕೊಂಡು ಮಱದೊಱಗಿದ[೧೭]
ರೆಲ್ಲರು ॥ ೧ ॥

ಜಗಕೆ ಜಾಗರವಾಗೆ ಹಗಲಾಗಿ ತೋಱಿತ್ತು
ಜಗಕೆ ಜಾಗರವಡಗೆ ಇರುಳಾಗಿ ತೋಱಿತ್ತು
ಜಗವು ಹಗಲಿರುಳಿಂದ ಸತ್ತು ಹುಟ್ಟುತ್ತಿಹುದು ಜಾಗ್ರಸ್ವಪ್ನಂಗಳಿಂದ[೧೮] ।
ಜಗವು ಅನುದಿನ ಕಾಲ ಸಂವತ್ಸರಂಗಳ ನಡೆಸಿ
ಯುಗ ಜುಗಂಗಳ[೧೯]ನೆಣಿಸಿ[೧೯] ಅಳಿವ ಕೌಳಗಗಳಾಗಿ
ಹಗಲು ರವಿ ಇರುಳು ಶಶಿ ತೊಳಲಿ[೨೦]ಬಹರದಱಿಂದ[೨೦] ಹಗಲಿರುಳು ಅವರಿಗಿಲ್ಲ
॥ ೨ ॥

ಅಡಿಯ ಮಡದಿಂ[೨೧]ದೊತ್ತಿ[೨೧] ದೃಢವಿಡಿದು ಬಂಧದಿಂ-
ದಡರಿಯನಲನ ಕುಡಿಯ ತೇಜಗಳು ಪ್ರಜ್ವಲಿಸಿ
ಅಡಿಯಿಡುವ[೨೨] ಸೂರ್ಯ[೨೨]ನನು ನಾಭಿಮಂಡಲದಿಂದ ಚಂದ್ರಮಂಡಲವನಡರಿ ।
ಎಡಬಲನ ತಡೆದು ನಡುಮಧ್ಯ ಮಾರ್ಗದಿ ನಿಂದು
ಸಡಗರಿಪ ಮನ ಪವನ ರವಿ ಶಶಿಯು ಶಿಖಿ ಬಿಂದು
ಒಡಗೂಡಿ ಒಂದಾಗಿ ಸಮರಸ ಸಮಾಧಿಯೊಳು ಎಡೆವಿಡದೆ ನೋಡುತಿರಲು ॥ ೩ ॥

ಅಷ್ಟದಳದೆಸಳ ತುದಿ[೨೩]ಯಲಿ[೨೩] ನಡೆವ ಗತಿ ಜಾಗ್ರ
ಮೆಟ್ಟಿ ಕರ್ಣಿಕೆಗಾಗಿ ಇಳಿವ ಗತಿಯೋ[೨೪] ಸ್ವಪ್ನ
ನಟ್ಟನಡುಮಧ್ಯದಲಿ [೨೫]ಗತಿಯ[೨೫] ನಡಗಿಸೆ ಹೊಸ ಸುಷುಪ್ತಿಯೆಂದೆನಿಸಿತು ।
ಮುಟ್ಟಿ ಜಾಗ್ರಸ್ವಪ್ನ ಸುಷುಪ್ತಿಗಳ ಮೀಱಿ

---

೧೫. ರಿ (ಮೂ) ೧೬. ಹಸ್ತ (ಮೂ). ೧೭. + ವ (ಮೂ). ೧೮. + ಲಿ (ಚಬವ).
೧೯. ನರಿದು (ಮೂ). ೨೦. ಯದಱಿಂ (ಚಬವ). ೨೧. ದೊಳು ಒ (ಚಬವ).
೨೨. ಸೂರಿಯ (ಚಬವ). ೨೩. ಯಂ (ಮೂ). ೨೪. ಯ (ಮೂ).
೨೫. ಶಶಿ (ಮೂ)

ತುಟ್ಟತುದಿ ಪದಕ್ಕೈದು [16]ತುರಿಯಾವಸ್ಥೆಯೊಳು[16]
ನೆಟ್ಟ[17]ನೆಯ[17]ಧೋಮುಖಗಳೆಲ್ಲ ಊರ್ಧ್ವಮುಖವಾ[18]ಗೆ ಆರೈದು ನೋಡುತಿರಲು ॥೪॥

ಎಪ್ಪತ್ತು ಎರಡು ಸಾವಿರ ನಾಡಿಯೆಲ್ಲಕ್ಕೆ[19]
ಒಪ್ಪುತಿಹ ಸುಸುಮ್ನನಾಡಿಮುಖ ತಾನಾಗಿ
ತಪ್ಪದದು ಬ್ರಹ್ಮರಂಧ್ರಕೆ ನಡೆವ ಪಥವಾಗಿ ಪ್ರಾಣಾಪಾನೋರ್ಧ್ವದಿಂದ
ಇಪ್ಪುದದರ ಸ್ಥಿತಿಯು ಓಂಕಾರದ ಧ್ವನಿಯ-
ನಪ್ಪಿ ಕಿವಿಗಳು ಕೇಳೆ ಲಾಲಿಸುತ ಬಂಧದಿಂ
ದೊಪ್ಪಿದ ಮಹಾಘನದ ಬೆಳಗಿನೊಳು ಬೆಳಗಾಗಿ ಜ್ಯೋತಿರ್ಲಿಂಗವ ನೋಡುತ ॥೫॥

ಮನದ ಸಂಚಲವಳಿದು ಮರುತನುಲ್ಲಾಸದಿಂ-
ದಿನನ ಕಳೆ[20] ಚಂದ್ರಕಳೆಗಳು ಕೂಡಿ ಒಂದಾಗಿ
ಅನಲ ಕಳೆಯಮೃತಕಳೆಗಳನುಂಡು ತೃಪ್ತಿಯಲಿ ಪರಿಣಾಮ ತಲೆದೋರಿತು.
ಅ[21]ನಿಮಿಷದ ದೃಷ್ಟಿಯಾನಂದದಿಂ ನೋಡುತ್ತ
ಅನುಭಾವದಿಂದರಿವ ಸಂಧಾನಮಾಡುತ್ತ
ಮನಕೆ ಮಂಗಳವಾಗಿ[22] ತೋರುತ್ತಿರೆ ಪರತತ್ವ ಪರಮಪ್ರಕಾಶದಿಂದ ॥೬॥

ನಾದವೆ ಶಬ್ದ ನಿಶ್ಶಬ್ದವೇ[23]ಬ್ರಹ್ಮಮಯ[23]
ನಾ[24]ದ[24]ದೊಳಗಣ ಸುನಾದಧ್ವನಿಯು ಓಂಕಾರ
ನಾದವಡಗಲು ಪರಂಜ್ಯೋತಿ ಉದಯಿಸಿ ಮಹಾಘನ ಚಿದಾನಂದದಿಂದ
ನಾದ ಬಿಂದು ಕಳಾತೀತ[25]ದಲ್ಲಿ[25] ನೈಮಿತ್ತಿದ[26]
ಅನಾದಿಘನಗುರು ಕೂಡಲಚೆನ್ನಸಂಗನೊಳು
ಭೇದವಳಿಯದೆ ಬೆರಸಿ ಬೆಳಗಿನೊಳು ಬೆಳಗಾಗಿ ಬೆಳಗು ಪರಿಪೂರ್ಣವಾಯ್ತು ॥೭॥

—ವೀರಣ್ಣ ರಾಜೂರ

೧೬. ತೂರ್ಯಾವಸ್ಥಾಸದಲ್ಲಿ (ಚಬವ) ೧೭. ಸ (ಚಬವ) ೧೮ ಗಳಾ (ಮೂ).
೧೯ ವಕೆ (ಚಬವ), ೨೦ + ಗಳು (ಮೂ) ೨೧ ಸು (ಮೂ) ೨೨ + ಬೆಳಗು (ಮೂ)
೨೩. ಸಾದಸಾನಾ (ಮೂ) ೨೪ ದ (ಮೂ) ೨೫ ನೊಳು (ಚಬವ) ೨೬ ದು (ಮೂ)

ಸಂಕ್ಷೇಪಗಳು : ಮೂ — ಮೂಲಪ್ರತಿ; ಚಬವ—ಚೆನ್ನಬಸವಣ್ಣನವರ ವಚನಗಳು. ಈ ಕೃತಿ ಈಗಾಗಲೇ ಪ್ರಕಟವಾಗಿದ್ದರೂ ಹೊಸದಾಗಿ ದೊರೆತ ಪ್ರತಿಯಲ್ಲಿ ಪಾಠಾಂತರಗಳಿರುವುದರಿಂದ ಇಲ್ಲಿ ಮತ್ತೊಮ್ಮೆ ಪರಿಷ್ಕರಿಸಿ ಕೊಡಲಾಗಿದೆ.

೩. ಕುಮಾರ ವಾಲ್ಮೀಕಿಯ ಒಂದು ಪದ್ಯದ ಬಗೆತ :

೧. ಕುಮಾರ ವಾಲ್ಮೀಕಿಯೆಂಬ ಬಿರುದಿನ ತೊರವೆಯ ನರಹರಿ ದೇವರ ಭಕ್ತನಾದ ಕವಿವರ್ಯನು ಕನ್ನಡದಲ್ಲಿ ರಚಿಸಿದ ರಾಮಾಯಣ ಕೃತಿ ಹಲವೆಡೆ ಅಚ್ಚಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಶ್ರೀ ಬಿ. ಸಣ್ಣಯ್ಯನವರ ಸಂಪಾದಕತ್ವದಲ್ಲಿ ಪ್ರಕಟವಾದ ತೊರವೆ ರಾಮಾಯಣವು ಹಲವಾರು ಹಸ್ತಪ್ರತಿಗಳ ಆಧಾರದಿಂದ (ಅವುಗಳಲ್ಲಿರುವ ಪಾಠಾಂತರದ ಟಿಪ್ಪಣಿ ಕೂಡಾ) ಪ್ರಕಟವಾಗಿದ್ದುದು ವಾಚಕರಿಗೆ ಸುಪರಿಚಿತವೇ ಇದೆ. ಆ ಮುದ್ರಣದ ಪ್ರತಿಯಲ್ಲೂ ಸಂಪಾದಕರು ಯಥಾಪ್ರತಿ (ತಾಳೆಗರಿಯಲ್ಲಿದ್ದಂತೆ) ಅಚ್ಚು ಮಾಡಿದ್ದಾರಲ್ಲದೆ. ಹಸ್ತಪ್ರತಿಗಳ ಅಪೂರ್ಣತೆಯತ್ತ ಗಮನಿಸಿಲ್ಲೆಂದು ತೋರುತ್ತದೆ. ಉದಾ :

ಕುಮಾರವಾಲ್ಮೀಕಿ ಹಾಗೂ ಕುಮಾರವ್ಯಾಸ ಇಬ್ಬರೂ 'ವರ್ಣಕ' ಹಾಗೂ 'ವಸ್ತುಕ'ಗಳನ್ನು (ಎರಡೆರಡು ಕೃತಿಗಳನ್ನು) ಬರೆದುದೆಂದು ಹೇಳಲಿರುವ ಪದ್ಯವು ಅಲ್ಲಿ ಅಚ್ಚಾದುದು.

'ಸರಸ ವರ್ಣಕ ಕವಿ ಗಳೊಳುಭಾ।

ಸುರ ಕುಮಾರವ್ಯಾಸನೊಬ್ಬನು।
ಪರಿಕಿಪೊಡೆ ತಾನೊಬ್ಬ ಮುಗುಳೆರಡನೆಯ ವರ್ಣಕಕೆ॥

ವರಕುಮಾರವ್ಯಾಸನೊಬ್ಬನು।
ಎರಡನೆಯ ತಾನೊಬ್ಬ ಮಿಕ್ಕಿನ
ಬರಡು ಕವಿಗಳ ಲೆಕ್ಕಿಸುವನೆ ಕುಮಾರ ವಾಲ್ಮೀಕಿ॥

(ಯುದ್ಧಕಾಂಡ ೫೫–೬೬)

ಈ ಪದ್ಯದಲ್ಲಿ 'ಸರಸವರ್ಣಕ ಕವಿ'ಯೆಂದೊಮ್ಮೆ ಹೇಳಿದೆ, ಅನಂತರವೂ 'ಮುಗುಳೆರಡನೆಯ ವರ್ಣಕಕೆ' ಎಂದರೆ, ಇಕ್ಕಡೆಯ 'ವರ್ಣಕ'ವೆಂಬುದಕ್ಕೆ ಅರ್ಥ ವೇನು? ನನಗೆ ದೊರೆತ ಒಂದು ಹಸ್ತಪ್ರತಿಯಲ್ಲಿ ಈಯೆಡೆಗೆ ಸಾರ್ಥಕವಾಗುವಂತೆ ಮಾರ್ಪಾಡು ಕಾಣುತ್ತದೆ : 'ಮುಗುಳೆರಡನೆಯ (ಮುಗುಳೆಣಿಸುವರೆ) ವಸ್ತುಕಕೆ.'

"ಸರಸವರ್ಣಕ ಕವಿಗಳೊಳು ವರಕುಮಾರವ್ಯಾಸನೊಬ್ಬನು ಪರಿಕಿಪೊಡೆ ತಾನೊಬ್ಬ" ನೆಂಬಂತೆ, "ಮುಗುಳೆರಡನೆಯ ವಸ್ತುಕಕೆ ವರಕುಮಾರವ್ಯಾಸನೊಬ್ಬನು ಎರಡನೆಯ ತಾನೊಬ್ಬ"ನೆಂದು ಹೇಳುವ ಈ ಪದ್ಯದಿಂದ, ಕುಮಾರವ್ಯಾಸನೂ 'ವರ್ಣಕ' ಹಾಗೂ 'ವಸ್ತುಕ'ಗಳೆಂಬೆರಡು ಕೃತಿಗಳನ್ನು ರಚಿಸಿದ್ದಾನೆ; ಕುಮಾರ ವಾಲ್ಮೀಕಿಯೂ ಹಾಗೆ 'ವರ್ಣಕ' ಮತ್ತು 'ವಸ್ತುಕ'ಗಳೆಂಬೆರಡು ಕೃತಿಗಳನ್ನು ರಚಿಸಿದ್ದಾನೆಂದು ಅರ್ಥ ವಿದಿತ!

೨. ಹಾಗಾದರೆ, ಕುಮಾರವ್ಯಾಸ ರಚಿಸಿದ 'ವರ್ಣಕ'ಯಾವುದು? ಅವನ 'ವಸ್ತುಕ'ಕೃತಿಯಾವುದೆಂದು ಜಿಜ್ಞಾಸೆಯುಂಟಾಗುತ್ತದೆ. ಅಂತೆಯೇ, ಕುಮಾರ ವಾಲ್ಮೀಕಿಯ 'ವರ್ಣಕ' ಗ್ರಂಥವಾವುದು? ಆತನ 'ವಸ್ತುಕ'ವಾವುದೆಂದೂ ಪ್ರಶ್ನೆಯುಂಟಾಗುತ್ತದೆ. ಈ ಬಗ್ಗೆ ಒಂದು ಪರಿಹಾರ ಹೀಗೆನ್ನಬಹುದು :

ಕುಮಾರವ್ಯಾಸನು 'ಐರಾವತ' ವೆಂಬ ಚಿಕ್ಕ ಕಾವ್ಯವನ್ನೂ 'ಕೃಷ್ಣಕಥಾಮಂಜರಿ (ಗದಗಿನ ಭಾರತ)' ವೆಂಬ ದೊಡ್ಡ ಕಾವ್ಯವನ್ನೂ ಬರೆದಿರುವನೆಂಬುದಾಗಿ ತಿಳಿಯುತ್ತದೆ. 'ಐರಾವತ'ವು ಕೇವಲ ಒಂದು ವಸ್ತುಗತವಾಗಿರುವುದರಿಂದ 'ವಸ್ತುಕ' ವಿರಲೂಬಹುದು: 'ಕನ್ನಡ ಭಾರತ (ಗದಗಿನ ಭಾರತ)' ವರ್ಣನ ಪ್ರಧಾನವಾಗಿ 'ವರ್ಣಕ' ವಿರಬಹುದು. ಹಾಗೆಯೇ' ಕುಮಾರವಾಲ್ಮೀಕಿ (ತೊರವೆಯ ನರಹರಿ) 'ಮೈರಾವಣ ಕಾಳಗ' ವೆಂಬ ಚಿಕ್ಕಕಾವ್ಯವನ್ನೂ, 'ಕನ್ನಡ ರಾಮಾಯಣ (ತೊರವೆಯ ರಾಮಾಯಣ') ವೆಂಬ ದೊಡ್ಡ ಕಾವ್ಯವನ್ನೂ ಬರೆದಿರುವ ನೆಂದು ತಿಳಿಯಬರುತ್ತದೆ. 'ಮೈರಾವಣ ಕಾಳಗ' ಕೇವಲ ಒಂದು ವಸ್ತುಗತವಿರು ವುದರಿಂದ 'ವಸ್ತುಕ' ವಿರಬೇಕು: 'ಕನ್ನಡ ರಾಮಾಯಣ (ತೊರವೆ ರಾಮಾಯಣ)' 'ವರ್ಣನ' ಪ್ರಧಾನವಿರುವುದರಿಂದ 'ವರ್ಣಕ' ವಿರಬೇಕು ಎನ್ನುವುದು ಸೂಕ್ತ ವಾದೀತು! ಪಂಪಮಹಾಕವಿಯಿಂದ ತೊಡಗಿ ಕುಮಾರವಾಲ್ಮೀಕಿಯ ವರೆಗಿನ ಹಲವಾರು ಕವಿಗಳು ಈಯೆರಡು ತರದ ಕೃತಿಗಳನ್ನೂ ರಚಿಸಿದ್ದಾರೆಂದು ಅವರ ವಾಕ್ಯಗಳಿಂದಲೇ ವಿದಿತ. "ವರೋ ವಸ್ತುಕವಿಃ, ವರ್ಣಕವಿಃ ಮಧ್ಯಮ ಉಚ್ಯತೇ' ಎಂದು ಶಾಙ್ರ್ಗದೇವನ 'ಸಂಗೀತ ರತ್ನಾಕರ'ದಲ್ಲಿ ಇದರ ವಿಲಕ್ಷಣತೆ ಹಾಗೂ ಅಂತರ ಗಳು ಹೇಳಲಾಗಿವೆ. ಕುಮಾರವ್ಯಾಸನ ಹಾಗೂ ಕುಮಾರವಾಲ್ಮೀಕಿಯ ಅವೆರಡು ತರದ ಕೃತಿಗಳೂ ಅಚ್ಚಾಗಿವೆ. 'ಐರಾವತ'ದ ಕರ್ತೃವಿನ ಬಗೆಗೆ ಹಲವರು ವಿವಾದಿ ಸಿದ್ದರೂ, ಆ ಕೃತಿಯ ರಚನಾವೈಖರಿ ಮತ್ತು ಗದಗಿನ ಭಾರತದ ವರ್ಣನೆಗಳ ಸಾಮ್ಯಗಳಿಂದಾಗಿ ಅದು ಕುಮಾರವ್ಯಾಸಕೃತವೆಂದು ಒಪ್ಪಿತವಾಗಿದೆ. ಕುಮಾರ ವ್ಯಾಸನು ಬರೆದವು ೨ ಕೃತಿಗಳಿವೆ! 'ಮೈರಾವಣ ಕಾಳಗ'ದಲ್ಲಿ ತೊರವೆಯ ನರಹರಿ ಕವಿ ಬರೆದನೆಂದಿದೆ: 'ತೊರವೆಯ ರಘುನಾಥ' ನೆಂದಿದೆ, ಆತನ ಬಿರುದು ಹೇಳಿಲ್ಲ. ಆ ಮೇರೆಗೆ ಅದು ಕುಮಾರ ವಾಲ್ಮೀಕಿಯದಲ್ಲೆಂದು ಒಂದು ವಾದವಿದೆ. ಈ ಹೇಳಿಕೆಗಳು ತೀರಾ ನಿರ್ಬಲಗಳು. ಮೊದಲಿನ ಕೃತಿಯಲ್ಲಿ ತನ್ನ ನಿಜನಾಮವನ್ನೇ ಕವಿ ಹೇಳಿರ ಬೇಕು. ತೊರವೆಯಲ್ಲಿ 'ನರಹರಿ'ಯಿರುವುದಲ್ಲದೆ 'ರಘುನಾಥ' ನಿಲ್ಲೆಂಬುದು ಮೇಲು ನೋಟಕ್ಕೆ ಅಹುದೆನ್ನಿಸಿದರೂ ಸಾಧುವಾಗಿಲ್ಲ. ದೇವತಾನಾಮಗಳು ಹಲವಾರು ಹೇಳಿದರೂ ಒಬ್ಬನಿಗೆ ಸಲ್ಲುವಂತಿದೆ(ದೇವತಾಕಾರಗಳು ಪ್ರತ್ಯೇಕವಿರುವುದೂ ಸಹಜ!) ಈ ಕವಿಯ ಬಿರುದುಗಳನ್ನು ಈ ಮೊದಲ ಕೃತಿಯಲ್ಲಿ ಹೇಳದಿರುವುದು ಅಸಂಭಾವ್ಯವಲ್ಲ! ಅದು ಕೆಲವುಪದ್ಯಗಳಲ್ಲಿ ಕನ್ನಡರಾಮಾಯಣಕ್ಕೆ ಹೋಲುತ್ತಿದ್ದರೆ, ಅವೆರಡೂ ಒಬ್ಬನ

ವೆಂದೆನ್ನಲು ಆಧಾರವೂ ಆಗಿದೆ. ಆದುದರಿಂದ, ಇವೆರಡು ಕೃತಿಗಳೂ ಒಬ್ಬನೇ ಕವಿಯದೆನ್ನಲು ಅಭ್ಯಂತರವಿಲ್ಲ! ಕುಮಾರವಾಲ್ಮೀಕಿ ಬರೆದವು ೨ ಕೃತಿಗಳೆನ್ನಲಡ್ಡಿಯಿಲ್ಲ! ಈ ಮೇಲಿನ ಪ್ರಕ್ಷಿಪ್ತವಿಲ್ಲ. ಹಾಗಾಗಿ ಈ ಮೇಲಿನ ಆಕ್ಷೇಪ ಸ್ವೀಕಾರಾರ್ಹವಾಗಿದೆ.

೨. ಕುಮಾರವ್ಯಾಸನ ಕಾಲವಿಚಾರಕ್ಕೂ, ಕುಮಾರವಾಲ್ಮೀಕಿಯ ಕಾಲವಿಚಾರಕ್ಕೂ ಈ ಪದ್ಯಾರ್ಥ (ಈ ಮೇಲಿನಂತೆ ಆದರೆ) ಆಧಾರವಾಗುತ್ತದೆ:

ಕುಮಾರವಾಲ್ಮೀಕಿ 'ಮೈರಾವಣ ಕಾಳಗ'ದಲ್ಲಿ 'ವಿದ್ಯಾಶಂಕರ'ರನ್ನು ಹೊಗಳಿದ್ದಾನೆ (೧೬-೧೪ ಶ). ಅಂದಾಗ, ಕುಮಾರವಾಲ್ಮೀಕಿ ೧೪ನೆಯ ಶತಕದ ಉತ್ತರಾರ್ಧದಲ್ಲಿರಬೇಕೆನ್ನಬಹುದು. ಹಾಗೆ ಕುಮಾರವಾಲ್ಮೀಕಿಯಿಂದ ಈ ಮೇಲಿನಂತೆ ಸ್ತುತನಾದ ಕುಮಾರವ್ಯಾಸನು ಹದಿಮೂರನೆಯ ಶತಕದ ಉತ್ತರಾರ್ಧದಲ್ಲಿರಬಹುದೆಂದು ತಿಳಿಯಬಹುದು.

ಕುಮಾರವ್ಯಾಸನ ಭಾರತದ ಶಾಬ್ದಿಕ ವಿಚಾರದಿಂದಾಗಿ ಅವನ ಕಾಲಮಾನ ಇ. ೧೩೪೦-೫ ರೊಳಗಿದ್ದಿರಬೇಕೆಂದು ಶ್ರೀ ಎಂ. ಗೋವಿಂದ ಪೈ ಬರೆದಿದ್ದಾರೆ. “ಈತನ ಭಾರತದಲ್ಲಿರುವ ಮರಾಠಿ, ಅರಬಿ, ಪಾರ್ಸಿ ಶಬ್ದಗಳ ಆಯಾತವು ಗದಗ ಸೀಮೆಯಲ್ಲಿ ಹೆಚ್ಚಿ, ಸಾಕಷ್ಟು ರೂಢವಾಗಲು ನೂರರ ಮೇಲೆ ವರ್ಷಗಳು ಸಂದಿರಬೇಕೆಂದು” ಡಾ. ರಂ. ಶ್ರೀ. ಮುಗಳಿಯವರು (ತತ್ಪರಿಕಾಲಮಾನ ೧೪ ನೆಯ ಶತಕವೆಂದು) ಹೇಳಿದ್ದಾರೆ. ಇವೆರಡು ‘ಬೇಕು’ಗಳ ಮಧ್ಯವರ್ತಿ ಕಾಲವೇ (ಇ. ೧೪೫೦-೧೫೦೦) ಕುಮಾರವ್ಯಾಸನದಿರಲೂ ಸಾಧ್ಯವಿದೆ!

೩. ‘ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ’ (ಬೆಂಗಳೂರು ವಿಶ್ವವಿದ್ಯಾಲಯ)ಯಲ್ಲಿ, ಕುಮಾರವ್ಯಾಸನ ಇಬ್ಬಗೆಯ ಕೃತಿಯ ವಿಚಾರವೇ ಇಲ್ಲ; ಕುಮಾರವಾಲ್ಮೀಕಿ ‘ಮೈರಾವಣ ಕಾಳಗ’ ಬರೆದಿಲ್ಲವೆಂದಿದೆ. ಹಾಗಾದರೆ, ಈ ಮೊದಲು ಹೇಳಿದ ಪದ್ಯದಲ್ಲಿ, ಅವನಿಬ್ಬರು ‘ವರ್ಣಕ’ ಮತ್ತು ‘ವಸ್ತುಕ’ಗಳನ್ನು ಬರೆವರೆಂಬುದಕ್ಕೆ ವಿವರವೇನು? ‘ಸಮಗ್ರ ಕನ್ನಡ ಸಾಹಿತ್ಯಚರಿತ್ರೆ’ಯಲ್ಲಿ ಕವಿಯ ತತ್ಕೃತಿಗಳ ಸಮಗ್ರ ದರ್ಶನವಾಗಲೇ ಬೇಕಲ್ಲವೆ?

—**ಕೆ. ವೆಂಕಟರಾಯಾಚಾರ**

ಗ್ರಂಥಾವಲೋಕನ

(೧) ಹಾಲ ತೊರೆಗೆ ಬೆಲ್ಲದ ಕೆಸರು

ಸಂಪಾದಕ : ಹ. ನಂ. ವಿಜಯಕುಮಾರ್
ಶ್ರೀ ಬಸವೇಶ್ವರ ಗ್ರಂಥಮಾಲೆ, ಹಳೇಪೂರು (ತುಮಕೂರು)
ಬೆಲೆ : ಆರು ರೂಪಾಯಿ, ಪುಟಗಳು : ೮೮

ಇದೊಂದು ಹನ್ನೊಂದು ಲೇಖನಗಳ 'ಅಸಮಗ್ರವಾದ ಅಪೂರ್ಣಸಂಕಲನ'. ನಾಲ್ಕು ಲೇಖನಗಳು ಸಂಪಾದಕರವು; ಉಳಿದವು ಬೇರೆಯವರವು. ಈ ಎಲ್ಲ ಲೇಖನಗಳನ್ನು ನೋಡಿದಾಗ ಸಂಪಾದನೆಯಲ್ಲಿ ಸರಿಯಾದ ಸಂಯೋಜನೆ ಇಲ್ಲವೆಂದೇ ಹೇಳಬೇಕಾಗುತ್ತದೆ. ಓದುಗರಿಗೆ ಯಾವುದೇ ನಿರ್ದಿಷ್ಟವಾದ, ನಿರ್ದುಷ್ಟವಾದ ತಿಳುವಳಿಕೆಯಾಗುವುದಿಲ್ಲ. ರಸಗ್ರಹಣವಂತೂ ದೂರ ಉಳಿದು, ಓದುಗರನ್ನು ದಿಕ್ಕುಗೆಡಿಸುವಂತಿವೆ. ಇದ್ದುದರಲ್ಲಿಯೇ ವ್ಯವಸ್ಥಿತ ನಿರೂಪಣೆ, ತರ್ಕಬದ್ಧ ವಿವೇಚನೆ, ಹೇಳಬೇಕಾದುದನ್ನು ದೃಷ್ಟಾಂತಗಳಿಂದ ಸ್ಪಷ್ಟೀಕರಿಸಿದ ಮೂರು ಲೇಖನಗಳು ಮಾತ್ರ ಗಮನಾರ್ಹವಾಗಿವೆ. (೧) ಜಿ. ಎಸ್. ಶಿವರುದ್ರಪ್ಪನವರ 'ಬಸವಣ್ಣನವರ ಸಾಮಾಜಿಕ ಕ್ರಾಂತಿ (ಆಂಗ್ಲಮೂಲದಿಂದ ಕನ್ನಡಕ್ಕಿಳಿಸಿದವರು ಕೆ. ಪಿ. ನಾರಾಯಣ. ಮೂಲ ಲೇಖಕರೇ ಅನುವಾದಿಸಿದ್ದರೆ ಒಳ್ಳೆಯದಿತ್ತು). (೨) ಡಾ. ಎಸ್. ವಿದ್ಯಾಶಂಕರರ 'ವಚನಕಾರರ ದೃಷ್ಟಿಯಲ್ಲಿ ಪಾಪಪುಣ್ಯಗಳ ಕಲ್ಪನೆ'. (೩) ಮಾತೆ ಮಹಾದೇವಿಯವರ 'ಬಸವಣ್ಣ-ಅಕ್ಕನವರ ಧೋರಣೆ ಮತ್ತು ಹರಿಹರ'ದಲ್ಲಿ 'ಅಲ್ಲಲ್ಲಿ ಬರುವ ಆತ್ಮತತ್ತ್ವದ ಭಾವಗೀತೆಗಳಂತಹ ಕೆಲವು ವಚನಗಳನ್ನು ಬಿಟ್ಟರೆ ಒಟ್ಟಿನಲ್ಲಿ ಅವುಗಳ ಸಾಹಿತ್ಯಕ ಮೌಲ್ಯ ತೀರ ಕಡಿಮೆಯೆನಿಸುತ್ತದೆ.'– 'ವಚನ ಮತ್ತು ಸಾಹಿತ್ಯ'ದ ಬಗೆಗೆ ಕೃಷ್ಣ ಪರಮೇಶ್ವರ ಭಟ್ಟರು ತಾಳಿದ ಈ ನಿಲುವು ತೀರ

ಅಸಮರ್ಪಕ. ಸಮಗ್ರ ವಚನ ಸಾಹಿತ್ಯದ ಆಳವಾದ ಅಭ್ಯಾಸವನ್ನು ವಸ್ತುನಿಷ್ಠವಾಗಿ ಅಭ್ಯಾಸ ಮಾಡದೆ ಧಿಡೀರ ಹೇಳಿಕೆಯನ್ನು ಕೊಡುವುದು ಸಮಂಜಸವಲ್ಲ. ಪ್ರತಿಪಾದನೆಯಲ್ಲಿಯೂ ತರ್ಕಬದ್ಧತೆಯಿಲ್ಲ. ಇದೊಂದು ಅಭಿಪ್ರಾಯದ ಮಾತಾದೀತು. ಇದೇ ಧಾಟಿಯಲ್ಲಿಯೇ ಬರಗೂರು ರಾಮಚಂದ್ರಪ್ಪನವರ 'ವಚನ ಚಳುವಳಿ: ಒಂದು ಟಿಪ್ಪಣಿ' – ಸಾಗಿಬಂದಿದೆ. ಅವರು ಹನ್ನೆರಡನೆಯ ಶತಮಾನದ ಸಾಮಾಜಿಕ ಸ್ಥಿತಿಯನ್ನು ಅರಿತುಕೊಳ್ಳುವ ಪ್ರಯತ್ನಮಾಡದೆ, 'ವಚನ ಚಳುವಳಿ ಒಂದು ಧಾರ್ಮಿಕ ಪರಿಷ್ಕರಣ ಚಳುವಳಿಯಾಗಿದೆ' ಎಂಬ ನಿರ್ಣಯಕ್ಕೆ ಬಂದಿರುವರು. ಕೆ. ಟಿ. ಮೇಘರಾಜರ 'ಚರಿತ್ರೆಯ ಸಂದರ್ಭದಲ್ಲಿ....' ಲೇಖನ ವಸ್ತುನಿಷ್ಠ ಅಧ್ಯಯನದ ಆವಶ್ಯಕತೆಯನ್ನು ಬಿಂಬಿಸುತ್ತದೆ. ಶರಣರ ಆಚಾರವೇ ವಿಚಾರವಾಗಿ ಮೂಡಿ ಬಂದ ಅಮೃತಫಲ ವಚನಗಳು. ಅವರ ಅನುಕರಣೆ ಮಾಡಲು ಸಾಧ್ಯವೇ ಹೊರತು, ಅವರ ವಚನಗಳಂತೆಯೇ ಬರೆಯುವುದು ಅಸಾಧ್ಯಕೋಟಿಯ ಮಾತೆಂದೆನಿಸುತ್ತದೆ. ಈ ವಿಚಾರವಾಹಿನಿ 'ಅಭಿವ್ಯಕ್ತಿ ಮತ್ತು ವಚನಗಳು' ಲೇಖನದಲ್ಲಿ ಹರಿದಿದೆ. ಡಾ. ಶಿವರುದ್ರಪ್ಪನವರ 'ಬಸವಣ್ಣನವರ ಸಾಮಾಜಿಕ ಕ್ರಾಂತಿ' ಲೇಖನ ಹೃದಯಸ್ಪರ್ಶಿಯಾಗಿದೆ. ಧರ್ಮದ ಬಗ್ಗೆ ಪೂರ್ವಾಗ್ರಹಗಳಿಲ್ಲದ ಈ ಬಂಡಾಯ ಅಚ್ಚರಿ ತರುವಂತೆ ಅತ್ಯಂತ ಆಧುನಿಕ ತತ್ತ್ವಗಳ ನೆಲೆಯಲ್ಲಿ ಹೊಸ ಸಮಾಜ ಸ್ಥಾಪನೆಗೆ ಯತ್ನಿಸಿತು ಎಂಬುದನ್ನು ಪ್ರತಿಪಾದಿಸಲಾಗಿದೆ. ಈ ಗ್ರಂಥದ ಮೊದಲಿನ ಎರಡು ಬರಹಗಳಲ್ಲಿ ಎತ್ತಿದ ಆರೋಪಗಳಿಗೆ ಈ ಲೇಖನ ಉತ್ತರರೂಪವಾಗಿ ಮೂಡಿಬಂದಿರುವುದು ಗಮನೀಯ.

'ನಮ್ಮ ಪರಂಪರೆ ಮತ್ತು ವಚನಕಾರರು' ಲೇಖನವು ವಚನಕಾರರ ವೈಶಿಷ್ಟ್ಯತೆಗಳನ್ನು ಗುರುತಿಸುವದರಲ್ಲಿ ಸಫಲತೆ ಪಡೆದಿದೆ. ಕೆಲವು ವಚನಗಳ ಪುನರ್ವಿಶ್ಲೇಷಣೆ ಮಾಡಿದ ಎಸ್. ಸತ್ಯೇಂದ್ರರು 'ವಚನಸಾಹಿತ್ಯವೂ ಸಹ ಈ ಎಲ್ಲ ನಮ್ಮ ಸಾಹಿತ್ಯದ ಲಕ್ಷಣಗಳನ್ನು ಹೊಂದಿ ತನ್ನದೇ ಆದ ಮಟ್ಟದಲ್ಲಿ ವಸ್ತುನಿಷ್ಠವಾಗಿದ್ದಿತು' ಎಂಬುದಕ್ಕೆ ಅನೇಕ ವಚನಗಳನ್ನು ಎತ್ತಿಕೊಂಡು ವಿವೇಚಿಸಿರುವದು ಶ್ಲಾಘನೀಯ. 'ನಮ್ಮ ಜನಕ್ಕೆ ವಚನ ಸಾಹಿತ್ಯಬೇಕಾಗಿಲ್ಲ (ಅಥವಾ ಅರ್ಥವಾಗುವುದಿಲ್ಲ). ಅವರಿಗೆ ಇಂಗ್ಲೀಷಿನಲ್ಲಿ ಇವನ್ನು ಮಾತನಾಡುವುದು 'ಚರ್ಚಿಸುವುದು' ತುಂಬಾ ಮುಖ್ಯವಾಗಿ ಹೋಗಿದೆ' ಎಂಬ ಕಟು ಸತ್ಯವನ್ನೇ ಓದುಗರ ಮುಂದಿಟ್ಟಿರುವುದು ಮನನೀಯ. ಡಾ. ಶಿವರುದ್ರಪ್ಪನವರು ತರಗತಿಯಲ್ಲಿ ನೀಡಿದ ವಿಚಾರಗಳ ಆಧಾರದ ಮೇಲೆ ರೂಪಿಸಿದ 'ವಚನಗಳಲ್ಲಿ ಉಪಮಾ ವಿಧಾನ' ಶರಣರ ಲೋಕಾನುಭವದ ವ್ಯಾಪ್ತಿಯನ್ನು ಎತ್ತಿ ಹಿಡಿದಿದೆ. 'ಈ ಲೋಕದ ತೋಟದಿಂದಲೇ ಉಪಮೆಯ ಮಾಲೆ ಕಟ್ಟಿ 'ಇಲ್ಲಿ ಸಲ್ಲುವ' ಸಾಮಾನ್ಯರ ಬಗಲಿಗೆ ತೆಗಲುಕೊಟ್ಟು ಮೇಲೆತ್ತಲು ಹೆಣಗಿದರು' ಎಂದಿರುವುದು ಸಮುಚಿತ. 'ಪುಣ್ಯ – ಪಾಪಗಳ ಕಲ್ಪನೆ

ಇಂದೊಂದು ನಿಜವಾಗಿಯೂ ವೈಚಾರಿಕ ಲೇಖನ. ವಸ್ತುನಿಷ್ಠವಾದ ವಿವೇಚನೆಯಿದೆ. “ಶರಣರು' 'ಇಹ'ಕ್ಕೆ ಬೆಲೆ ಕೊಟ್ಟರೆ ಹೊರತು 'ಪರ'ಕ್ಕೆ ಕೊಡಲಿಲ್ಲ. ಹೀಗಾಗಿ ಸಿದ್ಧರಾಮನಿಗೆ'ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳು ಬೆಟ್ಟ'ವಾಯಿತು. ಚರ್ಮದ ಕೆಲಸ ಮಾಡುವ ಮಾದಾರ ಧೂಳಯ್ಯನಿಗೂ ತನ್ನ ಕಾಯಕ ಕೊಡುವ ಪರಮ ತೃಪ್ತಿ ಮುಖ್ಯವೇ ಹೊರತು ಕೈಲಾಸದಲ್ಲಿರುವ ಶಿವನಲ್ಲ. ಶಿವ ಅವನ ಮುಂದೆ ಸುಳಿದಾಡಿದರೂ ಲಕ್ಷಿಸನು. ಶರಣರ ಈ ವಿನೂತನ ದೃಷ್ಟಿ ಮಾನವ ಜೀವನದ ಏಳ್ಗೆಗೆ ಒಂದು ಅತ್ಯಮೂಲ್ಯ ಕೊಡುಗೆ ಎಂದರೆ ತಪ್ಪಾಗಲಾರದು' ಇತ್ಯಾದಿ ವಿವರಣೆ ಅರ್ಥಪೂರ್ಣ.

ಈ ಸಂಕಲನದಲ್ಲಿ ಅಲ್ಲಲ್ಲಿ “ಸದರೀ' “ಹಂಗಾಗಿ' ಮೊದಲಾದ ಪದ ಪ್ರಯೋಗಗಳು ನುಸುಳಿ ಬಂದಿರುವುದು ಸೋಜಿಗ. ಶಿವರುದ್ರಪ್ಪನವರ ಲೇಖನದಲ್ಲಿ '೧೭೬೨' ಇರಬೇಕಾದುದು '೧೭೬೭' ಆಗಿದೆ (ಪು ೧೩). ಸಂಪಾದಕರು ಸ್ವಲ್ಪ ಶ್ರಮವಹಿಸಿದ್ದರೆ ಇನ್ನೂ ಹೆಚ್ಚು ಸಮರ್ಪಕವಾಗಿ ಸಂಪಾದಿಸಲು ಸಾಧ್ಯವಿದ್ದಿತು. ಕೆಲವು ಲೋಪದೋಷಗಳನ್ನು ದೂರ ಮಾಡಬಹುದಿತ್ತು. 'ತಮ್ಮ ಕಾಲದ ಪ್ರಜ್ಞೆಯನ್ನೆಲ್ಲ ಸೂರೆಹೊಡೆದು ಬದುಕನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಿಕೊಳ್ಳಬಯಸಿದ ವಚನಕಾರರ ಪ್ರಯತ್ನ ಮತ್ತೆ ನಮ್ಮ ಭಾರತದಲ್ಲಿ ಕಂಡು ಬರಲೇ ಇಲ್ಲ. ಅರ್ಥಾತ್ ತಮ್ಮ ಕಾಲದ ಪ್ರಜ್ಞೆಯನ್ನೆಲ್ಲ ತಾವು ದುಡಿಸಿಕೊಂಡು ಬದುಕಲು ತೊಡಗಲೇ ಇಲ್ಲ' ಸಂಪಾದಕೀಯ ಮಾತುಗಳು ಮೇಲಿಂದ ಮೇಲೆ ಮೆಲುಕು ಹಾಕುವಂತಿವೆ. ವಿಚಾರವಿಮರ್ಶೆಗೆ ಒಳಪಡಿಸುತ್ತಿವೆ. ವಚನ ಸಾಹಿತ್ಯದ ವಿಮರ್ಶೆಯ ಅವಶ್ಯಕತೆ ಎಷ್ಟಿದೆಯೆಂಬುದನ್ನು ಬೆರಳು ಮಾಡಿ ತೋರಿಸಿದ ಸಮಾಧಾನ ಓದುಗರಿಗೆ ದೊರೆಯುವುದು.

—ಎಸ್. ಎಸ್. ಭೂಸರಡ್ಡಿ

(೨) ಹೆಣ್ಣು

ಅನುವಾದಕರು : ಎಸ್. ಪಿ. ಪಾಟೀಲ

ವೈಶಾಲಿ ಪ್ರಕಾಶನ, ಧಾರವಾಡ. ಪುಟ : ೭೬, ಬೆಲೆ: ೬ ರೂ. ೧೯೭೭.

ತಮ್ಮ ಸ್ವತಂತ್ರ ಹಾಗೂ ಅನುವಾದಿತ ಕೃತಿಗಳ ಮೂಲಕ ಓದುಗರಿಗೆ ಚಿರಪರಿಚಿತರಾಗಿರುವ ಶ್ರೀ ಎಸ್. ಪಿ. ಪಾಟೀಲರ 'ಹೆಣ್ಣು ಮತ್ತು ಇತರ ಅನುವಾದಿತ ಕಥೆಗಳು' ಒಂದು ಒಳ್ಳೆಯ ಅನುವಾದದ ಕೃತಿ. ಸಂಕಲನದ ಶೀರ್ಷಿಕೆಯೂ ಎಲ್ಲಾ ದೃಷ್ಟಿಯಿಂದಲೂ ಔಚಿತ್ಯಪೂರ್ಣ. ಇಲ್ಲಿಯ ಎಲ್ಲ ಕತೆಗಳು ಮರಾಠಿಯಿಂದ ಕನ್ನಡಕ್ಕೆ ಅನುವಾದಿತವಾದವುಗಳು. ಶ್ರೀ ಪಾಟೀಲರು ಕತೆಗಳನ್ನು ಅನುವಾದಕ್ಕಾಗಿ

ಆಯ್ಕೆ ಮಾಡುವಾಗ ಬಹಳ ಜಾಣತನದಿಂದ ಈ ಕಾರ್ಯ ಮಾಡಿದ್ದಾರೆ. ವಸ್ತು, ಶೈಲಿ, ತಂತ್ರಗಳ ದೃಷ್ಟಿಯಿಂದಲೂ ಇಲ್ಲಿಯ ಕತೆಗಳು ನೂತನವೂ, ಪ್ರಾತಿನಿಧಿಕವೂ ಆಗಿವೆ.

ಇಲ್ಲಿಯ ಆರೂ ಕತೆಗಳು ಹೆಣ್ಣುಮಕ್ಕಳಿಂದಲೇ ರಚಿತವಾದವುಗಳು ಮತ್ತು ಹೆಣ್ಣಿಗೆ ಸಂಬಂಧಿಸಿದ ವಸ್ತುವನ್ನೊಳಗೊಂಡಂತವುಗಳು. ಒಂದೊಂದು ಕತೆಯೂ ತಂತ್ರ ವಿಶಿಷ್ಟಪೂರ್ಣ ಮತ್ತು ಕುತೂಹಲಕಾರಿ. ಹೆಣ್ಣಿನ ಸಂವೇದನೆ, ಮಾನಸಿಕ ತೊಳಲಾಟ, ನಿರ್ಲಿಪ್ತತೆ ಇವೆಲ್ಲಾ ಇಲ್ಲಿನ ಕತೆಗಳಲ್ಲಿ ಸ್ಪಷ್ಟಗೊಂಡಿವೆ. ಹೆಣ್ಣಿನ ಹಲವಾರು ಸಮಸ್ಯೆಗಳ ಸೂಕ್ಷ್ಮಪದರುಗಳನ್ನು ಬಿಚ್ಚಿ ತೋರಿಸುವಲ್ಲಿ ಈ ಕತೆಗಳ ಮೂಲ ಲೇಖಕಿಯರು ಸಫಲರಾಗಿದ್ದಾರೆ. ಇಂತಹ ಕತೆಗಳನ್ನು ಕನ್ನಡೀಕರಿಸುವಲ್ಲಿ ಶ್ರೀ ಪಾಟೀಲರು ತುಂಬಾ ಕಾಳಜಿ ವಹಿಸಿದ್ದಾರೆ. ಮೂಢ ನಂಬಿಕೆಗಳನ್ನು ಕಿತ್ತೊಗೆದು ಹೊಸ ವಿಚಾರಗಳನ್ನಳವಡಿಸಿಕೊಂಡು ಹಿಂದಿನವರಿಗಿಂತ ಭಿನ್ನವಾಗಿ, ಸ್ವತಂತ್ರವಾಗಿ ಸ್ವಂತಿಕೆಯಿಂದ ಬದುಕುವ-ಬದುಕಲಿಚ್ಛಿಸುವ ನವಪೀಳಿಗೆಯ ಸ್ತ್ರೀಯರ ಭಾವನೆಗಳಿಗೆ ಈ ಸಂಕಲನದಲ್ಲಿ ಹೆಚ್ಚಿನ ಅವಕಾಶವಿದೆ. ಅಭಿವ್ಯಕ್ತಿಗೆ ತಕ್ಕ ಆಕರ್ಷಕ ಶೈಲಿಯೂ ಇದ್ದುದರಿಂದ ಇಲ್ಲಿನ ಕತೆಗಳು ಓದುಗರ ಮನದಲ್ಲಿ ನೆಲೆನಿಲ್ಲುತ್ತವೆ

ಉಜ್ವಲಾ ಮುಜುಮುದಾರ ಅವರ 'ತಾಯಿ' ಕತೆ, ಬಹಳ ಕುತುಹಲದಿಂದೋದಿಸಿಕೊಂಡು ಹೋಗುತ್ತದೆ. ಗಂಡಿನ ಬಗೆಗೆ ಒಂದು ಸಾಮಾನ್ಯಭಾವನೆಯನ್ನು ತಾಳಿದ ಹೆಣ್ಣು, ಮದುವೆಯಾದನಂತರ ಆತನ ಅನ್ಯೋನ್ಯ ಸಂಬಂಧದ ಪ್ರಭಾವದಿಂದಾಗಿ ಗಂಡನನ್ನೇ ಮೊದಲಿನೆಯ ಮಗು ಎಂದು ತಿಳಿದುಕೊಳ್ಳುವಷ್ಟು ಅವಳಲ್ಲಿ ಅವನೊಂದಿಗೆ ಆತ್ಮೀಯತೆ, ಪ್ರೀತಿ ಬೆಸೆಯಲ್ಪಡುತ್ತವೆ.

ಗೀತಾಂಜಲಿ ಜೋಶಿಯವರ 'ನಾಟಕ' ತೀರಾ ಚಿಕ್ಕ ಕತೆಯಾದರೂ ಕೊನೆಗೆ ತೃಪ್ತಿ ತಂದುಕೊಡುತ್ತದೆ. ಮಂಗಲಾ ಗೋಡಬೋಲೆಯವರ 'ಪ್ರವಾಹ' ಸಮಾಜದ ವಿರುದ್ಧ ಹೋರಾಡುವ ವಸ್ತುವನ್ನೊಳಗೊಂಡ ಕತೆ. ಇಲ್ಲಿಯ ನಾಯಿಕೆ ಪ್ರವಾಹದ ವಿರುದ್ಧ ಹೋರಾಡಲು ಪಣತೊಟ್ಟು ಕೊನೆಗೆ ಶರಣಾಗತಳಾಗುವ ವಿಚಾರ ದ್ವಂದ್ವಕ್ಕೆ ಎಡೆಮಾಡಿಕೊಡುತ್ತದೆ. ಯಾವ ಉದ್ದೇಶಕ್ಕಾಗಿ ಬಂಡೆದ್ದಳೋ ಅದು ಸಫಲವಾಗದೇ ಹೋದಾಗ ತೀವ್ರ ನಿರಾಶೆಗೊಳ್ಳುವ ಆಕೆಯ ಮನೋಭಾವ ಹೋರಾಟಗಾರರಿಗೆ ಅಸಮಾಧಾನವನ್ನುಂಟು ಮಾಡುತ್ತದೆ. ಅನುರಾಧಾ ಪೋತದಾರ ಅವರ 'ಬಂದುದಿವಸ' ಕತೆಯು ಅನುಮಾನ [illegible] ಸ್ಪಷ್ಟವಾಗಿ [illegible]ಸುತ್ತದೆ. ಉಳಿದ ಕತೆಗಳಿಗಿಂತ ಇದು ಭಿನ್ನವಾಗಿ ಓದುಗನಿಗೆ ಅಭಿರುಚಿಯನ್ನು ಹುಟ್ಟಿಸದೇ ಹೋಗುತ್ತದೆ. ಸುಶೀಲಾ ಕದಮ್‌ರ 'ಭೋಗ' ಕುತೂಹಲ ಪೂರ್ಣವಾದ ಕತೆ. ಮನೆಯಲ್ಲಿನ [illegible] ಭಾವದಿಂದ [illegible] ಅವಿನಾಶ ಮತ್ತು [illegible] ಇವರು [illegible]

ದಲ್ಲಿ ರೂಮು ಬಾಡಿಗೆ ತೆಗೆದುಕೊಂಡು ಸುಖಿಸುವನು. ಇದು ಲತಾಳಿಗೆ ಸೇರದೇ ಇರುವನು. ತಾನೊಬ್ಬ ವೇಶ್ಯೆಯೇ ಎಂಬ ಭಾವನೆ ಅವಳಲ್ಲಿ ವ್ಯಕ್ತವಾಗುವದು. ಕೊನೆಗೆ ಗಂಡನ ಆಶೆ-ಆಕಾಂಕ್ಷೆಗಳನ್ನು ಈಡೇರಿಸುವ, ಅವನ ನೆರಳಾಗಿ ನಡೆಯುವ ವಿಚಾರಕ್ಕೆ ಬಂದಾಗ ಕತೆ ಪೂರ್ಣಗೊಳ್ಳುತ್ತದೆ.

ಆಶಾ ಜಿಗೆಯುವರ 'ಹೆಣ್ಣು' ಒಂದು ಉತ್ತಮ ಕತೆ. ಇಲ್ಲಿ ಹೆಣ್ಣಿನ ಅಂತರಂಗದ ತುಮುಲ, ಹೊಯ್ದಾಟ ಅತ್ಯಂತ ವಾಸ್ತವವಾಗಿ ಮೂಡಿದೆ. ಇಲ್ಲಿನ ನಾಯಕಿ ಯಾವ ಗಂಡಸಿನ ಕೈಗೊಂಬೆಯಾಗಬಾರದೆಂದು ಮಾಡಿದ್ದಳೋ ಅದೇ ಗಂಡಸಿನ ಅತ್ಯಂತವಾದ ಆತ್ಮೀಯತೆಗೆ, ತನಗರಿಯದ ಸೆಳೆತಕ್ಕೆ ತನ್ನನ್ನು ತಾನೇ ತೊಡಗಿಸಿಕೊಂಡು, ಆತ್ಮಸಾಕ್ಷಿಯಾಗುವ ಅವಳ ನಿರ್ಧಾರ, ಅವನ ನೆರಳಾಗಿ ನಡೆಯುವ ಅವಳ ಪ್ರಕೃತಿ ಅತ್ಯಂತ ಸಮರ್ಪಕವಾಗಿ ಚಿತ್ರಿತವಾಗಿದೆ. ಇಡೀ ಸಂಕಲನದಲ್ಲಿಯೇ 'ಹೆಣ್ಣು' ಮೆಚ್ಚುವಂತಹ ಕತೆ. ಇದರ ಅನುವಾದವೂ ಕೂಡ ಬಹಳ ರಂಜನೀಯವಾಗಿದೆ.

ಇಂದು ಅನುವಾದ ಸಾಹಿತ್ಯದಲ್ಲಿ ಅನುವಾದಕರ ತೀವ್ರ ಕೊರತೆಯಿರುವಾಗ ಶ್ರೀ ಪಾಟೀಲರು ಇತ್ತ ಕಡೆ ಗಮನ ಹರಿಸಿ, ಒಳ್ಳೆಯ ಕತೆಗಳನ್ನು ಆರಿಸಿ ಅನುವಾದಿಸಿ ಸ್ತುತ್ಯವಾದ ಕಾರ್ಯ ಮಾಡಿದ್ದಾರೆ. ಇಂತಹ ಅನೇಕ ಕೃತಿಗಳನ್ನು ಓದುಗ ಇವರಿಂದ ನಿರೀಕ್ಷಿಸಬಹುದಾಗಿದೆ.

—ಬಸವರಾಜ ಸಬರದ

ಸಾದರ ಸ್ವೀಕಾರ

೧) **ಇದೋ ಕರ್ನಾಟಕ** (ಕವನ ಸಂಗ್ರಹ) :
ಎಂ. ಡಿ. ಗೋಗೇರಿ, ಪ್ರ : ಸಾಹಿತ್ಯಸೌಧ ಪ್ರಕಾಶನ, ಹುಬ್ಬಳ್ಳಿ, ೧೯೭೯
ಪುಟ : ೩೬ ಬೆಲೆ : ೩–೦೦.

೨) **ಪರಿಸರ ಕಾವ್ಯ** :
ಸಂ : ಸೌಜನ್ಯ ಪ್ರ : ಪರಿಸರ ಸಾಹಿತ್ಯ, ದಾವಣಗೆರೆ, ೧೯೭೯
ಪುಟ : ೫೮ ಬೆಲೆ : ೫–೦೦

೩) **ಜಾನಪದ ಸಂಚಯ** (ಹಾಡುಗಳ ಸಂಕಲನ) :
ಸಂ : ಕೆ. ವಿರೂಪಾಕ್ಷಗೌಡ, ಗುರುಮೂರ್ತಿ ಪೆಂಡಕೂರ, ೧೯೭೯
ಪುಟ : ೧೨೦ ಬೆಲೆ : ೪–೦೦

೪) **ವೆಂಕಟೇಶ ಚರಿತ್ರ ಅರ್ಥಾತ್ ವೆಂಕಟಗಿರಿ ಮಹಾತ್ಮೆ** **(ಕಾವ್ಯಸಂಪಾದನೆ)**
ಸಂ : ಎನ್ ಕೆ. ಹೆಗಡೆ ಪ್ರ : ಕನ್ನಡ ಕರಾವಳಿ ಗ್ರಂಥ ಪ್ರಕಾಶನ, ಹೆಗಡೆ (ಉ. ಕ.), ೧೯೭೮
ಪುಟ : ೨೨೮ ಬೆಲೆ : ೮–೦೦.

೫) **ನಾನು ಕಂಡ ಗೆಳೆಯರ ಗುಂಪು, ಭಾಗ**–೨ (ಜಯಕರ್ನಾಟಕ)
ಶೇ. ಗೋ. ಕುಲಕರ್ಣಿ ಪ್ರ : ರಾಜಹಂಸ ಪ್ರಕಾಶನ, ರಜತಗಿರಿ (ಧಾರವಾಡ), ೧೯೭೯
ಪುಟ : ಬೆಲೆ : ೧೦–೦೦

೬) **ಸಾಯಣ್‌ಮಾಧವ ವಿರಚಿತ ಶಂಕರ ದರ್ಶನ** (ತತ್ವಜ್ಞಾನ)
ಅನು : ಶೇಷಾಚಲ ಶರ್ಮ ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ೧೯೭೯.
ಪುಟ : ೧೦೩ ಬೆಲೆ : ೬–೦೦

೭) **ನರವೀರ ವಿರಚಿತ ಕೋಡಗದ ಮಾರಯ್ಯನ ಚರಿತೆ (ಕಾವ್ಯ ಸಂಪಾದನೆ)**
ಸಂ : ಹ. ಕ. ರಾಜೇಗೌಡ ಪ್ರ : ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ ೧೯೭೯.
ಪುಟ : ೮೧ ಬೆಲೆ : ೫-೦೦

ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ ಅವರ ಪ್ರಕಟನೆಗಳು (೧೯೭೯)

೮) **ಮಹಾಗಾಂವ ಚಂದ್ರಶೇಖರ ಪಾಟೀಲರು**
ಸಂಗುಕೋಟಿ, ಮಹಾಗಾಂವ ಪುಟ : ೯೩ ಬೆಲೆ : ೧-೦೦

೯) **ಡಿ. ಸಿ. ಪಾವಟೆಯವರು**
ಬಿ. ಸಿ. ಜವಳಿ ಪುಟ : ೧೦೭ ಬೆಲೆ : ೧-೦೦

೧೦) **ಭೂಮರಡ್ಡಿ ಬಸಪ್ಪನವರು**
ಮಲ್ಲಿಕಾರ್ಜುನ ಶಿ. ಲಠ್ಠೆ ಪುಟ : ೪೪ ಬೆಲೆ : ೦-೭೫

೧೧) **ಬಿ. ಶಿವಮೂರ್ತಿಶಾಸ್ತ್ರಿಗಳು**
ಸಾ. ಶಿ. ಮರುಳಯ್ಯ ಪುಟ : ೭೯ ಬೆಲೆ : ೦-೭೫

೧೨) **ಮಧುರಚೆನ್ನರು**
ಗುರುಲಿಂಗ ಕಾಪಸೆ ಪುಟ : ೧೦೯ ಬೆಲೆ : ೦-೭೫

೧೩) **ನಾರದ ಮಲ್ಲಪ್ಪನವರು**
ವಿ. ಶಿವಾನಂದ ಪುಟ : ೭೪ ಬೆಲೆ : ೦-೭೫

ಪತ್ರಿಕೆಗಳು

೧) ಕನ್ನಡನುಡಿ — ಬೆಂಗಳೂರು
೨) ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ — ಬೆಂಗಳೂರು
೩) ಪರಂಜ್ಯೋತಿ — ಹುಬ್ಬಳ್ಳಿ
೪) ಜೀವನವಿಕಾಸ — ಕಲಬುರ್ಗಿ
೫) ಮುನ್ನಡೆ — ಶಿರಸಿ
೬) ಹೊಸಹುಟ್ಟು — ಹಾಸನ
೭) ಹೋರಾಟ — ಹೊಸಪೇಟೆ
೮) KOREAN NEWS

ಈ ಸಂಚಿಕೆಯ ಲೇಖಕರು

೧. **ಡಾ. ಎಸ್. ವಿದ್ಯಾಶಂಕರ :**
ಪ್ರವಾಚಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ.
ಬೆಂಗಳೂರು

೨. **ಡಾ. ವಿಲ್ಯಂ ಮಾಡ್ತ :**
ಪ್ರವಾಚಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ

೩. **ಶ್ರೀ ಆರ್. ಎನ್. ಗುರವ :**
ನಿವೃತ್ತ ಅಸಿಸ್ಟಂಟ್ ಕಮೀಶನರ, ಕೊಪ್ಪದಕೆರೆ, ಧಾರವಾಡ

೪. **ಶ್ರೀ ಎಚ್. ಜಿ. ಬೆಂಗೇರಿ :**
ನಿವೃತ್ತ ಅಧ್ಯಾಪಕರು, ೨೯/೧ ವೈದ್ಯ ಕಾಟೇಜು ೧೦, ಪಾರ್ಕರೋಡ ವಿಲೆಪಾರ್ಲೆ
(ಈಸ್ಟ) ಮುಂಬಯಿ-೫೭

೫. **ಶ್ರೀ ಜಿ. ಆರ್. ತಿಪ್ಪೇಸ್ವಾಮಿ :**
ಬೋಧಕರು, ಜಾನಪದ ವಿಭಾಗ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮

೬. **ಶ್ರೀ ಶಿವರಾಮು ಕಾಡನ ಕುಪ್ಪೆ :**
ಕನ್ನಡ ಅಧ್ಯಾಪಕ, ವಿದ್ಯಾವರ್ಧಕ ಕಾಲೇಜು, ಮೈಸೂರು-೫೭೦ ೦೦೧

೭. **ಶ್ರೀ ಬಿ. ಆರ್. ಹಿರೇಮಠ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ

೮. **ಡಾ. ಎಂ. ಎಸ್. ಲಠ್ಠೆ :**
ಅಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ-೫

೯. **ಡಾ. ಎಸ್. ರಾಜಶೇಖರ :**
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ

೧೦. **ಶ್ರೀ ಸದಾನಂದ ಶಿ. ಪಾಟೀಲ**
ಮು : ಇನಾಂವೀರಾಪುರ ಪೋ : ಕರಡಿಕೊಪ್ಪ ತಾ : ಹುಬ್ಬಳ್ಳಿ

೧೧. **ಕು. ಚೆನ್ನಕ್ಕ ಎಲಿಗಾರ :**
ಕನ್ನಡ ಅಧ್ಯಾಪಕಿ, ಮೃತ್ಯುಂಜಯ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ

೧೨. **ಶ್ರೀ ರು. ಮ. ಷಡಕ್ಷರಯ್ಯ :**
ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಭಾರತೀಯ ಇತಿಹಾಸ, ಶಾಸನಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ

೧೩. **ಡಾ. ವಿ. ಶಿವಾನಂದ :**
ಸಂಶೋಧನ ಸಹಾಯಕರು, ಕನ್ನಡ ವಿಭಾಗ, ಮದ್ರಾಸ ವಿಶ್ವವಿದ್ಯಾಲಯ, ಮದ್ರಾಸ-೫

೧೪. **ಶ್ರೀ ವಿ. ಎಸ್. ದಂಡಿ :**
ಸಂಶೋಧನ ವಿದಾರ್ಥಿ, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ-೫

೧೫. **ಶ್ರೀ ಕೆ. ವೆಂಕಟರಾಯಾಚಾರ್ಯ :**
ವಿದ್ವಾನ್ ಸಂಶೋಧಕರು, ಸುರತ್ಕಲ್ಲ (ದ. ಕ.)-೫೭೪ ೧೫೮

೧೬. **ಡಾ. ವೀರಣ್ಣ ರಾಜೂರ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ

೧೭. **ಶ್ರೀ ಎಸ್. ಎಸ್. ಭೂಸರಡ್ಡಿ :**
ಪಠ್ಯಪುಸ್ತಕ ನಿರ್ದೇಶನಾಲಯ, ಕ. ವಿ. ವಿ. ಧಾರವಾಡ.

೧೮. **ಶ್ರೀ ಬಸವರಾಜ ಸಬರದ :**
ಪ್ರಾಚಾರ್ಯರು, ಅಮರೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಔರಾದ (ಬೀದರ ಜಿಲ್ಲೆ)

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೪ (ಅಂಚೆವೆಚ್ಚ ಸೇರಿ)
ಬಿಡಿ ಪ್ರತಿ : ರೂ. ೨-೫೦ (ಅಂಚೆವೆಚ್ಚ ಸಹಿತ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೨-೦೦ ಮಾತ್ರ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಅಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವುದು.

ಮಾನವಿಕ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೬

ಬಿಡಿ ಪ್ರತಿ : ರೂ. ೩-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೪-೦೦

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)
ಬಿಡಿ ಪ್ರತಿ : ರೂ. ೨-೫೦ (ಅಂಚೆವೆಚ್ಚ ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ : ರೂ. ೪-೦೦

(ಹಣವನ್ನು ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ್ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩